ಶನಿವಾರ, ಜುಲೈ 9, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಅಬೆಗೆ ನಮನ**

ಜಪಾನ್‌ನಲ್ಲಿ ಶುಕ್ರವಾರ ಹತ್ಯೆಗೀಡಾದ ಮಾಜಿ ಪ್ರಧಾನಿ ಶಿಂಜೊ ಅಬೆ ಅವರಿಗೆ ಒಡಿಶಾದ ಪುರಿಯ ಕಡಲತೀರದಲ್ಲಿ ಕಲಾವಿದ ಸುದರ್ಶನ ಪಟ್ನಾಯಕ್ ಮರಳು ಶಿಲ್ಪದ ಮೂಲಕ ಅಂತಿಮ ನಮನ ಸಲ್ಲಿಸಿದರು






ಶನಿವಾರ, ಜುಲೈ 9, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 189 | ಪುಟ 20
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಭೂಮಿಕಾ**
ಪ್ರತಿ ವರ್ಷ ಜುಲೈ 4ರಿಂದ 10ರವರೆಗೆ ನ್ಯಾಷನಲ್ ಚೈಲ್ಡ್‌ಹುಡ್ ಒಬೆಸಿಟಿ ವೀಕ್ 2022' ಎಂದು ಆಚರಿಸಲಾಗುತ್ತಿದೆ. ಈ ನೆಪದಲ್ಲಿ ಮಕ್ಕಳ ಆಹಾರ ಹೇಗಿರಬೇಕು? ಇಲ್ಲಿದೆ ಮಾಹಿತಿ.



**ಚರ್ಚೆ**
ಶಾಸಕರು ಗುಂಪು ಗುಂಪಾಗಿ ಪಕ್ಷಾಂತರ ಮಾಡಿದರೂ ಅದು ಮತದಾರರ ಮೇಲೆ ಬೀರುವ ಪ್ರಭಾವ ನಗಣ್ಯ ಏಕೆ?

ಕಟ್ಟಡ ನಿರ್ಮಾಣ ಅನುಮತಿ ಸ್ಥಗಿತ 8
ಎಡಿಜಿಪಿಗೆ ಸುಳ್ಳು ಪತ್ತೆ ಪರೀಕ್ಷೆ? 5

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 54,481 ▲ | 16,221 ▲ | ₹52,480 (ಬೆಂಗಳೂರು) | ₹58,200 (ಬೆಂಗಳೂರು) | 79.26 ▼ |

### ಪ್ರಸಿದ್ಧ ಯಾತ್ರಾಸ್ಥಳದಲ್ಲಿ ಪ್ರಕೃತಿ ವಿಕೋಪ: 40 ಯಾತ್ರಾರ್ಥಿಗಳು ನಾಪತ್ತೆ

# ಅಮರನಾಥ: ಮೇಘಸ್ಫೋಟಕ್ಕೆ 15 ಬಲಿ

ಪ್ರಜಾವಾಣಿ ವಾರ್ತೆ

**ಶ್ರೀನಗರ:** ದಕ್ಷಿಣ ಕಾಶ್ಮೀರದ ಹಿಮಾಲಯದ ತಪ್ಪಲಿನ ಪ್ರಸಿದ್ಧ ಯಾತ್ರಾಸ್ಥಳ ಅಮರನಾಥದಲ್ಲಿ ಶುಕ್ರವಾರ ಸಂಜೆ 5.30ರ ಹೊತ್ತಿಗೆ ಮೇಘ ಸ್ಫೋಟವಾಗಿದ್ದು, 15 ಮಂದಿ ಮೃತಪಟ್ಟಿದ್ದಾರೆ. ಕನಿಷ್ಠ 40 ಯಾತ್ರಾರ್ಥಿಗಳು ನಾಪತ್ತೆಯಾಗಿದ್ದಾರೆ.

'40ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದು, ಐವರನ್ನು ರಕ್ಷಿಸಲಾಗಿದೆ. 25ಕ್ಕೂ ಹೆಚ್ಚು ಡೇರೆಗಳು ನಾಶವಾಗಿವೆ. ಮೂರು ಸಾಮೂಹಿಕ ಭೋಜನಗೃಹಗಳಿಗೆ ಹಾನಿಯಾಗಿದೆ. 10 ಮೃತದೇಹಗಳು ಪತ್ತೆಯಾಗಿವೆ' ಎಂದು ಅಧಿಕಾರಿಗಳು ತಿಳಿಸಿ ದ್ದಾರೆ.

ಮೇಘಸ್ಫೋಟದ ಬಳಿಕ ಧಾರಾಕಾರ ಮಳೆಯಾಗಿದ್ದು, ಪ್ರವಾಹ ಸ್ಥಿತಿ ನಿರ್ಮಾಣವಾಗಿದೆ. ನುಗ್ಗಿದ ನೀರಿನ ರಭಸಕ್ಕೆ ಡೇರೆಗಳು ಕೊಚ್ಚಿಹೋಗಿವೆ. ಪೊಲೀಸ್, ಸೇನೆ, ಇಂಡೊ–ಟಿಬೆಟ್ ಗಡಿ ಪೊಲೀಸ್ (ಐಟಿಬಿಪಿ) ಪಡೆಗಳು ರಕ್ಷಣಾ ಕಾರ್ಯದಲ್ಲಿ ತೊಡಗಿವೆ.

'43 ದಿನದ ಯಾತ್ರೆಯು ಜೂನ್ 30ರಂದು ಆರಂಭವಾಗಿತ್ತು. ಮೇಘಸ್ಫೋಟ ಅವಘಡದ ಹಿನ್ನೆಲೆಯಲ್ಲಿ ಸದ್ಯ ರದ್ದು-ಪಡಿಸಲಾಗಿದೆ. ರಕ್ಷಣಾ ಕಾರ್ಯಾಚರಣೆ ಬಳಿಕ ಮರು ಆರಂಭ ಕುರಿತು ಚಿಂತನೆ ನಡೆಸಲಾಗುವುದು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅಮರನಾಥ ಗುಹೆಯ ಮೇಲ್ಭಾಗ ಮತ್ತು ಬದಿಗಳಿಂದ ನೀರು ನುಗ್ಗಿದೆ ಎಂದು ಐಟಿಬಿಪಿ ಅಧಿಕಾರಿಯೊಬ್ಬರು ಹೇಳಿದ್ದಾರೆ. ರಕ್ಷಣಾ ಕಾರ್ಯದಲ್ಲಿ ಎನ್‌ಡಿಆರ್‌ಎಫ್‌ನ ಮೂರು ತುಕಡಿಗಳು ನಿರತವಾಗಿವೆ ಎಂದು ಡಿಜಿ ಅತುಲ್ ಕರ್ವಾಲ್ ತಿಳಿಸಿದ್ದಾರೆ.

ಸ್ಥಳೀಯ ಮಳೆ ಮಾಪನಕೇಂದ್ರದಲ್ಲಿ ದಾಖಲಾಗಿರುವಂತೆ ಈ ಭಾಗದಲ್ಲಿ ಸಂಜೆ 4.30 ರಿಂದ ಎರಡು ಗಂಟೆ ಅವಧಿಯಲ್ಲಿ ಒಟ್ಟು 31 ಮಿ.ಮೀ. ಮಳೆಯಾಗಿದೆ.

**ಮಾಹಿತಿ ಪಡೆದ ಪ್ರಧಾನಿ, ಗೃಹ ಸಚಿವ:** ಪ್ರಧಾನಿ ನರೇಂದ್ರ ಮೋದಿ ಅವರು ಟ್ವೀಟ್ ಮಾಡಿ ಆಘಾತ ವ್ಯಕ್ತಪಡಿಸಿದ್ದಾರೆ.

4ನೇ ಪುಟ ನೋಡಿ



ಮೇಘ ಸ್ಫೋಟದ ಪರಿಣಾಮ ಸುರಿದ ಭಾರಿ ಮಳೆಯಿಂದಾಗಿ ಡೇರೆಗಳು ಹಾನಿಗೊಂಡಿವೆ –ಪಿಟಿಐ ಚಿತ್ರ

## ಸಹಾಯವಾಣಿ ಆರಂಭ

**ಬೆಂಗಳೂರು:** ಅಮರನಾಥ ಯಾತ್ರೆಯಲ್ಲಿ ಸಿಲುಕಿರುವ ಯಾತ್ರಾರ್ಥಿಗಳಿಗೆ ರಾಜ್ಯ ಸರ್ಕಾರ ಸಹಾಯವಾಣಿ ಆರಂಭಿಸಿದೆ. ಅಮರನಾಥ ಗುಹೆಯ ಬಳಿ ರಾಜ್ಯದವರು ತೊಂದರೆಯಲ್ಲಿದ್ದರೆ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿ ಸಂಪರ್ಕಿಸಲು ಕೋರಲಾಗಿದೆ.
**ಸಹಾಯವಾಣಿ ಸಂಖ್ಯೆ: 080-1070, 22340676**
**ಇಮೇಲ್:** incomedmkar@gmail.com

## ಮಳೆ: ತಗ್ಗಿದ ಅಬ್ಬರ, ಈಗ ನೆರೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ ಕೆಲ ಜಿಲ್ಲೆಗಳಲ್ಲಿ ಕಳೆದ ಎರಡು ದಿನಗಳಿಂದ ಧಾರಾಕಾರವಾಗಿ ಸುರಿಯುತ್ತಿದ್ದ ಮಳೆಯ ಅಬ್ಬರ ಕಡಿಮೆಯಾಗಿದೆ. ಉತ್ತರ ಕನ್ನಡದ ಕರಾವಳಿಯಲ್ಲಿ ಗುರುವಾರ ತಡರಾತ್ರಿಯಿಂದ ಶುಕ್ರವಾರ ಮಧ್ಯಾಹ್ನದ ತನಕ ನಿರಂತರವಾಗಿ ಧಾರಾಕಾರ ಮಳೆಯಾಗಿದೆ.

ಕೆಲ ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ. ಗ್ರಾಮಗಳಿಗೆ, ಹೊಲ–ಗದ್ದೆಗಳಿಗೆ ನೀರು ನುಗ್ಗಿ ಹಾನಿಯುಂಟಾಗಿದೆ. ರಸ್ತೆಗಳಲ್ಲಿ ಗುಡ್ಡ ಕುಸಿತ, ನೀರು ನಿಂತ ಪರಿಣಾಮ ಕೆಲವೆಡೆ ಜನರ–ವಾಹನಗಳ ಸಂಚಾರಕ್ಕೆ ತೀವ್ರ ತೊಂದರೆಯಾಗಿದೆ.

ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ನಾಗೂರ (ಎನ್) ಗ್ರಾಮ ಸಮೀಪದ ಹಳ್ಳದಲ್ಲಿ ಮಂಗಳವಾರ ಕೊಚ್ಚಿ ಹೋಗಿದ್ದ ಸುಮನಬಾಯಿ ಬಾಬುರೆಡ್ಡಿ ಖಂದಾಡೆ (48) ಎಂಬುವವರ ಶವ ಗುರುವಾರ ರಾತ್ರಿ ಪತ್ತೆಯಾಗಿದೆ.

ಜಲಾನಯನ ಪ್ರದೇಶಗಳಲ್ಲಿ ಸುರಿಯುತ್ತಿರುವ ನಿರಂತರ ಮಳೆಯಿಂದಾಗಿ ರಾಜ್ಯದ ಜಲಾಶಯಗಳಿಗೆ ಒಳಹರಿವು ಹೆಚ್ಚಳವಾಗಿದೆ. ಚಿಕ್ಕೋಡಿ ತಾಲ್ಲೂಕಿನ ನಾಲ್ಕು ಕಿರು ಸೇತುವೆಗಳು ಮುಳುಗಡೆಯಾಗಿವೆ.

ಸೌಪರ್ಣಿಕ ನದಿ ಉಕ್ಕಿ ಹರಿದು ಜಲಾವೃತಗೊಂಡಿರುವ ಉಡುಪಿ ಜಿಲ್ಲೆ ಬೈಂದೂರು ತಾಲ್ಲೂಕಿನ ನಾವುಂದದಲ್ಲಿ ನೆರೆ ತಗ್ಗಿಲ್ಲ. ಮಲೆನಾಡಿನ ತಪ್ಪಲಿನಲ್ಲಿ ನಿರಂತರ ಮಳೆ ಸುರಿಯುತ್ತಿರು-ವುದರಿಂದ ನದಿ ಅಪಾಯದ ಮಟ್ಟದಲ್ಲಿ ಹರಿಯುತ್ತಿದೆ. 100ಕ್ಕೂ ಹೆಚ್ಚು ಮನೆಗಳು ಭಾಗಶಃ ಮುಳುಗಡೆಯಾಗಿವೆ.


ಜಿಲ್ಲಾಡಳಿತ ಸಂತ್ರಸ್ತರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸುವ ಕಾರ್ಯ ಮುಂದುವರಿಸಿದೆ. ಆದರೆ, ಬಹುತೇಕರು ಕಾಳಜಿ ಕೇಂದ್ರಗಳಿಗೆ ತೆರಳಲು ಒಪ್ಪುತ್ತಿಲ್ಲ. ಪ್ರತಿ ವರ್ಷ ನೆರೆ ಬಂದು ಗ್ರಾಮ ನಲುಗುತ್ತಿದ್ದರೂ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ಬದಲು ತಾತ್ಕಾಲಿಕ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಅಧಿಕಾರಿಗಳ ವಿರುದ್ಧ ಗ್ರಾಮಸ್ಥರು ಆಕ್ರೋಶ ಹೊರ ಹಾಕಿದ್ದಾರೆ.

5ನೇ ಪುಟ ನೋಡಿ

# ಜಪಾನ್ ಮಾಜಿ ಪ್ರಧಾನಿ ಹತ್ಯೆ

### ಶಿಂಜೊ ಅಬೆಗೆ ಸಮೀಪದಿಂದ ಗುಂಡು ಹಾರಿಸಿದ ದುಷ್ಕರ್ಮಿ

**ಕಶಿಹರ (ಜಪಾನ್) (ಎಎಫ್‌ಪಿ):** ಜಪಾನ್‌ನ ಮಾಜಿ ಪ್ರಧಾನಿ ಮತ್ತು ಅಲ್ಲಿನ ಅತ್ಯಂತ ಪ್ರಭಾವಿ ನಾಯಕ ಶಿಂಜೊ ಅಬೆ (67) ಅವರನ್ನು ಶುಕ್ರವಾರ ಬೆಳಿಗ್ಗೆ ಗುಂಡು ಹಾರಿಸಿ ಹತ್ಯೆ ಮಾಡಲಾಗಿದೆ. ಚುನಾವಣಾ ಪ್ರಚಾರ ನಡೆಸುತ್ತಿದ್ದ ಅಬೆ ಅವರಿಗೆ ಅತ್ಯಂತ ಹತ್ತಿರದಿಂದ ಗುಂಡು ಹಾರಿಸಲಾಗಿದೆ.



1954-2022

ಅಬೆ ಅವರು 2006ರಲ್ಲಿ ಒಂದು ವರ್ಷದ ಅವಧಿಗೆ ಮತ್ತು 2012ರಿಂದ 2020ರವರೆಗೆ ಪ್ರಧಾನಿಯಾಗಿದ್ದರು.ಅನಾರೋಗ್ಯದ ಕಾರಣದಿಂದ 2020ರಲ್ಲಿ ಅವರು ರಾಜೀನಾಮೆ ನೀಡಿದ್ದರು.

ಮೇಲ್ಮನೆಗೆ ಈ ವಾರದ ಕೊನೆಗೆ ನಡೆಯಲಿರುವ ಚುನಾವಣೆಯಲ್ಲಿ ಸ್ಪರ್ಧಿಸಿರುವ ತಮ್ಮ ಪಕ್ಷದ ಅಭ್ಯರ್ಥಿಯ ಪರವಾಗಿ ದೇಶದ ಪಶ್ಚಿಮ ಭಾಗದ ನಾರಾ ಎಂಬಲ್ಲಿ ಅಬೆ ಅವರು ಪ್ರಚಾರ ಮಾಡುತ್ತಿದ್ದಾಗ ಈ ಕೃತ್ಯ ನಡೆದಿದೆ. ಅಬೆ ಅವರ ಕುತ್ತಿಗೆಗೆ ಎರಡು ಗುಂಡು ತಗುಲಿವೆ. ಅತಿಯಾದ ರಕ್ತಸ್ರಾವವು ಅವರ ಸಾವಿಗೆ ಕಾರಣವಾಗಿದೆ.

ಗುಂಡು ತಗುಲಿದ ತಕ್ಷಣವೇ ಅವರನ್ನು ಹೆಲಿಕಾಪ್ಟರ್ ಮೂಲಕ ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ. 20ಕ್ಕೂ ಹೆಚ್ಚು ವೈದ್ಯಕೀಯ ಸಿಬ್ಬಂದಿ ಅವರನ್ನು ಬದುಕಿಸಲು ಸುಮಾರು ಐದು ತಾಸು ಯತ್ನಿಸಿದರು. ಆದರೆ, ಈ ಪ್ರಯತ್ನ ಫಲ ನೀಡಲಿಲ್ಲ.

ಗುಂಡು ಹಾರಿಸಿದ್ದಾನೆ ಎಂದು ಹೇಳಲಾದ ವ್ಯಕ್ತಿಯನ್ನು ತೆತ್ಸುಯ ಯಮಾಗಾಮಿ (41) ಎಂದು ಗುರುತಿಸಲಾಗಿದೆ.

ಈತ ಜಪಾನ್ ನೌಕಾಪಡೆಯ ಕರಾವಳಿ ರಕ್ಷಣಾ ಪಡೆಯಲ್ಲಿ ಇದ್ದ ಎಂದು ವರದಿಯಾಗಿದೆ. ನಾಡಬಂದೂಕು ಉಪಯೋಗಿಸಿ ಈ ಹತ್ಯೆ ನಡೆಸಲಾಗಿದೆ. ಗುಂಡು ಹಾರಿಸಿದ ಬಳಿಕ ಆರೋಪಿಯು ತಪ್ಪಿಸಿಕೊಳ್ಳಲು ಯತ್ನಿಸಿಲ್ಲ. ರಕ್ಷಣಾ ಪಡೆ ಸಿಬ್ಬಂದಿಯು ಸ್ಥಳೀಯರ ನೆರವಿನಿಂದ ಆರೋಪಿಯನ್ನು ಬಂಧಿಸಿದರು. ಅಬೆ ಅವರ ಬಗ್ಗೆ ತನಗೆ ಅತೃಪ್ತಿ ಇತ್ತು, ಕೊಲ್ಲುವ ಉದ್ದೇಶದಿಂದಲೇ ಗುಂಡು ಹಾರಿಸಿದ್ದೇನೆ ಎಂದು ಆರೋಪಿ ಹೇಳಿದ್ದಾನೆ. ಸಂಘಟನೆಯೊಂದರ ಬಗ್ಗೆ ಆರೋಪಿಗೆ ತೀವ್ರ ಅಸಮಾಧಾನ ಇದೆ. ಆ ಸಂಘಟನೆಯ ಜತೆಗೆ ಅಬೆ ಅವರಿಗೆ ಸಂಪರ್ಕ ಇದೆ ಎಂದು ಆರೋಪಿ ನಂಬಿದ್ದ. 'ಈ ಅಸಮಾಧಾನದ ಕಾರಣಕ್ಕಾಗಿಯೇ ಹತ್ಯೆ ಮಾಡಿದ್ದೇನೆ' ಎಂದು ಆರೋಪಿ ಹೇಳಿದ್ದಾನೆ.

ಅತ್ಯಂತ ದೀರ್ಘಕಾಲ ಪ್ರಧಾನಿಯಾಗಿದ್ದ ಅಬೆ ಅವರ ಹತ್ಯೆಯು ದೇಶವನ್ನು ಆಘಾತಕ್ಕೆ ಕೆಡವಿದೆ ಮತ್ತು ಜಾಗತಿಕ ನಾಯಕರು ದಿಗ್ಭ್ರಮೆ, ಸಂತಾಪ ಮತ್ತು ಖಂಡನೆ ವ್ಯಕ್ತ-ಪಡಿಸಿದ್ದಾರೆ. ಜಪಾನ್‌ನಲ್ಲಿ ಅತ್ಯಂತ ಕಟ್ಟುನಿಟ್ಟಿನ ಶಸ್ತ್ರಾಸ್ತ್ರ ನಿಯಮಗಳಿವೆ. ಅಲ್ಲದೆ, ಅಲ್ಲಿ ಅಪರಾಧದ ಪ್ರಮಾಣವೂ ಅತ್ಯಲ್ಪ. ಹೀಗಿದ್ದರೂ ಅಬೆ ಅವರ ಹತ್ಯೆ ಆಗಿರುವುದು ಆಘಾತಕ್ಕೆ ಕಾರಣವಾಗಿದೆ. ಈ ಹತ್ಯೆಯು 'ಅನಾಗರಿಕ ಕೃತ್ಯ' ಮತ್ತು ಇದನ್ನು 'ಕ್ಷಮಿಸಲು ಸಾಧ್ಯವೇ ಇಲ್ಲ' ಎಂದು ಜಪಾನ್‌ನ ಪ್ರಧಾನಿ ಫುಮಿಯೊ ಕಿಶಿಡಾ ಹೇಳಿದ್ದಾರೆ.

ಇನ್ನಷ್ಟು ಸುದ್ದಿಗಳು 9

### ಜಿಲ್ಲಾಧಿಕಾರಿಗಳ ಜತೆ ಮುಖ್ಯಮಂತ್ರಿ ಸಂವಾದ

# ಮಳೆ ಹಾನಿ: ತುರ್ತು ಪರಿಹಾರಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಳೆ ಮತ್ತು ಪ್ರವಾಹದಿಂದ ಜೀವಹಾನಿಯಾದ ಕುಟುಂಬಗಳಿಗೆ ಹಾಗೂ ಮನೆಗಳ ಹಾನಿಗೆ ತಕ್ಷಣವೇ ಪರಿಹಾರ ನೀಡಬೇಕು. ರಕ್ಷಣಾ ಕಾರ್ಯಕ್ಕೆ ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ತಂಡಗಳನ್ನು ನಿಯೋಜಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚನೆ ನೀಡಿದರು.

ಮಳೆ ಮತ್ತು ಪ್ರವಾಹ ಪೀಡಿತ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಎಸ್ಪಿಗಳು ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಜತೆ ಶುಕ್ರವಾರ ವಿಡಿಯೊ ಸಂವಾದ ನಡೆಸಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. 'ತಿಂಗಳಲ್ಲಿ ಮಳೆ ಮತ್ತು ಪ್ರವಾಹದಿಂದಾಗಿ 12 ಮಂದಿ ಮೃತಪಟ್ಟಿದ್ದು, 65 ಜಾನುವಾರುಗಳ ಜೀವ ಹಾನಿಯಾಗಿದೆ' ಎಂದು ಹೇಳಿದರು.

ಪ್ರವಾಹಪೀಡಿತ ಜಿಲ್ಲೆಗಳ ಸಂಪೂರ್ಣ ಪರಿಸ್ಥಿತಿಯ ಬಗ್ಗೆ ಮಾಹಿತಿ ಪಡೆದ ಅವರು, 'ಮನೆ ಹಾನಿ ಆದವರಿಗೆ ತಕ್ಷಣವೇ ತಲಾ ₹10 ಸಾವಿರ ತುರ್ತು ಪರಿಹಾರ ನೀಡಬೇಕು' ಎಂದು ಅವರು ನಿರ್ದೇಶನ ನೀಡಿದರು.

'ರಕ್ಷಣೆ ಮತ್ತು ಪರಿಹಾರ ಕಾರ್ಯಗಳಿಗೆ ಜಿಲ್ಲಾಧಿಕಾರಿಗಳ ಬಳಿ ಒಟ್ಟು ₹735.59 ಕೋಟಿ ಲಭ್ಯವಿದೆ. ಅಲ್ಲದೆ, ಜಿಲ್ಲಾಧಿಕಾರಿ ಗಳ ಪಿ.ಡಿ ಖಾತೆಯಲ್ಲಿ ಸಾಕಷ್ಟು ಅನುದಾನ ಲಭ್ಯವಿದ್ದು, ಅದನ್ನು ಪರಿಹಾರ ಕಾರ್ಯಗಳಿಗೆ ಸದ್ಬಳಕೆ ಮಾಡ ಬೇಕು. ಪರಿಹಾರ ಕಾರ್ಯದಲ್ಲಿ ತೊಡಕುಗಳಾದರೆ, ವಿಪತ್ತು ನಿರ್ವಹಣೆ ವಿಭಾಗದ ಅಧಿಕಾರಿಗಳ ಮಾರ್ಗದರ್ಶನದೊಂದಿಗೆ ಕಾರ್ಯ ನಿರ್ವಹಿಸಬೇಕು' ಎಂದು ಬಸವರಾಜ ಬೊಮ್ಮಾಯಿ ತಿಳಿಸಿದರು.

3Bನೇ ಪುಟ ನೋಡಿ

# ಶೂ, ಸಾಕ್ಸ್ ವಿತರಿಸಲು ₹132 ಕೋಟಿ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಶಾಲಾ ಮಕ್ಕಳಿಗೆ ಶೂ ಮತ್ತು ಸಾಕ್ಸ್ ವಿತರಿಸಲು ₹132 ಕೋಟಿ ಬಿಡುಗಡೆಗೆ ಅನುಮೋದನೆ ನೀಡಲಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

'ಸರ್ಕಾರ ಈಗಾಗಲೇ ಸಮವಸ್ತ್ರ ವಿತರಿಸಲು ಅನುಮೋದನೆ ನೀಡಿದೆ. ಸಮವಸ್ತ್ರ ಸಿದ್ಧಪಡಿಸಲು ಸ್ವಲ್ಪ ಸಮಯಬೇಕಾಗುತ್ತದೆ. ನಂತರ ವಿತರಣೆಯಾಗಲಿದೆ. ಈ ವಿಷಯದಲ್ಲಿ ಯಾವುದೇ ಗೊಂದಲ ಸೃಷ್ಟಿಸುವ ಅಗತ್ಯವಿಲ್ಲ' ಎಂದು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

8ನೇ ಪುಟ ನೋಡಿ

## 'ಭಿಕ್ಷೆ ಬೇಡಿ ಕೊಡಿಸಲು ಸಿದ್ಧ'

ವರದಿ ಪರಿಣಾಮ

**ಬೆಂಗಳೂರು:** 'ಶಾಲಾ ವಿದ್ಯಾರ್ಥಿಗಳಿಗೆ ಶೂ, ಸಾಕ್ಸ್ ವಿತರಿಸಲು ಸರ್ಕಾರದ ಬಳಿ ಹಣ ಇಲ್ಲದಿದ್ದರೆ ಬಹಿರಂಗವಾಗಿ ಹೇಳಲಿ. ರಾಜ್ಯದ ಜನರ ಬಳಿ ಭಿಕ್ಷೆ ಬೇಡಿ ಮಕ್ಕಳಿಗೆ ಶೂ, ಸಾಕ್ಸ್ ಕೊಡಿಸುವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಮಕ್ಕಳು ಶೂ, ಸಾಕ್ಸ್‌ಗಾಗಿ ಶಾಲೆಗೆ ಬರುವುದಿಲ್ಲ ಎಂಬ ಹೇಳಿಕೆ ನೀಡಿರುವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರಿಗೆ ಸಾಮಾನ್ಯ ಜ್ಞಾನ ಇಲ್ಲ. ಒಳ್ಳೆಯ ಶೂ, ಸಾಕ್ಸ್ ತನ್ನ ಮಕ್ಕಳಿಗೂ ಸಿಗಲಿ ಎಂಬ ಆಸೆ ಎಲ್ಲ ಪೋಷಕರಿಗೂ ಇರುತ್ತದೆ. ಇವರು ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ' ಎಂದರು.

'ಮಕ್ಕಳಿಗೆ ಶೂ, ಸಾಕ್ಸ್ ಅಗತ್ಯವಿಲ್ಲ ಎಂದು ಹೇಳುವ ಸಚಿವ ನಾಗೇಶ್ ಏಕೆ ಒಳ್ಳೆಯ ಬಟ್ಟೆ ಧರಿಸುತ್ತಾರೆ. ಅವರೂ ಬಟ್ಟೆ ಬಿಚ್ಚಿಟ್ಟು, ಲಂಗೋಟಿ ಧರಿಸಿಕೊಂಡು ಓಡಾಡಲಿ ನೋಡೋಣ' ಎಂದು ಕುಟುಕಿದರು.

**ಒಳ ಪುಟ**



ನಿವೃತ್ತರಿಗೂ 'ಆರೋಗ್ಯ ಸಂಜೀವಿನಿ' 8

ಆಕಾರ್ ಪಟೇಲ್ ₹ 10 ಕೋಟಿ ದಂಡ ವಿಧಿಸಿದ ಜಾರಿ ನಿರ್ದೇಶನಾಲಯ 4

**ಚಿನಕುರಳಿ**
ಪ್ರಕಾಶ್ ಶೆಟ್ಟಿ



















## ವಾರ್ಡ್ ವಿಂಗಡಣೆ: 2,500 ಆಕ್ಷೇಪ

ಬೆಂಗಳೂರು: ಬಿಬಿಎಂಪಿ ವಾರ್ಡ್ ಮರು ವಿಂಗಡಣೆ ಕರಡು ಪಟ್ಟಿಗೆ 2,500ಕ್ಕೂ ಹೆಚ್ಚು ಆಕ್ಷೇಪಣೆಗಳು ಬಂದಿವೆ.

ವಾರ್ಡ್‌ಗಳನ್ನು 198ರಿಂದ 243ಕ್ಕೆ ಹೆಚ್ಚಿಸಿ ಜೂನ್ 23ರಂದು ಕರಡು ಪಟ್ಟಿ ಪ್ರಕಟಿಸಲಾಗಿತ್ತು. ಇದಕ್ಕೆ ಆಕ್ಷೇಪಣೆ ಸಲ್ಲಿಸಲು ಜುಲೈ 7ರ ವರೆಗೆ ಅವಕಾಶವಿತ್ತು. ಕಡೆಯ 3 ದಿನಗಳಲ್ಲಿ ಎರಡು ಸಾವಿರಕ್ಕೂ ಹೆಚ್ಚು ಆಕ್ಷೇಪಣೆ, ದೂರು, ಸಲಹೆಗಳು ಸಲ್ಲಿಕೆಯಾಗಿವೆ.

ಎಲ್ಲ ಆಕ್ಷೇಪಣೆಗಳನ್ನು ಕ್ರೋಡೀಕರಿಸುವ ಕಾರ್ಯ ವಿಕಾಸಸೌಧದಲ್ಲಿರುವ ನಗರಾಭಿವೃದ್ಧಿ ಕಚೇರಿಯಲ್ಲಿ ನಡೆಯುತ್ತಿದೆ ಎಂದು ನಗರಾಭಿವೃದ್ಧಿ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

## ವಿಶ್ವಕರ್ಮ ಜಾಗೃತಿ ಸಮಾವೇಶ

ಬೆಂಗಳೂರು: ವಿಶ್ವಕರ್ಮ ಸಮುದಾಯವನ್ನು ಒಗ್ಗೂಡಿಸುವ ಉದ್ದೇಶದಿಂದ ದಾವಣಗೆರೆಯ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಜುಲೈ 11ರಂದು ವಿಶ್ವಕರ್ಮ ಜಾಗೃತಿ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಭಾರತ ವಿಶ್ವಕರ್ಮ ಪರಿಷತ್ ತಿಳಿಸಿದೆ.

‘ಪೀಠಾಧಿಪತಿಗಳ ಸಮ್ಮಿಲನ, ವಿದ್ಯಾರ್ಥಿಗಳಿಗೆ ಪುರಸ್ಕಾರ ಮತ್ತು ಪುರೋ ಹಿತರನ್ನು ಸನ್ಮಾನಿಸಲಾಗುತ್ತದೆ. ಹಟ್ಟಿ ಚಿನ್ನದ ಗಣಿ ಕಂಪನಿಗೆ ವಿಶ್ವಕರ್ಮ ಸಮುದಾಯದವರನ್ನು ಅಧ್ಯಕ್ಷರನ್ನಾಗಿ ನೇಮಿಸಬೇಕು ಎಂದು ರಾಜ್ಯ ಘಟಕದ ಅಧ್ಯಕ್ಷ ಆರ್.ಪ್ರಸನ್ನಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು.

### ಇಬ್ಬಲೂರು ಬಳಿ ನಿರ್ಮಾಣ • ಗಡಿ ಗುರುತಿಸಲು ಜಂಟಿ ಸಮೀಕ್ಷೆಗೆ ಬಿಎಂಆರ್‌ಸಿಎಲ್‌ಗೆ ಸೂಚನೆ

# ಮೆಟ್ರೊ ನಿಲ್ದಾಣಕ್ಕೆ ರಕ್ಷಣಾ ಇಲಾಖೆ ಜಾಗ

• ಮಂಜುನಾಥ ಹೆಬ್ಬಾರ್

ನವದೆಹಲಿ: ಬೆಂಗಳೂರಿನ ಹೊರವರ್ತುಲ ರಸ್ತೆಯ ಇಬ್ಬಲೂರಿನಲ್ಲಿ ಸಂಯೋಜಿತ ಮೆಟ್ರೊ ರೈಲು ನಿಲ್ದಾಣ ನಿರ್ಮಾಣಕ್ಕಾಗಿ ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂಆರ್‌ಸಿಎಲ್) ರಕ್ಷಣಾ ಇಲಾಖೆಗೆ ಸೇರಿದ 2.37 ಎಕರೆ ಜಾಗವನ್ನು ಸ್ವಾಧೀನಪಡಿಸಿಕೊಳ್ಳಲಿದೆ.

ಈ ಸಂಬಂಧ ನಿಗಮವು ರಕ್ಷಣಾ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದು, ರಕ್ಷಣಾ ಇಲಾಖೆಯಿಂದ ಇನ್ನಷ್ಟೇ ಅಧಿಕೃತ ಒಪ್ಪಿಗೆ ಸಿಗಬೇಕಿದೆ. ಸಾರ್ವಜನಿಕ ಮೂಲಸೌಕರ್ಯ ಯೋಜನೆಗಳಿಗೆ ರಕ್ಷಣಾ ಭೂಮಿ ಹಸ್ತಾಂತರದ ಸಂಬಂಧ ರಕ್ಷಣಾ ಇಲಾಖೆಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಜೂನ್ 30ರಂದು ನಡೆದ ಸಭೆಯಲ್ಲಿ ಭೂಮಿ ಹಸ್ತಾಂತರದ

**ಮುಖ್ಯಾಂಶಗಳು**
- ರಕ್ಷಣಾ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ ಬಿಎಂಆರ್‌ಸಿಎಲ್
- ನಗರಾಭಿವೃದ್ಧಿ ಇಲಾಖೆಗೆ ರಕ್ಷಣಾ ಇಲಾಖೆಯಿಂದ ಪತ್ರ
- ಈ ಮಾರ್ಗ ನಿಲ್ದಾಣದಿಂದ ಹೊರವರ್ತುಲ ರಸ್ತೆ ಜನರಿಗೆ ಅನುಕೂಲ

ಕುರಿತು ಚರ್ಚಿಸಲಾಗಿದೆ.

‘ಸೇನೆಯ ಕೇಂದ್ರ ಕಚೇರಿಯಿಂದ ಪ್ರತಿಕ್ರಿಯೆ ಬಾರದ ಕಾರಣ ಈ ವಿಷಯದ ಬಗ್ಗೆ ಅಂತಿಮ ತೀರ್ಮಾನ ಕೈಗೊಂಡಿಲ್ಲ. ಭೂಸ್ವಾಧೀನಕ್ಕೆ ಮೊದಲು ರಕ್ಷಣಾ ಇಲಾಖೆ ಹಾಗೂ ಬಿಎಂಆರ್‌ಸಿಎಲ್ ಜತೆಗೂಡಿ ಜಂಟಿ ಗಡಿ ಗುರುತಿಸುವಿಕೆ ಮಾಡಬೇಕಿದೆ. ಆದರೆ, ಬಿಎಂಆರ್‌ಸಿಎಲ್ ಅಧಿಕಾರಿಗಳ ಅಲಭ್ಯತೆಯಿಂದ ಈ ಕೆಲಸ ಆಗಿಲ್ಲ. ಬಿಎಂಆರ್‌ಸಿಎಲ್ ಅಧಿಕಾರಿಗಳು ಶೀಘ್ರದಲ್ಲಿ ಜಂಟಿ ಗಡಿ ಗುರುತಿಸುವಿಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು’ ಎಂದು ಸಭೆಯಲ್ಲಿ ಸೂಚಿಸಲಾಗಿದೆ.

ರಕ್ಷಣಾ ಇಲಾಖೆಯ ಉಪ ಕಾರ್ಯದರ್ಶಿ ಸಂಜಯ್ ಶರ್ಮಾ ಅವರು ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರಿಗೆ ಜುಲೈ 7ರಂದು ಪತ್ರ ಬರೆದು, ಜಂಟಿ ಗಡಿ ಗುರುತಿಸುವಿಕೆಯನ್ನು ನಡೆಸುವಂತೆ ಬಿಎಂಆರ್‌ಸಿಎಲ್‌ಗೆ ನಿರ್ದೇಶನ ನೀಡಬೇಕು ಎಂದು ಕೋರಿದ್ದಾರೆ.

ಹೊರವರ್ತುಲ ರಸ್ತೆ– ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಡುವಿನ ಮೆಟ್ರೊ ಮಾರ್ಗ ನಿರ್ಮಾಣದ ಕಾಮಗಾರಿ ಈಗಾಗಲೇ ಆರಂಭವಾಗಿದೆ. ಸರ್ಜಾಪುರ– ಹೆಬ್ಬಾಳದ ನಡುವೆ ₹15 ಸಾವಿರ ಕೋಟಿ ಅಂದಾಜು ವೆಚ್ಚದಲ್ಲಿ 37 ಕಿಲೋ ಮೀಟರ್ ಉದ್ದದ ಮೆಟ್ರೊ ಮಾರ್ಗ ನಿರ್ಮಿಸಲಾಗುತ್ತದೆ ಎಂದು 2022–23ನೇ ಸಾಲಿನ ಬಜೆಟ್‌ನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದ್ದರು. ಈ ಮಾರ್ಗವು ಅಗರ, ಕೋರಮಂಗಲ, ಡೇರಿ ವೃತ್ತದ ಮೂಲಕ ಹಾದುಹೋಗಲಿದೆ.


ಇಬ್ಬಲೂರು ಮೆಟ್ರೊ ನಿಲ್ದಾಣವು ಒಆರ್‌ಆರ್–ವಿಮಾನ ನಿಲ್ದಾಣ ಹಾಗೂ ಹೆಬ್ಬಾಳ– ಸರ್ಜಾಪುರ ಮಾರ್ಗವನ್ನು ಜೋಡಣೆ ಮಾಡಲಿದೆ. ಮೆಟ್ರೊ ಜಾಲಕ್ಕೆ ಮಾಸ್ಟರ್‌ಪ್ಲ್ಯಾನ್ ರೂಪಿಸುವಾಗಲೇ ಹೆಬ್ಬಾಳ–ಸರ್ಜಾಪುರ ಮಾರ್ಗದ ಪ್ರಸ್ತಾವ ಇತ್ತು. ಕಾರಣಾಂತರಗಳಿಂದ ಅದರ ಅನುಷ್ಠಾನ ಸಾಧ್ಯವಾಗಿರಲಿಲ್ಲ. ಈ ಮಾರ್ಗವು ನಗರದ ಕೇಂದ್ರ ವಾಣಿಜ್ಯ ಪ್ರದೇಶಗಳಲ್ಲಿನ ಮೆಟ್ರೊ ಜಾಲವನ್ನು ಮತ್ತಷ್ಟು ಬಲಪಡಿಸಲಿದೆ. ಹೆಬ್ಬಾಳದಿಂದ ಕೋರಮಂಗಲ ತನಕ ಸುರಂಗ ಮಾರ್ಗ ಹಾಗೂ ಅಲ್ಲಿಂದ ಸರ್ಜಾಪುರದವರೆಗೆ ಎತ್ತರಿಸಿದ ಮಾರ್ಗ ನಿರ್ಮಾಣಗೊಳ್ಳಲಿದೆ.

ಹೆಬ್ಬಾಳ ಮತ್ತು ಸರ್ಜಾಪುರ ನಡುವಿನಮೆಟ್ರೊಮಾರ್ಗಕ್ಕೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲು ಬಿಎಂ ಆರ್‌ಸಿಎಲ್ ಈಗಾಗಲೇ ಟೆಂಡರ್ ಆಹ್ವಾನಿಸಿದೆ. ಡಿಪಿಆರ್ ಸಿದ್ಧಪಡಿಸಲು 8 ತಿಂಗಳ ಗಡುವು ನಿಗದಿಪಡಿಸಲು ಬಿಎಂಆರ್‌ಸಿಎಲ್ ಉದ್ದೇಶಿಸಿದೆ.

## ಸುದ್ದಿ 2 ನಿಮಿಷ

### ಚಂದ್ರ ಆರ್ಯಗೆ ಜೋಶಿ ಆಹ್ವಾನ

ಬೆಂಗಳೂರು: ಕೆನಡಾ ಸಂಸತ್ತಿನಲ್ಲಿ ಕನ್ನಡ ಭಾಷಣ ಮಾಡಿದ ಚಂದ್ರ ಆರ್ಯ ಅವರಿಗೆ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವಿಶೇಷ ಅತಿಥಿಯಾಗಿ ಭಾಗವಹಿಸುವಂತೆ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ಆಹ್ವಾನ ನೀಡಿದ್ದಾರೆ.



ನಗರದಲ್ಲಿ ನಡೆದ ಖಾಸಗಿ ಕಾರ್ಯಕ್ರಮದಲ್ಲಿ ಅವರನ್ನು ಭೇಟಿ ಮಾಡಿದ ಜೋಶಿ, ಹಾವೇರಿಯಲ್ಲಿ ನಡೆಯಲಿರುವ ಸಮ್ಮೇಳನಕ್ಕೆ ಆಹ್ವಾನಿಸಿದರು. ಕೆನಡಾ ದೇಶದ ಕನ್ನಡಿಗರನ್ನು ಒಗ್ಗೂಡಿಸಿ, ಪರಿಷತ್ತಿನ ಘಟಕಕ್ಕೆ ಮುಖ್ಯಸ್ಥರಾಗುವಂತೆಯೂ ಮನವಿ ಮಾಡಿಕೊಂಡರು. ಈ ಕೋರಿಕೆಗೆ ಚಂದ್ರ ಆರ್ಯ ಸಮ್ಮತಿ ಸೂಚಿಸಿದ್ದಾರೆ.

ಈ ವೇಳೆ ಕಸಾಪ ಗೌರವ ಕೋಶಾಧ್ಯಕ್ಷ ಬಿ.ಎಮ್. ಪಟೇಲ್ ಪಾಂಡು ಹಾಗೂ ಗೌರವ ಕಾರ್ಯದರ್ಶಿ ನೇ.ಭ. ರಾಮಲಿಂಗಶೆಟ್ಟಿ ಇದ್ದರು.

### 75 ನ್ಯಾಯಾಧೀಶರ ಹುದ್ದೆ ಭರ್ತಿ

ಬೆಂಗಳೂರು: ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ಖಾಲಿಯಿದ್ದ 75 ಸಿವಿಲ್ ನ್ಯಾಯಾಧೀಶರ ಹುದ್ದೆಗಳನ್ನು ಭರ್ತಿ ಮಾಡಲಾಗಿದ್ದು, ಈ ಸಂಬಂಧ ರಾಜ್ಯಪಾಲರ ಆದೇಶಾನುಸಾರ ರಾಜ್ಯ ಕಾನೂನು ಇಲಾಖೆ ಪ್ರಧಾನ ಕಾರ್ಯದರ್ಶಿ ಟಿ.ವೆಂಕಟೇಶ್ ನಾಯ್ಕ್ ಶುಕ್ರವಾರ ಅಧಿಸೂಚನೆ ಪ್ರಕಟಿಸಿದ್ದಾರೆ. ನೂತನವಾಗಿ ನೇಮಕಗೊಂಡಿರುವ ಸಿವಿಲ್ ನ್ಯಾಯಾಧೀಶರು ಪ್ರೊಬೆಷನರಿ ಅವಧಿ ಎರಡು ವರ್ಷವಾಗಿರುತ್ತದೆ.

### ಸಿ.ಎಂ ಬೊಮ್ಮಾಯಿ ಭರವಸೆ • 3 ದಶಕ ಪೂರೈಸಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರ


# ‘ಕನ್ನಡ ರಕ್ಷಣೆಗೆ ಕಾನೂನಿನ ಬಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ಭಾಷೆಯ ಸಮಗ್ರ ರಕ್ಷಣೆ, ಬೆಳವಣಿಗೆಗೆ ಸಿದ್ಧಪಡಿಸಲಾಗುತ್ತಿರುವ ‘ಸಮಗ್ರ ಭಾಷಾ ಮಸೂದೆ’ಗೆ ಕಾನೂನಿನ ಬಲ ನೀಡಿ, ಸರ್ಕಾರದ ಮಟ್ಟದಲ್ಲಿ ಅನುಮೋದಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರವು ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ‘ಕ.ಅ.ಪ್ರಾ–3 ದಶಕ’ ಕಾರ್ಯಕ್ರಮ ಉದ್ಘಾಟಿಸಿ, ಪ್ರಾಧಿಕಾರ ಹೊರತಂದ ‘ಕನ್ನಡ ರಥ–ಕಾಯಕ ಪಥ’ ಪುಸ್ತಕ ಲೋಕಾರ್ಪಣೆ ಮಾಡಿದರು.

‘ಮನುಷ್ಯನ ಬೆಳವಣಿಗೆಯಲ್ಲಿ ಭಾಷೆ ಪ್ರಮುಖ ಪಾತ್ರ ವಹಿಸುತ್ತದೆ. ಬದುಕಿನ ಪ್ರತಿ ಆಯಾಮದಲ್ಲಿ ಕನ್ನಡ ಬಳಸಿದಾಗ ಭಾಷೆಯ ಬೆಳವಣಿಗೆ ಸಾಧ್ಯ. ಕನ್ನಡವನ್ನು ಉಳಿಸಿ, ಬೆಳೆಸಲು ಭಾಷೆಗೆ ಶಕ್ತಿ ತುಂಬುವ ಕೆಲಸವನ್ನು ಸರ್ಕಾರದ ವತಿಯಿಂದ ಮಾಡಲಾಗುತ್ತದೆ.ಪ್ರಧಾನಿ ನರೇಂದ್ರ ಮೋದಿ ಅವರು ಭಾರತದ ಎಲ್ಲ ಮಾತೃಭಾಷೆಗಳೂ ರಾಷ್ಟ್ರ ಭಾಷೆ



‘ಕನ್ನಡ ರಥ–ಕಾಯಕ ಪಥ’ ಪುಸ್ತಕವನ್ನು ಬಸವರಾಜ ಬೊಮ್ಮಾಯಿ ಲೋಕಾರ್ಪಣೆ ಮಾಡಿದರು.ಟಿ.ಎಸ್. ನಾಗಾಭರಣ, ಸಚಿವರಾದ ಜೆ.ಸಿ. ಮಾಧುಸ್ವಾಮಿ, ಗೋವಿಂದ ಕಾರಜೋಳ, ಕವಿ ಎಚ್.ಎಸ್. ವೆಂಕಟೇಶಮೂರ್ತಿ ಹಾಗೂ ಸಾಹಿತಿ ದೊಡ್ಡರಂಗೇಗೌಡ ಇದ್ದಾರೆ. ಪ್ರಜಾವಾಣಿ ಚಿತ್ರ

ಎಂದು ಹೇಳಿದ್ದಾರೆ’ ಎಂದು ತಿಳಿಸಿದರು.

‘ಕನ್ನಡ ಭಾಷೆಗೆ ಆಪತ್ತಿದೆ ಎಂಬ ಭಯ ಕನ್ನಡಿಗರನ್ನು ಕಾಡುತ್ತಿದೆ. ಬೇರೆ ಭಾಷೆಗಳ ಆಕ್ರಮಣವೇ ಇದಕ್ಕೆ ಕಾರಣ. ನಾವು ಇನ್ನೊಬ್ಬರನ್ನು ಸಿಟ್ಟಿನಿಂದ ಬೈಯುವಾಗಲೂ ಅತಿ ಸಹಿಷ್ಣುತೆಯ ಸಂಸ್ಕೃತಿ ಪ್ರದರ್ಶಿಸುತ್ತೇವೆ. ಬೇರೆ ಭಾಷಿಕರಲ್ಲಿ ಈ ಸಂಸ್ಕೃತಿಯಿಲ್ಲ. ಇಲ್ಲಿ ಉತ್ತರ ಭಾರತದ ಬಹಳಷ್ಟು ಮಂದಿ ನೆಲೆಸಿದ್ದಾರೆ. ಅವರ ಜತೆಗೆ ಕನ್ನಡದಲ್ಲಿ ಸಂವಾದ ಮಾಡಬೇಕು. ಕನ್ನಡವು ನಿತ್ಯ ನಿರಂತರ ಜಾಗೃತ ಆಗಿರಬೇಕು. ಕನ್ನಡದ ಸಾಹಿತ್ಯ ಭಂಡಾರವನ್ನು ಸರಿಯಾದ ರೀತಿ ಬಳಸಬೇಕು’ ಎಂದರು.

**ಸಂಕುಚಿತಗೊಳಿಸುವ ಪ್ರಯತ್ನ:** ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ‘ಕನ್ನಡವು ಶಕ್ತಿಶಾಲಿಯಾಗಲು ಭಾಷೆಯನ್ನು ಅನೇಕ ಆಯಾಮಗಳಲ್ಲಿ ಬಳಸಬೇಕು. ಕಂಪ್ಯೂಟರ್ ಶಿಕ್ಷಣ, ಎಂಜಿನಿಯರಿಂಗ್, ವೈದ್ಯಕೀಯ ಸೇರಿ ವಿವಿಧೆಡೆ ಕನ್ನಡ ಬಳಕೆಗೆ ಅವಕಾಶಗಳಿದ್ದರೂ ಇಂಗ್ಲಿಷ್ ಅನಿವಾರ್ಯ ಎಂದು ಸೃಷ್ಟಿ ಮಾಡಲಾಯಿತು. ಈ ಮೂಲಕ ನಮ್ಮ ಭಾಷೆಯನ್ನು ಸಂಕುಚಿತ ಗೊಳಿಸಲಾಯಿತು. ಭಾಷೆ ಬೆಳವಣಿಗೆಗೆ ನಮ್ಮ ಪುಸ್ತಕಗಳನ್ನು ಅನ್ಯ ಭಾಷೆಗಳಿಗೆ ಅನುವಾದ ಮಾಡಬೇಕು. ಈ ಮೂಲಕ ಇಲ್ಲಿನ ಶ್ರೇಷ್ಠ ಸಾಹಿತ್ಯವನ್ನು ಅನ್ಯ ಭಾಷಿಕರಿಗೆ ಪರಿಚಯಿಸಬೇಕು. ಭಾಷೆ ಉಳಿಸಲು ಆಂದೋಲನ ನಡೆಸಬೇಕು’ ಎಂದು ಹೇಳಿದರು.

ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ, ‘ಸಮಗ್ರ ಭಾಷಾ ಮಸೂದೆಗೆ ಸಂಬಂಧಿಸಿದಂತೆ ನ್ಯಾ. ಬನ್ನೂರುಮಠ ಅವರು ಅಂತಿಮ ಕರಡು ಸಿದ್ಧಪಡಿಸುತ್ತಿದ್ದಾರೆ. ಶೀಘ್ರವೇ ಅದನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು. ಕನ್ನಡ ಕಟ್ಟುವುದು ಒಬ್ಬ ವ್ಯಕ್ತಿ ಅಥವಾ ಸರ್ಕಾರದ ಕೆಲಸವಲ್ಲ. ಇದು ಇಡೀ ಸಮಾಜದ ಕಾರ್ಯವಾಗಿದೆ. ಪ್ರಾಧಿಕಾರವು ಮೂರು ದಶಕಗಳನ್ನು ಕ್ರಮಿಸಿದೆ. ಮುಂದಿನ ದಿನಗಳಲ್ಲಿ ಕನ್ನಡ ಕಟ್ಟುವ ಬಗ್ಗೆ ಹಲವು ಕಾರ್ಯಯೋಜನೆ ರೂಪಿಸಲಾಗಿದೆ’ ಎಂದು ತಿಳಿಸಿದರು.

### ಮುನಿರಾಜು ನೇಮಕ

ಕೆ.ಆರ್.ಪುರ: ಮಹದೇವಪುರ ವಿಧಾನಸಭಾ ಕ್ಷೇತ್ರದ ವರ್ತೂರು ಬ್ಲಾಕ್ ಕಾಂಗ್ರೆಸ್ ಸಮಿತಿಯ ಎಸ್ಸಿ, ಎಸ್ಟಿ ಬ್ಲಾಕ್ ಅಧ್ಯಕ್ಷರಾಗಿ ಎನ್.ಮುನಿರಾಜು ನೇಮಕವಾಗಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಕಾರ್ಯಾಧ್ಯಕ್ಷ ರಾಮಲಿಂಗರೆಡ್ಡಿ ಅವರ ಆದೇಶದಂತೆ ನೇಮಿಸಲಾಗಿದೆ.



ಬೆಂಗಳೂರಿನ ಹೆಬ್ಬಾಳ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ನಿವಾರಣೆಗೆ ಶುಕ್ರವಾರದಿಂದ ಬದಲಾವಣೆಗಳನ್ನು ಜಾರಿಗೊಳಿಸಲಾಗಿದೆ. ವಿಮಾನ ನಿಲ್ದಾಣದಿಂದ ಬರುವ ಫ್ಲೈ ಓವರ್ ಸಂಚಾರ ದಟ್ಟಣೆ ಕಡಿಮೆಯಾಗಿದ್ದು, ಸರ್ವಿಸ್ ರಸ್ತೆಯಲ್ಲಿ ವಾಹನಗಳ ಸಂಖ್ಯೆ ಹೆಚ್ಚಿದೆ –ಪ್ರಜಾವಾಣಿ ಚಿತ್ರ


**ನೈಋತ್ಯ ರೈಲ್ವೆ**

ಟೆಂಡರ್ ಪ್ರಕಟಣೆ ಸಂ. ಸಿಎ/ಸಿಎನ್/ಬಿಎನ್‌ಸಿ/44/2022
ದಿನಾಂಕ : 05-07-2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

| ಕ್ರ | ಕೆಲಸದ ಹೆಸರು | ಅಂದಾಜು ಮೌಲ್ಯ |
|---|---|---|
| 1 | ಅರಸೀಕೆರೆ – ತುಮಕೂರು ಸೆಕ್ಷನ್ – ಪ್ಲಾಟ್‌ಫಾರಂಗಳು, ಪ್ಲಾಟ್‌ಫಾರಂಗಳ ಶೆಲ್ಟರ್‌ಗಳು, ಪಾದಚಾರಿ ಮೇಲ್ಸೇತುವೆ, ನಿಲ್ದಾಣದ ಕಟ್ಟಡ, ಎಸ್‌ಎಸ್‌ಇ/ಪಿ.ವೇ ಕಛೇರಿಯ ಬಾಕಿ ಉಳಿದ ಕಾಮಗಾರಿಗಳು ಮತ್ತು ಇತರ ಪ್ರಯಾಣಿಕರ ಸೌಕರ್ಯಗಳ ಕಾಮಗಾರಿಗಳು ಇತ್ಯಾದಿ. (ಟೆಂಡರ್ ಉಲ್ಲೇಖ ಸಂ. ಎಎಸ್‌ಕೆ–ಟಿಕೆ–42) | ರೂ. 32,71,32,738/- |
| 2 | ಗದಗ – ಹೊಟಗಿ ಡಬ್ಲಿಂಗ್ ಯೋಜನೆ : ವಿಜಯಪುರ ಯಾರ್ಡ್‌ನಲ್ಲಿ ಬಲ್ಲಾಸ್ಟ್‌ನ ಸಂಗ್ರಹಣೆ. (ಟೆಂಡರ್ ಉಲ್ಲೇಖ ಸಂ. ಹೆಚ್‌ಜಿಐಎ/84) | ರೂ. 1,48,80,000/- |

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : ಕ್ರ.ಸಂ.1ಕ್ಕೆ 27-07-2022 ರಂದು ಮತ್ತು ಕ್ರ.ಸಂ.2ಕ್ಕೆ 26-07-2022ರಂದು 15:00 ಗಂಟೆವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು ಬೆಂಗಳೂರು ದಂಡು

ಪಿಯುಬಿ/209/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23

S.W.Railways SWRRLY SWRRLY


## ಮರು ಮೌಲ್ಯಮಾಪನಕ್ಕೆ ಅರ್ಜಿ

ಬೆಂಗಳೂರು: ಪ್ರಸಕ್ತ ಸಾಲಿನ ದ್ವಿತೀಯ ಪಿಯು ಫಲಿತಾಂಶ ಪ್ರಕಟವಾದ ನಂತರ ಉತ್ತರ ಪತ್ರಿಕೆಗಳ ಸ್ಕ್ಯಾನ್ ಮಾಡಿದ ಪ್ರತಿಗಳಿಗಾಗಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದು, ಜುಲೈ 6ರಿಂದಲೇ ವೆಬ್‌ಸೈಟ್‌ನಲ್ಲಿ ಪ್ರತಿಗಳನ್ನು ಅಪ್‌ಲೋಡ್ ಮಾಡಲಾಗುತ್ತಿದೆ. ವಿದ್ಯಾರ್ಥಿಗಳು ಪ್ರತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಜುಲೈ 15ರವರೆಗೆ ಅವಕಾಶ ಕಲ್ಪಿಸಲಾಗಿದೆ.

ಮರುಮೌಲ್ಯಮಾಪನ ಮತ್ತು ಮರುಎಣಿಕೆಗೆ ಅರ್ಜಿ ಸಲ್ಲಿಸುವ ಅವಧಿಯನ್ನು ಜುಲೈ 18ರವರೆಗೆ ಮುಂದೂಡಲಾಗಿದೆ. ಸ್ಕ್ಯಾನ್ ಮಾಡಿದ ಪ್ರತಿ ತೆಗೆದುಕೊಂಡವರು ಮಾತ್ರ ಅರ್ಜಿ ಸಲ್ಲಿಸಬಹುದು ಎಂದು ಪದವಿಪೂರ್ವ ಶಿಕ್ಷಣ ಇಲಾಖೆಯ ಪ್ರಕಟಣೆ ತಿಳಿಸಿದೆ.

**ದ್ವಿತೀಯ ಪಿಯು ಪ್ರವೇಶಕ್ಕೆ 22ರವರೆಗೆ ಅವಕಾಶ:** ದ್ವಿತೀಯ ಪಿಯು ತರಗತಿಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿ ಗಳಿಗೆ ಜುಲೈ 22ರವರೆಗೆ ಅವಕಾಶ ಕಲ್ಪಿಸಲಾಗಿದೆ. ವಿಶೇಷ ದಂಡಶುಲ್ಕ ಪಾವತಿಸಿ, ಪ್ರವೇಶ ಪಡೆಯಬಹುದು. ಎಂದು ಪ್ರಕಟಣೆಯಲ್ಲಿ ಸೂಚಿಸಲಾಗಿದೆ.

### ಶೂನ್ಯ ದಾಖಲಾತಿ

ಬೆಂಗಳೂರು: ಪ್ರಸಕ್ತ ವರ್ಷ ರಾಜ್ಯದ 541 ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ದಾಖಲಾತಿ ಶೂನ್ಯವಿದೆ. ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಅತಿಹೆಚ್ಚು ಅಂದರೆ 93 ಕಾಲೇಜುಗಳು, ಬೆಂಗಳೂರು ಉತ್ತರ ಜಿಲ್ಲೆಯಲ್ಲಿ 61, ವಿಜಯಪುರ 26, ಮೈಸೂರು 24, ಉತ್ತರ ಕನ್ನಡ ಜಿಲ್ಲೆಯಲ್ಲಿ 3 ಕಾಲೇಜುಗಳಲ್ಲಿ ಒಬ್ಬ ವಿದ್ಯಾರ್ಥಿಯೂ ಪ್ರವೇಶ ಪಡೆದಿಲ್ಲ.

### ಶಿವಾನಂದ ವೃತ್ತದಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿ

# ಮೇಲ್ಸೇತುವೆ: ಕೋರ್ಟ್ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಾನಂದ ವೃತ್ತದಲ್ಲಿನ ಮೇಲ್ಸೇತುವೆ ನಿರ್ಮಾಣ ಕಾಮಗಾರಿ ಯೋಜನೆ ಪ್ರಶ್ನಿಸಿ ಸ್ಥಳೀಯ ನಿವಾಸಿಗಳು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಜಾಗೊಳಿಸಿರುವ ಹೈಕೋರ್ಟ್, ಕಾಮಗಾರಿ ಪೂರ್ಣಗೊಳಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಹಸಿರು ನಿಶಾನೆ ತೋರಿದೆ.

ಇದೇ ವೇಳೆ ಶಿವಾನಂದ ವೃತ್ತದ ಜಂಕ್ಷನ್‌ನಲ್ಲಿ ನಿರ್ಮಾಣ ಹಂತದಲ್ಲಿರುವ ಮೇಲ್ಸೇತುವೆಯ ಇಳಿಜಾರು ಪ್ರಮಾಣ ವನ್ನು (ಶೇಷಾದ್ರಿಪುರ ರಸ್ತೆ ಕಡೆಗೆ ಸಾಗುವ) ಶೇ 6.66ರಷ್ಟು ಹೆಚ್ಚಿಸಲು ಅನುಮತಿ ಕೋರಿ ಬಿಬಿಎಂಪಿ ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಪುರಸ್ಕರಿಸಿದೆ.

‘ಮೇಲ್ಸೇತುವೆ ಯೋಜನೆಗೆ ಮುಖ್ಯಮಂತ್ರಿಗಳ ನೇತೃತ್ವದ ರಾಜ್ಯದ ಉನ್ನತ ಮಟ್ಟದ ಕಾರ್ಯಕಾರಿ ಸಮಿತಿ



ಅನುಮೋದನೆ ನೀಡಿದೆ. ಹಾಗಾಗಿ, ಯೋಜನೆ ಸಂಬಂಧ ನಿರ್ಣಯ ಕೈಗೊಳ್ಳು ವುದರಲ್ಲಿ ನ್ಯಾಯಾಲಯದ ಪಾತ್ರ ಸೀಮಿತವಾಗಿದೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

‘ನಗರದ ಹೃದಯ ಭಾಗದ ಜನ ನಿಬಿಡ ಹಾಗೂ ವಾಹನ ದಟ್ಟಣೆಯಿರುವ ರಸ್ತೆಯಲ್ಲಿ ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ಯೋಜನೆ ವಿಳಂಬದಿಂದ ರಸ್ತೆಯನ್ನು ಬಳಸುವ ವಾಹನದಾರರಿಗೆ ಸಮಸ್ಯೆ ಉಂಟಾಗುತ್ತದೆ ಹಾಗೂ ಯೋಜನೆಯ ವೆಚ್ಚ ಹೆಚ್ಚಾಗಲಿದೆ. ಯಾವುದೇ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳು ನಿಗದಿತ ಅವಧಿಯಲ್ಲಿ ಮುಕ್ತಾಯವಾಗಬೇಕು. ಇದರಿಂದ ಸಮಯ ಮತ್ತು ಹಣ ಉಳಿತಾಯವಾಗುತ್ತದೆ’ ಎಂದು ಆದೇಶದಲ್ಲಿ ವಿವರಿಸಿದೆ.

‘ಶೇಷಾದ್ರಿಪುರ ಕಡೆಗೆ ಸಾಗುವ ಇಳಿಜಾರಿನ ಮಾರ್ಗವನ್ನು ಹೆಚ್ಚಿಸಲು ಬಿಬಿಎಂಪಿ ಅನುಮತಿ ಕೋರಿದೆ. ಸುರಕ್ಷತೆ ದೃಷ್ಟಿಯಿಂದ ಮೇಲ್ಸೇತುವೆ ಇಳಿಜಾರಿನ ಪ್ರಮಾಣ ಹೆಚ್ಚಿಸಬಹುದು ಎಂಬುದಾಗಿ ಪ್ರತಿಷ್ಠಿತ ಭಾರತೀಯ ವಿಜ್ಞಾನ ಸಂಸ್ಥೆಯೂ (ಐಐಎಸ್ಸಿ) ವರದಿ ಸಲ್ಲಿಸಿದೆ. ಆದ್ದರಿಂದ, ಐಐಎಸ್‌ಸಿಯ ವರದಿಯನ್ನು ನ್ಯಾಯಾಲಯ ಒಪ್ಪುತ್ತದೆ’ ಎಂದು ಆದೇಶದಲ್ಲಿ ತಿಳಿಸಿದೆ.

**ಪ್ರಕರಣವೇನು?:** ಮೇಲ್ಸೇತುವೆ ನಿರ್ಮಾಣಕ್ಕೆ ಅನುಮೋದನೆ ನೀಡಿ ರಾಜ್ಯ ಸರ್ಕಾರ 2017ರ ಜೂನ್ 24ರಂದು ಆದೇಶಿಸಿತ್ತು. ಈ ಆದೇಶ ಪ್ರಶ್ನಿಸಿ ಕುಮಾರ ಪಾರ್ಕ್ ಪೂರ್ವ ಭಾಗದ ನಿವಾಸಿ ಬಿ.ಪಿ. ಮಹೇಶ್ ಹಾಗೂ ಇತರರು 2017ರ ಅಕ್ಟೋಬರ್‌ನಲ್ಲಿ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಕಾಮಗಾರಿಗೆ ತಡೆ ನೀಡಲು 2018ರ ಜನವರಿ 8ರಂದು ಹೈಕೋರ್ಟ್ ನಿರಾಕರಿಸಿತ್ತು.


**ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ**
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001.
ದೂರವಾಣಿ: 080–22215601, 22211246, ಫ್ಯಾಕ್ಸ್: 080–22215602

ಸಂಖ್ಯೆ: ಡಿವೈಇಎಸ್/ತಾಂಶಾಖೆ/42/2022–23 ದಿನಾಂಕ: 07–07–2022

**ಟೆಂಡರ್ ಪ್ರಕಟಣೆ** (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಉಪ–ನಿರ್ದೇಶಕರು (ಆಡಳಿತ), ಇವರು ಈ ಕೆಳಗೆ ತಿಳಿಸಿರುವ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಿದ್ದಾರೆ.

| ಕ್ರ.ಸಂ. | ಕಾಮಗಾರಿ ವಿವರ | ಇ.ಎಂ.ಡಿ ಮೊತ್ತ |
|---|---|---|
| 1 | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧೀನದಲ್ಲಿರುವ ಬೆಂಗಳೂರು ವಿಭಾಗದಲ್ಲಿರುವ ಈಜುಕೊಳಗಳ ನಿರ್ವಹಣೆ ಮಾಡುವ ಕುರಿತು. | ರೂ. 2,00,000/– |

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: http://eproc.karnataka.gov.in ರಲ್ಲಿ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.

1) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 22–07–2022ರಂದು ಸಮಯ: 16.00 ಗಂಟೆಯವರೆಗೆ.
2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 25–07–2022ರಂದು ಸಮಯ: 16.30 ಗಂಟೆಗೆ.
3) ಹಣಕಾಸು ಬಿಡ್ ತೆರೆಯುವ ದಿನಾಂಕ: ನಂತರ ತಿಳಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/– ಉಪ ನಿರ್ದೇಶಕರು (ಆಡಳಿತ) ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ವಾಸಾಸಂಇ/ವಾ.ಪ್ರ/1274/ಅಡ್ವರ್ಟೋ/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



**ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರು**
ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಕಛೇರಿ, ನಂ. 1, ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆ, ಬೆಂಗಳೂರು–560 042.

**ಟೆಂಡರ್‌ನ ಸಂಕ್ಷಿಪ್ತ ಅಧಿಸೂಚನೆ**

ಸಂಖ್ಯೆ : ಎಸ್‌ಡಿಆರ್‌ಎಫ್/30/10/2014–15 ದಿನಾಂಕ: 07.07.2022

ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಉಪಯೋಗಕ್ಕೆ 04 Nos. of USAR Shoring Systems ಗಳನ್ನು ಇಲಾಖೆಯ ಸ್ಪೆಸಿಫಿಕೇಶನ್ ಪ್ರಕಾರ ಸರಬರಾಜು ಮಾಡಲು ಬಿಡ್‌ಗಳನ್ನು ಇ–ಖರೀದಿ ಮುಖಾಂತರ ಸಲ್ಲಿಸಲು ಟೆಂಡರ್ ಕರೆಯಲಾಗಿದೆ.

ಅರ್ಹ ಸರಬರಾಜುದಾರರು ಇ–ಖರೀದಿ ಮುಖಾಂತರ ಮಾತ್ರ ಬಿಡ್‌ಗಳನ್ನು ಸಲ್ಲಿಸಲು ಕೋರಿದೆ. ಜಾಲತಾಣ: https://eproc.karnataka.gov.in

ಸಹಾಯ ವಾಣಿ: 080–25501216/227

(1) ಟೆಂಡರ್ ವಿಚಾರಣೆಗೆ ಅಂತಿಮ ದಿನಾಂಕ ಮತ್ತು ಸಮಯ: 11.07.2022 ಸಂಜೆ 17.00 ಗಂಟೆಯವರೆಗೆ (2) ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ: 18.07.2022 ಸಂಜೆ 17.00 ಗಂಟೆಯವರೆಗೆ (3) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 20.07.2022 ಬೆಳಿಗ್ಗೆ 11.00 ಗಂಟೆಗೆ (4) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: ತಿಳಿಸಲಾಗುವುದು.

ಸಹಿ/– ಪೊಲೀಸ್ ಉಪ ಮಹಾ ನಿರೀಕ್ಷಕರು ಹಾಗೂ ಟೆಂಡರ್ ಇನ್‌ವೈಟಿಂಗ್ ಅಧಿಕಾರಿ, ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು

ವಾಸಾಸಂಇ/ವಾ.ಪ್ರ./1271/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



**ಸಾರ್ವಜನಿಕ ಪ್ರಕಟಣೆ**

ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಬೆಗೂರು ಗ್ರಾಮ, ಸೂಲಿಬೆಲೆ ಹೋಬಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇಲ್ಲಿರುವ ಜಮೀನುಗಳಿಗೆ ಸಂಬಂಧಿಸಿದಂತೆ, ಈ ಕೆಳಗೆ ಟೇಬಲ್‌ನಲ್ಲಿ ತಿಳಿಸಿರುವ ಮಾಲೀಕರ ಹೆಸರುಗಳು (ಇನ್ನು ಮುಂದೆ **“ಮಾಲೀಕರು”** ಎಂದು ಕರೆಯಲ್ಪಡುವ), ಮಾಲೀಕತ್ವದ **‘ಷೆಡ್ಯೂಲ್’** ನಲ್ಲಿ ಸವಿವರವಾಗಿ ವಿವರಿಸಿರುವ ಮತ್ತು ಇನ್ನುಮುಂದೆ ಇದನ್ನು **“ಷೆಡ್ಯೂಲ್ ಸ್ವತ್ತು”** ಎಂದು ಕರೆಯಲ್ಪಡುವ, ಈ ಸ್ವತ್ತಿನ ಮಾಲೀಕತ್ವವನ್ನು ನಾವು ತನಿಖೆ ನಡೆಸುತ್ತಿದ್ದೇವೆ.

ಈ ಷೆಡ್ಯೂಲ್ ಸ್ವತ್ತಿಗೆ ತಾವೇ ಏಕಮಾತ್ರ ಮಾಲೀಕರಾಗಿರುತ್ತೇವೆ ಹಾಗೂ ಷೆಡ್ಯೂಲ್ ಸ್ವತ್ತನ್ನು ಮಾರುವ ನಿರ್ಬಂಧರಹಿತ ಹಕ್ಕುಗಳನ್ನು ಹೊಂದಿರುತ್ತೇವೆ ಎಂಬುದಾಗಿ ಸದರಿ ಮಾಲೀಕರು ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ. ಹಾಗೂ ಸದರಿ ಷೆಡ್ಯೂಲ್ ಸ್ವತ್ತು ಎಲ್ಲಾ ಋಣಭಾರ ಅಡಮಾನ, ಭಾಗಾಂಶ, ಬಾಕಿ ದಾವೆಗಳು ಮತ್ತು ಇತರೆ ಯಾವುದೇ ಮೂರನೇ ವ್ಯಕ್ತಿಗಳ ಹಕ್ಕು/ಆಕ್ಷೇಪಣೆಗಳಿಂದ ಮುಕ್ತವಾಗಿದೆ ಎಂಬುದಾಗಿ ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.

ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ವ್ಯಕ್ತಿಗಳು, ಷೆಡ್ಯೂಲ್ ಸ್ವತ್ತಿನ ಸಂಬಂಧದಲ್ಲಿ ಅಥವಾ ಅದರ ಯಾವುದೇ ಭಾಗ ಅಥವಾ ಯಾವುದೇ ಸ್ವರೂಪದ ಯಾವುದೇ ಅನುಕೂಲಗಳು, ಆಕ್ಷೇಪಣೆ, ಡಿಮ್ಯಾಂಡ್, ಹಕ್ಕು ಕೇಳಿಕೆ, ಹಕ್ಕು ಬಾಧ್ಯತೆ ಮತ್ತು ಆಸಕ್ತಿ ಹೊಂದಿದ್ದರೆ, ಮೂಲ ದಾಖಲೆ ಪತ್ರಗಳ ಬೆಂಬಲದೊಡನೆ ಸದರಿ ನೋಟೀಸ್ ಪ್ರಕಟವಾದ **15 (ಹದಿನೈದು)** ದಿನಗಳ ಕಾಲಾವಧಿಯ ಒಳಗೆ ಕೆಳಗೆ ತಿಳಿಸಿರುವ ವಿಳಾಸಕ್ಕೆ ಕಳುಹಿಸಬೇಕಾಗಿ ಈ ಮೂಲಕ ಕರೆ ನೀಡಲಾಗಿದೆ. ಒಂದು ವೇಳೆ ಅಂತಹ ಯಾವುದೇ ಆಕ್ಷೇಪಣೆಗಳು ನಿಗದಿತ ಸದರಿ ಕಾಲಾವಧಿಯ ಒಳಗೆ ಬಾರದಿದ್ದರೆ, ಮೇಲೆ ತಿಳಿಸಿರುವ ಮಾಲೀಕರ ಹೊರತಾಗಿ ಬೇರೆಯಾರೂ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಬಾಧ್ಯತೆ, ಹಿತಾಸಕ್ತಿ ಅಥವಾ ಯಾವುದೇ ಆಕ್ಷೇಪಣೆಗಳು ಮತ್ತು/ಅಥವಾ ಕ್ಲೇಮನ್ನು ಹೊಂದಿರುವುದಿಲ್ಲವೆಂದು ಭಾವಿಸಲಾಗುವುದು ಹಾಗೂ ಆ ಸಂದರ್ಭದಲ್ಲಿ ನಮ್ಮ ಕಕ್ಷಿದಾರರು ಸದರಿ ಮಾಲೀಕರೊಂದಿಗೆ ಉದ್ದೇಶಿತ ವ್ಯವಹಾರ ನಡೆಸಲು ಸ್ವತಂತ್ರರಾಗಿರುವರೆಂದು ತಿಳಿಯಲಾಗುವುದು. ನಿಗದಿತ ಸದರಿ ಕಾಲಾವಧಿ ಮುಗಿದ ನಂತರ ಬರುವ ಯಾವುದೇ ರೀತಿಯ ಆಕ್ಷೇಪಣೆಗಳು ಮತ್ತು/ಅಥವಾ ಕ್ಲೇಮುಗಳನ್ನು ನಾವು ಸ್ವೀಕರಿಸುವುದಿಲ್ಲ ಮತ್ತು ಅಂತಹ ಆಕ್ಷೇಪಣೆಗಳು ಮತ್ತು/ಅಥವಾ ಕ್ಲೇಮುಗಳು ನಮ್ಮ ಕಕ್ಷಿದಾರರ ಮೇಲೆ ಬಂಧನೆಯಾಗುವುದಿಲ್ಲ.

**ಷೆಡ್ಯೂಲ್ ಸ್ವತ್ತು**

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಸೂಲಿಬೆಲೆ ಹೋಬಳಿ, ಬೇಗೂರು ಗ್ರಾಮಕ್ಕೆ ಸೇರಿದ, ಸ್ಥಿರಾಸ್ತಿ ಸ್ವತ್ತುಗಳಾದ ಕೃಷಿ ಜಮೀನುಗಳ ಒಟ್ಟು ವಿಸ್ತೀರ್ಣ **7 (ಏಳು) ಎಕರೆ 39.75 (ಮೂವತ್ತೊಂಭತ್ತು ಪಾಯಿಂಟ್ ಎಪ್ಪತ್ತೈದು) ಗುಂಟೆಗಳು**, ಈ ಕೆಳಕಂಡ ಸರ್ವೆ ನಂಬರುಗಳಲ್ಲಿ ಒಳಗೊಂಡ ಜಮೀನುಗಳು:

| ಕ್ರಮ ಸಂಖ್ಯೆ. | ಸರ್ವೆ ನಂ. | ವಿಸ್ತೀರ್ಣ: ಕೃಷಿ ಜಮೀನು (ಎಕರೆ – ಗುಂಟೆ) | | ವಿಸ್ತೀರ್ಣ: ‘ಎ’ ಖರಾಬ್ (ಗುಂಟೆ) | ವಿಸ್ತೀರ್ಣ: ‘ಬಿ’ ಖರಾಬ್ (ಗುಂಟೆ) | ಮಾಲೀಕರ ಹೆಸರು |
|---|---|---|---|---|---|---|
| 1. | 5/1 | 1 | 2.5 | 1.25 | 0 | ಶ್ರೀ. ಬಿ. ಮುರಳಿ |
| 2. | 5/5 | 1 | 8.50 | 1.50 | 0 | ಶ್ರೀ. ಬಿ. ಮುರಳಿ |
| 3. | 141 (141/p6) | 2 | 0 | 0 | 0 | ಎ) ಶ್ರೀ. ಗಣೇಶಪ್ಪ ಬಿ) ಶ್ರೀ. ವೆಂಕಟೇಶಯ್ಯ |
| 4. | 159 | 3 | 15 | 0 | 11 | ಶ್ರೀ. ಬಿ. ಮುರಳಿ |
| ಒಟ್ಟು | | 7 | 26 | 2.75 | 11 | |
| | | 7 ಎಕರೆ 39.75 ಗುಂಟೆಗಳು | | | | |

ಸ್ಥಳ: ಬೆಂಗಳೂರು
ದಿನಾಂಕ: ಜುಲೈ 09, 2022

**ಎನ್.ಯು. ಸುಬಯ,** ಪಾಲುದಾರರು
**ದುಅ ಅಸೋಸಿಯೇಟ್ಸ್,**
ಅಡ್ವೊಕೇಟ್ಸ್ ಮತ್ತು ಸಾಲಿಸಿಟರ್ಸ್,
130/1, ಎರಡನೇ ಅಂತಸ್ತು, ಹಲಸೂರು ರಸ್ತೆ, ಬೆಂಗಳೂರು–560 042
ದೂ. ಸಂ. 91–80–25588799/25589909
ಇ–ಮೇಲ್: subaya@duaassociates.com



**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ**
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020.

ಸಂ: ಬೆಂಅಪ್ರಾ/ನಯೋಸ/CLU-33/765/2022–23 ದಿನಾಂಕ: 07.07.2022

**ಪ್ರಕಟಣೆ**

**ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ಅಡಿಯಲ್ಲಿ**

ಶ್ರೀ ಎಸ್.ಶಾಮರಾಜು ಬಿನ್ ಗಂಗರಾಜ್, ನಂ.18, 6ನೇ ಮುಖ್ಯರಸ್ತೆ, ಆರ್.ಬಿ.ಐ ಕಾಲೋನಿ ಹತ್ತಿರ, ನಟರಾಜ ಬಡಾವಣೆ, ಜೆ.ಪಿ.ನಗರ 7ನೇ ಹಂತ, ಬೆಂಗಳೂರು–560 078 ರವರು ಬೆಂಗಳೂರು ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಮೈಲಸಂದ್ರ ಗ್ರಾಮದ ಸರ್ವೆ ನಂ. 110/2 ರಲ್ಲಿನ 02 ಎಕರೆ 00 ಗುಂಟೆ (0–35 ಗುಂಟೆ ಖರಾಬು ಹೊರತುಪಡಿಸಿ) ವಿಸ್ತೀರ್ಣದ ಜಮೀನನ್ನು RMP-2015 ರಲ್ಲಿ ವ್ಯವಸಾಯ ವಲಯವೆಂದು ವರ್ಗೀಕರಿಸಲಾಗಿದ್ದು, ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 14–A ರಡಿಯಲ್ಲಿ ಭೂಉಪಯೋಗ ಬದಲಾವಣೆ ಕೋರಿರುತ್ತಾರೆ. ಸದರಿ ಸರ್ವೆ ನಂಬರ್ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ವಸತಿ ನಿವೇಶನಗಳು ಲಭ್ಯವಾಗುತ್ತವೆ ಹಾಗೂ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು ಹಾಗೂ ನಾಗರೀಕ ಸೌಲಭ್ಯ ಜಾಗಗಳು, ಉದ್ಯಾನವನಗಳು, ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ. ಯೋಜನಾಬದ್ಧ ವಿನ್ಯಾಸ ರಚನೆಯಿಂದ ಸರ್ಕಾರಕ್ಕೆ ತೆರಿಗೆಗಳು ಉತ್ಪತ್ತಿಯಾಗುತ್ತವೆ ಎಂದು ಅರ್ಜಿದಾರರು ತಿಳಿಸಿರುತ್ತಾರೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ರಂತೆ ಸದರಿ ಭೂಉಪಯೋಗ ಬದಲಾವಣೆ ಕುರಿತಂತೆ ಸಾರ್ವಜನಿಕರಿಂದ ಸಲಹೆ / ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸಲಹೆ/ಆಕ್ಷೇಪಣೆಗಳನ್ನು ಲಿಖಿತ ಮೂಲಕ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಗರ ಯೋಜಕ ಸದಸ್ಯರವರಿಗೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. 15 ದಿನಗಳ ನಂತರ ಸಲ್ಲಿಸಲಾಗುವ ಸಲಹೆ/ಆಕ್ಷೇಪಣೆಗಳಿಗೆ ಮಾನ್ಯತೆ ನೀಡಲಾಗುವುದಿಲ್ಲ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.
BDA/PRO/CLU/32/2022-23



**ಪುರಸಭೆ, ಬಾಗೇಪಲ್ಲಿ**
**ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ**
**(Standard Bidding Document KW-4)**

ಟೆಂಡರ್ ಅಧಿಸೂಚನೆ ಸಂ: ಬಾಪುಸ/ತಾಶಾ/ಸಿಆರ್/56/2020–21 ದಿ: 29.06.2022

**ಟೆಂಡರ್ ಪ್ರಕಟಣೆ**

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಮುಖ್ಯಾಧಿಕಾರಿಗಳು ಪುರಸಭೆ ಬಾಗೇಪಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ 2019–20ನೇ ಸಾಲಿನ ಎಸ್.ಎಫ್.ಸಿ ವಿಶೇಷ ಯೋಜನೆಯಡಿಯ ರಸ್ತೆ, ಚರಂಡಿ ಮತ್ತು ಗ್ರಿಲ್ ಅಳವಡಿಸುವ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ದರ್ಜೆಯ ಗುತ್ತಿಗೆದಾರರಿಂದ KW-4 ನಮೂನೆಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು: **DMA/2022-23/OW/WORK_INDENT132733.** ಅಂದಾಜು ಮೊತ್ತ: **ರೂ.178.00 ಲಕ್ಷ.** ಇಎಂಡಿ ಮೊತ್ತ: **ರೂ.2.35 ಲಕ್ಷ.** ಟೆಂಡರ್ ಕಾಲಾವಧಿ: **9 ತಿಂಗಳು.** ಗುತ್ತಿಗೆದಾರರ ದರ್ಜೆ: ಅರ್ಹ 1ನೇ ದರ್ಜೆ ಮೇಲ್ಪಟ್ಟು ಪಿಡಬ್ಲ್ಯೂಡಿ ಗುತ್ತಿಗೆದಾರರು. **ಸೂಚನೆ:** ಟೆಂಡರ್ ನಮೂನೆ ಶುಲ್ಕ: ಇ–ಪ್ರೊಕ್ಯೂರ್‌ಮೆಂಟ್‌ನಂತೆ. (1) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **16.07.2022 ಸಂಜೆ 5.00 ಗಂಟೆವರೆಗೆ.** (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **18.07.2022 ಸಂಜೆ 4.30 ಗಂಟೆ ನಂತರ.** (3) ಬಿಡ್ ತೆರೆಯುವ ದಿನಾಂಕ: **30.07.2022 ಸಂಜೆ 4.30 ಗಂಟೆ ನಂತರ.**

**ಷರತ್ತುಗಳು:** (1) ಮೇಲ್ಕಂಡ ಪ್ರಕಟಿತ ಟೆಂಡರ್ ಕಾಮಗಾರಿಗಳು **Standard Bidding Document KW-4,** ಪ್ರಕಾರ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ ಹಾಗೂ ಸಂಬಂಧಿತ ಎಲ್ಲಾ ದಾಖಲೆಗಳನ್ನು ಆನ್‌ಲೈನ್ ಮುಖಾಂತರ ಅಪ್‌ಲೋಡ್ ಮಾಡುವುದು. (2) ಹೆಚ್ಚಿನ ಮಾಹಿತಿ ಹಾಗೂ ವಿವರಗಳನ್ನು **www.eproc.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ. (3) ಹೆಚ್ಚಿನ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ತಾಂತ್ರಿಕ ಶಾಖೆಯಲ್ಲಿ ಸಂಪರ್ಕಿಸಬಹುದು.

ಸಹಿ/–ಅಧ್ಯಕ್ಷರು ಪುರಸಭೆ, ಬಾಗೇಪಲ್ಲಿ | ಸಹಿ/– ಉಪಾಧ್ಯಕ್ಷರು ಪುರಸಭೆ, ಬಾಗೇಪಲ್ಲಿ | ಸಹಿ/– ಮುಖ್ಯಾಧಿಕಾರಿಗಳು ಪುರಸಭೆ, ಬಾಗೇಪಲ್ಲಿ

ವಾ.ಸಾ.ಸಂ.ಇ./ಚಿಕ್ಕಬಳ್ಳಾಪುರ/ಆರ್.ಓ.ಸಂ.156/ಎಂಸಿಎ/2022–23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



**PUBLIC NOTICE**

Public are hereby inform you that my client **M/s DS-Max Properties Pvt. Ltd.**, rep; by its Authorized Signatory, **Mr. Shivashankar Chikkeri**, having its office at # 1854, 17th Main, 30th 'B' Cross, HBR Layout, 1st stage, 5th Block, Bangalore - 560 043, intend to enter into a ***Absolute Sale Deed*** with owner/s **Smt. Hajira Begum** w/o. Late Sanaulla, **Sri. Sajjad Hussain** s/o. Late Sanaulla, **Mr. Sahira Khanum** s/o. Late Sanaulla, **Mr. Sadiq Hussain** s/o. Late Sanaulla and **Mr. Sidiq Hussain** s/o. Late Sanaulla are the absolute owner/s of immovable land property bearing Old Sy. No. **55/P49**, New Sy. No. **93**, which measuring **2 acres**, situated at **Bellahalli Village**, Yelahanka Hobli, Bangalore North Taluk and bounded on: **East by:** Wal Fajar Farm, **West by:** Road and Land belonging to Gulab, **North by:** Land belonging to Syed, **South by:** Land belonging to Bakshu.

Any person or Any Acquisition Authority or Any Board or Any Agreement Holder having any asserting right, title, interest and claims to oppose for Absolute Sale Deed of the schedule property and further having any manner of right, title, claims etc., and may lodge their objections, claims over the property along with relevant papers in support of their claims to the below address within **15** days from the date of this notice, if any objections fails to comply any objections or claims, my client shall take further steps for entering into Absolute Sale Deed.

**LINGARAJ. S. NADAGOUDA., ADVOCATE**
Office No.1854, 17th Main, 30th 'B' Cross, HBR Layout, 1st Stage, 5th Block, Bangalore - 560 043.
**Mob : 96204 74780 , 94481 35970**


### ಪರಿಹಾರ ವಿತರಣೆ

ಬೆಂಗಳೂರು: ಮರದ ಕೊಂಬೆ ಬಿದ್ದು ಮೃತಪಟ್ಟಿದ್ದ ರಾಕೇಶ್ ಅವರ ಕುಟುಂಬಕ್ಕೆ ಬಿಬಿಎಂಪಿ ವತಿಯಿಂದ ₹5 ಲಕ್ಷ ಪರಿಹಾರದ ಚೆಕ್ ವಿತರಿಸಲಾಯಿತು.

ಜೂನ್ 3ರಂದು ಸಂಜೆ ಮಳೆಯ ಸಂದರ್ಭದಲ್ಲಿ ರಾಕೇಶ್ (13) ಮರದ ಕೆಳಗೆ ನಿಂತಿದ್ದರು. ಆಗ ಅವರ ತಲೆಯ ಮೇಲೆ ಕೊಂಬೆ ಬಿದ್ದು, ಗಾಯಗೊಂಡಿದ್ದರು. ಜನಪ್ರಿಯ ನರ್ಸಿಂಗ್ ಹೋಂಗೆ ಸೇರಿಸಲಾಗಿತ್ತು. ಜೂನ್ 8 ರಂದು ಮೃತಪಟ್ಟಿದ್ದರು.

‘ಮುಖ್ಯ ಆಯುಕ್ತರ ನಡೆ ವಲಯದ ಕಡೆ’ ಕಾರ್ಯಕ್ರಮದಲ್ಲಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರನ್ನು ಭೇಟಿ ಮಾಡಿದ್ದ ಪೋಷಕರು, ಪರಿಹಾರಕ್ಕೆ ಮನವಿ ಮಾಡಿದ್ದರು. ಇದಕ್ಕೆ ಸ್ಪಂದಿಸಿದ್ದ ಅವರು ಕೂಡಲೇ ಪರಿಹಾರ ನೀಡಬೇಕೆಂದು ಸೂಚಿಸಿದ್ದರು. ಅದರಂತೆ, ಪೂರ್ವ ವಲಯದ ಆಯುಕ್ತ ಪಿ.ಎನ್. ರವೀಂದ್ರ ಅವರು ಪೋಷಕರಾದ ಸರವಣ ಮತ್ತು ಯಮುನಾ ಅವರಿಗೆ ಪರಿಹಾರದ ಚೆಕ್ ವಿತರಿಸಿದರು.

12 ಮೀಟರ್ ಉದ್ದದ 100 ಎಲೆಕ್ಟ್ರಿಕ್ ಬಸ್ ಆಗಸ್ಟ್‌ನಲ್ಲಿ ರಸ್ತೆಗೆ; ಅಕ್ಟೋಬರ್ ವೇಳೆಗೆ 300 ಬಸ್

# ಬಿಎಂಟಿಸಿ ಎಲೆಕ್ಟ್ರಿಕ್ ಬಸ್: ವಿನ್ಯಾಸಕ್ಕೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 90 ಎಲೆಕ್ಟ್ರಿಕ್ ಮಿನಿ ಬಸ್‌ಗಳ ಸಂಚಾರ ಯಶಸ್ವಿಯಾದ ಬೆನ್ನಲ್ಲೇ 12 ಮೀಟರ್ ಉದ್ದದ 300 ಎಲೆಕ್ಟ್ರಿಕ್ ಬಸ್‌ಗಳನ್ನು ರಸ್ತೆಗಿಳಿಸಲು ಬಿಎಂಟಿಸಿ ಸಜ್ಜಾಗಿದೆ.

ಅಶೋಕ್ ಲೈಲ್ಯಾಂಡ್ ಕಂಪನಿ ಈ ಬಸ್‌ಗಳನ್ನು ಬಿಎಂಟಿಸಿಗೆ ಪೂರೈಸುತ್ತಿದೆ. ಚಾಲಕರನ್ನು ಕಂಪನಿಯವರೇ ಒದಗಿಸಲಿದ್ದು, ನಿರ್ವಾಹಕರಾಗಿ ಬಿಎಂಟಿಸಿ ನೌಕರರೇ ಇರಲಿದ್ದಾರೆ.

ಬಸ್‌ನ ವಿನ್ಯಾಸ ಮತ್ತು ಸ್ಟಿಕ್ಕರ್ ಅಳವಡಿಕೆ ಪರಿಶೀಲನೆ ನಡೆಸಲು ಶುಕ್ರವಾರ ಬಿಎಂಟಿಸಿ ಕೇಂದ್ರ ಕಚೇರಿ ಬಳಿಗೆ ಬಸ್ ಒಂದನ್ನು ತರಿಸಲಾಗಿತ್ತು. ಅಧಿಕಾರಿಗಳು ಪರಿಶೀಲನೆ ನಡೆಸಿ ಒಪ್ಪಿಗೆ ಸೂಚಿಸಿದ್ದು, ಇದೇ ಮಾದರಿಯ 100 ಬಸ್‌ಗಳು ಮುಂದಿನ ತಿಂಗಳು ರಸ್ತೆಗೆ ಇಳಿಯುವ ಸಾಧ್ಯತೆ ಇದೆ. ಬಸ್‌ನ ನಾಲ್ಕು ಬದಿಯಲ್ಲೂ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ. ಎರಡು ಬಾಗಿಲು ಮತ್ತು 40 ಆಸನಗಳನ್ನು ಬಸ್ ಒಳಗೊಂಡಿದೆ.


ಹೊಸ ವಿನ್ಯಾಸದ ಬಿಎಂಟಿಸಿ ಎಲೆಕ್ಟ್ರಿಕ್ ಬಸ್

‘ವಿನ್ಯಾಸ ಒಪ್ಪಿಗೆ ಆಗಿರುವುದರಿಂದ ಆಗಸ್ಟ್ ಮೊದಲ ವಾರದಲ್ಲಿ ಸಂಚಾರಕ್ಕೆ ಮುಕ್ತಗೊಳಿಸಲು ಆಲೋಚನೆ ನಡೆಸಲಾಗಿದೆ. ಅಕ್ಟೋಬರ್ ವೇಳೆಗೆ 12 ಮೀಟರ್ ಉದ್ದದ 300 ಬಸ್‌ಗಳು ನಗರದಲ್ಲಿ ಸಂಚರಿಸಲಿವೆ’ ಎಂದು ಬಿಎಂಟಿಸಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

‘ಬ್ಯಾಟರಿ ಚಾರ್ಜಿಂಗ್ ಕೇಂದ್ರಗಳನ್ನು ಕಂಪನಿಯೇ ಸಿದ್ಧಪಡಿಸಿಕೊಳ್ಳಲಿದೆ. ಮೂರು ಡಿಪೊ ಮತ್ತು ನಾಲ್ಕು ನಿಲ್ದಾಣಗಳಲ್ಲಿ ಜಾಗ ಗುರುತಿಸಲಾಗಿದೆ. ನಿರ್ವಹಣೆಯ ಎಲ್ಲಾ ಜವಾಬ್ದಾರಿಯನ್ನು ಕಂಪನಿಯೇ ನಿಭಾಯಿಸಲಿದ್ದು, ಕಿಲೋ ಮೀಟರ್‌ಗೆ ದರ ನಿಗದಿ ಮಾಡಿ ಅದನ್ನು ಬಿಎಂಟಿಸಿ ಭರಿಸಲಿದೆ. ಪರಿಸರಸ್ನೇಹಿ, ಅಂಗವಿಕಲಸ್ನೇಹಿಯಾಗಿ ವಿನ್ಯಾಸಗೊಳಿಸಲಾಗಿದೆ’ ಎಂದರು.

ಬಿಎಂಟಿಸಿಗೆ 300 ಎಲೆಕ್ಟ್ರಿಕ್ ಬಸ್‌ಗಳನ್ನು ಗುತ್ತಿಗೆ ಆಧಾರದಲ್ಲಿ ಪಡೆಯಲು 2019ರ ಸೆಪ್ಟೆಂಬರ್‌ನಲ್ಲಿ ಟೆಂಡರ್ ಪ್ರಕ್ರಿಯೆ ಆರಂಭಿಸಲಾಗಿತ್ತು. ಈ ಪ್ರಕ್ರಿಯೆ ವಿಳಂಬವಾಗಿದ್ದರಿಂದ ಫೇಮ್ ಇಂಡಿಯಾ ಯೋಜನೆಯಡಿ ಮೆಟ್ರೊ ಫೀಡರ್ ಸೇವೆಗೆ 90 ಎಲೆಕ್ಟ್ರಿಕ್ ಮಿನಿ ಬಸ್‌ಗಳ ಪಡೆಯಲು 2020ರ ಫೆಬ್ರುವರಿಯಲ್ಲಿ ಟೆಂಡರ್ ಆಹ್ವಾನಿಸಲಾಗಿತ್ತು. ಜೆಬಿಎಂ ಕಂಪನಿ ಗುತ್ತಿಗೆ ಪಡೆದು ಈಗಾಗಲೇ 90 ಬಸ್‌ಗಳನ್ನು ಪೂರೈಸಿದ್ದು, ಈ ಬಸ್‌ಗಳು ನಗರದಲ್ಲಿ ಸಂಚರಿಸುತ್ತಿವೆ.

300 ಬಸ್‌ಗಳು ಬಿಎಂಟಿಸಿಗೆ ಸೇರ್ಪಡೆಯಾದರೆ, ಒಟ್ಟು 390 ಎಲೆಕ್ಟ್ರಿಕ್ ಬಸ್‌ಗಳನ್ನು ಸಂಸ್ಥೆ ಹೊಂದಿದಂತಾಗಲಿದೆ. ಈ ಬಸ್‌ಗಳಿಗೆ ಚಾಲಕರನ್ನು ಕಂಪನಿಗಳೇ ಒದಗಿಸುವುದರಿಂದ ಅಷ್ಟು ಮಂದಿಯ ಉದ್ಯೋಗ ಖಾಸಗಿ ಪಾಲಾದಂತೆ ಆಗಿದೆ ಎಂಬ ಆಕ್ಷೇಪಗಳು ನೌಕರರ ವಲಯದಿಂದ ವ್ಯಕ್ತವಾಗಿವೆ.

### ಇನ್ನೂ 1,500 ಎಲೆಕ್ಟ್ರಿಕ್ ಬಸ್

‘ಗ್ರ್ಯಾಂಡ್ ಚಾಲೆಂಜ್’ ಯೋಜನೆಯಡಿ ಇ-ಕಲ್ಚರ್ ಪರಿಕಲ್ಪನೆ ಉತ್ತೇಜಿಸಲು ದೇಶದ 9 ಮಹಾನಗರಗಳಿಗೆ ಎಲೆಕ್ಟ್ರಿಕ್ ಬಸ್‌ಗಳನ್ನು ಒದಗಿಸಲು ಕೇಂದ್ರ ಸರ್ಕಾರ ಮುಂದಾಗಿದೆ.

‘ಈ ಯೋಜನೆಯಡಿ 1,500 ಬಸ್‌ಗಳನ್ನು ಪಡೆದುಕೊಳ್ಳಲು ಬಿಎಂಟಿಸಿ ಆಡಳಿತ ಮಂಡಳಿ ಒಪ್ಪಿಗೆ ಸೂಚಿಸಿದೆ. ಪ್ರಸ್ತಾವನೆ ಈಗ ರಾಜ್ಯ ಸರ್ಕಾರದ ಮುಂದಿದೆ’ ಎಂದು ಅಧಿಕಾರಿಯೊಬ್ಬರು ವಿವರಿಸಿದರು.




ಅಮುಲ್ 2022 ರ ಕಾಮನ್ ವೆಲ್ತ್ ಗೇಮ್ಸ್ ಗೆ ಭಾರತದ ಹೆಮ್ಮೆಯ ಅಧಿಕೃತ ಪ್ರಾಯೋಜಕರಾಗಿದ್ದಾರೆ!


**ಸಂಕ್ಷಿಪ್ತ ಸುದ್ದಿ**

### ಯಶಂತ್ ನೇಮಕ



**ನೆಲಮಂಗಲ:** ಸ್ಥಳೀಯ ವಿಧಾನಸಭಾ ಕ್ಷೇತ್ರದ ಸೋಲೂರು ಹಾಗೂ ತ್ಯಾಮಗೊಂಡ್ಲು ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಹಸಿರುಹಳ್ಳಿ ಎಚ್.ಕೆ.ಯಶಂತ್ ಅವರನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾ ಅಧ್ಯಕ್ಷ ಕೆ.ಆರ್.ನಾಗೇಶ್ ಪ್ರಕಟಿಸಿದ್ದಾರೆ.

### ಕೆಪಿಸಿಸಿ: ಹಣಕಾಸು ಸಮಿತಿಗೆ ಜಾರ್ಜ್ ಸಂಚಾಲಕ

**ನವದೆಹಲಿ:** ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ಹಣಕಾಸು ಸಮಿತಿಗೆ ಸರ್ವಜ್ಞನಗರ ಕ್ಷೇತ್ರದ ಶಾಸಕ ಕೆ.ಜೆ.ಜಾರ್ಜ್ ಅವರನ್ನು ಸಂಚಾಲಕರನ್ನಾಗಿ ನೇಮಿಸಲಾಗಿದೆ.

ಖಜಾಂಚಿಯಾಗಿ ವಿನಯ್ ಕಾರ್ತಿಕ್ ಅವರನ್ನು ನೇಮಿಸಲಾಗಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ತಿಳಿಸಿದ್ದಾರೆ.

### ‘ಕನ್ನಡ ಬೋಧನೆಗೆ ತೊಂದರೆಯಾಗಿಲ್ಲ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಂಗಳೂರು ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಲ್ಲಿ ಪದವಿ ತರಗತಿಗಳ ಎರಡನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಕನ್ನಡ ಬೋಧನೆಗೆ ಯಾವುದೇ ರೀತಿ ತೊಂದರೆಯಾಗಿಲ್ಲ ಎಂದು ಕುಲಸಚಿವ ಪ್ರೊ. ಎಂ. ಕೊಟ್ರೇಶ್ ಅವರು ಸ್ಪಷ್ಟನೆ ನೀಡಿದ್ದಾರೆ.

‘ಪ್ರಜಾವಾಣಿ’ಯಲ್ಲಿ ಪ್ರಕಟವಾದ ‘ಪದವಿ ಪಠ್ಯ ಪುಸ್ತಕಕ್ಕೂ ಪರದಾಟ’ ವರದಿಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿರುವ ಅವರು, ‘ಪಠ್ಯಕ್ರಮದ ಪರಿವಿಡಿ ಹಾಗೂ ಸಾರಾಂಶವನ್ನು ಮೇ 25ರಂದು ಪಿಡಿಎಫ್ ಅನ್ನು ವಾಟ್ಸ್‌ಆ್ಯಪ್ ಮೂಲಕ ಕನ್ನಡ ಭಾಷಾ ಶಿಕ್ಷಕರಿಗೆ ಕಳುಹಿಸಲಾಗಿದೆ’ ಎಂದು ತಿಳಿಸಿದ್ದಾರೆ.

‘ಪಠ್ಯಕ್ರಮದ ಪರಿವಿಡಿ ಹಾಗೂ ಸಾರಾಂಶದಂತೆ ಕನ್ನಡ ಭಾಷಾ ಶಿಕ್ಷಕರು ವಿಷಯವನ್ನು ಗ್ರಂಥಾಲಯ ಹಾಗೂ ವೆಬ್‌ಸೈಟ್‌ಗಳಲ್ಲಿ ಪೂರಕ ಮಾಹಿತಿಯನ್ನು ಪಡೆದುಕೊಂಡು ವಿದ್ಯಾರ್ಥಿಗಳಿಗೆ ಪಾಠ ಭೋದಿಸುವುದು ಮಾಡುವುದು ಸಂಬಂಧಿಸಿದ ಶಿಕ್ಷಕರ ಕರ್ತವ್ಯವಾಗಿದೆ. ಪಠ್ಯಪುಸ್ತಕಗಳನ್ನು ಮುದ್ರಿಸಿಕೊಡಬೇಕು ಎನ್ನುವುದು ನಿಯಮಗಳಿರುವುದಿಲ್ಲ’ ಎಂದು ತಿಳಿಸಿದ್ದಾರೆ.

# ದಿನವಿಡೀ ಮಳೆ ಸಿಂಚನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಳೆಗಾಲ ಶುರುವಾದ ಹಲವು ದಿನಗಳ ನಂತರ ನಗರದಲ್ಲಿ ಬಿಡುವು ಕೊಡುತ್ತಲೇ ಜಿಟಿ ಜಿಟಿ ಮಳೆ ಶುರುವಾಗಿದ್ದು, ಶುಕ್ರವಾರ ಇಡೀ ದಿನ ವರುಣನ ಸಿಂಚನವಿತ್ತು.

ನಗರದಲ್ಲಿ ಮೋಡ ಕವಿದ ವಾತಾವರಣವಿತ್ತು. ಜನರಿಗೆ ಸೂರ್ಯನ ದರ್ಶನವೇ ಆಗಲಿಲ್ಲ. ಮುಂದಿನ ಕೆಲ ದಿನಗಳವರೆಗೂ ಇದೇ ಸ್ಥಿತಿ ಮುಂದುವರಿಯುವ ಸಾಧ್ಯತೆ ಇದೆ.

ಬೆಳಿಗ್ಗೆಯಿಂದಲೇ ಬಿಡುವು ಕೊಡುತ್ತಜಿಟಿ ಜಿಟಿ ಮಳೆ ಸುರಿಯಲಾರಂಭಿಸಿತ್ತು. ನಗರದ ಹಲವು ಪ್ರದೇಶಗಳ ಕಾಲುವೆಗಳು ತುಂಬಿ, ರಸ್ತೆಯಲ್ಲಿ ನೀರು ಹರಿಯಿತು. ಅದರಲ್ಲೇ ವಾಹನಗಳು ಸಂಚರಿಸಿದವು.

ರಾಜರಾಜೇಶ್ವರಿನಗರ, ಕೆಂಗೇರಿ, ದೀಪಾಂಜಲಿನಗರ, ಗಿರಿನಗರ, ಹನುಮಂತನಗರ, ಬಸವನಗುಡಿ, ಬನಶಂಕರಿ, ಕುಮಾರಸ್ವಾಮಿ ಲೇಔಟ್, ಜಯನಗರ, ಜೆ.ಪಿ.ನಗರ, ಮಡಿವಾಳ, ಎಚ್‌ಎಸ್‌ಆರ್ ಲೇಔಟ್, ವೈಟ್‌ಫೀಲ್ಡ್, ಮಾರತ್ತಹಳ್ಳಿ, ಬೆಳ್ಳಂದೂರು ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ತುಂತುರು ಮಳೆಯೂ ಸುರಿಯಿತು.

ಗಾಂಧಿನಗರ, ಮೆಜೆಸ್ಟಿಕ್, ಶೇಷಾದ್ರಿಪುರ, ಮಲ್ಲೇಶ್ವರ, ಯಶವಂತಪುರ, ರಾಜಾಜಿನಗರ, ವಿಜಯನಗರ, ಬಸವೇಶ್ವರನಗರ, ಹೆಬ್ಬಾಳ, ಆರ್.ಟಿ. ನಗರ, ಸಂಜಯನಗರ, ವಸಂತನಗರ, ಶಿವಾಜಿನಗರ, ಕಮರ್ಷಿಯಲ್ ಸ್ಟ್ರೀಟ್, ಎಂ.ಜಿ.ರಸ್ತೆ, ಅಶೋಕನಗರ, ಎಚ್‌ಎಎಲ್, ವಿವೇಕನಗರ, ಕೋರಮಂಗಲ ಹಾಗೂ ಸುತ್ತಮುತ್ತ ಮಳೆ ಇತ್ತು.


ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸುರಿಯುವ ಮಳೆಯಲ್ಲೇ ವಿದ್ಯಾರ್ಥಿಯೊಬ್ಬರು ಕೊಡೆ ಹಿಡಿದು ಹೆಜ್ಜೆ ಹಾಕಿದರು – ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

**ಮಳೆಯಲ್ಲೇ ಓಡಾಡಿದ ಜನ:** ಜಿಟಿ ಜಿಟಿ ಮಳೆ ನಡುವೆಯೂ ಜನರ ಓಡಾಟವಿತ್ತು. ದ್ವಿಚಕ್ರ ವಾಹನ ಸವಾರರು, ಮಾರ್ಗಮಧ್ಯೆ ಮಳೆ ಜೋರಾದ ಸಂದರ್ಭದಲ್ಲಿ ರಸ್ತೆ ಬದಿ ವಾಹನಗಳನ್ನು ನಿಲ್ಲಿಸಿ ಸುರಕ್ಷಿತ ಸ್ಥಳಗಳಲ್ಲಿ ಆಶ್ರಯ ಪಡೆದಿದ್ದ ದೃಶ್ಯಗಳು ಕಂಡುಬಂದವು.

ಮಾರುಕಟ್ಟೆ ಪ್ರದೇಶಗಳು, ಪೆಟ್ರೋಲ್ ಬಂಕ್‌ಗಳು, ಅಂಗಡಿ, ಮಳಿಗೆ ಹಾಗೂ ಮಾಲ್‌ಗಳಲ್ಲಿ ಜನ ಗುಂಪು ಗುಂಪಾಗಿ ನಿಂತು ಆಶ್ರಯ ಪಡೆದಿದ್ದರು.

ರೇಸ್‌ಕೋರ್ಸ್ ರಸ್ತೆ, ಬಳ್ಳಾರಿ ರಸ್ತೆ, ತುಮಕೂರು ರಸ್ತೆ, ಮೈಸೂರು ರಸ್ತೆ, ಕನಕಪುರ ರಸ್ತೆ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ವಾಹನಗಳ ಸಂಚಾರ ನಿಧಾನಗತಿಯಲ್ಲಿತ್ತು. ಮಳೆ ಜೋರಾಗಿ ಸುರಿಯುವ ವೇಳೆ, ಹಲವೆಡೆ ದಟ್ಟಣೆ ಉಂಟಾಯಿತು.

ಶಾಲೆ–ಕಾಲೇಜು ಆರಂಭದ ಸಮಯ ಹಾಗೂ ಮುಕ್ತಾಯದ ಸಮಯದಲ್ಲೂ ಮಳೆ ಇತ್ತು. ಹಲವು ವಿದ್ಯಾರ್ಥಿಗಳು ಮಳೆಯಲ್ಲೇ ಕೊಡೆ ಹಿಡಿದು ಹೆಜ್ಜೆ ಹಾಕಿದರು.

‘ನಗರದಲ್ಲಿ ಉತ್ತಮ ಮಳೆ ಆಗುತ್ತಿದೆ. ಕೆಲ ದಿನ ಮಳೆ ಮುಂದುವರಿಯುವುದಾಗಿ ಹವಾಮಾನ ಇಲಾಖೆ ಹೇಳಿದೆ. ಅನಾಹುತಗಳ ಬಗ್ಗೆ ಯಾವುದೇ ದೂರುಗಳು ಸದ್ಯಕ್ಕೆ ಬಂದಿಲ್ಲ’ ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

# ‘ಈದ್ಗಾ ಎಂದಿಗೂ ಆಟದ ಮೈದಾನ’

**ಬೆಂಗಳೂರು:** ‘ಚಾಮರಾಜಪೇಟೆಯ ಈದ್ಗಾ ಮೈದಾನವು ಆಟದ ಮೈದಾನವಾಗಿಯೇ ಉಳಿಯುತ್ತದೆ. ಯಾರಿಂದಲೂ ಮೈದಾನ ಇಲ್ಲವಾಗಿಸಲು ಸಾಧ್ಯವಿಲ್ಲ’ ಎಂದು ಶಾಸಕ ಜಮೀರ್ ಅಹಮದ್ ಖಾನ್ ಹೇಳಿದರು.

ಚಾಮರಾಜಪೇಟೆ ಬಂದ್‌ಗೆ ಜುಲೈ 12ರಂದು ಕರೆ ನೀಡಿರುವ ಹಿನ್ನೆಲೆಯಲ್ಲಿ ಚಾಮರಾಜಪೇಟೆ ನಾಗರಿಕರ ಶಾಂತಿ–ಸೌಹಾರ್ದ ಸಭೆಯಲ್ಲಿ ಶುಕ್ರವಾರ ಅವರು ಮಾತನಾಡಿ, ‘ಈ ವರ್ಷ ಆಗಸ್ಟ್ 15ರಂದು ಪ್ರಥಮ ಬಾರಿಗೆ ಸ್ವಾತಂತ್ರ್ಯ ದಿನಾಚರಣೆಯಂದು ಈದ್ಗಾ ಮೈದಾನದಲ್ಲಿ ಧ್ವಜಾರೋಹಣ ಮಾಡುತ್ತೇವೆ. ಮುಂದೆ ನವೆಂಬರ್ 1 ಮತ್ತು ಜನವರಿ 26ರ ಗಣರಾಜ್ಯೋತ್ಸವದಂದೂ ಧ್ವಜಾರೋಹಣ ಮಾಡುತ್ತೇವೆ’ ಎಂದು ತಿಳಿಸಿದರು.

ಗಣೇಶ ಹಬ್ಬ ಹಾಗೂ ಇತರೆ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮೈದಾನದಲ್ಲಿ ಅವಕಾಶ ಇಲ್ಲ ಎಂದು ನಾಗರಿಕರು ಹೇಳಿದಾಗ, ‘ನೀವೆಲ್ಲ ಇಲ್ಲಿರುವ ಗೊಂದಲವನ್ನು ಅರ್ಥ ಮಾಡಿಕೊಳ್ಳಬೇಕು. ಇದು ವಕ್ಫ್ ಬೋರ್ಡ್ ಮತ್ತು ಬಿಬಿಎಂಪಿ ನಡುವೆ ಮಾಲೀಕತ್ವದ ಗೊಂದಲ. ಅದನ್ನು ಹಿಂದೆ ಪರಿಹರಿಸಲು ಪ್ರಯತ್ನಪಟ್ಟೆವು. ಆದರೂ ಸಾಧ್ಯವಾಗಿಲ್ಲ’ ಎಂದು ಜಮೀರ್ ಉತ್ತರಿಸಿದರು.

‘ಈದ್ಗಾ ಮೈದಾನದ ಖಾತೆ ನಮ್ಮದೇ ಆಗಿದ್ದರೂ, ಮಾಲೀಕತ್ವ ಇಲ್ಲ. ವಕ್ಫ್ ಬೋರ್ಡ್‌ನವರು ಅರ್ಜಿ ಹಾಕಿದರೆ ಖಾತೆ ಬದಲಾಯಿಸಿಕೊಡುತ್ತೇವೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತರೇ ಹೇಳಿದ್ದಾರೆ. ಅಲ್ಲದೆ ಮೈದಾನ ಸ್ವಚ್ಛ ಮಾಡುವುದಿಲ್ಲ ಎಂದೂ ಹೇಳಿದ್ದಾರೆ. ಬಿಜೆಪಿ ಸರ್ಕಾರ ಇದ್ದಾಗಲೇ ಮುಖ್ಯ ಆಯುಕ್ತರು ಹೀಗೆ ಹೇಳಿದ್ದಾರಲ್ಲವೇ? ನಾವೇನೂ ಇಲ್ಲಿ ರಾಜಕೀಯ ಮಾಡುತ್ತಿಲ್ಲ’ ಎಂದು ಹೇಳಿದರು.

‘ಈದ್ಗಾ ಮೈದಾನ ಸಾಕಷ್ಟು ವರ್ಷಗಳಿಂದ ಇದೆ. ಆಗ ಯಾರೂ ಇದನ್ನು ಕೇಳಿರಿರಲ್ಲ. ಈಗ ಮಾತ್ರ ಸೃಷ್ಟಿ ಮಾಡಿದ್ದಾರೆ. ಶಾಸಕರು ಉತ್ತರಿಸಬೇಕು ಎನ್ನುತ್ತಿದ್ದಾರೆ. ಆದರೆ, ಸಂಸದರನ್ನು ಯಾಕೆ ಯಾರೂ ಕೇಳುತ್ತಿಲ್ಲ. ಅಲ್ಲದೆ ಯಾರೂ ಆಟದ ಮೈದಾನ ಇಲ್ಲವಾಗಿಸುತ್ತೇವೆ ಎಂದು ಹೇಳಿಲ್ಲ. ಆದರೂ ರಾಜಕೀಯ ಲಾಭಕ್ಕಾಗಿ ಗೊಂದಲ ಸೃಷ್ಟಿಸುತ್ತಿದ್ದಾರೆ’ ಎಂದರು. ‘ಆಟದ ಮೈದಾನ ಇರೊಲ್ಲ ಎಂದು ಶಾಸಕರೂ ಹೇಳಿಲ್ಲ, ಸಂಸದರೂ ಹೇಳಿಲ್ಲ. ಚಾಮರಾಜಪೇಟೆಯವರು ನನ್ನ ಬಗ್ಗೆ ಮಾತನಾಡೊಲ್ಲ. ಯಾರೋ ಬೇರೆಯವರು ಮಾಡುತ್ತಿದ್ದಾರೆ. ಈಗ ಮಾತನಾಡುತ್ತಿರುವವರು ಕೋವಿಡ್ ಸಮಯದಲ್ಲಿ ಎಲ್ಲಿ ಹೋಗಿದ್ದರು? 580 ಶವ ಎತ್ತಿದ್ದೇವೆ. ಯಾವ ಸಮುದಾಯ, ಜಾತಿ ಎಂದು ನೋಡಿಲ್ಲ. ಆಗ ಇವರು ಯಾರೂ ಕಾಣುತ್ತಿರಲಿಲ್ಲ’ ಎಂದರು.

‘ಯಾರಿಗಾದರೂ ಚಾಮರಾಜಪೇಟೆ ಬಂದ್ ಬೇಕಾ?’ ಎಂದು ಸಭೆಯಲ್ಲಿ ಇದ್ದವರಲ್ಲಿ ಜಮೀರ್ ಪ್ರಶ್ನಿಸಿದರು. ಕೆಲವರು ’ಬೇಡ‘ ಎಂದರು. ಇನ್ನು ಕೆಲವರು ಕೈ ಎತ್ತಿದರು. ಆಗ, ‘ಇಲ್ಲಿರುವ ಯಾರಿಗೂ ಬಂದ್ ಬೇಡ. ಇದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಿ’ ಎಂದು ಶಾಸಕರು ಹೇಳಿದರು.

ಬಿಬಿಎಂಪಿ ಮಾಜಿ ಸದಸ್ಯರಾದ ಕೋಕಿಲ ಚಂದ್ರಶೇಖರ್, ಸುಜಾತ ಡಿ.ಸಿ. ರಮೇಶ್, ಬಿ.ಟಿ. ಶ್ರೀನಿವಾಸಮೂರ್ತಿ, ಚಂದ್ರಶೇಖರ್, ಅಲ್ತಾಫ್ ಖಾನ್, ಜಯ ಕರ್ನಾಟಕ ಸಂಘಟನೆಯ ವಸಂತ್, ಸ್ಥಳೀಯ ಮುಖಂಡರು ಇದ್ದರು.

# ‘ಪಕ್ಷದವರೇ ಹುಟ್ಟುಹಬ್ಬ ಆಚರಿಸುತ್ತಿದ್ದಾರೆ’

**ಬೆಂಗಳೂರು:** ‘ನನಗೆ 75 ವರ್ಷ ತುಂಬುತ್ತಿರುವುದರಿಂದ ನಮ್ಮ ಪಕ್ಷದವರೇ ಸೇರಿಕೊಂಡು ಹುಟ್ಟುಹಬ್ಬ ಆಚರಣೆ ಮಾಡುತ್ತಿದ್ದಾರೆ. ಪಕ್ಷದ ಹೊರತಾಗಿ ಯಾರೂ ಕಾರ್ಯಕ್ರಮ ಮಾಡುತ್ತಿಲ್ಲ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ತಮ್ಮ ಅಧಿಕೃತ ನಿವಾಸದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವ ರೊಂದಿಗೆ ಶುಕ್ರವಾರ ಉಪಾಹಾರ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, ‘ಪಕ್ಷದ ನಾಯಕರೇ ಹುಟ್ಟುಹಬ್ಬ ಆಚರಣೆ ಸಮಿತಿಯಲ್ಲಿದ್ದಾರೆ. ಕಾಂಗ್ರೆಸ್ ನಾಯಕರ ಹೊರತಾಗಿ ಯಾರಿಗೂ ಆಹ್ವಾನ ನೀಡಿಲ್ಲ. ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಬಿ.ಕೆ. ಹರಿಪ್ರಸಾದ್, ಡಿ.ಕೆ. ಶಿವಕುಮಾರ್, ಎಂ.ಬಿ. ಪಾಟೀಲ ಸೇರಿದಂತೆ ಪಕ್ಷದ ನಾಯಕರಿಗೇ ಸಮಾರಂಭಕ್ಕೆ ಆಹ್ವಾನ ನೀಡಲಾಗಿದೆ’ ಎಂದರು.

ಸಮಿತಿಯಲ್ಲಿರುವ ಆರ್.ವಿ.ದೇಶಪಾಂಡೆ, ಶಾಮನೂರು ಶಿವಶಂಕರಪ್ಪ, ಕೆ.ಎನ್. ರಾಜಣ್ಣ, ಎಚ್.ಸಿ. ಮಹದೇವಪ್ಪ, ಬಸವರಾಜ ರಾಯರಡ್ಡಿ ಎಲ್ಲರೂ ಕಾಂಗ್ರೆಸ್ ನಾಯಕರೇ. ಪಕ್ಷದ ಹೆಸರಿನಲ್ಲಿ ಕಾರ್ಯಕ್ರಮ ನಡೆಯದಿದ್ದರೂ, ಇದು ಪಕ್ಷದವರೇ ಮಾಡುತ್ತಿರುವ ಕಾರ್ಯಕ್ರಮ ಎಂದರು.

‘ಹುಟ್ಟುಹಬ್ಬದ ಆಚರಣೆಯನ್ನು ‘ಸಿದ್ದರಾಮೋತ್ಸವ’ ಎಂದು ನಾನಾಗಲೀ, ಸಮಿತಿಯವರಾಗಲೀ ಎಲ್ಲಿಯೂ ಹೇಳಿ ಕೊಂಡಿಲ್ಲ. ಮಾಧ್ಯಮದವರೇ ಹಾಗೆ ಹೇಳಿರುವುದು. ಜೀವನದಲ್ಲಿ 75 ವರ್ಷ ತುಂಬುವುದು ಒಂದು ಮೈಲಿಗಲ್ಲು ಇದ್ದಂತೆ. ಆ ಕಾರಣದಿಂದ ಎಲ್ಲರೂ ಸೇರಿ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ ಎಂದರು.

ಡಿ.ಕೆ. ಶಿವಕುಮಾರ್ ಮಾತನಾಡಿ, ‘ಸಿದ್ದರಾಮಯ್ಯ ಅವರ ಹಿತೈಷಿಗಳು ಅವರ 75ನೇ ಹುಟ್ಟುಹಬ್ಬ ಆಚರಣೆಗೆ ಸಿದ್ಧತೆ ನಡೆಸಿದ್ದಾರೆ. ಕಾರ್ಯಕ್ರಮವನ್ನು ಯಾವ ರೀತಿ ಆಯೋಜಿಸಬೇಕು ಎಂಬುದರ ಕುರಿತು ಚರ್ಚಿಸಲಾಗಿದೆ. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ನೀಡಿದ ಜನಪರ ಯೋಜನೆಗಳು ಮತ್ತು ಅವರ ನೇತೃತ್ವದ ಸರ್ಕಾರದ ಸಾಧನೆಗಳನ್ನು ವ್ಯಾಪಕವಾಗಿ ಪ್ರಚಾರ ಮಾಡಬೇಕೆಂಬುದು ಎಲ್ಲರ ಆಶಯ’ ಎಂದು ಹೇಳಿದರು.

## ಉತ್ತರ ವಿಶ್ವವಿದ್ಯಾಲಯದಲ್ಲೂ ಪಠ್ಯಪುಸ್ತಕಗಳ ಕೊರತೆ

**ಬೆಂಗಳೂರು:** ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವಿವಿಧ ಪದವಿ ತರಗತಿಗಳ ಎರಡನೇ ಸೆಮಿಸ್ಟರ್ ಆರಂಭವಾಗಿ ಒಂದು ತಿಂಗಳು ಕಳೆದರೂ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಲಭ್ಯವಾಗಿಲ್ಲ.

ಈ ಬಗ್ಗೆ ವಿಶ್ವವಿದ್ಯಾಲಯದ ‘ಅಂತರಗಂಗೆ– ಕನ್ನಡ ಅಧ್ಯಾಪಕರ ಸಂಘ’ ಶುಕ್ರವಾರ ಕುಲಪತಿ ಅವರಿಗೆ ಮನವಿ ಸಲ್ಲಿಸಿ, ಪಠ್ಯಪುಸ್ತಕಗಳ ಕೊರತೆಯ ಬಗ್ಗೆ ಗಮನಸೆಳೆದಿದೆ.

‘2022ನೇ ಶೈಕ್ಷಣಿಕ ವರ್ಷದಿಂದ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಪಠ್ಯಕ್ರಮ ಹಾಗೂ ಪುಸ್ತಕವನ್ನು ಕನ್ನಡ ಅಧ್ಯಯನ ಮಂಡಳಿಯ ಡಾ.ಬಿ. ಗಂಗಾಧರ್ ಅವರ ನೇತೃತ್ವದಲ್ಲಿ ಕನ್ನಡ ಪಠ್ಯಗಳನ್ನು ರೂಪಿಸಿ ಈಗಾಗಲೇ ಹಸ್ತಾಂತರಿಸಿದ್ದಾರೆ. ಮೊದಲನೇ ಸೆಮಿಸ್ಟರ್‌ನಲ್ಲಿ ಪಠ್ಯಪುಸ್ತಕಗಳಿಲ್ಲದೆ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಸಾಕಷ್ಟು ಸಂಕಷ್ಟಗಳನ್ನು ಎದುರಿಸಿದ್ದಾರೆ. ಎರಡನೇ ಸೆಮಿಸ್ಟರ್ ಆರಂಭವಾಗಿ ಒಂದು ತಿಂಗಳು ಕಳೆದರೂ ಪಠ್ಯಪುಸ್ತಕವು ವಿದ್ಯಾರ್ಥಿಗಳ ಕೈಸೇರುವ ಯಾವುದೇ ಸೂಚನೆಗಳು ಕಾಣುತ್ತಿಲ್ಲ’ ಎಂದು ಉಲ್ಲೇಖಿಸಿದೆ.

'ಬೆಂಗಳೂರು ಉತ್ತರ ವಿ.ವಿಯಲ್ಲಿ ಪ್ರಥಮ ಪದವಿಯಲ್ಲಿ ಅಧ್ಯಯನ ಮಾಡುತ್ತಿರುವ ಸಾವಿರಾರು ವಿದ್ಯಾರ್ಥಿಗಳು ಆತಂಕದಲ್ಲಿದ್ದಾರೆ. ಅತಿ ಶೀಘ್ರ ಕನ್ನಡ ಪಠ್ಯಪುಸ್ತಕಗಳನ್ನು ಮುದ್ರಿಸಿ ಎಲ್ಲರಿಗೂ ತಲುಪುವಂತೆ ಕ್ರಮ ಕೈಗೊಳ್ಳಬೇಕು' ಎಂದು ಸಂಘವು ಕೋರಿದೆ.

‘2022–23ನೇ ಸಾಲಿಗೆ ಸಂಬಂಧಪಟ್ಟ ಮೂರು, ನಾಲ್ಕನೇ ಸೆಮಿಸ್ಟರ್‌ನ ಕನ್ನಡ ಪಠ್ಯಪುಸ್ತಕವನ್ನು ಸಿದ್ಧಪಡಿಸುವ ಕಾರ್ಯವನ್ನು ತಕ್ಷಣ ಕೈಗೊಳ್ಳದಿದ್ದಲ್ಲಿ ಪುನಃ ಇಂತಹದ್ದೇ ಆತಂಕದ ಸ್ಥಿತಿ ನಿರ್ಮಾಣವಾಗುತ್ತದೆ’ ಎಂದು ತಿಳಿಸಿದೆ.

## ಬಿಡಿಎ: ₹30 ಕೋಟಿ ಮೌಲ್ಯದ ಆಸ್ತಿ ವಶ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಟಿಎಂ ಬಡಾವಣೆ ನಿರ್ಮಾಣಕ್ಕೆ ಬಿಡಿಎ ಸ್ವಾಧೀನಪಡಿಸಿಕೊಂಡಿದ್ದ ಮುಕ್ಕಾಲು ಎಕರೆ ಪ್ರದೇಶದ ಅತಿಕ್ರಮಣವನ್ನು ಬಿಡಿಎ ಅಧಿಕಾರಿಗಳು ಶುಕ್ರವಾರ ತೆರವುಗೊಳಿಸಿದರು.

ಬಿಳೇಕಹಳ್ಳಿಯ ಸರ್ವೆ ಸಂಖ್ಯೆ 172/2ಎರಲ್ಲಿ ಬಿಟಿಎಂ ಬಡಾವಣೆ ನಿರ್ಮಾಣಕ್ಕೆ ಬಿಡಿಎ ಜಾಗ ಸ್ವಾಧೀನಪಡಿಸಿಕೊಂಡಿತ್ತು. ಮುಕ್ಕಾಲು ಎಕರೆ ಪ್ರದೇಶದಲ್ಲಿ ಒತ್ತುವರಿದಾರರು ಒಂದು ತಾತ್ಕಾಲಿಕ ಶೆಡ್, ನರ್ಸರಿ ಮತ್ತು ಕಟ್ಟಡ ನಿರ್ಮಾಣ ಸರಕುಗಳನ್ನು ತುಂಬಿದ್ದರು. ಹಲವು ಬಾರಿ ಬಿಡಿಎ ಅಧಿಕಾರಿಗಳು ಎಚ್ಚರಿಕೆ ನೀಡಿದ್ದರೂ ಒತ್ತುವರಿದಾರರು ಶೆಡ್ ಮತ್ತು ಇತರೆ ನಿರ್ಮಾಣಗಳನ್ನು ತೆರವುಗೊಳಿಸಿರಲಿಲ್ಲ. ಇತ್ತೀಚೆಗೆ ಸುಪ್ರೀಂ ಕೋರ್ಟ್ ಬಿಡಿಎ ಪರ ತೀರ್ಪು ನೀಡಿತ್ತು. ಹೀಗಾಗಿ ಕಾರ್ಯಾಚರಣೆ ನಡೆಸಿ, ಜಾಗವನ್ನು ಬಿಡಿಎ ವಶಕ್ಕೆ ತೆಗೆದುಕೊಂಡಿದೆ.

ಬಿಡಿಎ ವಿಶೇಷ ಕಾರ್ಯಪಡೆ ಪೊಲೀಸ್ ವರಿಷ್ಠಾಧಿಕಾರಿ ಭಾಸ್ಕರ್ ಮತ್ತು ಇನ್‌ಸ್ಪೆಕ್ಟರ್ ಶ್ರೀನಿವಾಸ್ ನೇತೃತ್ವದಲ್ಲಿ ಪೊಲೀಸ್ ಬಂದೋಬಸ್ತ್‌ನಲ್ಲಿ ಕಾರ್ಯಪಾಲಕ ಎಂಜಿನಿಯರ್ ಸುರೇಶ್ ಮತ್ತು ರವಿನಂದನ್ ಕಾರ್ಯಾಚರಣೆ ನಡೆಸಿತು.

# ಕೆರೆಗೆ ಹರಿಯುವ ಕೊಳಚೆ ನೀರು ತಡೆಯಲು ಗ್ರಾಮಸ್ಥರ ಆಗ್ರಹ

ಪ್ರಜಾವಾಣಿ ವಾರ್ತೆ

**ಯಲಹಂಕ:** ಅರಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನೆಲ್ಲುಕುಂಟೆ ಗ್ರಾಮದ ಕೆರೆಗೆ ದೊಡ್ಡಬಳ್ಳಾಪುರ ಮುಖ್ಯರಸ್ತೆಯ ಮಾರಸಂದ್ರದಲ್ಲಿರುವ ‘ಪ್ರಾವಿಡೆಂಟ್ ವೆಲ್ವರ್ತ್ ಸಿಟಿ’ ಅಪಾರ್ಟ್‌ಮೆಂಟ್‌ನಿಂದ ಹರಿದುಬರುತ್ತಿರುವ ಕೊಳಚೆ ನೀರನ್ನು ಕೂಡಲೇ ತಡೆಗಟ್ಟಬೇಕು ಎಂದು ಪಂಚಾಯಿತಿ ಸದಸ್ಯರು ಹಾಗೂ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ 3360 ಮನೆಗಳಿದ್ದು, ಸುಮಾರು 10 ಸಾವಿರ ಜನರು ವಾಸಿಸುತ್ತಿದ್ದಾರೆ. ಇಲ್ಲಿ ಪ್ರತಿನಿತ್ಯ ಬಳಕೆ ಮಾಡುವ 9.50 ಲಕ್ಷ ಲೀಟರ್ ನೀರಿನ ಜೊತೆಗೆ ಒಳಚರಂಡಿ ನೀರನ್ನು ಶುದ್ಧೀಕರಿಸದೆ ಕಳೆದ ಎರಡೂವರೆ ತಿಂಗಳಿನಿಂದ ಕಾಲುವೆ ಮೂಲಕ ಕೆರೆಗೆ ಬಿಡಲಾಗುತ್ತಿದೆ. ಇದರಿಂದ ಕೆರೆಯಲ್ಲಿ ಮಲತ್ಯಾಜ್ಯ ಶೇಖರಣೆಯಾಗಿ ಗೊಬ್ಬರವಾಗಿ ನಿಲ್ಲುತ್ತಿದೆ. ಈ ನೀರನ್ನು ಕುಡಿದ ಹಲವು ಜಾನುವಾರುಗಳು ಮೃತಪಟ್ಟಿವೆ ಎಂದು ಪಂಚಾಯಿತಿ ಸದಸ್ಯ ಕೆ.ಆರ್. ತಿಮ್ಮೇಗೌಡ ದೂರಿದರು.


ಕೊಳಚೆನೀರನ್ನು ಕೂಡಲೇ ತಡೆಗಟ್ಟಬೇಕೆಂದು ಪಂಚಾಯಿತಿಯಿಂದ ಅಪಾರ್ಟ್‌ಮೆಂಟ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಿಗೆ ನೋಟಿಸ್ ನೀಡಿದ್ದು, ರಾಜಾನುಕುಂಟೆ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ. ನೀರನ್ನು ಪ್ರಯೋಗಾಲಕ್ಕೆ ಕಳಿಸಿದಾಗ, ಈ ನೀರು ಕುಡಿಯಲು ಯೋಗ್ಯವಲ್ಲವೆಂದು ವರದಿ ಬಂದಿದೆ. 15 ದಿನಗಳಿಂದ ನೆಲ್ಲುಕುಂಟೆ ಮತ್ತು ಮಾರಸಂದ್ರ ಗ್ರಾಮದ ನಿವಾಸಿಗಳಿಂದ ಕೊಳಚೆನೀರನ್ನು ತಡೆಗಟ್ಟಬೇಕೆಂದು ಮನವಿಮಾಡಿ ಪಂಚಾಯಿತಿಗೆ ಹಲವಾರು ಅರ್ಜಿಗಳು ಬಂದಿವೆ ಎಂದರು.


ಕೊಳಚೆ ನೀರು ಕರೆಗೆ ಸೇರುತ್ತಿರುವ ಜಾಗ

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಬುಧವಾರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಕೆರೆಗೆ ಕೊಳಚೆ ನೀರು ಹರಿದುಹೋಗುತ್ತಿದ್ದ ಜಾಗವನ್ನು ಸಿಮೆಂಟ್ ಕಾಂಕ್ರೀಟ್ ಹಾಕಿ ಬಂದ್ ಮಾಡಿಸಿದ್ದಾರೆ. ಕೂಡಲೇ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕೆಂದು ಸೂಚಿಸಿದ್ದಾರೆ. ಆದರೂ ಸಂಘದ ಅಧ್ಯಕ್ಷರು ಹಾಗೂ ಕಾರ್ಯದರ್ಶಿ ಈ ಬಗ್ಗೆ ಯಾವುದೇ ಕ್ರಮವಹಿಸದೆ ನಿರ್ಲಕ್ಷ್ಯವಹಿಸಿದ್ದಾರೆ ಎಂದು ಆರೋಪಿಸಿದರು.

ಕೂಡಲೇ ಕೊಳಚೆ ನೀರನ್ನು ತಡೆಗಟ್ಟದಿದ್ದರೆ ಪಂಚಾಯಿತಿ ಸದಸ್ಯರು ಮತ್ತು ಗ್ರಾಮಸ್ಥರು ಹೋರಾಟ ಹಮ್ಮಿಕೊಳ್ಳಲಿದ್ದಾರೆ ಎಂದು ಮಾರಸಂದ್ರ ಗ್ರಾಮದ ನಿವಾಸಿ ಗೌಡಯ್ಯ ಎಚ್ಚರಿಕೆ ನೀಡಿದರು.

ಕಳೆದ ತಿಂಗಳು ಸುರಿದ ಭಾರಿ ಮಳೆಯಿಂದ ಅಪಾರ್ಟ್‌ಮೆಂಟ್‌ನಲ್ಲಿ ಹೆಚ್ಚಿನ ನೀರು ಸಂಗ್ರಹವಾಗಿ, ಸಂಸ್ಕರಣಾ ಘಟಕ ಕಾರ್ಯನಿರ್ವಹಿಸದೆ ಸಮಸ್ಯೆಯಾಗಿತ್ತು. ಈ ಸಂದರ್ಭದಲ್ಲಿ ಕೊಳಚೆ ನೀರು ಕೆರೆಗೆ ಸೇರಿದೆ. ದುರಸ್ತಿಮಾಡಿದ ನಂತರ ಈಗ ಘಟಕ ಕಾರ್ಯನಿರ್ವಹಿಸುತ್ತಿದೆ. ಈ ಸಮಸ್ಯೆಗೆ ಪಂಚಾಯಿತಿ ಮತ್ತು ಅಪಾರ್ಟ್‌ಮೆಂಟ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಚರ್ಚೆ ನಡೆಸಿ, ಶಾಶ್ವತ ಪರಿಹಾರ ಕಂಡುಕೊಳ್ಳಬೇಕಾಗಿದೆ ಎಂದು ವ್ಯವಸ್ಥಾಪಕ ಕೃಷ್ಣಮೂರ್ತಿ ತಿಳಿಸಿದರು.




# ಬ್ಲಾಗರ್ ಹತ್ಯೆ: ಸಿಕ್ಕಿಬಿದ್ದ ಆರೋಪಿ

## ಅನ್ಸರುಲ್ಲಾ ಬಾಂಗ್ಲಾ ಟೀಮ್ ಸದಸ್ಯ ● ಅಲ್‌ಕೈದಾ ಜೊತೆಗೂ ನಂಟು

ಪ್ರಜಾವಾಣಿ ವಾರ್ತೆ



ಫೈಜಲ್

**ಬೆಂಗಳೂರು:** ಬಾಂಗ್ಲಾದೇಶದ ಬ್ಲಾಗರ್ ಅನಂತ್ ವಿಜಯ್ ದಾಸ್ (32) ಅವರನ್ನು ಹತ್ಯೆ ಮಾಡಿ ಪರಾರಿಯಾಗಿದ್ದ 'ಅನ್ಸರುಲ್ಲಾ ಬಾಂಗ್ಲಾ ಟೀಮ್ (ಎಬಿಟಿ)' ಉಗ್ರ ಸಂಘಟನೆ ಸದಸ್ಯ ಫೈಜಲ್ ಅಹ್ಮದ್, ಏಳು ವರ್ಷಗಳ ಬಳಿಕ ಬೆಂಗಳೂರಿನಲ್ಲಿ ಸಿಕ್ಕಿಬಿದ್ದಿದ್ದಾನೆ.

'ಬಾಂಗ್ಲಾ ನಿವಾಸಿ ಫೈಜಲ್ 2015ರ ಮೇ 12ರಂದು ಅನಂತ್ ವಿಜಯ್ ದಾಸ್ ಅವರನ್ನು ಕೊಲೆ ಮಾಡಿ ಪರಾರಿಯಾಗಿದ್ದ. ಭಾರತಕ್ಕೆ ಅಕ್ರಮವಾಗಿ ನುಸುಳಿ ಬೆಂಗಳೂರಿಗೆ ಬಂದಿದ್ದ. ಬೊಮ್ಮನಹಳ್ಳಿಯಲ್ಲಿ ನೆಲೆಸಿ, ಕ್ಯಾಬ್ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಈತನನ್ನು ಜುಲೈ 1ರಂದು ಬಾಂಗ್ಲಾ ಹಾಗೂ ಕೋಲ್ಕತ್ತ ಪೊಲೀಸರು ಬಂಧಿಸಿ, ಕರೆದೊಯ್ದಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಅನಂತ್ ವಿಜಯ್ ದಾಸ್ ಕೊಲೆ ಪ್ರಕರಣದಲ್ಲಿ ಭಾಗಿಯಾಗಿದ್ದ ಅಬುಲ್ ಹುಸೈನ್, ಮಾಮುನೂರ್ ರಶೀದ್, ಅಬುಲ್ ಖೈರ್ ಹಾಗೂ ರಸೀದ್ ಅಹ್ಮದ್ ಅವರಿಗೆ ಮರಣ ದಂಡನೆ ಶಿಕ್ಷೆ ಆಗಿತ್ತು. ಒಬ್ಬಾತ ಪುರಾವೆ ಕೊರತೆಯಿಂದ ಖುಲಾಸೆಗೊಂಡಿದ್ದ. ಫೈಜಲ್ ತಲೆಮರೆಸಿಕೊಂಡಿದ್ದ' ಎಂದು ತಿಳಿಸಿದರು.

**ಅಲ್‌ಕೈದಾ ಉಗ್ರ ಸಂಘಟನೆ ನಂಟು:** 'ವೈದ್ಯಕೀಯ ವಿದ್ಯಾರ್ಥಿ ಆಗಿದ್ದ ಫೈಜಲ್, ಬಾಂಗ್ಲಾದ ಮದರಸಾಗಳಲ್ಲಿ ಧರ್ಮದ ಪಾಠ ಮಾಡುತ್ತಿದ್ದ. ಅಲ್‌ಕೈದಾ ಉಗ್ರ ಸಂಘಟನೆ ಜೊತೆ ಗುರುತಿಸಿಕೊಂಡಿರುವ ಅನ್ಸರುಲ್ಲಾ ಬಾಂಗ್ಲಾ ಟೀಮ್ (ಎಬಿಟಿ) ಸೇರಿದ್ದ. ಈ ಮೂಲಕ ಭಯೋತ್ಪಾದನಾ ಚಟುವಟಿಕೆಯಲ್ಲಿ ತೊಡಗಿದ್ದ' ಎಂದು ಅಧಿಕಾರಿ ಹೇಳಿದರು.

**ಸಾಹೀದ್ ಮಜುಂದಾರ್ ಹೆಸರಿನಲ್ಲಿ ವಾಸ:** 'ಭಾರತಕ್ಕೆ 2015ರಲ್ಲಿ ಅಕ್ರಮವಾಗಿ ನುಸುಳಿದ್ದ ಫೈಜಲ್, ತನ್ನ ಹೆಸರನ್ನು ಸಾಹೀದ್ ಮಜುಂದಾರ್ ಎಂದು ಬದಲಾಯಿಸಿಕೊಂಡಿದ್ದ. ಅದೇ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಸ್ಥಳೀಯ ವಿಳಾಸ ದಾಖಲೆ, ಪಾಸ್‌ಪೋರ್ಟ್, ವಾಹನ ಚಾಲನಾ ಪರವಾನಗಿ ಹಾಗೂ ಇತರೆ ಗುರುತಿನ ಚೀಟಿಗಳನ್ನು ಮಾಡಿಸಿಕೊಂಡಿದ್ದ' ಎಂದು ಅಧಿಕಾರಿ ತಿಳಿಸಿದರು.

'ಅಸ್ಸಾಂನಲ್ಲೂ ಎಬಿಟಿ ತಂಡವನ್ನು ಕಟ್ಟಲು ಮುಂದಾಗಿದ್ದ ಫೈಜಲ್, ಅದಕ್ಕಾಗಿ ಸ್ಥಳೀಯ ಯುವಕರನ್ನು ನೇಮಿಸಿಕೊಳ್ಳುತ್ತಿದ್ದ. ಅವರಿಗೆ ಧರ್ಮದ ಪಾಠ ಮಾಡಿ, ಭಯೋತ್ಪಾದನಾ ಕೃತ್ಯದಲ್ಲಿ ತೊಡಗಲು ಪ್ರಚೋದಿಸುತ್ತಿದ್ದ. ಆತನ ಸುಳಿವು ಪತ್ತೆ ಮಾಡಿದ್ದ ಬಾಂಗ್ಲಾ ಪೊಲೀಸರು, ಅಸ್ಸಾಂನಲ್ಲಿ ಹುಡುಕಾಟ ಆರಂಭಿಸಿದ್ದರು. ಅದು ತಿಳಿಯುತ್ತಿದ್ದಂತೆ ಫೈಜಲ್ ಬೆಂಗಳೂರಿಗೆ ಬಂದು ಬೊಮ್ಮನಹಳ್ಳಿಯ ಬಾಡಿಗೆ ಮನೆಯಲ್ಲಿ ವಾಸವಿದ್ದ. ಕ್ಯಾಬ್ ಚಾಲಕನಾಗಿ ಕೆಲಸ ಆರಂಭಿಸಿದ್ದ.'

**ನಕಲಿ ದಾಖಲೆ ಬಳಕೆ:** 'ಅಸ್ಸಾಂ ಹಾಗೂ ಬಾಂಗ್ಲಾದೇಶಕ್ಕೆ ಆರೋಪಿ ಆಗಾಗ ಹೋಗಿ ಬರುತ್ತಿದ್ದ. ಇದಕ್ಕಾಗಿ ನಕಲಿ ದಾಖಲೆಗಳನ್ನು ಬಳಸುತ್ತಿದ್ದ. ಆರೋಪಿ ಬೆಂಗಳೂರಿನಲ್ಲಿರುವ ಮಾಹಿತಿಯು ಬಾಂಗ್ಲಾ ಭಯೋತ್ಪಾದನಾ ನಿಗ್ರಹ ದಳದ ಅಧಿಕಾರಿಗಳಿಗೆ ಇತ್ತೀಚೆಗೆ ಗೊತ್ತಾಗಿತ್ತು. ಕೋಲ್ಕತ್ತ ಪೊಲೀಸರ ಜೊತೆ ಮಾಹಿತಿ ಹಂಚಿಕೊಂಡಿದ್ದರು. ಬಾಂಗ್ಲಾ, ಕೋಲ್ಕತ್ತ ಪೊಲೀಸರ ತಂಡಗಳು ನಗರಕ್ಕೆ ಬಂದು ಸ್ಥಳೀಯ ಪೊಲೀಸರ ನೆರವಿನಿಂದ ಆರೋಪಿಯನ್ನು ಬಂಧಿಸಿ ಕರೆದೊಯ್ದಿವೆ' ಎಂದೂ ಹೇಳಿದರು.

## ಶೌಚಾಲಯದ ಪೈಪ್‌ನಲ್ಲಿ ಮೊಬೈಲ್ ಬಚ್ಚಿಟ್ಟಿದ್ದ ಕೈದಿ

**ಬೆಂಗಳೂರು:** ಪರಪ್ಪನ ಅಗ್ರಹಾರ ಕಾರಾಗೃಹದ ಶೌಚಾಲಯದ ಪೈಪ್‌ನಲ್ಲಿ ಮೊಬೈಲ್ ಪತ್ತೆಯಾಗಿದ್ದು, ಅಕ್ರಮವಾಗಿ ಮೊಬೈಲ್ ಬಚ್ಚಿಟ್ಟುಕೊಂಡಿದ್ದ ಆರೋಪದಡಿ ವಿಚಾರಣಾಧೀನ ಕೈದಿ ಎನ್. ಮಧು ಎಂಬಾತನ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ಜೈಲಿನ ಟವರ್ 1ರ 6ನೇ ಬ್ಯಾರಕ್‌ನ 5ನೇ ಕೊಠಡಿಯ ಶೌಚಾಲಯದ ಪೈಪ್‌ನಲ್ಲಿ ಜಿಯೊ ಮೊಬೈಲ್ ಪತ್ತೆಯಾಗಿದೆ. ಇದನ್ನು ಜಪ್ತಿ ಮಾಡಿರುವ ಜೈಲಿನ ಸಿಬ್ಬಂದಿ ಠಾಣೆ ಸುಪರ್ದಿಗೆ ನೀಡಿದ್ದಾರೆ. ಜೊತೆಗೆ, ಸಿಬ್ಬಂದಿ ನೀಡಿರುವ ದೂರು ಆಧರಿಸಿ ಮಧು ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕೈದಿ ಮಧು, ಜೈಲಿನಿಂದಲೇ ಯುವತಿಯೊಬ್ಬರಿಗೆ ಕರೆ ಮಾಡಿ ಬೆದರಿಸುತ್ತಿದ್ದ. ಈ ಬಗ್ಗೆ ಯುವತಿ ಪೊಲೀಸರಿಗೆ ಮಾಹಿತಿ ನೀಡಿದ್ದರು. ವಿಷಯ ಗೊತ್ತಾಗುತ್ತಿದ್ದಂತೆ ಜೈಲಿನ ಸಿಬ್ಬಂದಿ, ಮಧು ಉಳಿದುಕೊಂಡಿದ್ದ 1ನೇ ಬ್ಯಾರಕ್‌ನ 2ನೇ ಕೊಠಡಿಯಲ್ಲಿ ತಪಾಸಣೆ ನಡೆಸಿದ್ದರು. ಆದರೆ, ಯಾವುದೇ ಮೊಬೈಲ್ ಸಿಕ್ಕಿರಲಿಲ್ಲ. ಮಧುನನ್ನು ವಿಚಾರಿಸಿದಾಗ, ಬೇರೊಬ್ಬನ ಬಳಿ ಮೊಬೈಲ್ ಪಡೆದು ಕರೆ ಮಾಡಿರುವುದಾಗಿ ಹೇಳಿದ್ದ. ಅದೇ ಮಾಹಿತಿ ಆಧರಿಸಿ ಸಿಬ್ಬಂದಿ ಮೊಬೈಲ್ ಪತ್ತೆ ಮಾಡಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

## ವಿವಿಧ ದೇಶಗಳ ಪ್ರಜೆಗಳ ವಿವರ ಸಂಗ್ರಹ, 11 ಮಂದಿ ಸೆರೆ

# ವಂಚನೆಗೆ ಕಾಲ್ ಸೆಂಟರ್

ಪ್ರಜಾವಾಣಿ ವಾರ್ತೆ



ಕಾಲ್ ಸೆಂಟರ್ ಮೇಲೆ ದಾಳಿ ಮಾಡಿದ್ದ ಪೊಲೀಸರು, ಆರೋಪಿಗಳ ವೈಯಕ್ತಿಕ ವಿವರ ದಾಖಲಿಸಿಕೊಂಡರು

**ಬೆಂಗಳೂರು:** ಅಮೆರಿಕ ಸೇರಿದಂತೆ ವಿವಿಧ ದೇಶಗಳ ಪ್ರಜೆಗಳ ವೈಯಕ್ತಿಕ ವಿವರ ಸಂಗ್ರಹಿಸಿ ವಂಚಿಸಲೆಂದು ವ್ಯವಸ್ಥಿತ ಕಾಲ್ ಸೆಂಟರ್ ತೆರೆದಿದ್ದ 11 ಆರೋಪಿಗಳನ್ನು ಮಹದೇವಪುರ ಪೊಲೀಸರು ಬಂಧಿಸಿದ್ದಾರೆ.

'ಗುಜರಾತ್‌ನ ರಿಷಿವ್ಯಾಸ್ ಪ್ರತೀಕ್, ಪರೀಶ್, ಹೈತ್ ಪಟೇಲ್, ಕಿರಣ್, ಸೈಯ್ಯದ್ ಸೇರಿದಂತೆ 11 ಮಂದಿಯನ್ನು ಬಂಧಿಸಲಾಗಿದೆ. ಸೈಬರ್ ವಂಚನೆಗೆಂದೇ ಸ್ಥಾಪಿಸಿದ ಕಾಲ್ ಸೆಂಟರ್‌ನಲ್ಲಿ ಕೆಲಸ ಮಾಡುತ್ತಿದ್ದ 75 ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಗಿರೀಶ್ ಹೇಳಿದರು.

'₹ 1 ಕೋಟಿ ಮೌಲ್ಯದ 132 ಕಂಪ್ಯೂಟರ್, ₹ 15 ಲಕ್ಷ ನಗದು, 4 ಲ್ಯಾಪ್‌ಟಾಪ್, 150 ಹೆಡ್ ಫೋನ್, 10 ಹಾರ್ಡ್ ಡಿಸ್ಕ್, ಆ್ಯಪಲ್ ಕಂಪನಿಯ 6 ಮೊಬೈಲ್, 3 ಕಾರು, 2 ಶಾಲಾ ವಾಹನ ಜಪ್ತಿ ಮಾಡಲಾಗಿದೆ' ಎಂದೂ ತಿಳಿಸಿದರು.

**ಪ್ರತಿನಿಧಿಗಳ ಸೋಗಿನಲ್ಲಿ ವಂಚನೆ:** 'ಎಥಿಕಲ್ ಇನ್ಫೋ ಕಂಪನಿ ಸ್ಥಾಪಿಸಿದ್ದ ಪ್ರಮುಖ ಆರೋಪಿಗಳು, ಗಾಯತ್ರಿ ಟೆಕ್ ಪಾರ್ಕ್‌ನಲ್ಲಿ ಕಾಲ್ ಸೆಂಟರ್ ತೆರೆದಿದ್ದರು. ಕೆಲಸಕ್ಕೆಂದು ನೂರಾರು ಯುವಕ–ಯುವತಿಯರನ್ನು ನೇಮಿಸಿಕೊಂಡಿದ್ದರು' ಎಂದು ಗಿರೀಶ್ ಹೇಳಿದರು.

'ಅಮೆರಿಕ ಹಾಗೂ ವಿವಿಧ ದೇಶಗಳ ಪ್ರಜೆಗಳಿಗೆ ಕಾಲ್ ಸೆಂಟರ್‌ನಿಂದ ಕರೆ ಮಾಡುತ್ತಿದ್ದ ಆರೋಪಿಗಳು, ಬ್ಯಾಂಕ್ ಪ್ರತಿನಿಧಿಗಳೆಂದು ಪರಿಚಯಿಸಿಕೊಳ್ಳುತ್ತಿದ್ದರು. ಖಾತೆ ನವೀಕರಣ ಹಾಗೂ ಇತರೆ ಸೌಲಭ್ಯ ನೀಡುವುದಾಗಿ ಹೇಳಿ ವೈಯಕ್ತಿಕ ವಿವರ ಪಡೆಯುತ್ತಿದ್ದರು. ಅದನ್ನು ಬಳಸಿಕೊಂಡು, ಪ್ರಜೆಗಳ ಖಾತೆಯಿಂದ ಹಣ ಡ್ರಾ ಮಾಡಿಕೊಳ್ಳುತ್ತಿದ್ದರು'

'ಹಣ ಕಡಿತವಾಗಿದ್ದರಿಂದ ಪ್ರಜೆಗಳು, ಆರೋಪಿಗಳಿಗೆ ಕರೆ ಮಾಡಿ ಪುನಃ ವಿಚಾರಿಸುತ್ತಿದ್ದರು. ಹಣ ವಾಪಸು ನೀಡುವ ಸೋಗಿನಲ್ಲೂ ಆರೋಪಿಗಳು, ಮತ್ತಷ್ಟು ಹಣ ಡ್ರಾ ಮಾಡಿಕೊಂಡು ವಂಚಿಸುತ್ತಿದ್ದರು' ಎಂದೂ ತಿಳಿಸಿದರು.

**ಎರಡು ವರ್ಷದಿಂದ ಕೃತ್ಯ:** 'ಆರೋಪಿಗಳು ಎರಡು ವರ್ಷಗಳಿಂದ ವಿದೇಶಿಗರನ್ನು ಮಾತ್ರ ವಂಚಿಸುತ್ತಿದ್ದರು. ಭಾರತೀಯರನ್ನು ವಂಚಿಸಿದರೆ, ಪೊಲೀಸರು ತಮ್ಮನ್ನು ಬಂಧಿಸಬಹುದೆಂದು ತಿಳಿದಿದ್ದರು' ಎಂದು ಗಿರೀಶ್ ಹೇಳಿದರು.

'ವಂಚನೆಯಿಂದ ಬಂದ ಹಣವನ್ನು ಆರೋಪಿಗಳು, ವಿದೇಶದಲ್ಲಿರುವ ಬ್ಯಾಂಕ್‌ಗಳ ಖಾತೆಗೆ ವರ್ಗಾಯಿಸುತ್ತಿದ್ದರು. ಅದೇ ಹಣವನ್ನು ಹವಾಲಾ ಮೂಲಕ ಭಾರತಕ್ಕೆ ತರಿಸಿಕೊಂಡು, ಕೆಲಸಗಾರರಿಗೆ ವೇತನ ನೀಡುತ್ತಿದ್ದರು. ಐಷಾರಾಮಿ ಜೀವನ ನಡೆಸುತ್ತಿದ್ದರು' ಎಂದೂ ತಿಳಿಸಿದರು.

## ಕೆಲಸಗಾರನ ಕೈಕಾಲು ಕಟ್ಟಿ ಕೃತ್ಯ, ದರೋಡೆಕೋರರ ಬಂಧನ

# ಮೂರೂವರೆ ಕೆ.ಜಿ ಚಿನ್ನಾಭರಣ ಜಪ್ತಿ

ಪ್ರಜಾವಾಣಿ ವಾರ್ತೆ



ಆರೋಪಿಗಳಿಂದ ಜಪ್ತಿ ಮಾಡಲಾದ ಚಿನ್ನಾಭರಣ, ಬೆಳ್ಳಿ ಸಾಮಗ್ರಿಗಳನ್ನು ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ವೀಕ್ಷಿಸಿದರು

**ಬೆಂಗಳೂರು:** ಎಲೆಕ್ಟ್ರಾನಿಕ್ ಸಿಟಿ ಠಾಣೆ ವ್ಯಾಪ್ತಿಯ ಮೈಲಸಂದ್ರದಲ್ಲಿರುವ 'ರಾಮದೇವ್ ಜ್ಯುವೆಲರ್ಸ್ ಮತ್ತು ಬ್ರೋಕರ್ಸ್' ಮಳಿಗೆಗೆ ನುಗ್ಗಿ ₹ 1.58 ಕೋಟಿ ಮೌಲ್ಯದ ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿ ದರೋಡೆ ಮಾಡಿದ್ದ ಆರೋಪದಡಿ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

'ರಾಜಸ್ಥಾನದ ದೇವರಾಮ್, ರಾಹುಲ್, ರಾಮ್ ಸಿಂಗ್ ಹಾಗೂ ಅನಿಲ್ ಬಂಧಿತರು. ಇವರಿಂದ 3 ಕೆ.ಜಿ 500 ಗ್ರಾಂ ಚಿನ್ನಾಭರಣ ಹಾಗೂ 16 ಕೆ.ಜಿ ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ. ಇನ್ನೊಬ್ಬ ಆರೋಪಿ ವಿಷ್ಣುಪ್ರಸಾದ್ ತಲೆಮರೆಸಿಕೊಂಡಿದ್ದು, ಆತನ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿದೆ' ಎಂದು ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ತಿಳಿಸಿದರು.

'ಚಿನ್ನಾಭರಣ ಮಳಿಗೆ ಕೆಲಸಗಾರ, ಜುಲೈ 4ರಂದು ಬೆಳಿಗ್ಗೆ 7.15ರ ಸುಮಾರಿಗೆ ಬಾಗಿಲು ತೆರೆದು ವ್ಯಾಪಾರ ಆರಂಭಿಸಿದ್ದ. ಗ್ರಾಹಕರ ಸೋಗಿನಲ್ಲಿ ಮಳಿಗೆಗೆ ಬಂದಿದ್ದ ಆರೋಪಿಗಳು, ಚಿನ್ನದ ಸರ ತೋರಿಸುವಂತೆ ಹೇಳಿದ್ದರು. ಕೆಲಸಗಾರ ಸರ ತೋರಿಸುವುದರಲ್ಲಿ ನಿರತನಾಗಿದ್ದ. ಅದೇ ವೇಳೆ ಪಿಸ್ತೂಲ್ ತೋರಿಸಿ ಬೆದರಿಸಿದ್ದ ಆರೋಪಿಗಳು, ಆತನನ್ನು ಹಿಡಿದು ಕೈ–ಕಾಲು ಕಟ್ಟಿಹಾಕಿದ್ದರು.'

'ಮಳಿಗೆಯಲ್ಲಿದ್ದ ₹ 1.58 ಕೋಟಿ ಮೌಲ್ಯದ ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿಗಳನ್ನು ದೋಚಿ ಆರೋಪಿಗಳು ಪರಾರಿಯಾಗಿದ್ದರು. ಸಿ.ಸಿ.ಟಿ.ವಿ ಕ್ಯಾಮೆರಾ ಡಿವಿಆರ್ ಸಹ ಜೊತೆಗೇ ತೆಗೆದುಕೊಂಡು ಹೋಗಿದ್ದರು. ಈ ಬಗ್ಗೆ ಕೆಲಸಗಾರ ಹಾಗೂ ಮಾಲೀಕನ ಹೇಳಿಕೆ ಪಡೆದು ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು' ಎಂದೂ ಹೇಳಿದರು.

**ಪೊಲೀಸರ ಮೇಲೆ ಗುಂಡಿನ ದಾಳಿ:** 'ಕೃತ್ಯ ಎಸಗಿ ಪರಾರಿಯಾಗಿದ್ದ ಆರೋಪಿಗಳು ರಾಜಸ್ಥಾನಕ್ಕೆ ಹೋಗಿದ್ದರು. ಈ ಬಗ್ಗೆ ಮಾಹಿತಿ ಕಲೆಹಾಕಿದ್ದ ವಿಶೇಷ ತಂಡ, ರಾಜಸ್ಥಾನಕ್ಕೆ ಹೋಗಿ ಸ್ಥಳೀಯ ಪೊಲೀಸರ ಸಹಕಾರದಲ್ಲಿ ತನಿಖೆ ಆರಂಭಿಸಿತ್ತು' ಎಂದು ಪ್ರತಾಪ್ ರೆಡ್ಡಿ ತಿಳಿಸಿದರು.

'ಚಿತ್ತೂರ್‌ಘರ್ ಜಿಲ್ಲೆಯ ಬೇಗೂಮ್ ಠಾಣೆ ವ್ಯಾಪ್ತಿಯಲ್ಲಿ ಆರೋಪಿಗಳು ಅಡಗಿದ್ದರು. ಅವರನ್ನು ಬಂಧಿಸಲು ಹೋದಾಗ ಪೊಲೀಸರ ಮೇಲೆಯೇ ಗುಂಡಿನ ದಾಳಿ ನಡೆಸಿದರು. ಅದನ್ನು ಎದುರಿಸಿದ ಪೊಲೀಸರು, ಸಿನಿಮೀಯ ರೀತಿಯಲ್ಲಿ ಮೂರು ಕಿ.ಮೀ.ವರೆಗೆ ಬೆನ್ನಟ್ಟಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾದರು. ಆರೋಪಿಗಳಿಂದ 2 ಪಿಸ್ತೂಲ್, 3 ಸಜೀವ ಗುಂಡುಗಳನ್ನೂ ಜಪ್ತಿ ಮಾಡಿದ್ದರು. ಆರೋಪಿಗಳ ವಿರುದ್ಧ ಬೇಗೂಮ್ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣ ಸಹ ದಾಖಲಾಗಿದೆ' ಎಂದೂ ಹೇಳಿದರು.

### ವ್ಯಾಪಾರ ನಷ್ಟವಾಗಿದ್ದರಿಂದ ದರೋಡೆ

ಬೆಂಗಳೂರು: 'ಆರೋಪಿ ದೇವರಾಮ್, ರಾಜಸ್ಥಾನದಿಂದ ಬೆಂಗಳೂರಿಗೆ ಬಂದು ಹುಳಿಮಾವು ಬಳಿ ಹಾರ್ಡ್‌ವೇರ್ ಇಟ್ಟುಕೊಂಡಿದ್ದ. ವ್ಯವಹಾರದಲ್ಲಿ ಲಕ್ಷಾಂತರ ರೂಪಾಯಿ ನಷ್ಟವಾಗಿ, ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ. ಹಣ ಗಳಿಸಬೇಕೆಂದು ದರೋಡೆಗೆ ಇಳಿದಿದ್ದ' ಎಂದು ಪ್ರತಾಪ್ ರೆಡ್ಡಿ ತಿಳಿಸಿದರು.

'ರಾಹುಲ್, ರಾಮ್ ಸಿಂಗ್, ಅನಿಲ್ ಹಾಗೂ ವಿಷ್ಣುಪ್ರಸಾದ್ ದರೋಡೆಯನ್ನೇ ವೃತ್ತಿ ಮಾಡಿಕೊಂಡಿದ್ದರು. ಅವರನ್ನು ಸಂಪರ್ಕಿಸಿದ್ದ ಆರೋಪಿ, ಬೆಂಗಳೂರಿಗೆ ಕರೆಸಿ ತನ್ನ ಮನೆಯಲ್ಲಿ ಇರಿಸಿಕೊಂಡಿದ್ದ. ಚಿನ್ನಾಭರಣ ಮಳಿಗೆ ಬಳಿ 20 ದಿನಗಳಿಂದ ಓಡಾಡಿದ್ದ ಆರೋಪಿಗಳು, ದರೋಡೆಗೆ ಸಂಚು ರೂಪಿಸಿದ್ದರು. ಕೆಲಸಗಾರ ಒಬ್ಬನೇ ಇರುವಾಗಲೇ ಮಳಿಗೆಗೆ ನುಗ್ಗಿ ಆಭರಣ ದೋಚಿದ್ದರು' ಎಂದೂ ಹೇಳಿದರು.

## ಡಾ.ಶಾಂತಲಾ, ಅನುಪಮಾಗೆ 'ಡಾ.ಎಚ್. ಗಿರಿಜಮ್ಮ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ



ಡಾ. ಶಾಂತಲಾ



ಡಾ.ಅನುಪಮಾ

**ಬೆಂಗಳೂರು:** ಡಾ.ಎಚ್. ಗಿರಿಜಮ್ಮ ಸ್ನೇಹ ಬಳಗ ನೀಡುವ 'ಡಾ.ಎಚ್. ಗಿರಿಜಮ್ಮ ಪ್ರಶಸ್ತಿ'ಗೆ ಲೇಖಕಿಯರಾದ ಡಾ. ಶಾಂತಲಾ ಮತ್ತು ಡಾ.ಎಚ್.ಎಸ್. ಅನುಪಮಾ ಅವರ ಕೃತಿಗಳು ಆಯ್ಕೆಯಾಗಿವೆ.

2021ನೇ ಸಾಲಿನ ಈ ಪ್ರಶಸ್ತಿಗೆ ವೈದ್ಯ ಲೇಖಕಿಯರಿಂದ ಕೃತಿಗಳನ್ನು ಆಹ್ವಾನಿಸಲಾಗಿತ್ತು. ಡಾ. ಶಾಂತಲಾ ಅವರ ವೈಜ್ಞಾನಿಕ ಕಾದಂಬರಿ '3019 ಎ.ಡಿ.' ಮತ್ತು ಡಾ.ಎಚ್.ಎಸ್. ಅನುಪಮಾ ಅವರ 'ಕೋವಿಡ್ ಡಾಕ್ಟರ್ ಡೈರಿ' ಕೃತಿ ಆಯ್ಕೆಯಾಗಿದೆ. ಪ್ರಶಸ್ತಿಯು ₹ 20 ಸಾವಿರ ನಗದು ಮತ್ತು ಸ್ಮರಣಿಕೆ ಒಳಗೊಂಡಿದೆ.

ಡಾ.ಸಿ.ಆರ್. ಚಂದ್ರಶೇಖರ್, ಆರ್.ಕೆ. ಸರೋಜಾ ಹಾಗೂ ಡಾ.ನಾ. ಸೋಮೇಶ್ವರ ಅವರು ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿದ್ದರು.

ಪ್ರಶಸ್ತಿ ಪ್ರದಾನ ಸಮಾರಂಭವು ಇದೇ 23 ರಂದು ಸಂಜೆ 5.30ಕ್ಕೆ ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ನಡೆಯಲಿದೆ. ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್, ನಿರೂಪಕಿ ಅಪರ್ಣಾ ವಸ್ತಾರೆ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಡಾ.ಸಿ.ಆರ್. ಚಂದ್ರಶೇಖರ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ಆರ್.ಕೆ. ಸರೋಜಾ ಅವರು ಅಭಿನಂದನಾ ನುಡಿ ನುಡಿಯುತ್ತಾರೆ ಎಂದು ಬಳಗದ ಸಂಚಾಲಕಿ ಡಾ. ವಸುಂಧರಾ ಭೂಪತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕ್ಷುಲ್ಲಕ ಪಿಐಎಲ್‌ಗಳಿಗೆ ಕಾದಿದೆ ದಂಡ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳಲ್ಲಿ (ಪಿಐಎಲ್) ಕ್ಷುಲ್ಲಕ ಅಥವಾ ವೈಯಕ್ತಿಕ ಹಿತಾಸಕ್ತಿಗಳೇನಾದರೂ ಅಡಗಿರುವುದು ಮೇಲ್ನೋಟಕ್ಕೆ ಖುಜುವಾತು ಆದರೆ, ಅರ್ಜಿದಾರರಿಗೆ ಕನಿಷ್ಠ ₹ 50 ಸಾವಿರ ದಂಡ ವಿಧಿಸಲಾಗುವುದು' ಎಂದು ಹೈಕೋರ್ಟ್ ಮೌಖಿಕ ಎಚ್ಚರಿಕೆ ನೀಡಿದೆ.

ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ವಾಪಸ್ ಪಡೆಯಲು ಸಲ್ಲಿಸಲಾಗಿದ್ದ ಮೆಮೊಗಳನ್ನು (ಜ್ಞಾಪನಾ ಪತ್ರ) ಗಮನಿಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ, 'ಜುಜುಬಿ ಅರ್ಜಿಗಳಿಗೆ ದಂಡ ವಿಧಿಸುವ ಪ್ರಕ್ರಿಯೆಯನ್ನು ಇದೇ 11ರಿಂದ ಜಾರಿಗೆ ತರಲಾಗುವುದು' ಎಂದು ತಿಳಿಸಿದೆ.

ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕಿನ ಮೇಡಮಾರನಹಳ್ಳಿ ಕೆರೆ ಜಾಗ ಒತ್ತುವರಿ ತೆರವುಗೊಳಿಸುವಂತೆ ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ನ್ಯಾಯದ ಹಿತದೃಷ್ಟಿಯಿಂದ ಅರ್ಜಿ ವಾಪಸ್ ಪಡೆದುಕೊಳ್ಳಲು ಅನುಮತಿ ನೀಡಬೇಕು' ಎಂದು ಮೆಮೊ ಸಲ್ಲಿಸಿರುವುದನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ನ್ಯಾಯಪೀಠ, ವಕೀಲರನ್ನು ತರಾಟೆಗೆ ತೆಗೆದುಕೊಂಡು, ಅರ್ಜಿದಾರರಿಗೆ ₹ 25 ಸಾವಿರ ದಂಡ ವಿಧಿಸಿತು. 'ನ್ಯಾಯದ ಹಿತದೃಷ್ಟಿಯಿಂದಲೇ ದಂಡದ ಮೊತ್ತವನ್ನು ಕಾನೂನು ಸೇವಾ ಪ್ರಾಧಿಕಾರಕ್ಕೆ ಪಾವತಿಸಿ, ಒಂದಿಷ್ಟು ಜನರಿಗೆ ಅನುಕೂಲವಾಗುತ್ತದೆ' ಎಂದು ಆದೇಶಿಸಿತು.

## ರಾಜ್ಯದಲ್ಲಿ ಶೀಘ್ರ ಎಥೆನಾಲ್ ನೀತಿ: ಸಿ.ಎಂ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ರಾಜ್ಯದಲ್ಲಿ ಶೀಘ್ರ ಎಥೆನಾಲ್ ನೀತಿ ಜಾರಿಗೊಳಿಸಲಾಗುವುದು. ಒಂದೂವರೆ ವರ್ಷದಲ್ಲಿ ರಾಜ್ಯದಲ್ಲಿ ಇಥೆನಾಲ್ ಉತ್ಪಾದನೆಯನ್ನು ಶೇ 20ರಷ್ಟು ಹೆಚ್ಚಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ, ಬೆಳಗಾವಿಯ ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ಮತ್ತು 'ಬಿಕ್ವೆಸ್ಟ್ ಕನ್ಸಲ್ಟೆನ್ಸಿ ಮತ್ತು ಎಂಜಿನಿಯರಿಂಗ್ ಕಂಪನಿ' ಸಹಯೋಗದಲ್ಲಿ 'ಕರ್ನಾಟಕದಲ್ಲಿ ಎಥೆನಾಲ್ ಉತ್ಪಾದನೆ: ನೀತಿಗಳು, ಆವಿಷ್ಕಾರಗಳು ಮತ್ತು ಸ್ಥಿರತೆ' ವಿಷಯದ ಕುರಿತು ಶುಕ್ರವಾರ ನಡೆದ ವಿಚಾರ ಸಂಕಿರಣದಲ್ಲಿ ಅವರು ಈ ವಿಷಯ ತಿಳಿಸಿದರು.

'ರಾಜ್ಯದಲ್ಲಿ ಎಥೆನಾಲ್ ಉತ್ಪಾದನೆ ಮತ್ತು ಬಳಕೆಯಲ್ಲಿ ಕ್ರಾಂತಿಯಾಗುತ್ತಿದೆ. ಈಗಾಗಲೇ ಪೆಟ್ರೋಲ್‌ನಲ್ಲಿ ಶೇ 10ರಷ್ಟು ಎಥೆನಾಲ್ ಮಿಶ್ರಣದ ಗುರಿ ಸಾಧಿಸಲಾಗಿದೆ' ಎಂದು ವಿವರಿಸಿದರು.

'ರಾಜ್ಯದ 32 ಸಕ್ಕರೆ ಕಾರ್ಖಾನೆಗಳಲ್ಲಿ ಎಥೆನಾಲ್ ಉತ್ಪಾದಿಸಲಾಗುತ್ತಿದೆ. ಇನ್ನೂ 60 ಸಕ್ಕರೆ ಕಾರ್ಖಾನೆಗಳು ಅನುಮತಿ ಪಡೆಯುವ ಹಂತದಲ್ಲಿವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಎಥೆನಾಲ್ ಉತ್ಪಾದನೆಗೆ ವಿಶೇಷ ರಿಯಾಯಿತಿಗಳನ್ನು ನೀಡಲಾಗುವುದು. ಕೇವಲ ಕಬ್ಬಿನಿಂದ ಮಾತ್ರವಲ್ಲ, ಭತ್ತ, ಜೋಳ ಹಾಗೂ ಗೋಧಿಯ ಹೊಟ್ಟಿನಿಂದಲೂ ಎಥೆನಾಲ್ ತಯಾರಿಸಬಹುದಾಗಿದೆ. ಇದರಿಂದ, ಮುಂಬರುವ ದಿನಗಳಲ್ಲಿ ದೇಶದಲ್ಲೇ ಅತಿ ಹೆಚ್ಚು ಎಥೆನಾಲ್ ಕರ್ನಾಟಕದಲ್ಲಿ ಉತ್ಪಾದನೆಯಾಗಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಸದ್ಯ ನವೀಕರಿಸಬಹುದಾದ ಇಂಧನ, ಹೈಡ್ರೋಜನ್ ಇಂಧನ ಮತ್ತು ಹಸಿರು ಇಂಧನ ಪ್ರಾಮುಖ್ಯತೆ ಪಡೆಯುತ್ತಿದೆ. ದೇಶದ ಶೇ 43ರಷ್ಟು ನವೀಕರಿಸಬಹುದಾದ ಇಂಧನ ಕರ್ನಾಟಕದಲ್ಲಿ ಉತ್ಪಾದನೆಯಾಗುತ್ತಿದೆ. ಸಮುದ್ರದ ನೀರಿನಿಂದ ಅಮೋನಿಯಾ ಉತ್ಪಾದಿಸುವುದು ಸೇರಿದಂತೆ ಹಸಿರು ಇಂಧನ ಉತ್ಪಾದನೆಗೆ ಮೂರು ದೊಡ್ಡ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದ್ದು, 1.30 ಲಕ್ಷ ಕೋಟಿಯಷ್ಟು ಬಂಡವಾಳ ಕರ್ನಾಟಕದಲ್ಲಿ ಹೂಡಿಕೆಯಾಗಲಿದೆ' ಎಂದರು.

ಬೃಹತ್ ಕೈಗಾರಿಕೆ ಸಚಿವ ಮುರುಗೇಶ ನಿರಾಣಿ ಮಾತನಾಡಿ, 'ದೇಶದಲ್ಲಿ 2021-22ರಲ್ಲಿ 800 ಕೋಟಿ ಲೀಟರ್ ಎಥೆನಾಲ್ ಉತ್ಪಾದನೆಯಾಗಿದೆ. ಮುಂದಿನ ವರ್ಷ ಇದು ಒಂದು ಸಾವಿರ ಕೋಟಿ ಲೀಟರ್ ತಲುಪಲಿದೆ. ಈ ಗುರಿ ಸಾಧನೆಯಿಂದ ₹30 ಸಾವಿರ ಕೋಟಿ ವಿದೇಶಿ ವಿನಿಮಯ ಉಳಿತಾಯವಾಗಲಿದೆ' ಎಂದರು.

'ಕಬ್ಬಿನ ಜ್ಯೂಸ್ ಅಥವಾ ಸಿರಪ್‌ನಿಂದ ಮಾತ್ರವಲ್ಲ; ಕಬ್ಬಿನ ಸಿಪ್ಪೆಯಿಂದಲೂ ಎಥೆನಾಲ್ ಉತ್ಪಾದನೆ ಶುರುವಾಗಲಿದೆ. ಈಗಾಗಲೇ ಶೆಲ್ ಕಂಪೆನಿಯು ಹತ್ತು ಟನ್ ಎಥೆನಾಲ್ ನಿತ್ಯ ಉತ್ಪಾದಿಸುತ್ತಿದೆ' ಎಂದು ಮಾಹಿತಿ ನೀಡಿದರು.

## ಮಳೆ ಹಾನಿ: ತುರ್ತು ಪರಿಹಾರಕ್ಕೆ ಸೂಚನೆ

ಒಂದನೇ ಪುಟದಿಂದ...

'ಗ್ರಾಮಗಳ ಮಟ್ಟದಲ್ಲಿ ಕಾರ್ಯಪಡೆಗಳನ್ನು ರಚಿಸುವುದರ ಜತೆಗೆ ನಿಯಂತ್ರಣ ಕೊಠಡಿಯನ್ನೂ ಸ್ಥಾಪಿಸಬೇಕು. ಈ ಮೂಲಕ ಗ್ರಾಮಗಳ ಜತೆಗೆ ನೇರ ಸಂಪರ್ಕವನ್ನು ಹೊಂದಬೇಕು. ಪೊಲೀಸರು ಸೇವೆಗೆ ದಿನದ 24 ಗಂಟೆಯೂ ಲಭ್ಯರಿರಬೇಕು' ಎಂದರು.

'ಮನೆಗಳಿಗೆ ಆಗಿರುವ ಹಾನಿಯ ಪ್ರಮಾಣವನ್ನು ನಿಯಮಾನುಸಾರ ಅಂದಾಜು ಮಾಡಿ, ವರ್ಗೀಕರಿಸಿ, ರಾಜೀವ್‌ಗಾಂಧಿ ವಸತಿ ನಿಗಮದ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಿ ಪರಿಹಾರವನ್ನು ವಿತರಿಸಲು ಕ್ರಮ ತೆಗೆದುಕೊಳ್ಳಬೇಕು. ಬೆಳೆ ನಷ್ಟ, ಮೂಲ ಸೌಕರ್ಯಗಳ ಹಾನಿಯನ್ನು ಮಳೆ ನಿಂತ ಕೂಡಲೇ ಸಮೀಕ್ಷೆ ಮಾಡಿ ವರದಿ ಸಲ್ಲಿಸಬೇಕು' ಎಂದು ಬೊಮ್ಮಾಯಿ ತಿಳಿಸಿದರು.

ಕಂದಾಯ, ಪೊಲೀಸ್, ಅಗ್ನಿಶಾಮಕ ಮತ್ತು ಇತರ ಇಲಾಖೆಗಳು ಸಮನ್ವಯದಿಂದ ಕೆಲಸ ಮಾಡಬೇಕು. ಕರಾವಳಿ ಪ್ರದೇಶದಲ್ಲಿ ಕಡಲ ಕೊರೆತ ಆದಲ್ಲಿ ತುರ್ತು ಕಾಮಗಾರಿ ಕೂಡಲೇ ಕೈಗೊಂಡು ಹೆಚ್ಚಿನ ಹಾನಿಯಾಗದಂತೆ ಮುನ್ನೆಚ್ಚರಿಗೆ ವಹಿಸಬೇಕು. ವಿದ್ಯುತ್ ಕಂಬಗಳು ಬಿದ್ದು ಹೋದಲ್ಲಿ ಕೂಡಲೇ ಸರಿಪಡಿಸಿ, ವಿದ್ಯುತ್ ಪೂರೈಕೆಯಲ್ಲಿ ಅಡಚಣೆ ಆಗದಂತೆ ನೋಡಿಕೊಳ್ಳಬೇಕು ಎಂದೂ ಸೂಚಿಸಿದರು.

| ಹಾನಿಯ ಪ್ರಮಾಣ (ಜೂನ್ 1ರಿಂದ ಈವರೆಗೆ) | |
|---|---|
| ಪ್ರವಾಹ ಪೀಡಿತ ಜಿಲ್ಲೆಗಳು | 13 |
| ತಾಲ್ಲೂಕುಗಳು | 17 |
| ಗ್ರಾಮಗಳು | 37 |
| ಜೀವಹಾನಿ | 12 |
| ಜಾನುವಾರು ಪ್ರಾಣಹಾನಿ | 65 |
| ಬಾಧಿತ ಜನಸಂಖ್ಯೆ | 495 |
| ರಕ್ಷಿಸಲ್ಪಟ್ಟವರು | 90 |

### ರೆಡ್ ಅಲರ್ಟ್: ಜನರ ತೆರವಿಗೆ ಸೂಚನೆ

'ಕಳೆದ ವರ್ಷ ಭೂಕುಸಿತ ಆದ ಪ್ರದೇಶಗಳಲ್ಲಿ ಈಗ ವಾಸವಿರುವ ಜನರನ್ನು ತಕ್ಷಣವೇ ತೆರವುಗೊಳಿಸಬೇಕು. ಮುಂದಿನ ಕೆಲವು ದಿನಗಳಲ್ಲಿ ಈ ಪ್ರದೇಶಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದೆ. ಅನಾಹುತ ತಪ್ಪಿಸಲು ಸಮರೋಪಾದಿಯಲ್ಲಿ ತೆರವುಗೊಳಿಸಬೇಕು' ಎಂದು ಮುಖ್ಯಮಂತ್ರಿ ಬೊಮ್ಮಾಯಿ ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.

ಮಳೆಯಿಂದ ಹಾನಿಗೊಳಗಾದ ರಸ್ತೆಗಳ ದುರಸ್ತಿಯನ್ನು ಆದ್ಯತೆ ಮೇರೆಗೆ ಕೈಗೊಳ್ಳಬೇಕು. ರಸ್ತೆಗಳ ಮೇಲೆ ಭೂಕುಸಿತವಾದಲ್ಲಿ ಮಣ್ಣು–ಬಂಡೆಗಳನ್ನು ಕೂಡಲೇ ತೆರವುಗೊಳಿಸಬೇಕು ಎಂದೂ ಹೇಳಿದರು.


ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Distributors

**WANTED AREA** WISE DISTRIBUTORS for Health Mix Natural Products. Minimum Investment 25,000. Attractive Returns. Call: 9702702999/ 83742-43687

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

**WANTED BUSINESS** Partner Non Veg Hotel 10 Lakhs Investment Monthly Income 1 Lakhs: 8892501007/ 9606701007

Business For Sale

**FARM FRESH** Dairy Unit For Sale/Required Investors.Full Setup Available to start/continue the Business.Kindly Call:9845742268/ 9611546003







JOB OPPORTUNITIES

Marketing & Sales

WANTED SALES Fresher/Experience 2wheeler mandatory, 4wheeler DL advantage,Office in Sahakar nagar near Hebbal, Salary and incentive as per market Email:hr@kstewd.org 81399 62000

Teachers/ Professors

EDUCATIONAL

Special Courses

**JOB ORIENTED** Course Diploma in Student Counselling 6months ONLINE CLASSES, Starts 12.07.2022 WhatsApp 9886044221 www.darwinpsychologycentre.com

VENKAT, ST.ANN'S & VENUS GROUP OF INSTITUTIONS
(Affiliated to the CBSE & ICSE, New Delhi)
K B Temple Street, VI Block, Rajajinagar, Bengaluru-10.
Ph. : 080-23152016

VIPS Group of Institutions Requires

**PGT, TGT:** Post Graduates/Trained Graduates with M.Ed./B.Ed. and over 5 years of experience to teach English, Social Science, Sanskrit, Hindi, Computer Science, Art & Craft, Librarian, P.E., Yoga, Gymnastics, Band Master, Karate & Judo Teachers.
REMUNERATION: PGT: ₹ 6,00,000 to ₹ 8,40,000 p.a. TGT: ₹ 3,60,000 to ₹ 5,00,000 p.a.

**Nursery Teachers & Coordinators:** Graduates with NTT from a reputed Institution with 3-5 years of experience. REMUNERATION: ₹ 3,60,000 to ₹ 7,20,000 p.a.

**Non-Teaching Staff :** Front Office Executive, Accountant & DTP Operators. Candidates with experience in a reputed organisation with requisite qualification is a must.
REMUNERATION: ₹ 3,00,000 to ₹ 7,20,000 p.a.

WALK-IN INTERVIEW
Date : 10-07-2022 | Time 10.00 a.m to 3.00 p.m.
Venue : At the above address

TOURS & TRAVEL

Travel

"NEPAL TOUR" EVERY MONTH Muktinath for Parents, Chandragiri for kids, Kathmandu- Mankamna- Pokhara for All! NALANDA TRAVELS, Kundapura- 8310028157

PERSONAL

Change of Name

**I, SATHISHA** B.V., residing at No. 62 Karnasri Layout 1st Stage Medahalli Village, Virgonagar Bangalore 560049, say that 'Sathisha B.V.', "Sathisha Banakar Veerappa", "Sathisha Byrappali" & "Sathisha Byrappali Veerappa" are the names of one and same person i.e., myself and henceforth I shall be known as "SATHISHA BYRAPPALI VEERAPPA". Before Notary Hegde Ganapati Venkataraman Advocate Bangalore-62

**I, REETHU** K., D/o Poonam Kishin, residing at No. 14/4 2nd floor Pipeline, Malleswaram, Bangalore 560003, have changed my name from REETHU K to AISHWARIYA S NAGPAL, W/o Sunil G Nagpal vide affidavit dated 08.07.2022 sworn before Notary Bhagya Kumari, Bangalore.

**SUNAIWA DEVI** M/o 14839925K-HAV/MT-DHARMENDRA KUMAR, R/a Chitrakut nagar, Digha, Patna, Bihar changed name from SUNAIWA DEVI to SUNAINA DEVI notary K.V.Mani, Bangalore

**I, DURGA** A., D/o Anantha Padmanabha Rao, Wife of N.K. Sampath, residing at #365 2nd cross Ramamurthynagar main road, Bangalore- 560016, have changed my name to DURGA .S., after my marriage vide affidavit dated 18.08.2014 before Notary L. Gopalakrishna, Bangalore. Henceforth I shall be called DURGA .S only.

**I, KARISHMA** Dutta Saikia W/O, Apu Das R/o Vivek Nilaya, Kencha Reddy Layout, Channasandra, Bangalore- 560067 have changed my name to Karishma Saikia Das for all purposes

**I, NANCY** MARIA J D/o. Jayaraj Residing at #28, 2nd Floor, 5th Cross, Muniveerappa Lane, Lingarajapuram, Bangalore- 560084, have changed my name to NANCY MARIA D/o. Jayaram vide affidavit dated 07.07.2022, sworn before notary 07.07.2022, before notary Y.R. Chandrasekar, Bengaluru. Henceforth I shall be called NANCY MARIA only.

**I, VANISHA** SUNIL LALCHANDANI Residing at #B1004, MJR Pearl, Kadugodi, Bengaluru- 560067, have changed my name to VANISHA LALCHANDANI vide affidavit dated 08.07.2022 before notary Veena J. Bengaluru




For More Details Call
9880856233 • 9886213331
Email: Santhoshkumar@deccanherald.co.in

ಒಟ್ಟು 3,546 ಎಕರೆ 12 ಗುಂಟೆ ಜಾಗ ಬಳಕೆ • ₹5,337 ಕೋಟಿ ವೆಚ್ಚದ ಪರಿಷ್ಕೃತ ಅಂದಾಜು

# ಶಿವರಾಮ ಕಾರಂತ ಬಡಾವಣೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೆ.ಶಿವರಾಮ ಕಾರಂತ ಬಡಾವಣೆಯನ್ನು 17 ವಿವಿಧ ಗ್ರಾಮಗಳ ಸರ್ವೆ ನಂಬರ್‌ಗಳಲ್ಲಿ ಪರಿಷ್ಕೃತ ಅಂದಾಜು ವೆಚ್ಚದಲ್ಲಿ ರಚಿಸುವ ಯೋಜನೆಗೆ ರಾಜ್ಯ ಸರ್ಕಾರ ಶುಕ್ರವಾರ ಅನುಮೋದನೆ ನೀಡಿದೆ.

ಒಟ್ಟು 3,546 ಎಕರೆ 12 ಗುಂಟೆಯಲ್ಲಿ ಶಿವರಾಮ ಕಾರಂತ ಬಡಾವಣೆ ನಿರ್ಮಿಸಲು ₹5,337 ಕೋಟಿ ಪರಿಷ್ಕೃತ ಅಂದಾಜಿಗೆ ಅನುಮೋದನೆ ನೀಡಲಾಗಿದೆ. ಈ ಯೋಜನೆ ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ಮಾಡಬೇಕಿದ್ದು, ಕಾಲಕಾಲಕ್ಕೆ ನ್ಯಾಯಾಲಯ ನೀಡುವ ನಿರ್ದೇಶನಗಳನ್ನು ಪಾಲಿಸಬೇಕು ಎಂದು ಸೂಚಿಸಲಾಗಿದೆ.

ಸರ್ಕಾರ ವಿಧಿಸಿರುವ ಷರತ್ತುಗಳಿಗೆ ಒಳಪಟ್ಟು, ಪ್ರಾಧಿಕಾರದ ಸಭೆಯಲ್ಲಿ ಅನುಮೋದನೆ ಪಡೆದು ಯೋಜನೆ ಅನುಷ್ಠಾನಗೊಳಿಸಬೇಕು. ಈ ಯೋಜನೆಗೆ ಸರ್ಕಾರ ಈಗಾಗಲೇ ಮಂಜೂರು ನೀಡಿದೆ. ಹೀಗಾಗಿ ಪ್ರಾಧಿಕಾರ ಸಭೆಯ ಅನುಮೋದನೆ ಪಡೆದು ಟೆಂಡರ್‌ಗಳನ್ನು ಆಹ್ವಾನಿಸಬಹುದು.

ಬಡಾವಣೆ ರಚನೆ ಯೋಜನೆಯನ್ನು ನಿರ್ದಿಷ್ಟಪಡಿಸಿರುವ ಕಾಲಮಿತಿಯಲ್ಲಿ ಪೂರ್ಣಗೊಳಿಸುವುದನ್ನು ಖಚಿತಪಡಿಸಿಕೊಂಡು ಅನುಷ್ಠಾನಕ್ಕೆ ತರಬೇಕು. ಒಟ್ಟಾರೆ ಪ್ರದೇಶದ ಶೇ 45ರಷ್ಟನ್ನು ಉದ್ಯಾನ, ನಾಗರಿಕ ಸೌಲಭ್ಯ ಮತ್ತು ರಸ್ತೆಗಾಗಿ ಮೀಸಲಿಡಬೇಕು. ಬಿಡಿಎಗೆ ಶೇ 60 ಮತ್ತು ಭೂಮಾಲೀಕರಿಗೆ ಶೇ 40ರಷ್ಟು ಅಭಿವೃದ್ಧಿಪಡಿಸಿದ ಪ್ರದೇಶವನ್ನು ಹಂಚಿಕೆ ಮಾಡಬೇಕು.

ಹಾರೋಹಳ್ಳಿ, ಕಾಳತಿಮ್ಮನಹಳ್ಳಿ ಹಾಗೂ ಲಕ್ಷ್ಮಿಪುರ ಗ್ರಾಮಗಳಲ್ಲಿ ಸುಮಾರು 200 ಎಕರೆ ಪ್ರದೇಶವನ್ನು ವಸತಿ ಹಾಗೂ ವಾಣಿಜ್ಯ ಕಟ್ಟಡಗಳನ್ನು ಟೌನ್‌ಶಿಪ್ ಅಭಿವೃದ್ಧಿಗೆ ಗುರುತಿಸಲಾಗಿದೆ. ಸುಪ್ರೀಂ ಕೋರ್ಟ್ 150 ಎಕರೆ ಪ್ರದೇಶವನ್ನು ರಾಜೀವ್‌ಗಾಂಧಿ ವಸತಿ ನಿಗಮ ನಿಯಮಿತಕ್ಕೆ ಹಸ್ತಾಂತರಿಸಲು ನಿರ್ದೇಶಿಸಿದೆ. ಬಿಡಿಎ ಅಭಿವೃದ್ಧಿಪಡಿಸಿದ ವಸತಿ ಯೋಜನೆಗಳಲ್ಲಿ ಮಾರಾಟವಾಗದೇ ಹಲವಾರು ವಸತಿ ಗೃಹಗಳು ಉಳಿದಿವೆ. ಆದ್ದರಿಂದ ವಸತಿ ಮತ್ತು ವಾಣಿಜ್ಯ ಉದ್ದೇಶಕ್ಕೆ ಪ್ರತ್ಯೇಕ ಜಮೀನು ಮೀಸಲಿಡುವುದನ್ನು ಪರಿಶೀಲಿಸಬೇಕು.

ಐಐಎಸ್ಸಿ, ಲೋಕೋಪಯೋಗಿ ಇಲಾಖೆ ಹಾಗೂ ತಜ್ಞರೊಂದಿಗೆ ಬಿಡಿಎ ಅಧಿಕಾರಿಗಳು ತಾಂತ್ರಿಕ ಸಮಿತಿ ರಚಿಸಿ ಟೆಂಡರ್ ಪರಿಶೀಲಿಸಬೇಕು. ಪ್ರಾಧಿಕಾರದ ಶಿಫಾರಸಿನೊಂದಿಗೆ ಸರ್ಕಾರದ ಅನುಮೋದನೆಗೆ ಕಳುಹಿಸಬೇಕು. ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು, ಕಾರ್ಯದರ್ಶಿ, ಆರ್ಥಿಕ ಇಲಾಖೆ ಅಧಿಕಾರಿಗಳನ್ನು ಒಳಗೊಂಡ ಸಮಿತಿಯಿಂದ ಅಂತಿಮ ಅನುಮೋದನೆ ಪಡೆಯಬೇಕು ಎಂದು ಸರ್ಕಾರ ಶುಕ್ರವಾರ ಹೊರಡಿಸಿರುವ ಆದೇಶದಲ್ಲಿ ಷರತ್ತು ವಿಧಿಸಿದೆ.

**ಸುಪ್ರೀಂ ಕೋರ್ಟ್ ಸೂಚನೆ**

ಶಿವರಾಮ ಕಾರಂತ ಬಡಾವಣೆಗೆ ಸಂಬಂಧಿಸಿದಂತೆ ಆಡಳಿತಾತ್ಮಕ ಅನುಮೋದನೆ ನೀಡಲು ಸುಪ್ರೀಂ ಕೋರ್ಟ್ ಆದೇಶ ನೀಡಿತ್ತು. 15 ದಿನಗಳೊಳಗೆ ಅನುಮೋದನೆ ನೀಡಲು ಸೂಚಿಸಿತ್ತು. ಮೇ 6ರಂದು ಬಿಡಿಎ ವಾಸ್ತವ ವರದಿ ಸಲ್ಲಿಸಿ ಸರ್ಕಾರದ ಆಡಳಿತಾತ್ಮಕ ಅನುಮೋದನೆ ದೊರೆತ ಮೇಲೆ ಹೊಸ ಟೆಂಡರ್ ಕರೆಯಲಾಗುತ್ತದೆ ಎಂದು ಹೇಳಿತ್ತು. ಅವರಿಗೆ ಏಕೆ ಸರ್ಕಾರ ಆಡಳಿತಾತ್ಮಕ ಅನುಮೋದನೆ ನೀಡಿಲ್ಲ ಎಂದು ಸುಪ್ರೀಂ ಕೋರ್ಟ್ ಈ ಹಂತದಲ್ಲಿ ಪ್ರಶ್ನಿಸಿತ್ತು. ಇನ್ನೂ ತಡ ಮಾಡಿದರೆ ಸುಪ್ರೀಂ ಕೋರ್ಟ್ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರಿಗೆ ಸಮನ್ಸ್ ನೀಡಬೇಕಾಗುತ್ತದೆ ಎಂದು ಕಾನೂನು ಘಟಕ, ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರಿಗೆ ಇ–ಮೇಲ್ ಮೂಲಕ ತಿಳಿಸಿತ್ತು. ಈ ಹಿನ್ನೆಲೆಯಲ್ಲಿ ಶಿವರಾಮಕಾರಂತ ಬಡಾವಣೆ ರಚಿಸಲು ಸರ್ಕಾರ ಆಡಳಿತಾತ್ಮಕ ಅನುಮೋದನೆ ನೀಡಿದೆ.

## ಸುದ್ದಿ 2 ನಿಮಿಷ

### ಕೆಪಿಸಿಸಿ 'ವಾರ್ ರೂಮ್'ಗೆ ಸಸಿಕಾಂತ್ ಸೆಂಥಿಲ್ ಸಾರಥ್ಯ



**ಬೆಂಗಳೂರು:** ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಗೆ ಪಕ್ಷದ ಪರವಾಗಿ ರಾಜಕೀಯ ತಂತ್ರಗಾರಿಕೆ ರೂಪಿಸಲಿರುವ ಕೆಪಿಸಿಸಿ 'ವಾರ್ ರೂಮ್' ಅಧ್ಯಕ್ಷರನ್ನಾಗಿ ಮಾಜಿ ಐಎಎಸ್ ಅಧಿಕಾರಿ ಸಸಿಕಾಂತ್ ಸೆಂಥಿಲ್ ಅವರನ್ನು ನೇಮಿಸಿ ಎಐಸಿಸಿ ಆದೇಶ ಹೊರಡಿಸಿದೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಗುರುವಾರ ಈ ನೇಮಕಾತಿ ಆದೇಶ ಹೊರಡಿಸಿದ್ದಾರೆ. ಚುನಾವಣಾ ತಂತ್ರಗಾರಿಕೆಗೆ ಸಂಬಂಧಿಸಿದಂತೆ ಸಂಪೂರ್ಣ ಉಸ್ತುವಾರಿಯಾಗಿ ಚುನಾವಣಾ ತಂತ್ರಗಾರ ಸುನೀಲ್ ಕನುಗೋಲು ಅವರೇ ಮುಂದುವರಿಯಲಿದ್ದಾರೆ ಎಂದು ತಿಳಿಸಿದ್ದಾರೆ.

'ವಾರ್ ರೂಮ್'ನ ದೈನಂದಿನ ಚಟುವಟಿಕೆಗಳನ್ನು ಸಂಯೋಜಿಸುವ ಜವಾಬ್ದಾರಿಯನ್ನು ಕೆಪಿಸಿಸಿ ಉಪಾಧ್ಯಕ್ಷ ಸೂರಜ್ ಹೆಗ್ಡೆ ಮತ್ತು ಪ್ರಧಾನ ಕಾರ್ಯದರ್ಶಿ ಮೆಹ್ರೋಜ್ ಖಾನ್ ಅವರಿಗೆ ನೀಡಲಾಗಿದೆ.

### ಕೆಪಿಸಿಸಿ ಮಾಧ್ಯಮ ಸಮಿತಿಗೆ ಪ್ರಿಯಾಂಕ್ ಖರ್ಗೆ ಅಧ್ಯಕ್ಷ

**ಬೆಂಗಳೂರು:** ಕೆಪಿಸಿಸಿ ಮಾಧ್ಯಮ ಮತ್ತು ಸಾಮಾಜಿಕ ಮಾಧ್ಯಮ ಸಮಿತಿಯನ್ನು ಪುನರ್‌ರಚಿಸಿದ್ದು, ಶಾಸಕ ಪ್ರಿಯಾಂಕ್ ಖರ್ಗೆ ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಸಹ ಅಧ್ಯಕ್ಷರಾಗಿ ರಾಜ್ಯಸಭೆ ಚುನಾವಣೆಯ ಪರಾಜಿತ ಅಭ್ಯರ್ಥಿ ಮನ್ಸೂರ್ ಅಲಿ ಖಾನ್, ಮುಖ್ಯ ವಕ್ತಾರ ಮತ್ತು ಸಮಿತಿಯ ಸಂಚಾಲಕರನ್ನಾಗಿ ವಿಧಾನ ಪರಿಷತ್ ಸದಸ್ಯ ನಾಗರಾಜ್ ಯಾದವ್, ಉಪಾಧ್ಯಕ್ಷರನ್ನಾಗಿ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮತ್ತು ವಿಧಾನ ಪರಿಷತ್‌ನ ಮಾಜಿ ಸದಸ್ಯ ರಮೇಶ್ ಬಾಬು ಅವರನ್ನು ನೇಮಕ ಮಾಡಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಗುರುವಾರ ಆದೇಶ ಹೊರಡಿಸಿದ್ದಾರೆ.

ಮಂಗಳೂರಿನ ಲಾವಣ್ಯಾ ಬಲ್ಲಾಳ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕವಿತಾ ರೆಡ್ಡಿ, ಡಾ. ನಾಗಲಕ್ಷ್ಮಿ ಮತ್ತು ಮಾಜಿ ಶಾಸಕ ಮಂಚನಹಳ್ಳಿ ಮಹದೇವ್ ಅವರ ಮಗಳು ಐಶ್ವರ್ಯಾ ಮಹದೇವ್ ಅವರನ್ನು ವಕ್ತಾರರನ್ನಾಗಿ ನೇಮಿಸಲಾಗಿದೆ.

## 'ವಾರ್ಡ್‌ಗೆ ಪುನೀತ್ ಹೆಸರಿಡಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಜೈಮಾರುತಿ ನಗರ ಅಥವಾ ಕಾವೇರಿ ನಗರ ವಾರ್ಡ್‌ಗೆ ಡಾ.ಪುನೀತ್ ರಾಜ್‌ಕುಮಾರ್ ಹೆಸರಿಡುವಂತೆ 50ಕ್ಕೂ ಹೆಚ್ಚು ಸಂಘ–ಸಂಸ್ಥೆಗಳು ನಗರಾಭಿವೃದ್ಧಿ ಇಲಾಖೆಗೆ ಮನವಿ ಸಲ್ಲಿಸಿವೆ.

ಪಾಲಿಕೆಯ ವಾರ್ಡ್‌ಗಳ ಸಂಖ್ಯೆಯನ್ನು 198ರಿಂದ 243ಕ್ಕೆ ಹೆಚ್ಚಳ ಮಾಡಿ ಕ್ಷೇತ್ರಗಳನ್ನು ಮರುವಿಂಗಡಣೆ ಮಾಡಿರುವ ಸರ್ಕಾರ, ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಿತ್ತು.

ಈ ವೇಳೆ ಚಾಲುಕ್ಯ ಡಾ.ರಾಜ್ ಕುಮಾರ್ ಪ್ರತಿಮೆ ಪ್ರತಿಷ್ಠಾಪನಾ ಟ್ರಸ್ಟ್, ಯುವಜನ ಜಾಗೃತಿ ವೇದಿಕೆ, ನಾಡ ಸೇನಾನಿ ಕೆಂಪೇಗೌಡ ಸೇವಾ ಟ್ರಸ್ಟ್, ಕರ್ನಾಟಕ ರಕ್ಷಣಾ ವೇದಿಕೆ, ಅಖಂಡ ಭೈರವ ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಅಭಿಮಾನಿಗಳ ಕೇಂದ್ರ ಸಮಿತಿ, ಏಕದಂತ ಗೆಳೆಯರ ಬಳಗ, ವಿನಾಯಕ ಅಪ್ಪು ಗೆಳೆಯರ ಬಳಗ, ಗೌರಿಪುತ್ರ ಗೆಳೆಯರ ಬಳಗ, ಸಮೃದ್ಧಿ ಫೌಂಡೇಷನ್, ಭುವನೇಶ್ವರಿ ಕಸ್ತೂರಿ ಕನ್ನಡ ವೇದಿಕೆ, ಅಪ್ಪು ಯೂತ್ ಬ್ರಿಗೇಡ್, ಅಖಿಲ ಕರ್ನಾಟಕ ಡಾ.ರಾಜ್‌ಕುಮಾರ್ ಅಭಿಮಾನಿ ಸಂಘಗಳ ಒಕ್ಕೂಟ, ಕರ್ನಾಟಕ ರತ್ನ ಡಾ.ಪುನೀತ್‌ರಾಜ್ ಕುಮಾರ್ ಸೇವಾ ಟ್ರಸ್ಟ್ ಸೇರಿ ಹಲವು ಸಂಘಗಳು ಮನವಿ ಸಲ್ಲಿಸಿವೆ.

ಪುನೀತ್‌ರಾಜ್‌ಕುಮಾರ್ ಸಮಾಧಿ ಇರುವ ಕಂಠೀರವ ಸ್ಟುಡಿಯೊ ಕೂಡ ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿದೆ. ಆದ್ದರಿಂದ ವಾರ್ಡ್ ಸಂಖ್ಯೆ 54(ಜೈಮಾರುತಿನಗರ) ಅಥವಾ 55ನೇ ವಾರ್ಡ್‌ಗೆ(ಕಾವೇರಿನಗರ) ಪುನೀತ್ ರಾಜ್‌ಕುಮಾರ್ ಅವರ ಹೆಸರಿಡಬೇಕು ಎಂದು ಮನವಿ ಮಾಡಿವೆ.

## ಬೆಂಗಳೂರು ರೇಸ್

### ಡೆಲ್‌ಮಾರ್ ಗೆಲ್ಲುವ ನಿರೀಕ್ಷೆ

**ಜಸ್ಟೀಸ್ ಪಿ.ಮೇಡಪ್ಪ ಮೆಮೋರಿಯಲ್ ಟ್ರೋಫಿಯ ಮೊದಲನೇ ಡಿವಿಷನ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಡೆಲ್‌ಮಾರ್ ಈ ರೇಸ್ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:**

1ನೇ ರೇಸ್: ಎಲೆಕ್ಟ್ರಿಕ್ ಬ್ಲೂ 3, ಟೊರೆನೆರೊ 7, ಸ್ಟ್ರೈಕಿಂಗ್ ಮೆಮೋರಿ 2
2ನೇ ರೇಸ್: ಅಲ್ವಾಮಾಂಟೆ 1, ಎಕೊ ಫ್ರೆಂಡ್ಲಿ 2, ಮೆಸರ್ಸ್ ಥ್ಯಾಚರ್ 3
3ನೇ ರೇಸ್: ಮಾಂಟೆಲಿನ 8, ಕೆಪ್ರಿಯಾಟ 4, ಸೀಕ್ರೆಟ್ ಲೇಡಿ 10
4ನೇ ರೇಸ್; ಡೆಲ್‌ಮಾರ್ 8, ಕರ್ನಲ್ ಹಾರ್ಟ 1, ತೌಸಂಡ್ ವರ್ಡ್ಸ್ 3
5ನೇ ರೇಸ್: ಬ್ಯಾಂಕ್ಸಿ 5, ಸ್ಟಾರ್ ಕೊಮೆಟ್ 2, ಮೆಷರ್ ಆಫ್ ಟೈಮ್ 1
6ನೇ ರೇಸ್: ವಿಂಗ್ಸ್ ಆಫ್ ಡಿಸೈರ್ 5, ಅನ್‌ಯೀಲ್ಡಿಂಗ್ 4, ದಿ ಸ್ಟ್ರೆಂಥ್ 7
7ನೇ ರೇಸ್: ಡ್ರಾಗನ್ಸ್ ಗೋಲ್ಡ್ 2, ಬೆಲ್ವೆಡಿರ್ 7, ಸ್ಮಿತ್‌ಸೋನಿಯನ್ 3

**ಉತ್ತಮ ಬೆಟ್: ಡ್ರಾಗನ್ಸ್ ಗೋಲ್ಡ್**

| ಜಾಕ್‌ಪಾಟ್ | 1ನೇ ಟ್ರಿಬಲ್ | 2ನೇ ಟ್ರಿಬಲ್ |
|---|---|---|
| 3,4,5,6,7 | 2,3,4 | 5,6,7 |

ಐಎಎಸ್–ಐಪಿಎಸ್ ವಲಯದಲ್ಲಿ ಭಿನ್ನ ಅಭಿಪ್ರಾಯ

## ಅಧಿಕಾರಿಗಳ ಬಂಧನ: ಅಸಮಾಧಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಐಎಎಸ್ ಅಧಿಕಾರಿ ಜೆ.ಮಂಜುನಾಥ್ ಮತ್ತು ಐಪಿಎಸ್ ಅಧಿಕಾರಿ ಅಮ್ರಿತ್ ಪೌಲ್ ಅವರನ್ನು ಪ್ರತ್ಯೇಕ ಪ್ರಕರಣಗಳಲ್ಲಿ ಬಂಧಿಸಿರುವುದು ರಾಜ್ಯ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳ ವಲಯದಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ.

ಕೆಲವು ಅಧಿಕಾರಿಗಳು ಬಂಧನದ ಕ್ರಮವನ್ನು 'ಕಠಿಣ ಕ್ರಮ' ಎಂದು ಭಾವಿಸಿದ್ದರೆ, ಇನ್ನು ಕೆಲವರು 'ತಪ್ಪುಗಳನ್ನು ಸರಿಪಡಿಸುವ ಕ್ರಮ' ಎಂದೂ ಅಭಿಪ್ರಾಯಪಟ್ಟಿದ್ದಾರೆ.

ಮಂಜುನಾಥ್ ಅವರ ಬಂಧನದ ಬಗ್ಗೆ ಐಎಎಸ್ ವಲಯದಲ್ಲಿ ಅಸಮಾಧಾನ ಮಡುಗಟ್ಟಿದೆ. ಕೆಲವು ದಿನಗಳ ಹಿಂದೆ ಐಎಎಸ್ ಅಧಿಕಾರಿಗಳ ನಿಯೋಗವು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ, ಬೆಂಗಳೂರು ನಗರ ಜಿಲ್ಲಾಧಿಕಾರಿಯನ್ನು ಬಂಧಿಸಿದ ರೀತಿಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ ಎಂದು ಮೂಲಗಳು ಹೇಳಿವೆ.

'ಈ ಬಂಧನವು ನಮ್ಮನ್ನು ದುರ್ಬಲಗೊಳಿಸಿದೆ ಮತ್ತು ಹೈಕೋರ್ಟ್ ಎಸಿಬಿಯ ಮೇಲೆ ಕೆಂಡ ಕಾರಿರುವುದರಿಂದ ನಾವು ಒತ್ತಡಕ್ಕೆ ಸಿಲುಕಿದ್ದೇವೆ' ಎಂದು ಅವರು ಮುಖ್ಯಮಂತ್ರಿ ಬಳಿ ಅಳಲು ತೋಡಿಕೊಂಡಿದ್ದಾರೆ.

ಹೆಸರು ಬಹಿರಂಗ ಪಡಿಸಲು ಬಯಸದ ಅಧಿಕಾರಿಯೊಬ್ಬರು 'ಪ್ರಜಾವಾಣಿ' ಜತೆ ಮಾತನಾಡಿ, 'ಉದಾಹರಣೆಗೆ ನನಗೆ ಕೊಡಲೆಂದು ಲಂಚ ತೆಗೆದುಕೊಂಡಿರುವುದಾಗಿ ನನ್ನದೇ ಕಚೇರಿಯ ಜವಾನ ಹೇಳಿದರೆ, ಆ ಹೇಳಿಕೆ ಆಧರಿಸಿ ನನ್ನನ್ನು ಬಂಧಿಸಬಹುದೇ' ಎಂದು ಪ್ರಶ್ನಿಸಿದರು. ಈ ವಿಚಾರವಾಗಿ ಹಲವು ಅಧಿಕಾರಿಗಳನ್ನು ಮಾತನಾಡಿಸಿದಾಗ, 'ಈ ಬೆಳವಣಿಗೆ ಅತ್ಯಂತ ಕಳವಳಕಾರಿ. ನಾವು ಈಗ ಯಾರದ್ದೇ ಮೇಲೆ ಕ್ರಮ ತೆಗೆದುಕೊಳ್ಳಲು ಹೋದರೆ ನಮ್ಮನ್ನೇ ಸಿಕ್ಕಿಸಿ ಹಾಕುವ ಸಾಧ್ಯತೆ ಇದೆ' ಎಂದು ತಿಳಿಸಿದರು.

'ಹಿಂದೆ ಐಎಎಸ್ ಎಂದರೆ 'ನಾನು ಸುರಕ್ಷಿತ' ಎಂಬ ಅರ್ಥದಲ್ಲಿ ಮಾತನಾಡುತ್ತಿದ್ದರು. ಈಗ ಮಂಜುನಾಥ್ ಬಂಧನದ ರೀತಿ ಐಎಎಸ್ ಅಧಿಕಾರಿಗಳ ಸ್ಥಾನ ಮತ್ತು ಅವರು ತೆಗೆದುಕೊಳ್ಳುವ ನಿರ್ಣಯಗಳನ್ನೂ ದುರ್ಬಲಗೊಳಿಸಿದೆ' ಎಂದ ಅವರು ಹೇಳಿದರು.

'ಸುಪ್ರಿಂ ಕೋರ್ಟ್ ಮಾರ್ಗಸೂಚಿಯ ಪ್ರಕಾರ, ಯಾವುದೇ ವ್ಯಕ್ತಿ ಜಾಮೀನುರಹಿತ ಅಪರಾಧ ಎಸಗಿದ್ದರೆ, ಒಬ್ಬ ಅಪರಾಧಿ ವಿಮಾನದ ಮೂಲಕ ಪರಾರಿಯಾಗುವ ಅಥವಾ ಸಾಕ್ಷ್ಯವನ್ನು ನಾಶಪಡಿಸುವ ಸಾಧ್ಯತೆ ಇದ್ದಾಗ ಬಂಧಿಸಬಹುದು. ಮಂಜುನಾಥ ಇಂತಹ ಯಾವುದೇ ಅಪಾಯವನ್ನೂ ಒಡ್ಡಿಲ್ಲ' ಎಂದರು.

ಮತ್ತೊಬ್ಬರು ಅಧಿಕಾರಿ ಮಾತನಾಡಿ, 'ಒಂದು ವೇಳೆ ಮಂಜುನಾಥ ಅವರು ಆರೋಪಿಯಾಗಿದ್ದರೂ ಬಂಧಿಸುವ ಅಗತ್ಯವಿರಲಿಲ್ಲ. ಯಾವುದೇ ವ್ಯಕ್ತಿಯ ಮೇಲಿನ ಆರೋಪ ಸಾಬೀತಾಗುವವರೆಗೂ ಆತನನ್ನು ಮುಗ್ಧ ಎಂದೇ ಪರಿಗಣಿಸಬೇಕಾಗುತ್ತದೆ' ಎಂದು ಹೇಳಿದರು.

ಡಿಜಿಪಿ ಅಮ್ರಿತ್ ಪೌಲ್ ಅವರ ಬಂಧನದ ಬಗ್ಗೆ ಐಪಿಎಸ್ ಅಧಿಕಾರಿಗಳು ಯಾರೂ ತುಟ್ಟಿ ಬಿಚ್ಚುತ್ತಿಲ್ಲ. ಆದರೆ ಕೆಲವು ಅಧಿಕಾರಿಗಳು ವೈಯಕ್ತಿಕ ಮಟ್ಟದಲ್ಲಿ ಅನುಕಂಪ ವ್ಯಕ್ತಪಡಿಸಿದ್ದಾರೆ. ಆದರೆ, ಬಂಧನ ಇತರ ಅಧಿಕಾರಿಗಳಿಗೂ ಎಚ್ಚರಿಕೆ ಸಂದೇಶ ರವಾನಿಸಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

'ವ್ಯವಸ್ಥೆಯಲ್ಲಿ ತಪ್ಪು ಸರಿಪಡಿಸುವ ಕೆಲಸ ಅಗತ್ಯವಾಗಿ ಆಗಬೇಕು. ಹಲವು ಚಟುವಟಿಕೆಗಳಲ್ಲಿ ಅಧಿಕಾರಿಗಳಿಂದ ಸಾಕಷ್ಟು ಹಸ್ತಕ್ಷೇಪಗಳು ನಡೆಯುತ್ತಿವೆ. ಇದಕ್ಕೆ ಕಡಿವಾಣವೇ ಇಲ್ಲವಾಗಿದೆ. ವೈಯಕ್ತಿವಾಗಿ ಬೇಸರ ಎನಿಸಿದರೂ, ವ್ಯವಸ್ಥೆಯ ದೃಷ್ಟಿಯಿಂದ ಇಂತಹ ಕ್ರಮ ಅಗತ್ಯ' ಎಂದು ಐಪಿಎಸ್ ಅಧಿಕಾರಿಯೊಬ್ಬರು ತಿಳಿಸಿದರು.

'ಐಪಿಎಸ್ ಅಧಿಕಾರಿಯನ್ನು ಬಲಿಪಶು ಮಾಡಬಾರದು. ಈ ಹಗರಣದಲ್ಲಿ ಭಾಗಿಯಾಗಿರುವ ಎಲ್ಲರ ವಿರುದ್ಧವೂ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ, ಪೌಲ್ ಏಕಾಂಗಿಯಾಗಿ ಈ ಕೆಲಸ ಮಾಡಿರಲಿಕ್ಕಿಲ್ಲ. ಸರ್ಕಾರದಲ್ಲಿ ಕೆಲವರ ಗಮನಕ್ಕೆ ಬಾರದೇ ಇವೆಲ್ಲ ನಡೆದಿಲ್ಲ' ಎಂದು ಮತ್ತೊಬ್ಬ ಅಧಿಕಾರಿ ಅಭಿಪ್ರಾಯಪಟ್ಟರು.

## ಆಕಾರ್ ಪಟೇಲ್‌ಗೆ ₹10 ಕೋಟಿ ದಂಡ ವಿಧಿಸಿದ ಇ.ಡಿ

**ನವದೆಹಲಿ:** ವಿದೇಶಿ ವಿನಿಮಯ ಕಾಯ್ದೆ ಉಲ್ಲಂಘನೆಗಾಗಿ ಅಮ್ನೆಸ್ಟಿ ಇಂಡಿಯಾ ಇಂಟರ್‌ನ್ಯಾಷನಲ್ ಪ್ರೈವೇಟ್ ಲಿಮಿಟೆಡ್‌ಗೆ (ಎಐಐಪಿಎಲ್) ₹ 51.72 ಕೋಟಿ ಹಾಗೂ ಸಂಸ್ಥೆಯ ಮಾಜಿ ಸಿಇಒ ಆಕಾರ್ ಪಟೇಲ್ ಅವರಿಗೆ ₹ 10 ಕೋಟಿ ದಂಡ ವಿಧಿಸಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಶುಕ್ರವಾರ ಹೇಳಿದೆ.

ಬ್ರಿಟನ್ ಮೂಲದ ಅಮ್ನೆಸ್ಟಿ ಇಂಟರ್‌ನ್ಯಾಷನಲ್, ಭಾರತದಲ್ಲಿನ ತನ್ನ ಅಂಗಸಂಸ್ಥೆಗಳ ಮೂಲಕ ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಮಾರ್ಗದಲ್ಲಿ ಭಾರಿ ಮೊತ್ತದ ದೇಣಿಗೆಗಳನ್ನು ನೀಡುತ್ತಿದೆ. ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಯಿಂದ (ಎಫ್‌ಸಿಆರ್‌ಎ) ತಪ್ಪಿಸಿಕೊಳ್ಳಲು ಸಂಸ್ಥೆಯು ಈ ರೀತಿ ಮಾಡುತ್ತಿದ್ದುದು ಪತ್ತೆಯಾದ ಹಿನ್ನೆಲೆಯಲ್ಲಿ ದಂಡ ವಿಧಿಸಲಾಗಿದೆ ಎಂದೂ ಇ.ಡಿ ತಿಳಿಸಿದೆ.

ಎಫ್‌ಸಿಆರ್‌ಎ ಅಡಿ ಅನುಮತಿ ಪಡೆಯದೆಯೇ, ಭಾರತದಲ್ಲಿನ ತನ್ನ ಕೆಲ ಸಂಸ್ಥೆಗಳಿಗೆ ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಹಣ ವರ್ಗಾವಣೆ ಮಾಡಿದೆ. ದೇಶದಲ್ಲಿ ತನ್ನ ಚಟುವಟಿಕೆಗಳನ್ನು ವಿಸ್ತರಿಸುವ ಸಲುವಾಗಿ ಈ ಹಣವನ್ನು ಬಳಸಿಕೊಳ್ಳಲಾಗುತ್ತಿತ್ತು ಎಂದು ಆರೋಪಿಸಲಾಗಿದೆ.

ಎಫ್‌ಸಿಆರ್‌ಎ ಅಡಿ ವಿದೇಶಿ ದೇಣಿಗೆಗಳನ್ನು ಸಂಗ್ರಹಿಸುವುದಕ್ಕಾಗಿ ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಇಂಡಿಯಾ ಫೌಂಡೇಷನ್ ಟ್ರಸ್ಟ್ (ಎಐಐಎಫ್‌ಟಿ) ಹಾಗೂ ಇತರ ಟ್ರಸ್ಟ್‌ಗಳಿಗೆ ಗೃಹ ಸಚಿವಾಲಯ ಪೂರ್ವಾನುಮತಿ ನೀಡಿರಲಿಲ್ಲ ಎಂದು ಇ.ಡಿ ಹೇಳಿದೆ.

## ಚಿತ್ರಾವಳಿ



ರಾಮಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ನಗರದಲ್ಲಿ ಹಮ್ಮಿಕೊಂಡ ಬೀಳ್ಕೊಡುಗೆ ಸಮಾರಂಭದಲ್ಲಿ ಅಂತಿಮ ವರ್ಷದಲ್ಲಿ ಉತ್ತಮ ಶೈಕ್ಷಣಿಕ ಸಾಧನೆ ಮಾಡಿದ ಖೇತನ್ ಅವರಿಗೆ ಸಂಸ್ಥೆಯ ನಿರ್ದೇಶಕ ಎಂ.ಆರ್. ಸೀತಾರಾಮ್ ಅವರು ಪ್ರಮಾಣಪತ್ರ ಪ್ರದಾನ ಮಾಡಿದರು. ಸಂಸ್ಥೆಯ ಪ್ರಾಂಶುಪಾಲ ಡಾ.ಎನ್.ವಿ.ಆರ್. ನಾಯ್ಡು, ಹಳೆ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ತಲ್ಲಂ ವೆಂಕಟೇಶ್, ಐಎಎಸ್ ಅಧಿಕಾರಿ ಕೆ.ಆರ್. ನಂದಿನಿ, ಸಂಸ್ಥೆಯ ನಿರ್ದೇಶಕ ಎಂ.ಆರ್. ರಾಮಯ್ಯ ಹಾಗೂ ರಾಮಯ್ಯ ಸಮೂಹ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಬಿ.ಎಸ್. ರಾಮಪ್ರಸಾದ್ ಇದ್ದಾರೆ



ರಾಜ್ಯಸಭೆ ಸದಸ್ಯರಾಗಿ ನಾಮಕರಣಗೊಂಡಿರುವ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನಗರದಲ್ಲಿ ಶುಕ್ರವಾರ ಅಭಿನಂದಿಸಿದರು. ಮೇಲ್ಮನೆ ಸದಸ್ಯ ದಿನೇಶ್ ಗೂಳಿಗೌಡ ಜತೆಗಿದ್ದರು

## ಫೇಸ್‌ಬುಕ್: 'ಬಿಜೆಪಿ ವಿರುದ್ಧದ ಪೋಸ್ಟ್‌ಗಳಿಗೆ ನಿರ್ಬಂಧ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಾಮಾಜಿಕ ಜಾಲತಾಣಗಳ ಕಾರ್ಯವೈಖರಿ ಬಗ್ಗೆ ಪ್ರಗತಿಪರರು, ರಾಜಕೀಯ ವಿಶ್ಲೇಷಕರು ಹಾಗೂ ಪತ್ರಕರ್ತರು ಅನುಮಾನ ವ್ಯಕ್ತಪಡಿಸಿದ್ದಾರೆ. ಆಡಳಿತ ಪಕ್ಷ ಅಥವಾ ಆಡಳಿತದ ಮೂಗುದಾರ ಹಿಡಿದಿರುವವರನ್ನು ಟೀಕಿಸಲು ಬಳಕೆಯಾಗುತ್ತಿರುವ ಕೆಲವು ನಿರ್ದಿಷ್ಟ ಪದಗಳಿರುವ ಪೋಸ್ಟ್‌ಗಳನ್ನು ಫೇಸ್‌ಬುಕ್ ಜಾಲತಾಣ ನಿರ್ಬಂಧಿಸುತ್ತಿದೆ ಎಂದು ದೂರಿದ್ದಾರೆ.

ಫೇಸ್‌ಬುಕ್ ತನ್ನ ಸಮುದಾಯ ಮಾನದಂಡಕ್ಕೆ ಧಕ್ಕೆ ತರುತ್ತಿದೆ ಎಂಬ ಕಾರಣ ನೀಡಿ ಪೋಸ್ಟ್‌ಗಳನ್ನೆಲ್ಲಾ ತೆಗೆದು ಹಾಕುವ ಸಂದೇಶ ನೀಡುತ್ತಿದೆ ಎಂದು ಲೇಖಕ ಸುರೇಶ ಕಂಜರ್ಪಣೆ ಅಸಮಾಧಾನ ಹೊರಹಾಕಿದ್ದಾರೆ.

ಫೇಸ್‌ಬುಕ್‌ನಲ್ಲಿ, ಬಿಜೆಪಿ ಮತ್ತು ಅದರ ಆಡಳಿತದ ಕುರಿತ ಪೋಸ್ಟ್‌ಗಳನ್ನೆಲ್ಲ ಹುಡುಕಿ ತೆಗೆದುಹಾಕಲಾಗಿದೆ. ಫೇಸ್‌ಬುಕ್ ಬಿಜೆಪಿಯ ಮತ್ತೊಂದು ಮೋರ್ಚಾ ಎಂಬ ಅನುಮಾನ ಈಗ ನಿಜವಾಗಿದೆ ಅಲ್ಲವೇ? ಎಂದು ಲೇಖಕ ಶಶಿ ಸಂಪಳ್ಳಿ ಅವರು ಹೇಳಿದರು.

ಇದೇ ಮೊದಲ ಬಾರಿಗೆ ಖಾತೆಯನ್ನು ನಿರ್ಬಂಧಿಸುವುದಾಗಿ ಸಂದೇಶಗಳು ಬರುತ್ತಿವೆ ಎಂದು ಸಂಜ್ಯೋತಿ ವಿ.ಕೆ. ಸ್ಕ್ರೀನ್‌ಶಾಟ್ ಶೇರ್ ಮಾಡಿದ್ದಾರೆ.

ದೇವನೂರ ಮಹಾದೇವ ಅವರ 'ಆರ್‌ಎಸ್‌ಎಸ್ ಆಳ ಮತ್ತು ಅಗಲ' ಪುಸ್ತಕವನ್ನು ಫೇಸ್‌ಬುಕ್ ಮೂಲಕ ಹೆಚ್ಚಿನ ಜನರಿಗೆ ತಲುಪಿಸಲು ಪ್ರಯತ್ನಿಸಿದ ಕೆಲವರಿಗೆ ಖಾತೆ ನಿರ್ಬಂಧಿಸುವ ಸಂದೇಶಗಳು ಬಂದಿವೆ ಎನ್ನಲಾಗಿದೆ.

ಫೇಸ್‌ಬುಕ್ ಸಮುದಾಯ ಮಾನದಂಡ ಎನ್ನುವುದರ ನೈಜ ಹೆಸರು ಬಿಜೆಪಿ ಅಥವಾ ಆರೆಸ್ಸೆಸ್ ಸಮುದಾಯ ಮಾನದಂಡ ಆಗಿದೆ ಎಂದು ಪತ್ರಕರ್ತ ಶಶಿಧರ ಹೆಮ್ಮಾಡಿ ದೂರಿದ್ದಾರೆ.

## ಪ್ರಮಾಣವಚನ

**ನವದೆಹಲಿ:** ಕರ್ನಾಟಕದಿಂದ ಆಯ್ಕೆಯಾದ ನಾಲ್ವರು ಸೇರಿದಂತೆ ಒಟ್ಟು 27 ಮಂದಿ ರಾಜ್ಯಸಭಾ ಸದಸ್ಯರಾಗಿ ಶುಕ್ರವಾರ ಪ್ರಮಾಣವಚನ ಸ್ವೀಕರಿಸಿದರು.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಕಾಂಗ್ರೆಸ್ ಸದಸ್ಯ ಜೈರಾಮ್ ರಮೇಶ್ ಇಂಗ್ಲಿಷ್‌ನಲ್ಲಿ, ಬಿಜೆಪಿಯ ಲಹರ್ ಸಿಂಗ್ ಸಿರೊಯಾ ಹಾಗೂ ಜಗ್ಗೇಶ್ ಕನ್ನಡದಲ್ಲಿ ಪ್ರಮಾಣವಚನ ಸ್ವೀಕರಿಸಿದರು.

ರಾಜ್ಯಸಭಾ ಸಭಾಪತಿ ಎಂ. ವೆಂಕಯ್ಯ ನಾಯ್ಡು ಸಮ್ಮುಖದಲ್ಲಿ ಸದಸ್ಯರು ಪ್ರಮಾಣ ವಚನ ಸ್ವೀಕರಿಸಿದರು.

## ಮೇಘಸ್ಫೋಟಕ್ಕೆ 15 ಬಲಿ

ಒಂದನೇ ಪುಟದಿಂದ...

ಜಮ್ಮು–ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರ ಜತೆಗೂ ಪ್ರಧಾನಿ ಮಾತನಾಡಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೂ ಸಿನ್ಹಾ ಅವರಿಂದ ಮಾಹಿತಿ ಪಡೆದುಕೊಂಡಿದ್ದಾರೆ. ತ್ವರಿತ ರಕ್ಷಣಾ ಕಾರ್ಯಾಚರಣೆಗಾಗಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್), ಕೇಂದ್ರ ಮೀಸಲು ಪೊಲೀಸ್ ಪಡೆ, ಗಡಿ ಭದ್ರತಾ ಪಡೆಯ ಸಿಬ್ಬಂದಿ ಕಳುಹಿಸಲಾಗಿದೆ ಎಂದು ಶಾ ಅವರು ಟ್ವೀಟ್ ಮಾಡಿದ್ದಾರೆ. ಯಾತ್ರಿಕರಿಗೆ ಎಲ್ಲ ನೆರವು ನೀಡಲಾಗುವುದು ಶಾ ಹೇಳಿದ್ದಾರೆ.

'ಅವಘಡದಲ್ಲಿ ಗಾಯಗೊಂಡವರನ್ನು ಹೆಲಿಕಾಪ್ಟರ್‌ಗಳ ಮೂಲಕ ಚಿಕಿತ್ಸೆಗೆ ಕರೆತರಲಾಯಿತು. ಪರಿಸ್ಥಿತಿ ನಿಯಂತ್ರಣದಲ್ಲಿದೆ' ಎಂದು ಕಾಶ್ಮೀರ ಪೊಲೀಸ್ ಮಹಾ ನಿರೀಕ್ಷಕ ವಿಜಯ್ ಕುಮಾರ್ ಟ್ವೀಟ್ ಮಾಡಿದ್ದಾರೆ.

ಕೋವಿಡ್‌ನಿಂದಾಗಿ ಎರಡು ವರ್ಷ ಅಮರನಾಥ ಯಾತ್ರೆ ಸ್ಥಗಿತವಾಗಿತ್ತು. ಪ್ರತಿಕೂಲ ಹವಾಮಾನದ ಕಾರಣ ಈ ವಾರದ ಆರಂಭದಲ್ಲಿ ತಾತ್ಕಾಲಿಕವಾಗಿ ಯಾತ್ರೆಯನ್ನು ಸ್ಥಗಿತಗೊಳಿಸಲಾಗಿತ್ತು.

ಈ ವರ್ಷ ಇದುವರೆಗೂ 72 ಸಾವಿರಕ್ಕೂ ಹೆಚ್ಚು ಮಂದಿ ಗುಹೆಯಲ್ಲಿ ಪೂಜೆ ಸಲ್ಲಿಸಿದ್ದಾರೆ. ನಿಗದಿತ ಕಾರ್ಯಕ್ರಮದ ಪ್ರಕಾರ, ರಕ್ಷಾ ಬಂಧನ್ ದಿನವಾದ ಆ. 11ರಂದು ಈ ವರ್ಷದ ಯಾತ್ರೆಯು ಸಮಾಪ್ತಿಯಾಗಬೇಕಿದೆ.

## ಬಿಬಿಎಂಪಿ... ಇಲ್ಲಿವೆ ನೋಡಿ ಫ್ಲೆಕ್ಸ್...

ನೀವು ವಾಸ ಮಾಡುತ್ತಿರುವ ನಗರದ ಸ್ಥಳದಲ್ಲೂ ಫ್ಲೆಕ್ಸ್ ಇದ್ದರೆ ಅದರದ್ದೊಂದು ಫೋಟೊ, ನಿಮ್ಮ ಪೂರ್ಣ ವಿಳಾಸ ಹಾಗೂ ಪಾಸ್‌ಪೋರ್ಟ್ ಅಳತೆಯ ಫೋಟೊ ವಾಟ್ಸ್ ಆ್ಯಪ್ ಮಾಡಿ. ಬಡಾವಣೆಯಲ್ಲಿ ಅಂತಹ ಎಷ್ಟು ಫ್ಲೆಕ್ಸ್‌ಗಳು ಎಲ್ಲೆಲ್ಲಿ ನಿಮ್ಮ ಕಣ್ಣಿಗೆ ಬಿದ್ದಿವೆ ಎಂಬ ಮಾಹಿತಿಯನ್ನೂ ಕಳುಹಿಸಿ. 'ಪ್ರಜಾವಾಣಿ' ಫ್ಲೆಕ್ಸ್ ತೆರವಿಗೆ ಇಂಬುಗೊಡಲು ವೇದಿಕೆ ಕಲ್ಪಿಸಲಿದ್ದು, ಆಯ್ದ ಬರಹಗಳು ಪ್ರಕಟವಾಗಲಿವೆ. 9606038256



ಬಸವೇಶ್ವರ ನಗರದ ಶ್ರೀಗುರು ಸಾಗರ ಹೋಟೆಲ್ ಮುಂಭಾಗದಲ್ಲಿ ಹಾಕಿರುವ ಫ್ಲೆಕ್ಸ್



ಮಾಗಡಿ ಮುಖ್ಯರಸ್ತೆಯ ಹೌಸಿಂಗ್ ಬೋರ್ಡ್ ಜಂಕ್ಷನ್ ಹತ್ತಿರ ರಾರಾಜಿಸುತ್ತಿರುವ ಫ್ಲೆಕ್ಸ್

## ಬ್ರಿಟನ್: ಸ್ಪರ್ಧೆಯಲ್ಲಿ ಸುನಕ್, ಸುವೆಲಾ

**ಲಂಡನ್ (ರಾಯಿಟರ್ಸ್):** ಬ್ರಿಟನ್‌ನ ಕನ್ಸರ್ವೇಟಿವ್ ಪಕ್ಷದ ನಾಯಕತ್ವ ಮತ್ತು ಪ್ರಧಾನಿ ಹುದ್ದೆಯ ಮೇಲೆ ಕಣ್ಣಿಟ್ಟಿರುವ ಪ್ರಮುಖ ಹತ್ತು ನಾಯಕರಲ್ಲಿ ಇಬ್ಬರು ಭಾರತೀಯ ಸಂಜಾತರ ಹೆಸರು ಮುಂಚೂಣಿಯಲ್ಲಿದೆ. ಮಾಜಿ ಹಣಕಾಸು ಸಚಿವ ರಿಷಿ ಸುನಕ್ ಮತ್ತು ಬ್ರಿಟನ್‌ನ ಅಟಾರ್ನಿ ಜನರಲ್ ಸುವೆಲಾ ಬ್ರೇವರ್‌ಮನ್ ಪ್ರಬಲ ಆಕಾಂಕ್ಷಿಗಳಾಗಿದ್ದಾರೆ. 'ಬ್ರಿಟನ್ ಪ್ರಧಾನಿ ಹುದ್ದೆಗೆ ನಾನು ಪ್ರಬಲ ಆಕಾಂಕ್ಷಿ. ನಾಯಕತ್ವದ ಸ್ಪರ್ಧೆಯನ್ನು ಗಂಭೀರವಾಗಿ ತೆಗೆದುಕೊಂಡಿದ್ದೇನೆ' ಎಂದು ರಿಷಿ ಸುನಕ್ ಹೇಳಿದ್ದಾರೆ ಎಂದು 'ಟೈಮ್ಸ್' ವರದಿ ಮಾಡಿದೆ.


ನಿವೃತ್ತ ಶಿಕ್ಷಕ ಶಿವದಾಸನ್ ಪಿಳ್ಳೈ ಅವರಿಂದ ನಿರ್ಮಾಣ

## ದೇವರ ನಾಡಿನಲ್ಲಿ 'ಸಂವಿಧಾನ ಮಂದಿರ'

• ವೀಜಿ ಕಾಸರಗೋಡು

**ಕಾಸರಗೋಡು:** ಕೇರಳವನ್ನು 'ದೇವರ ನಾಡು' ಎಂದು ಹೇಳುವುದು ವಾಡಿಕೆ. ತಿರುವನಂತಪುರದಲ್ಲಿ ನಿವೃತ್ತ ಶಿಕ್ಷಕರೊಬ್ಬರು ಸಂವಿಧಾನ ಮಂದಿರ ನಿರ್ಮಿಸಿದ್ದಾರೆ. ಇಲ್ಲಿನ ಗರ್ಭಗುಡಿಯಲ್ಲಿ ಸಂವಿಧಾನ ಪುಸ್ತಕ ಪೂಜಿಸಲಾಗುತ್ತಿದೆ.

ಸಮಾಜ ವಿಜ್ಞಾನ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಶಿವದಾಸನ್ ಪಿಳ್ಳೈ ಅವರು ವರ್ಷದ ಹಿಂದೆ ಮಂದಿರ ನಿರ್ಮಿಸಿದ್ದಾರೆ. ಮೂರು ಸೆಂಟ್ಸ್ ಜಾಗದಲ್ಲಿರುವ ಮಂದಿರದಲ್ಲಿ ಮಹಾತ್ಮಗಾಂಧಿ, ಸ್ವಾಮಿ ವಿವೇಕಾನಂದ, ಬಿ.ಆರ್.ಅಂಬೇಡ್ಕರ್ ಮತ್ತು ನೊಬೆಲ್ ಪ್ರಶಸ್ತಿ ಪುರಸ್ಕೃತೆ ಮಲಾಲಾ ಯೂಸುಫ್ ಝಾಯಿ ಅವರ ಭಾವಚಿತ್ರಗಳನ್ನು ಪ್ರದರ್ಶಿಸಲಾಗಿದೆ. ಗರ್ಭಗುಡಿಯಲ್ಲಿ ಸಂವಿಧಾನದ ಪೀಠಿಕೆ ಕೆತ್ತಲಾಗಿದೆ.



ತಿರುವನಂತಪುರದಲ್ಲಿ ನಿರ್ಮಿಸಿದ ಸಂವಿಧಾನ ಮಂದಿರ. ನಿವೃತ್ತ ಶಿಕ್ಷಕ ಶಿವದಾಸನ್ ಪಿಳ್ಳೈ ಚಿತ್ರದಲ್ಲಿದ್ದಾರೆ

ದೇವಸ್ಥಾನಕ್ಕೆ ನಿತ್ಯ ಭೇಟಿ ನೀಡುವವರಲ್ಲಿ ಹೆಚ್ಚಿನವರು ವಿದ್ಯಾರ್ಥಿಗಳು. ಇಲ್ಲಿ ಭಕ್ತರಿಗೆ ಪ್ರಸಾದ ವಿತರಣೆಯೂ ಇದೆ. 'ಸಂವಿಧಾನವೇ ಈ ಮನೆಯ ಅಭ್ಯುದಯ' ಎಂಬ ಪೋಸ್ಟರ್ ಅನ್ನು ಪ್ರತಿಯೊಬ್ಬರಿಗೂ ನೀಡಲಾಗುತ್ತದೆ.

'ಸಂವಿಧಾನವೇ ದೇಶದ ಅಡಿಪಾಯ. ಇದು ಸಹೋದರತ್ವ ಮತ್ತು ವೈವಿಧ್ಯದ ಮೂಲ. ದೈವಿಕ ಸಂವಿಧಾನವನ್ನು ಪೂಜಿಸಲು ಮತ್ತು ಅದರ ಮೌಲ್ಯಗಳನ್ನು ಪೋಷಿಸಲು ಸಂವಿಧಾನ ಮಂದಿರವನ್ನು ನಿರ್ಮಿಸಲಾಗಿದೆ' ಎಂದು ಪಿಳ್ಳೈ ಹೇಳುತ್ತಾರೆ.

'ಹೊಸ ಪೀಳಿಗೆಗೆ ಸಂವಿಧಾನದ ಬಗ್ಗೆ ತಿಳಿದಿಲ್ಲ. ಮಕ್ಕಳ ಪಾಲಿಗೆ ಸ್ವಾತಂತ್ರ್ಯ ದಿನಾಚರಣೆ ಮತ್ತು ಗಣರಾಜ್ಯೋತ್ಸವ ದಿನಗಳು ಕೇವಲ ರಜಾ ದಿನಗಳಾಗಿವೆ. ಸಾಂವಿಧಾನಿಕ ಮೌಲ್ಯಗಳನ್ನು ಕಲಿಸಿ ಯುವಜನರನ್ನು ಉತ್ತಮ ಪ್ರಜೆಗಳನ್ನಾಗಿ ಮಾಡುವ ಅಗತ್ಯವಿದೆ' ಎನ್ನುತ್ತಾರೆ ಅವರು.

ಸಂವಿಧಾನವನ್ನು ಧರ್ಮಗ್ರಂಥಗಳಿಗೆ ಹೋಲಿಸುವ ಅವರು, ಭಾರತದ ಸಂವಿಧಾನವು ವಿಶ್ವದ ಅತ್ಯುತ್ತಮ ಸಂವಿಧಾನಗಳಲ್ಲಿ ಒಂದಾಗಿದೆ ಎಂದು ಅಭಿಪ್ರಾಯಪಡುತ್ತಾರೆ.

ಕೇರಳದಲ್ಲೀಗ ಸಂವಿಧಾನದ ಬಗ್ಗೆ ವ್ಯಾಪಕ ಚರ್ಚೆ ನಡೆಯುತ್ತಿರುವಾಗ ಈ ಸಂವಿಧಾನ ಮಂದಿರ ಮಹತ್ವ ಪಡೆದುಕೊಂಡಿದೆ.

## ನಗರದಲ್ಲಿ ಇಂದು

**'ಗೌಡತಿಯರ ಸೇನೆ' ಉದ್ಘಾಟನಾ ಸಮಾರಂಭ:** ಸಾನ್ನಿಧ್ಯ: ಸಿದ್ದರಾಮ ಚೈತನ್ಯ ಸ್ವಾಮೀಜಿ, ಉದ್ಘಾಟನೆ: ಗಿರಿಜಮ್ಮ, ಅಧ್ಯಕ್ಷತೆ: ಸಿ.ಎನ್. ಬಾಲಕೃಷ್ಣ, ಹೇಮಲತಾ ಗೋಪಾಲಯ್ಯ, ಆಯೋಜನೆ: ಗೌಡತಿಯರ ಸೇನೆ, ಸ್ಥಳ: ಕುವೆಂಪು ಕಲಾಕ್ಷೇತ್ರ, ಒಕ್ಕಲಿಗರ ಸಂಘ, ವಿ.ವಿ. ಪುರಂ, ಬೆಳಿಗ್ಗೆ 9

**ಮಲ್ಲೇಶ್ವರ ಪರಿಚಯ-ದಾಖಲೆಗಳು ಹಾಗೂ ಸಾಕ್ಷ್ಯಚಿತ್ರಗಳ ಪ್ರದರ್ಶನ, ಸಂವಾದ:** ಅತಿಥಿಗಳು: ಡಾ.ಸಿ. ಎನ್. ಅಶ್ವತ್ಥನಾರಾಯಣ, ಮಮತಾ. ಪಿ. ರಾಜ್, ಆಯೋಜನೆ: ಬಿಎಂಎಸ್ ಕಾಲೇಜ್ ಆಫ್ ಆರ್ಕಿಟೆಕ್ಚರ್, ಸ್ಥಳ: ಎಚ್. ವಿ.ಎನ್. ಹೆರಿಟೇಜ್ ಬಂಗಲೆ, ಸರ್ಕಾರಿ ಬಾಲಕಿಯರ ಪ್ರೌಢಶಾಲೆ, ಮಲ್ಲೇಶ್ವರ, ಬೆಳಿಗ್ಗೆ 10,

**ಶಾಹು ಮಹಾರಾಜ್‌ರ 148ನೇ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಅವರ 131ನೇ ಜಯಂತಿ:** ಸಾನ್ನಿಧ್ಯ: ಜ್ಞಾನಪ್ರಕಾಶ್ ಸ್ವಾಮೀಜಿ, ಉದ್ಘಾಟನೆ: ಬಿ.ಕೆ. ಹರಿಪ್ರಸಾದ್, ಅತಿಥಿಗಳು: ಬಿ.ಗೋಪಾಲ್, ಎಂ. ವೆಂಕಟಸ್ವಾಮಿ, ಸಿ.ಎಚ್. ಹನುಮಂತರಾಯ, ಮಾವಳ್ಳಿ ಶಂಕರ್, ಆಯೋಜನೆ: ಮೂಲನಿವಾಸಿ ಸಂಘಟನೆಗಳ ಒಕ್ಕೂಟ, ಸ್ಥಳ: ಡಾ.ಬಿ. ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 10

**ಚಿಂತನ ಮಂಥನ ಕಾರ್ಯಕ್ರಮ:** ಪಳನಿಸ್ವಾಮಿ, ಜಿ.ಎಸ್. ಚಂದ್ರಶೇಖರ, ಅಧ್ಯಕ್ಷತೆ: ಗುಹಾ ದ್ವಾರಕಾನಾಥ ಬೆಳ್ಳೂರು, ಆಯೋಜನೆ: ಗುರು ರಾಘವೇಂದ್ರ ಬ್ಯಾಂಕ್ ಷೇರುದಾರರು ಮತ್ತು ಠೇವಣಿದಾರರ ಹಿತರಕ್ಷಣ ವೇದಿಕೆ, ಸ್ಥಳ: ಅನ್ನಪೂರ್ಣ ಭವನ, ದೊಡ್ಡ ಗಣೇಶ ದೇವಸ್ಥಾನದ ಎದುರಿನ ನವ ಮಂತ್ರಾಲಯ ಮಂದಿರದ ಆವರಣ, ಬೆಳಿಗ್ಗೆ 10

**ಕ್ರೀಡಾ ಸೌಲಭ್ಯ:** ಅತಿಥಿಗಳು: ಸ್ವಾಮಿ ಶಿವಾನಂದ, ಎಂ.ಆರ್. ದೊರೆಸ್ವಾಮಿ, ಜವಾಹರ್ ದೊರೆಸ್ವಾಮಿ, ಜೆ. ಸೂರ್ಯಪ್ರಸಾದ್, ಕೆ.ಎಸ್. ಶ್ರೀಧರ್, ಆಯೋಜನೆ ಮತ್ತು ಸ್ಥಳ: ಪಿಇಎಸ್ ವಿಶ್ವವಿದ್ಯಾಲಯ, ಬೆಳಿಗ್ಗೆ 10.30



ದೀಕ್ಷಾಕುಮಾರಿ ಶ್ರೀಹಿತ, ರಮ್ಯಾ ಮತ್ತು ಸ್ಕಂದಾ

**ನೃತ್ಯ ಸಂಗೀತ ಸಂಜೆ:** ಭರತನಾಟ್ಯ ಪ್ರಸ್ತುತಿ: ದೀಕ್ಷಾಕುಮಾರಿ ಶ್ರೀಹಿತ ಹಾಗೂ ರಮ್ಯಾ, ಮ್ಯಾಂಡೊಲಿನ್: ಸ್ಕಂದ.ಪಿ. ಭಟ್ಟಾ, ನಿರ್ದೇಶನ: ಪವಿತ್ರಾ ಪ್ರಶಾಂತ್, ಆಯೋಜನೆ: ಪ್ರಣವಾಂಜಲಿ ಅಕಾಡೆಮಿ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್ ಸಂಸ್ಥೆ, ಸ್ಥಳ: ಶ್ರೀನಿವಾಸನಗರದ, ಅಚ್ಯುತ್ ಪಾರ್ಟಿ ಹಾಲ್, ಸಂಜೆ 6

**15ನೇ ವಾರ್ಷಿಕೋತ್ಸವ ಸಮಾರಂಭ:** ಉದ್ಘಾಟನೆ: ಸರೋಜಮ್ಮ.ಎನ್. ಕೆ.ದಾಸಪ್ಪ, ಅಧ್ಯಕ್ಷತೆ: ಜಿ. ಧನರಾಜ ಬಾಬು, ಅತಿಥಿಗಳು: ಕೆ. ಗೋಪಾಲಯ್ಯ, ಕೆ. ನಾರಾಯಣ, ರಾಮಲಿಂಗಾರೆಡ್ಡಿ, ಆಯೋಜನೆ: ನೇಕಾರವಾಣಿ, ಸ್ಥಳ: ಟೌನ್‌ಹಾಲ್, ಬೆಳಿಗ್ಗೆ 11

### ಪುಸ್ತಕ ಬಿಡುಗಡೆ ಕಾರ್ಯಕ್ರಮಗಳು

**ಹಂಪ ನಾಗರಾಜಯ್ಯ ಅವರ 'ಸ್ಪೆಕ್ಟ್ರಮ್ ಆಫ್ ಕ್ಲಾಸಿಕಲ್ ಲಿಟರೇಚರ್ ಇನ್ ಕರ್ನಾಟಕ'–5 ಸಂಪುಟಗಳ ಬಿಡುಗಡೆ:** ಅಧ್ಯಕ್ಷತೆ: ಎಚ್.ಎಸ್. ಶಿವಪ್ರಕಾಶ, ಅತಿಥಿಗಳು: ಹಂಪ ನಾಗರಾಜಯ್ಯ ಅವರ ಸಂಪುಟಗಳನ್ನು ಬಿಡುಗಡೆಗೊಳಿಸುವವರು: ಸಿ.ಎನ್. ರಾಮಚಂದ್ರನ್, ರಾಜೇಂದ್ರ ಚೆನ್ನಿ, ಓ.ಎಲ್. ನಾಗಭೂಷಣಸ್ವಾಮಿ, ಎಚ್.ವಿ. ನಾಗರಾಜ ರಾವ್, ಎಂ.ಜಿ. ಮಂಜುನಾಥ್, ಆಯೋಜನೆ: ಸಪ್ನ ಬುಕ್ ಹೌಸ್, ಸ್ಥಳ: ಗಾಂಧಿಭವನ, ಕುಮಾರ ಪಾರ್ಕ್, ಬೆಳಿಗ್ಗೆ 10.30

**ಭದ್ರಾವತಿ ರಾಮಾಚಾರಿ ಅವರು ಸಾಹಿತಿ ದೊಡ್ಡರಂಗೇಗೌಡ ಅವರ ಜೀವನ ಚರಿತ್ರೆ ಕುರಿತು ಬರೆದ 'ಹಳ್ಳಿಹೈದ' ಕೃತಿ ಲೋಕಾರ್ಪಣೆ:** ಉದ್ಘಾಟನೆ: ಮಹೇಶ ಜೋಶಿ, ಪುಸ್ತಕ ಬಿಡುಗಡೆ: ಹಂಪ ನಾಗರಾಜಯ್ಯ, ನಿಡಸಾಲೆ ಪುಟ್ಟಸ್ವಾಮಯ್ಯ, ಅಧ್ಯಕ್ಷತೆ: ವೂಡೇ. ಪಿ. ಕೃಷ್ಣ, ಆಯೋಜನೆ: ಕನ್ನಡ ಸಾಹಿತ್ಯ ವೇದಿಕೆ, ಕಾವ್ಯಸ್ಪಂದನ ಪಬ್ಲಿಕೇಷನ್, ಸ್ಥಳ: ಶೇಷಾದ್ರಿಪುರ ಶಿಕ್ಷಣ ದತ್ತಿ, ಸಭಾಂಗಣ, ಶೇಷಾದ್ರಿಪುರ, ಸಂಜೆ 4

**ಧನರಾಜ ಬಾಬು.ಜಿ. ಅವರ 'ಎನ್ನನ ನೆರಳು' ಪುಸ್ತಕ ಮತ್ತು 'ಡೇವಿಡ್' ಕನ್ನಡ ಚಲನಚಿತ್ರದ ಟೀಸರ್ ಬಿಡುಗಡೆ ಸಮಾರಂಭ:** ಆಯೋಜನೆ: ಭೂ ವರಾಹ ಟ್ರಸ್ಟ್, ಸ್ಥಳ: ಸರ್ ಪುಟ್ಟಣ್ಣ ಚೆಟ್ಟಿ ಪುರಭವನ, ಟೌನ್ ಹಾಲ್, ಸಂಜೆ 4.30

35ನೇ ವಾರ್ಷಿಕ ತಬಲಾ ಉತ್ಸವ: ತಬಲಾ: ಪಂಡಿತ್ ಕುಮಾರ್ ಬೋಸ್, ಹಾರ್ಮೋನಿಯಂ: ತನ್ಮಯ ಡಿಯೋಚಾಕೆ ಮತ್ತು ವ್ಯಾಸಮೂರ್ತಿ ಕಟ್ಟಿ, ಗಾಯನ: ಧನಂಜಯ ಹೆಗ್ಡೆ, ತಬಲಾ: ರೂಪಕ್ ಕಲ್ಲೂರಕರ್, ಅಧ್ಯಕ್ಷತೆ: ರಾಜಗೋಪಾಲ್ ಕಲ್ಲೂರಕರ್, ಆಯೋಜನೆ: ಕಲ್ಲೂರ ಮಹಾಲಕ್ಷ್ಮೀ ತಬಲಾ ವಿದ್ಯಾಲಯ, ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5


### ಭರತನಾಟ್ಯ ಕಾರ್ಯಕ್ರಮಗಳು

**ಭರತನಾಟ್ಯ ರಂಗಪ್ರವೇಶ:** ಪ್ರಸ್ತುತಿ: ಸ್ಪಂದನಾ ಸುಭಾಷ್, ಅತಿಥಿಗಳು: ಎಂ.ಎನ್. ವೆಂಕಟಾಚಲಯ್ಯ, ಎನ್. ಸಂತೋಷ್ ಹೆಗ್ಡೆ, ಸುಮಲತಾ ಅಂಬರೀಷ್, ಆಯೋಜನೆ: ಸುಕೃತಿ ನಾಟ್ಯಾಲಯ, ಸ್ಥಳ: ಚೌಡಯ್ಯ ಮೆಮೋರಿಯಲ್ ಹಾಲ್, ಮಲ್ಲೇಶ್ವರ, ಸಂಜೆ 5.15



ಸ್ಪಂದನಾ ಸುಭಾಷ್

**ಭರತನಾಟ್ಯ ಪ್ರದರ್ಶನ:** ಪ್ರಸ್ತುತಿ: ಅನಘಲಕ್ಷ್ಮಿ ಸಂಪತ್ ಕುಮಾರ್, ಅತಿಥಿಗಳು: ಪ್ರೊ.ಎಸ್. ಸಡಗೋಪನ್, ಗೋಪಾಲ್ ಪ್ರಸಾದ್ ದುಬೆ, ನಿರ್ದೇಶನ: ರಕ್ಷಾ ಕಾರ್ತಿಕ್, ಸ್ಥಳ: ಸೇಂಟ್ ಜಾನ್ಸ್ ಸಭಾಂಗಣ, ಜಾನ್‌ನಗರ, ಕೋರಮಂಗಲ, ಸಂಜೆ 6



ಅನಘಲಕ್ಷ್ಮೀ ಸಂಪತ್‌ಕುಮಾರ್


**ಡಾ. ಪುನೀ 'ರಾಜರ್ಷಿ ಕೆಂಪೇಗೌಡರು' ನಾಟಕ ಪ್ರದರ್ಶನ:** ಚಾಲನೆ: ಜಿ.ಎಚ್. ರಾಮಚಂದ್ರ, ರಚನೆ: ನಾರಾಯಣ ಘಟ್ಟ.ನಾ.ಹೊ., ಅಧ್ಯಕ್ಷತೆ: ಜಗದೀಶ್. ಆರ್. ಚಂದ್ರ, ಆಯೋಜನೆ: ಆ್ಯಕ್ಟರ್ಸ್ ಸ್ಟುಡಿಯೋ, ಸ್ಥಳ: ಸಮುಚ್ಚಯ ಕಲಾಭವನ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

**ಪುನೀತ್‌ರಾಜ್‌ಕುಮಾರ್ ಸ್ಮರಣಾರ್ಥ 'ಸಾಮ್ರಾಟ್ ಸುಯೋಧನ' ಪೌರಾಣಿಕ ನಾಟಕ ಪ್ರದರ್ಶನ:** ಆಯೋಜನೆ: ಚಾಮುಂಡೇಶ್ವರಿ ಕೃಪಾಪೋಷಿತ ನಾಟಕ ಮಂಡಳಿ, ಉದ್ಘಾಟನೆ: ಶಾಸಕ ಆರ್. ಮಂಜುನಾಥ್, ನಾಟಕ ನಿರ್ದೇಶನ: ಮಹೇಶ್ ಖರಡ್ಯ, ಸ್ಥಳ: ಗಣಪತಿ ದೇವಸ್ಥಾನದ ಆವರಣ, ವಿದ್ಯಾನಗರ, ಟಿ.ದಾಸರಹಳ್ಳಿ, ರಾತ್ರಿ: 8

**ಯಕ್ಷಗಾನ ಪ್ರದರ್ಶನ:** ಪ್ರಸನ್ನ ಭಟ್ ಬಾಳ್ಕಲ್ ಭಾಗವತಿಕೆಯಲ್ಲಿ 'ನಾ.ಉತ್ತರ್ ಕುಮಾರ್', ರಾಘವೇಂದ್ರ ಆಚಾರ್ ಭಾಗವತಿಕೆಯಲ್ಲಿ 'ಕರ್ಣಾರ್ಜುನ', ರವೀಂದ್ರ ಶೆಟ್ಟಿ ಹೊಸಂಗಡಿ ಭಾಗವತಿಕೆಯಲ್ಲಿ 'ದ್ರೌಪದಿ ಪ್ರತಾಪ' ಯಕ್ಷಗಾನ ಪ್ರದರ್ಶನ, ಆಯೋಜನೆ: ಪೆರ್ಡೂರು ಮೇಳ, ಸ್ಥಳ: ರವೀಂದ್ರ ಕಲಾಕ್ಷೇತ್ರ, ರಾತ್ರಿ 10



ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕಿನ ದೀಟೂರು ಗ್ರಾಮದ ಜಮೀನುಗಳಿಗೆ ತುಂಗಭದ್ರಾ ನದಿ ನೀರು ನುಗ್ಗಿ ಮುಳುಗಡೆಯಾಗಿರುವುದು –ಪ್ರಜಾವಾಣಿ ಚಿತ್ರ ಸತೀಶ ಬಡಿಗೇರ್



ಚಿಕ್ಕೋಡಿ ತಾಲ್ಲೂಕಿನ ಮಲಿಕವಾಡ–ದತ್ತವಾಡ ಗ್ರಾಮಗಳ ಮಧ್ಯೆ ಇರುವ ಕಿರು ಸೇತುವೆ ದೂಧಗಂಗಾ ನದಿ ನೀರಿನಲ್ಲಿ ಮುಳುಗಡೆಯಾಗಿದೆ – ಪ್ರಜಾವಾಣಿ ಚಿತ್ರ

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಚಂದ್ರನಾಥ ಆಚಾರ್ಯ
ಚಿತ್ರ ಕಲಾವಿದ
ಕ್ಯಾನ್ವಾಸ್
ಸೆಲೆಬ್ರಿಟಿ LIVE
ಸಂಜೆ 4 ರಿಂದ 5
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಹೊಲ–ಗದ್ದೆಗಳಿಗೆ ನುಗ್ಗಿದ ನೀರು, ಅಪಾರ ಬೆಳೆ ಹಾನಿ • ಮನೆಗಳ ಕುಸಿತದಿಂದ ಜನರ ಪರದಾಟ

# ಮುಂದುವರಿದ ಮಳೆ: ಗ್ರಾಮಗಳು ಜಲಾವೃತ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಉತ್ತರ ಕನ್ನಡದ ಕರಾವಳಿಯಲ್ಲಿ ಗುರುವಾರ ತಡರಾತ್ರಿಯಿಂದ ಶುಕ್ರವಾರ ಮಧ್ಯಾಹ್ನದ ತನಕ ನಿರಂತರವಾಗಿ ಧಾರಾಕಾರ ಮಳೆಯಾಗಿದೆ. ಇದರಿಂದ ವಿವಿಧೆಡೆ ಕೃಷಿ ಜಮೀನು, ಮನೆಗಳು, ರಾಷ್ಟ್ರೀಯ ಹೆದ್ದಾರಿ ಜಲಾವೃತವಾಗಿವೆ.

ಹಾಸನ, ಕಲಬುರಗಿ, ಯಾದಗಿರಿ, ಬೀದರ್ ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ಉತ್ತಮ ಮಳೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆ ಅಬ್ಬರ ಕಡಿಮೆ ಆಗಿದೆ. ಬೆಳ್ತಂಗಡಿ ತಾಲ್ಲೂಕಿನ ನೆರಿಯದಲ್ಲಿ ಗುಡ್ಡ ಕುಸಿದು 3 ಮನೆ ಗಳಿಗೆ ಹಾನಿಯಾಗಿದೆ. ಕೆಲವೆಡೆ ಕಡಲ್ಕೊರೆತ ಮುಂದುವರಿದಿದೆ.

ಉಡುಪಿ ಜಿಲ್ಲೆಯ ಶಿರೂರಿನಲ್ಲಿ 25.6 ಸೆಂ.ಮೀ, ಗೋಳಿಹೊಳೆಯಲ್ಲಿ 25.4 ಸೆಂ.ಮೀ ಮಳೆಯಾಗಿದೆ.

ಹೊನ್ನಾವರದ ಗುಂಡಬಾಳ, ಭಾಸ್ಕೇರಿ, ಬಡಗಣಿ, ಭಟ್ಕಳದ ಮಣ್ಕುಳಿ ನಾಗಮಾಸ್ತಿಕೇರಿಯಲ್ಲಿ ಹಳ್ಳದ ನೀರು ಉಕ್ಕಿ ಹರಿದಿದೆ. ಸಮೀಪದ ಕೃಷಿ ಜಮೀನು, ಮನೆಗಳು ಜಲಾವೃತವಾಗಿವೆ. ನಾಟಿ ಮಾಡಿದ್ದ ಭತ್ತದ ಸಸಿಗಳು ಕೊಚ್ಚಿಕೊಂಡು ಹೋಗಿವೆ.

ಮುಂಡಗೋಡ ತಾಲ್ಲೂಕಿನಲ್ಲಿ 5 ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಭಟ್ಕಳ ತಾಲ್ಲೂಕಿನ ಸರ್ಪನಕಟ್ಟೆ ಚೆಕ್‌ಪೋಸ್ಟ್ ಬಳಿ ರಾಷ್ಟ್ರೀಯ ಹೆದ್ದಾರಿ 66ರ ಒಂದು ಭಾಗದ ಮೇಲೆ ಗುಡ್ಡದ ಮಣ್ಣು ಕುಸಿದಿದೆ. ಕಾರವಾರ ತಾಲ್ಲೂಕಿನ ಬೇಳೂರು ಗ್ರಾಮದ ದಟ್ಟಾರಣ್ಯದ ನಡುವೆ ಸುಮಾರು ಮೂರು ಎಕರೆ ಪ್ರದೇಶದಲ್ಲಿ ಗುಡ್ಡ ಕುಸಿದಿದೆ.

**ಮನೆ ಗೋಡೆಗಳ ಕುಸಿತ:** ಕೊಡಗು ಜಿಲ್ಲೆಯ ನಾಪೋಕ್ಲು ಸಮೀಪದ ಬೆಟಗೇರಿಯ ಹೆರವನಾಡು ಗ್ರಾಮ, ಕುಶಾಲನಗರ ತಾಲ್ಲೂಕಿನ ಶಿರಂಗಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಾಲುಕೊಪ್ಪಲು, ಸೋಮವಾರಪೇಟೆ ತಾಲ್ಲೂಕಿನ ರಾಮನಹಳ್ಳಿಯಲ್ಲಿ ಮನೆಗಳ ಗೋಡೆಗಳು ಕುಸಿದಿವೆ. ಮಡಿಕೇರಿ ನಗರದ ಹಾಕಿ ಮೈದಾನದ ಎದುರು ಎತ್ತರದ ಪ್ರದೇಶದಿಂದ ಮಣ್ಣು ಕುಸಿದಿದೆ.

ಡಿಸಿ ಕಚೇರಿಯ ತಡೆಗೋಡೆಯ ಕಾಂಕ್ರೀಟ್ ಸ್ಲ್ಯಾಬ್‌ಗಳು ಒಂದೆರಡು ಇಂಚಿನಷ್ಟು ಹೊರಬಂದಿದ್ದು, ಕುಸಿ ಯುವ ಭೀತಿ ಎದುರಾಗಿದೆ. ಜಿಲ್ಲೆಯಲ್ಲಿ ಅತ್ಯಂತ ಹೆಚ್ಚು 14 ಸೆಂ. ಮೀ.ನಷ್ಟು ಮಳೆ ಮಡಿಕೇರಿ ಸಮೀಪದ ಗಾಳಿಬೀಡು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸುರಿದಿದೆ. ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನಲ್ಲಿ ಮಳೆ ತುಸು ಹೆಚ್ಚಾಗಿದ್ದು, ಹಾನುಬಾಳು ಸಮೀಪ ದೋಣಹಳ್ಳಿ ಗ್ರಾಮದ ತಾತ್ಕಾಲಿಕ ಸೇತುವೆ ಕೊಚ್ಚಿ ಹೋಗಿದೆ.



ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಕಮಲಶಿಲೆಯ ಬ್ರಾಹ್ಮೀ ದುರ್ಗಾಪರಮೇಶ್ವರಿ ದೇವಸ್ಥಾನದ ಗರ್ಭಗುಡಿಯ ಪ್ರಾಂಗಣಕ್ಕೆ ಕುಬ್ಜಾ ನದಿಯ ನೀರು ಬಂದಿದೆ

## ಕರಾವಳಿಯಲ್ಲಿ ಇನ್ನೆರಡು ದಿನ ಮಳೆ

**ಬೆಂಗಳೂರು:** ಕರಾವಳಿಯ ಬಹುತೇಕ ಕಡೆ ಇನ್ನೂ ಎರಡು ದಿನ ಗುಡುಗು ಸಿಡಿಲು ಸಹಿತ ಧಾರಾಕಾರ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿಗೆ ಶನಿವಾರವೂ 'ರೆಡ್ ಅಲರ್ಟ್' ಘೋಷಿಸಲಾಗಿದೆ. ಮಲೆನಾಡಿನ ಚಿಕ್ಕಮಗಳೂರು, ಕೊಡಗು ಹಾಗೂ ಶಿವಮೊಗ್ಗ ಜಿಲ್ಲೆಗೆ ಮುಂದಿನ ನಾಲ್ಕು ದಿನ 'ಆರೆಂಜ್ ಅಲರ್ಟ್' ನೀಡಲಾಗಿದೆ. ಉತ್ತರ ಒಳನಾಡಿನಲ್ಲಿ 'ಯಲ್ಲೊ ಅಲರ್ಟ್' ಘೋಷಿಸಲಾಗಿದೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

## ಕಮಲಶಿಲೆ ವರೆಗೆ ಬಂದ ನೀರು

ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಕಮಲಶಿಲೆಯ ಬ್ರಾಹ್ಮಿ ಶ್ರೀ ದುರ್ಗಾಪರಮೇಶ್ವರಿ ದೇವಾಲಯದ ಪ್ರಾಂಗಣದವರೆಗೆ ಕುಬ್ಜಾ ನದಿಯ ನೀರು ಬಂದಿದ್ದು, ಅರ್ಚಕರು ಪೂಜೆ ಸಲ್ಲಿಸಿದರು. ಕುಬ್ಜಾ ನದಿಯ ನೀರು ಪ್ರತಿ ವರ್ಷ ದೇವಿಯ ಪಾದ ತೋಯಿಸುತ್ತದೆ. ಈ ವರ್ಷ ಕುಬ್ಜೆ ಇನ್ನೂ ದೇವಿಯ ಪಾದದವರೆಗೂ ಹರಿದಿಲ್ಲ.

## ಎಲ್ಲೆಲ್ಲಿ ಹೆಚ್ಚು ಮಳೆ

| | |
|---|---|
| ಶಿರಾಲಿ | 23 ಸೆಂ.ಮೀ. |
| ಮೂಲ್ಕಿ | 22 ಸೆಂ.ಮೀ |
| ಭಟ್ಕಳ | 21.8 ಸೆಂ.ಮೀ. |
| ಕಾರವಾರ | 21 ಸೆಂ.ಮೀ |
| ಹೊನ್ನಾವರ | 20 ಸೆಂ.ಮೀ |
| ಅಂಕೋಲಾ | 18 ಸೆಂ.ಮೀ |
| ಗೇರುಸೊಪ್ಪ | 17.3 ಸೆಂ.ಮೀ. |
| ಕೊಲ್ಲೂರು | 17 ಸೆಂ.ಮೀ |
| ಕುಮಟಾ | 14.4 ಸೆಂ.ಮೀ. |
| ಕದ್ರಾ | 10.5 ಸೆಂ.ಮೀ. |

## 9 ಮಂದಿ ಸಾವು

**ನೈನಿತಾಲ್:** ಉತ್ತರಾಖಂಡದ ರಾಮನಗರದ ಬಳಿ ಉಕ್ಕಿ ಹರಿಯುತ್ತಿರುವ ಧೇಲಾ ನದಿಯಲ್ಲಿ ಶುಕ್ರವಾರ ಕಾರೊಂದು ಕೊಚ್ಚಿ ಹೋಗಿ 9 ಮಂದಿ ಮೃತಪಟ್ಟಿದ್ದಾರೆ.

ನದಿಯಲ್ಲಿ ಪ್ರವಾಹ ಹೆಚ್ಚಿದ್ದ ಕಾರಣ ಸೇತುವೆಯಲ್ಲಿ ಸಂಚರಿಸುತ್ತಿದ್ದ ಕಾರು ನೀರಿನ ಸೆಳೆತಕ್ಕೆ ಸಿಲುಕಿ ಈ ಅವಘಡ ಸಂಭವಿಸಿದೆ. ಯುವತಿಯೊಬ್ಬರನ್ನು ರಕ್ಷಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

| ಜಲಾಶಯ | ಗರಿಷ್ಠ ಮಟ್ಟ (ಅಡಿಗಳಲ್ಲಿ) | ಇಂದಿನ ಮಟ್ಟ | ಒಳಹರಿವು | ಹೊರಹರಿವು |
|---|---|---|---|---|
| | | | (ಕ್ಯುಸೆಕ್‌ಗಳಲ್ಲಿ) | |
| ಕೆ ಆರ್ ಎಸ್* | 124.80 | 120.46 | 37,819 | 5,680 |
| ಹಾರಂಗಿ | 2,859 | 2,853.69 | 11,317 | 12,547 |
| ಕಬಿನಿ | 2,284 | 2,280 | 15,300 | 4,000 |
| ಹೇಮಾವತಿ | 2,922 | 2,915.44 | 18,221 | 250 |
| ಲಿಂಗನಮಕ್ಕಿ | 1,819 | 1772.60 | 56,645 | 283.80 |
| ಸೂಪಾ (ಮೀ) | 564 | 526.40 | 28,527 | - |
| ಮಾಣಿ | 595 | 576.24 | 8,289 | - |
| ತುಂಗಭದ್ರಾ | 1,633 | 1,621.19 | 75,843 | 221 |
| ಮಲಪ್ರಭಾ | 2,079.50 | 2,055.10 | 4,887 | 194 |
| ಘಟಪ್ರಭಾ | 2,175 | 2,097.88 | 14,608 | 100 |
| ಭದ್ರಾ | 186 | 166.4 | 29,942 | 143 |
| ಆಲಮಟ್ಟಿ (ಮೀ) | 519.60 | 515.08 | 75,207 | 451 |
| ನಾರಾಯಣಪುರ (ಮೀ) | 492.25 | 491.03 | 699.95 | 119.04 |

* ನೆಲಮಟ್ಟದಿಂದ

## 'ಜುಲೈನಲ್ಲೇ ಕೆಆರ್‌ಎಸ್‌ಗೆ ಬಾಗಿನ'

**ಮಂಡ್ಯ:** 'ನಾಲ್ಕೈದು ದಿನದಲ್ಲಿ ಕೆಆರ್‌ಎಸ್ ಭರ್ತಿಯಾಗುವ ನಿರೀಕ್ಷೆ ಇದ್ದು, ಜುಲೈ ತಿಂಗಳಲ್ಲೇ ಬಾಗಿನ ಅರ್ಪಿಸಲಾಗುವುದು. ಈ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಚರ್ಚಿಸಿ ದಿನಾಂಕ ನಿಗದಿ ಮಾಡಲಾಗುವುದು' ಎಂದು ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಶುಕ್ರವಾರ ಹೇಳಿದರು.

ಶ್ರೀರಂಗಪಟ್ಟಣ ತಾಲ್ಲೂಕಿನ ಕೆಆರ್‌ಎಸ್ ಜಲಾಶಯ ವೀಕ್ಷಿಸಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಇದೇ ಮೊದಲ ಬಾರಿಗೆ ಜುಲೈ ತಿಂಗಳಲ್ಲೇ ಬಾಗಿನ ನೀಡಲಾಗುತ್ತಿದೆ. ಪ್ರವಾಹ ಪರಿಸ್ಥಿತಿ ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗುವುದು' ಎಂದರು.

# ಜಲಾಶಯ: ಒಳಹರಿವು ಹೆಚ್ಚಳ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜಲಾನಯನ ಪ್ರದೇಶ-ಗಳಲ್ಲಿ ವ್ಯಾಪಕ ಮಳೆಯಾಗುತ್ತಿರುವ ಕಾರಣ, ರಾಜ್ಯದ ಅಣೆಕಟ್ಟುಗಳಿಗೆ ಒಳಹರಿವು ಹೆಚ್ಚಾಗಿದೆ.

ವಿಜಯನಗರ ಜಿಲ್ಲೆ ಹೊಸಪೇಟೆ ಬಳಿಯ ತುಂಗಭದ್ರಾ ನದಿ ನೀರಿನ ಮಟ್ಟ ಹೆಚ್ಚಾಗಿದೆ. ಶುಕ್ರವಾರ 75,843 ಕ್ಯುಸೆಕ್ ಒಳಹರಿವು ದಾಖಲಾಗಿದೆ. ಹಡಗಲಿ ತಾಲ್ಲೂಕಿನ ಸಿಂಗಟಾಲೂರು ಬ್ಯಾರೇಜ್ ಭರ್ತಿಯಾಗಿದೆ. 16 ಕ್ರಸ್ಟ್‌ಗೇಟ್‌ಗಳ ಮೂಲಕ 75,000 ಕ್ಯುಸೆಕ್ ನೀರು ನದಿಗೆ ಹರಿಸಲಾಗುತ್ತಿದೆ. ತಾಲ್ಲೂಕಿನ ಕುರುವತ್ತಿ, ಅಂಗೂರು, ಮದಲಗಟ್ಟಿ ಗ್ರಾಮದ ಕೆಲವು ಕುಟುಂಬಗಳಕ್ಕೆ ಸ್ಥಳಾಂತರಕ್ಕೆ ಜಿಲ್ಲಾಡಳಿತ ಮುಂದಾಗಿದೆ.

ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಮಳೆ ಹೆಚ್ಚಿದ್ದರಿಂದ, ವಿಜಯಪುರದ ಆಲಮಟ್ಟಿ ಜಲಾಶಯಕ್ಕೆ ಶುಕ್ರವಾರ ಒಂದೇ ದಿನ 75,207 ಕ್ಯುಸೆಕ್ ನೀರು ಹರಿದು ಬಂದಿದೆ.

ಕಾರವಾರ ತಾಲ್ಲೂಕಿನ ಕದ್ರಾ ಜಲಾಶಯಕ್ಕೂ ನೀರಿನ ಹರಿವು ಹೆಚ್ಚಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ 28 ಸಾವಿರ ಕ್ಯುಸೆಕ್ ನೀರನ್ನು ಕಾಳಿ ನದಿಗೆ ಹರಿಸಲಾಗಿದೆ. ಚಿಕ್ಕೋಡಿ ತಾಲ್ಲೂಕಿನ ಯಡೂರ- ಕಲ್ಲೋಳ, ಮಾಂಜರಿ- ಬಾವನಸೌಂದತ್ತಿ, ಮಲಿಕವಾಡ- ದತ್ತವಾಡ, ಯಕ್ಸಂಬಾ-ದಾನವಾಡ ಸೇತುವೆಗಳ ಮೇಲೆ ನೀರು ಹರಿಯುತ್ತಿದೆ. ಕೃಷ್ಣಾ ನದಿಗೆ ಕಲ್ಲೋಳ ಸೇತುವೆ ಬಳಿ 71,293 ಕ್ಯುಸೆಕ್ ನೀರು ಹರಿಯುತ್ತಿದೆ. ಜಿಲ್ಲೆಯಲ್ಲಿ ಪ್ರವಾಹ ಪರಿಸ್ಥಿತಿ ಎದುರಿಸಲು ಸಜ್ಜಾಗುವಂತೆ ಜಿಲ್ಲಾ ಉಸ್ತುವಾರಿ ಸಚಿವ ಗೋವಿಂದ ಕಾರಜೋಳ ಜಿಲ್ಲಾಧಿಕಾರಿಗೆ ಸೂಚನೆ ನೀಡಿದ್ದಾರೆ. ಜೊಯಿಡಾ ತಾಲ್ಲೂಕಿನ ಕ್ಯಾಸಲ್‌ರಾಕ್ ಭಾಗದಲ್ಲಿ ಜೋರಾಗಿ ವರ್ಷಧಾರೆಯಾಗಿದ್ದು, ಸೂಪಾ ಜಲಾಶಯಕ್ಕೆ ಒಳಹರಿವು ಹೆಚ್ಚಿದೆ.

ಮಲೆನಾಡು ಭಾಗಗಳಲ್ಲಿ ಭಾರಿ ಮಳೆ ಆಗುತ್ತಿರುವುದರಿಂದ ತುಂಗಾ, ಭದ್ರಾ, ಶರಾವತಿ, ವರದಾ ನದಿಗಳಲ್ಲಿ ಒಳಹರಿವು ಹೆಚ್ಚಾಗಿದೆ. ತುಂಗಾ ಜಲಾಶಯದಿಂದ ನದಿಗೆ 55,770 ಕ್ಯುಸೆಕ್ ನೀರು ಹೊರಗೆ ಬಿಡಲಾಗುತ್ತಿದೆ. ಶರಾವತಿ ನದಿಗೆ 56,645 ಕ್ಯುಸೆಕ್ ನೀರು ಹರಿದುಬರುತ್ತಿದ್ದು, ಲಿಂಗನಮಕ್ಕಿ ಜಲಾಶಯದಲ್ಲಿ 24 ಗಂಟೆಗಳಲ್ಲಿ ಮೂರು ಅಡಿ ನೀರು ಸಂಗ್ರಹವಾಗಿದೆ.

ಭದ್ರಾ ಜಲಾಶಯದ ನೀರಿನ ಮಟ್ಟ 166.4 ಅಡಿಗೆ ಏರಿಕೆಯಾಗಿದ್ದು, ಜುಲೈ 10ರಿಂದ ಕಾಲುವೆಗೆ ನೀರು ಹರಿಸಲು ಕಾಡಾ ಸಮಿತಿ ತೀರ್ಮಾನಿಸಿದೆ.

ಹಾಸನ ಜಿಲ್ಲೆ ಆಲೂರು ತಾಲ್ಲೂಕಿನ ವಾಟೆಹೊಳೆ ಜಲಾಶಯ ಭರ್ತಿಗೆ ಇನ್ನೆರಡು ಅಡಿ ಬಾಕಿ ಇದೆ. ಹೇಮಾವತಿ ಜಲಾಶಯ ಭರ್ತಿಗೆ 6 ಅಡಿ ಬಾಕಿ ಇದ್ದು, ಯಾವುದೇ ಸಂದರ್ಭದಲ್ಲಿ ನದಿಗೆ ನೀರು ಬಿಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಯಗಚಿ ಜಲಾಶಯದಿಂದ ಈಗಾಗಲೇ 3 ಸಾವಿರ ಕ್ಯುಸೆಕ್ ನೀರು ನದಿಗೆ ಬಿಡಲಾಗುತ್ತಿದೆ.

# ಮಳೆ: ತಗ್ಗಿದ ಅಬ್ಬರ, ಈಗ ನೆರೆ

ಒಂದನೇ ಪುಟದಿಂದ

ಹೊನ್ನಾವರ ತಾಲ್ಲೂಕಿನಲ್ಲಿ ನಾಲ್ಕು ಕಡೆ ಕಾಳಜಿ ಕೇಂದ್ರಗಳನ್ನು ಆರಂಭಿಸ-ಲಾಗಿದ್ದು, 146 ಜನ ಆಶ್ರಯ ಪಡೆದು-ಕೊಂಡಿದ್ದಾರೆ.

ಕೊಡಗು ಜಿಲ್ಲೆಯಲ್ಲಿ ಮಳೆ ಕಡಿಮೆ-ಯಾಗಿದ್ದರೂ ಗುರುವಾರ ರಾತ್ರಿಯಿಡೀ ಸುರಿದ ಮಳೆಗೆ ಅಲ್ಲಲ್ಲಿ ಮನೆಗಳು ಕುಸಿದಿವೆ. ಮಡಿಕೇರಿ– ಮಂಗಳೂರು ರಸ್ತೆಯ ಕತ್ತೋಜಿ ಬಳಿ ನಿರಂತರವಾಗಿ ಮಣ್ಣು ರಸ್ತೆಗೆ ಬೀಳುತ್ತಲೇ ಇದೆ. ಮೂರು ದಿನಗಳಿಂದಲೂ ಗುಡ್ಡದಿಂದ ಕುಸಿಯುತ್ತಿರುವ ಮಣ್ಣನ್ನು ತೆರವುಗೊ-ಳಿಸಲಾಗುತ್ತಿದೆ.

**ಶಾಲಾ–ಕಾಲೇಜುಗಳಿಗೆ ರಜೆ:** ಕಲಬುರಗಿ, ಕೊಡಗು ಜಿಲ್ಲೆ, ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಭಟ್ಕಳ, ಶಿರಸಿ, ಸಿದ್ದಾಪುರ ಮತ್ತು ಜೊಯಿಡಾ ತಾಲ್ಲೂಕುಗಳ ಶಾಲಾ–ಕಾಲೇಜುಗಳಿಗೆ ಶನಿವಾರ ರಜೆ ಘೋಷಿಸಲಾಗಿದೆ.

ಪಿಎಸ್‌ಐ ನೇಮಕಾತಿ ಅಕ್ರಮ • ಕೀ ರಹಸ್ಯ ಭೇದಿಸಲು ಸಿಐಡಿ ತನಿಖೆ

# ಎಡಿಜಿಪಿಗೆ ಸುಳ್ಳು ಪತ್ತೆ ಪರೀಕ್ಷೆ?

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಅಕ್ರಮ ಪ್ರಕರಣದಲ್ಲಿ ಬಂಧಿಸಲಾಗಿರುವ ಎಡಿಜಿಪಿ ಅಮ್ರಿತ್ ಪೌಲ್ ಅವರನ್ನು ಸುಳ್ಳು ಪತ್ತೆ ಪರೀಕ್ಷೆಗೆ (ಪಾಲಿಗ್ರಫ್) ಒಳಪಡಿಸಲು ಸಿಐಡಿ ಅಧಿಕಾರಿಗಳು ಸಿದ್ಧತೆ ನಡೆಸುತ್ತಿದ್ದು, ಈ ಸಂಬಂಧ ನ್ಯಾಯಾಲಯಕ್ಕೆ ಸದ್ಯದಲ್ಲೇ ಕೋರಿಕೆ ಸಲ್ಲಿಸುವ ಸಾಧ್ಯತೆ ಇದೆ.

ಪಿಎಸ್‌ಐ ಪರೀಕ್ಷೆ ಬರೆದಿದ್ದ ಅಭ್ಯರ್ಥಿಗಳ ಒಎಂಆರ್ ಪ್ರತಿಗಳನ್ನು ಇರಿಸಿದ್ದ ಕೊಠಡಿಯಲ್ಲಿ ಅಕ್ರಮ ನಡೆ-ದಿರುವುದನ್ನು ಪುರಾವೆ ಸಮೇತ ಈಗಾಗಲೇ ಪತ್ತೆ ಮಾಡಿರುವ ಅಧಿಕಾರಿಗಳು, ತೀವ್ರ ನಿಗಾದಲ್ಲಿದ್ದ ಕೊಠಡಿ ಬೀಗ ತೆರೆದವರು ಯಾರು? ಹಾಗೂ ಬೀಗದ ಕೀ ಕೊಟ್ಟವರು ಯಾರು? ಎಂಬುದನ್ನು ಸಾಕ್ಷ್ಯ ಸಮೇತ ತಿಳಿಯಲು ಮುಂದಾಗಿದ್ದಾರೆ.

ಭದ್ರತಾ ಕೊಠಡಿ ಬೀಗಕ್ಕೆ ಎರಡು ಕೀಲಿ ಕೈ (ಕೀ)ಗಳಿದ್ದವು. ಒಂದು ಕೀ ಎಡಿಜಿಪಿ ಬಳಿ ಇತ್ತು. ಇನ್ನೊಂದು, ವಿಭಾಗದ ಸೂಪರಿಂಟೆಂಡೆಂಟ್ ಸುನೀತಾ ಅವರ ಬಳಿಯಿತ್ತು. ನ್ಯಾಯಾಲಯದ ಅನುಮತಿ ಪಡೆದು ಸುನೀತಾ ಅವರನ್ನು ಈಗಾಗಲೇ ಸುಳ್ಳು ಪತ್ತೆ ಪರೀಕ್ಷೆಗೆ ಒಳಪಡಿಸಲಾಗಿದ್ದು, ಅದರ ವರದಿ ಬರುವುದು ಬಾಕಿ ಇದೆ.

'545 ಪಿಎಸ್‌ಐ ಹುದ್ದೆಗಳ ನೇಮಕಾತಿಗಾಗಿ ನಡೆದ ಪರೀಕ್ಷೆ ಬರೆದಿದ್ದ ಅಭ್ಯರ್ಥಿಗಳ ಒಎಂಆರ್ ಅಸಲು ಪ್ರತಿಗಳನ್ನು ಟ್ರಂಕ್‌ಗಳಲ್ಲಿ ಇರಿಸಿ, ಬೆಂಗಳೂರಿನಲ್ಲಿರುವ ನೇಮಕಾತಿ ವಿಭಾಗದ ಭದ್ರತಾ ಕೊಠಡಿಗೆ ಕಳುಹಿಸಲಾಗಿತ್ತು. ನಂತರ, ಕೊಠಡಿಗೆ ಬೀಗ ಹಾಕಿ ಸೀಲ್ ಮಾಡಲಾಗಿತ್ತು' ಎಂದು ಸಿಐಡಿ ಮೂಲಗಳು ತಿಳಿಸಿವೆ.

'ಪೌಲ್ ಅವರೇ ಭದ್ರತಾ ಕೊಠಡಿ ಕೀ ಕೊಟ್ಟು, ಒಎಂಆರ್ ಪ್ರತಿಗಳನ್ನು ತಿದ್ದುಪಡಿ ಮಾಡಿಸಿದ್ದರೆಂದು ಆರೋಪಿ ಶಾಂತಕುಮಾರ್ ಹಾಗೂ ಇತರೆ ಆರೋಪಿಗಳು ಈಗಾಗಲೇ ಹೇಳಿಕೆ ನೀಡಿದ್ದಾರೆ. ಆದರೆ, ಈ ಆರೋಪವನ್ನು ಎಡಿಜಿಪಿ ತಳ್ಳಿಹಾಕುತ್ತಿದ್ದಾರೆ. ಹೀಗಾಗಿ, ಅವರನ್ನು ಸುಳ್ಳು ಪತ್ತೆ ಪರೀಕ್ಷೆಗೆ ಒಳಪಡಿಸಲು ನ್ಯಾಯಾಲಯಕ್ಕೆ ಸದ್ಯದಲ್ಲೇ ಕೋರಿಕೆ ಸಲ್ಲಿಸಲಾಗುವುದು' ಎಂದು ಹೇಳಿವೆ.

'ಎಡಿಜಿಪಿ ಬಳಿ ಇದ್ದ ಒಂದು ಕೀ ಬಳಸಿಕೊಂಡು ಒಎಂಆರ್ ತಿದ್ದಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಎಡಿಜಿಪಿ ಕೀ ಕೊಟ್ಟಿರುವ ಬಗ್ಗೆ ಬಲವಾದ ಸಾಕ್ಷ್ಯ ಬೇಕಿದೆ. ಸುಳ್ಳು ಪತ್ತೆ ಪರೀಕ್ಷೆ ನಡೆಸಿದರೆ, ಎಲ್ಲವೂ ಹೊರಗೆ ಬರಲಿದೆ' ಎಂದೂ ಹೇಳಿವೆ.

## 'ಆರೋಪಿ ಒಪ್ಪಿಗೆ ಅಗತ್ಯ'

'ಯಾವುದೇ ಪ್ರಕರಣದಲ್ಲಿ ಸುಳ್ಳು ಪತ್ತೆ ಪರೀಕ್ಷೆ (ಪಾಲಿಗ್ರಾಫ್) ನಡೆಸಬೇಕಾದರೆ, ಆರೋಪಿ ಒಪ್ಪಿಗೆ ಅಗತ್ಯವಿರುತ್ತದೆ. ಈ ಬಗ್ಗೆ ಹೈಕೋರ್ಟ್‌ನ ಹಲವು ಆದೇಶಗಳಿವೆ' ಎಂದು ವಕೀಲರೊಬ್ಬರು ಹೇಳಿದರು.

'ಅಂತರರಾಷ್ಟ್ರೀಯ ಡ್ರಗ್ಸ್ ಪ್ರಕರಣದಲ್ಲಿ ಬಂಧಿಸಲಾಗಿದ್ದ ಆರೋಪಿ ವೀರೇನ್ ಖನ್ನಾನನ್ನು ಪಾಲಿಗ್ರಾಫ್ ಪರೀಕ್ಷೆಗೆ ಒಳಪಡಿಸಲು ಬೆಂಗಳೂರು ಸಿಸಿಬಿ ಪೊಲೀಸರು ಮುಂದಾಗಿದ್ದರು. ಇದನ್ನು ಪ್ರಶ್ನಿಸಿದ್ದ ವೀರೇನ್, ಹೈಕೋರ್ಟ್ ಮೆಟ್ಟಿಲೇರಿದ್ದ. ವಿಚಾರಣೆ ನಡೆಸಿದ್ದ ಹೈಕೋರ್ಟ್, 'ಯಾವುದೇ ವ್ಯಕ್ತಿಯ ಒಪ್ಪಿಗೆ ಪಡೆಯದೆ ಪಾಲಿಗ್ರಾಫ್ ಪರೀಕ್ಷೆ ನಿರ್ವಹಿಸಲು ಆಗುವುದಿಲ್ಲ ಎಂದು ಆದೇಶಿಸಿತ್ತು' ಎಂದೂ ತಿಳಿಸಿದರು.

'ಪಿಎಸ್‌ಐ ಅಕ್ರಮ ಪ್ರಕರಣದಲ್ಲಿ ಪಾಲಿಗ್ರಾಫ್ ಪರೀಕ್ಷೆಗೆ ಎಡಿಜಿಪಿ ಒಪ್ಪಿಗೆ ನೀಡಬೇಕಾಗುತ್ತದೆ. ಇಲ್ಲದಿದ್ದರೆ, ಪರೀಕ್ಷೆ ಸಾಧ್ಯವಿಲ್ಲ' ಎಂದೂ ಹೇಳಿದರು.

# 'ನ್ಯಾ. ಸಂದೇಶ್ ಏನು ಸಾಧಿಸಲು ಹೊರಟಿದ್ದಾರೆ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಕಾರ್ಯವೈಖರಿಯನ್ನು ಮುಕ್ತ ನ್ಯಾಯಾಲ-ಯದಲ್ಲಿ ತರಾಟೆಗೆ ತೆಗೆದುಕೊಂಡ ಹೈಕೋರ್ಟ್ ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರ ಟೀಕೆ–ಟಿಪ್ಪಣಿ ಎಷ್ಟರ ಮಟ್ಟಿಗೆ ಸೂಕ್ತ ಮತ್ತು ಇಂತಹ ಹೇಳಿಕೆಗಳಿಂದ ಅವರು ಏನನ್ನು ಸಾಧಿಸಲು ಬಯಸಿದ್ದಾರೆ' ಎಂದು ಮಾಜಿ ಅಡ್ವೊಕೇಟ್ ಜನರಲ್ ಆದ ಹಿರಿಯ ವಕೀಲ ಬಿ.ವಿ.ಆಚಾರ್ಯ ಪ್ರ-ಶ್ನಿಸಿದ್ದಾರೆ.

ಸಂದೇಶ್ ಅವರನ್ನು ಬೆಂಬಲಿಸಿ ಬೆಂಗಳೂರು ವಕೀಲರ ಸಂಘವು ಪ್ರಕಟಣೆ ಹೊರಡಿಸಿದ್ದಕ್ಕೆ ಪ್ರತಿಯಾಗಿ, 'ದಕ್ಷ ಲೀಗಲ್'ನಲ್ಲಿ ಅಭಿಪ್ರಾಯ ವ್ಯಕ್ತಪಡಿಸಿರುವ ಆಚಾರ್ಯ, 'ಸಿಜೆಐಗೆ ಪತ್ರ ಬರೆಯುವ ಮುನ್ನ ಸಂಘವು ಕೆಲವು ಸಂಗತಿಗಳನ್ನು ಮನವರಿಕೆ ಮಾಡಿಕೊಳ್ಳಿ' ಎಂದು ಸಂಘಕ್ಕೆ ಅವರು ಸೂಚಿಸಿದ್ದಾರೆ.

## ವಿಚಾರಣೆಗೆ ಮನವಿ

ನ್ಯಾಯಮೂರ್ತಿ ಸಂದೇಶ್ ಅವರಿಗೆ ವರ್ಗಾವಣೆ ಬೆದರಿಕೆ ಒಡ್ಡಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಆಂತರಿಕ ವಿಚಾರಣೆ ನಡೆಸುವಂತೆ ಬೆಂಗಳೂರು ವಕೀಲರ ಸಂಘ ಸಿಜೆಐ ಎನ್.ವಿ.ರಮಣ ಅವರಿಗೆ ಶುಕ್ರವಾರ ಪತ್ರ ಬರೆದಿದೆ.

ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಟಿ.ಜಿ.ರವಿ ಮತ್ತು ಖಜಾಂಚಿ ಎಂ.ಟಿ. ಹರೀಶ್ ಸಹಿ ಮಾಡಿರುವ ಈ ಪತ್ರದಲ್ಲಿ, ಭವಿಷ್ಯದಲ್ಲಿ ನ್ಯಾಯಮೂ-ರ್ತಿಗಳಿಗೆ ಅನ್ವಯವಾಗುವ ಲಕ್ಷ್ಮಣ ರೇಖೆ ವಿಧಿಸುವಂತೆ ಎಂದು ಮನವಿ ಮಾಡಲಾಗಿದೆ.

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬
ಹೊಸಪೇಟೆ ತಾಲೂಕು ವಿಜಯನಗರ ಜಿಲ್ಲೆ.
KANNADA UNIVERSITY, HAMPI
Vidyaranya- 583276
Hospet Tq, Vijayanagara District
ಸಂಖ್ಯೆ:ಕವಿಹಂ:ಕುಸ:ಪ.ಪ್ರ:೨೦೨೨–೨೩ ದಿನಾಂಕ: ೨೪.೦೬.೨೦೨೨

ಪ್ರವೇಶ ಪ್ರಕಟಣೆ


೨೦೨೨–೨೩ನೇ ಶೈಕ್ಷಣಿಕ ಸಾಲಿನಲ್ಲಿ ಈ ಕೆಳಕಂಡ ಕೋರ್ಸ್‌ಗಳ ಪ್ರವೇಶಾತಿಗಾಗಿ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು uucms ಮೂಲಕ ಆಹ್ವಾನಿಸಲಾಗಿದೆ.


| ಕ್ರ ಸಂ | ಕಾರ್ಯಕ್ರಮ | ಸ್ಥಾನಗಳ ಸಂಖ್ಯೆ | Intake | ಕೇಂದ್ರ/ಸಂಸ್ಥೆ |
|---|---|---|---|---|
| ೧ | ಬಿ.ಪಿ.ಎ ಹಿಂದೂಸ್ತಾನಿ ಗಾಯನ | ೨೦ | ೪೦ | ವಿದ್ಯಾರಣ್ಯ (ಕ್ಯಾಂಪಸ್ ಕಾಲೇಜ್) |
| | | ೨೦ | | ಹಂಸಲೇಖ ದೇಸಿ ಸಂಸ್ಥೆ, ಬೆಂಗಳೂರು |
| ೨ | ಬಿ.ವಿ.ಎ. ಶಿಲ್ಪಕಲೆ | ೨೦ | ೪೦ | ವಿದ್ಯಾರಣ್ಯ (ಕ್ಯಾಂಪಸ್ ಕಾಲೇಜ್) |
| | | ೨೦ | | ಬಾದಾಮಿ ವಿಸ್ತರಣಾ ಕೇಂದ್ರ, ಬಾದಾಮಿ |
| ೩ | ಬಿ.ವಿ.ಎ. ಚಿತ್ರಕಲೆ | ೨೦ | ೪೦ | ವಿದ್ಯಾರಣ್ಯ (ಕ್ಯಾಂಪಸ್ ಕಾಲೇಜ್) |
| | | ೨೦ | | ಬಾದಾಮಿ ವಿಸ್ತರಣಾ ಕೇಂದ್ರ, ಬಾದಾಮಿ |

ಈ ಮೇಲಿನ ಕಾರ್ಯಕ್ರಮಗಳಿಗೆ ಅರ್ಜಿ ಸಲ್ಲಿಸುವ ಎಲ್ಲ ಅಭ್ಯರ್ಥಿಗಳು ಕನ್ನಡ ವಿಶ್ವವಿದ್ಯಾಲಯದ ಕ್ಯಾಂಪಸ್ ಕಾಲೇಜಿಗೆ ಎಂದು ಆಯ್ಕೆ ಮಾಡಿ ಪ್ರವೇಶಕ್ಕೆ ಅರ್ಜಿ ಸಲ್ಲಿಸತಕ್ಕದ್ದು. ವಿದ್ಯಾರಣ್ಯ, ಬಾದಾಮಿ ಮತ್ತು ಬೆಂಗಳೂರು ಕೇಂದ್ರಗಳಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದನ್ನು ವಿಶ್ವವಿದ್ಯಾಲಯವೇ ಅಂತಿಮಗೊಳಿಸುತ್ತದೆ. ೧. ಪ್ರವೇಶಾತಿಯ ಆರಂಭ **ದಿನಾಂಕ: ೨೪.೦೬.೨೦೨೨** ಮತ್ತು ಕೊನೆಯ **ದಿನಾಂಕ: ೩೦.೦೭.೨೦೨೨** ಆಗಿರುತ್ತದೆ.

ವಿದ್ಯಾರ್ಥಿಗಳು ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು **https://uucms.karnataka.gov.in/** ಗೆ ಹೋಗಿ Register ಮಾಡಿಕೊಂಡು uucms ಮೂಲಕ ಅರ್ಜಿಗಳನ್ನು ಸಲ್ಲಿಸುವುದು. ಅಥವಾ ಕನ್ನಡ ವಿಶ್ವವಿದ್ಯಾಲಯದ ವೆಬ್‌ಸೈಟ್ **www.kannadauniversity.org** ಗೆ ಹೋಗಿ ಅಲ್ಲಿಂದ uucms ಮೂಲಕ ಸಲ್ಲಿಸುವುದು.

ಸಹಿ/– ಕುಲಸಚಿವರು






## ಸುಭಾಷಿತ

ಇದನ್ನು ಮಾಡುವುದು ಅಸಾಧ್ಯ ಎಂದು ಹೇಳುವವರು, ಆ ಕೆಲಸವನ್ನು ಮಾಡುತ್ತಿರುವವರಿಗೆ ಅಡ್ಡಿಯುಂಟು ಮಾಡಬಾರದು.

-ಜಾರ್ಜ್ ಬರ್ನಾರ್ಡ್ ಶಾ

# ಅಂಗನವಾಡಿಗಳಿಂದ ಮಕ್ಕಳು ದೂರ ದಾಖಲಾತಿ ಪ್ರಕ್ರಿಯೆ ಚುರುಕುಗೊಳ್ಳಲಿ

ನಾಳಿನ ಪ್ರಜೆಗಳ ದೈಹಿಕ ಹಾಗೂ ಮಾನಸಿಕ ವಿಕಾಸಕ್ಕೆ ಪೂರಕವಾದ ಅಂಗನವಾಡಿ ಕೇಂದ್ರಗಳಿಂದ 9.87 ಲಕ್ಷ ಮಕ್ಕಳು ಹೊರಗುಳಿದಿರುವ ಸಂಗತಿ, ಶೈಕ್ಷಣಿಕ ಕ್ಷೇತ್ರದ ತಳಹದಿ ದುರ್ಬಲಗೊಂಡಿರುವುದರ ಸ್ಪಷ್ಟ ಸೂಚನೆ. ಕಳೆದ ಎರಡು ವರ್ಷಗಳ ಅವಧಿಯಲ್ಲಿ ರಾಜ್ಯವನ್ನು ತೀವ್ರವಾಗಿ ಕಾಡಿದ ಕೊರೊನಾದ ಅಡ್ಡಪರಿಣಾಮಗಳಲ್ಲಿ ಮಕ್ಕಳು ಶಾಲೆಗಳಿಂದ ದೂರವಾಗಿರುವುದೂ ಒಂದು. 3 ವರ್ಷದೊಳಗಿನ 4.54 ಲಕ್ಷ ಮಕ್ಕಳು ಹಾಗೂ 4ರಿಂದ 6ರ ವಯೋಮಾನದ 5.33 ಲಕ್ಷ ಮಕ್ಕಳು ಅಂಗನವಾಡಿ ಕೇಂದ್ರಗಳಲ್ಲಿ ಹೆಸರು ನೋಂದಾಯಿಸಿಲ್ಲ. ಇದೇ ಅವಧಿಯಲ್ಲಿ 6ರಿಂದ 14 ವರ್ಷದ 15,338 ಮಕ್ಕಳು ಶಾಲೆಗಳಿಂದ ಹೊರಗುಳಿದಿದ್ದಾರೆ. ಒಟ್ಟು ಹತ್ತು ಲಕ್ಷಕ್ಕೂ ಹೆಚ್ಚು ಮಕ್ಕಳು ಅಂಗನವಾಡಿ ಹಾಗೂ ಶಾಲೆಗಳಿಂದ ಹೊರಗುಳಿದಿರುವುದು ಕಳವಳ ಉಂಟುಮಾಡುವ ವಿದ್ಯಮಾನ. ಗ್ರಾಮೀಣ ಭಾಗಗಳಲ್ಲಿ 2021ರ ಅಕ್ಟೋಬರ್‌ನಲ್ಲಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮತ್ತು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ 2022ರ ಮಾರ್ಚ್‌ನಲ್ಲಿ ನಡೆಸಿರುವ ಸಮೀಕ್ಷೆ ದಾಖಲಿಸಿರುವ ಅಧಿಕೃತ ಅಂಕಿಅಂಶಗಳಿವು. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ಕರೆತರುವುದಕ್ಕೆ ಸಂಬಂಧಿಸಿದಂತೆ ಹೈಕೋರ್ಟ್‌ನಲ್ಲಿ ನಡೆಯುತ್ತಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ಸಂದರ್ಭದಲ್ಲಿ ಈ ಅಂಕಿಅಂಶಗಳನ್ನು ನ್ಯಾಯಪೀಠಕ್ಕೆ ಸಲ್ಲಿಸಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 3 ವರ್ಷದೊಳಗಿನ 2.73 ಲಕ್ಷ ಹಾಗೂ 4ರಿಂದ 6 ವರ್ಷದ 3.02 ಲಕ್ಷ ಮಕ್ಕಳು ಅಂಗನವಾಡಿಗಳಿಗೆ ಸೇರ್ಪಡೆಯಾಗಿಲ್ಲ.



ಅಂಗನವಾಡಿಗಳನ್ನು ಬಲಪಡಿಸಲು ಸರ್ಕಾರ ಕ್ರಿಯಾಶೀಲವಾಗಬೇಕು ಹಾಗೂ ಶಾಲಾಪೂರ್ವ ಶೈಕ್ಷಣಿಕ ಚಟುವಟಿಕೆಗಳಿಗೆ ಅನುದಾನದ ಕೊರತೆ ಉಂಟಾಗದಂತೆ ಎಚ್ಚರ ವಹಿಸಬೇಕು

ಶಾಲಾಪೂರ್ವ ಶಿಕ್ಷಣದ ಹಿನ್ನೆಲೆಯಲ್ಲಿ ಅಂಗನವಾಡಿ ಕೇಂದ್ರಗಳಿಗೆ ವಿಶೇಷ ಮಹತ್ವವಿದೆ. ಮಕ್ಕಳನ್ನು ಸಾಮಾಜಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳಿಗೆ ಪರಿಚಯಿಸುವ ದಿಸೆಯಲ್ಲಿ ಅಂಗನವಾಡಿಗಳು ಪ್ರಯೋಗಶಾಲೆಗಳ ರೂಪದಲ್ಲಿ ಕಾರ್ಯ ನಿರ್ವಹಿಸುತ್ತವೆ. ದೈಹಿಕವಾಗಿ ಹಾಗೂ ಮಾನಸಿಕವಾಗಿ ಮಕ್ಕಳನ್ನು ಸದೃಢಗೊಳಿಸುವ ಉದ್ದೇಶದಿಂದ ರೂಪುಗೊಂಡಿರುವ ಈ ಕೇಂದ್ರಗಳು, ಗ್ರಾಮೀಣ ಪ್ರದೇಶಗಳ ದುರ್ಬಲ ವರ್ಗಗಳ ಮಕ್ಕಳಲ್ಲಿನ ಅಪೌಷ್ಟಿಕತೆಯನ್ನು ನೀಗಿಸುವಲ್ಲಿ ಮಹತ್ವದ ಪಾತ್ರ ವಹಿಸಿವೆ. ಎಷ್ಟೋ ಊರುಗಳಲ್ಲಿ ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳ ಸ್ವರೂಪವನ್ನೂ ಪಡೆದುಕೊಂಡಿವೆ. ಅಂಗನವಾಡಿಗಳಿಂದ ಹೊರಗುಳಿಯುವುದರಿಂದ ಮಕ್ಕಳ ಕಲಿಕೆಗಷ್ಟೇ ಪೆಟ್ಟುಬೀಳುವುದಿಲ್ಲ, ಅವರ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೂ ಅಡಚಣೆ ಉಂಟಾಗುತ್ತದೆ. ನಗರ ಪ್ರದೇಶಗಳಲ್ಲಿನ ಕೊಳೆಗೇರಿ, ಪರಿಶಿಷ್ಟ ಸಮುದಾಯಗಳ ವಸತಿಪ್ರದೇಶ, ಅಲ್ಪಸಂಖ್ಯಾತರು, ಬುಡಕಟ್ಟು, ಆದಿವಾಸಿ ಸಮುದಾಯಗಳು ವಾಸವಾಗಿರುವ ಪ್ರದೇಶಗಳಲ್ಲಿ ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರ ಒತ್ತು ನೀಡಬೇಕು ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ಎನ್. ವೇಣುಗೋಪಾಲ ಗೌಡ ನೇತೃತ್ವದ ಸಮಿತಿ ಶಿಫಾರಸು ಮಾಡಿದೆ. ಈ ಶಿಫಾರಸು, ಬಡ ಕುಟುಂಬಗಳ ಮಕ್ಕಳಿಗೆ ಪೌಷ್ಟಿಕ ಆಹಾರ ಮತ್ತು ಶಿಕ್ಷಣ ಎರಡನ್ನೂ ಪೂರೈಸುವ ಅಕ್ಷಯ ಪಾತ್ರೆಗಳಾಗಿ ಅಂಗನವಾಡಿಗಳು ಪರಿಣಮಿಸಿರುವುದನ್ನು ಸೂಚಿಸುತ್ತಿರುವಂತಿದೆ.

ರಾಜ್ಯದಲ್ಲಿ ಶಾಲೆಗಳಿಂದ ದೂರ ಉಳಿದಿರುವ 14 ವರ್ಷದೊಳಗಿನ 10.12 ಲಕ್ಷಕ್ಕೂ ಹೆಚ್ಚು ಮಕ್ಕಳಲ್ಲಿ ಅಂಗನವಾಡಿ ಮಕ್ಕಳ ಸಂಖ್ಯೆಯೇ ಹೆಚ್ಚಾಗಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಅಂಗನವಾಡಿಗಳಿಂದ ದೊಡ್ಡ ಸಂಖ್ಯೆಯ ಮಕ್ಕಳು ದೂರ ಉಳಿದಿರುವುದನ್ನು ಶೈಕ್ಷಣಿಕ ನಷ್ಟದ ಜೊತೆಗೆ ಸಾಮಾಜಿಕ ಸಮಸ್ಯೆಯ ರೂಪದಲ್ಲೂ ಪರಿಗಣಿಸಬೇಕು. ಅಂಗನವಾಡಿಗಳಿಗೆ ಬರುವ ಮಕ್ಕಳ ಸಂಖ್ಯೆಯಲ್ಲಿ ಕೊರೊನಾ ಕಾರಣದಿಂದಾಗಿ ಗಮನಾರ್ಹ ವ್ಯತ್ಯಾಸವಾಗಿದೆ. ಕೊರೊನಾದೊಂದಿಗೆ ಹೊಂದಿಕೊಂಡು ಜೀವನ ನಿರ್ವಹಣೆ ಮಾಡುವುದು ಅನಿವಾರ್ಯವಾಗಿರುವ ಪ್ರಸಕ್ತ ಸನ್ನಿವೇಶದಲ್ಲಿ ಅಂಗನವಾಡಿಗಳನ್ನು ಕೊರೊನಾಪೂರ್ವ ಸ್ಥಿತಿಗೆ ತರಲು ಸರ್ಕಾರ ಎಲ್ಲ ಪ್ರಯತ್ನಗಳನ್ನು ನಡೆಸಬೇಕು. ಅಂಗನವಾಡಿ ಮಕ್ಕಳ ದಾಖಲಾತಿ ಪ್ರಕ್ರಿಯೆ ಚುರುಕುಗೊಳಿಸುವುದು ಅಗತ್ಯ. ಮಕ್ಕಳನ್ನು ಶಾಲೆಗಳಿಗೆ ಮರಳಿ ಕರೆತರುವುದರ ಜೊತೆಗೆ, ಅಂಗನವಾಡಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಉತ್ತಮಗೊಳಿಸುವುದು ಸರ್ಕಾರಕ್ಕೆ ಆದ್ಯತೆಯ ವಿಷಯವಾಗಬೇಕು. ನೌಕರರ ವೇತನ, ಕಟ್ಟಡಗಳ ಬಾಡಿಗೆ, ತರಕಾರಿ ಮತ್ತು ಮೊಟ್ಟೆಗಳ ಖರೀದಿ ಸೇರಿದಂತೆ ವಿವಿಧ ಚಟುವಟಿಕೆಗಳಿಗೆ ಹಣ ಬಿಡುಗಡೆ ಮಾಡುವಂತೆ ಅಂಗನವಾಡಿ ಕಾರ್ಯಕರ್ತೆಯರು ಒತ್ತಾಯಿಸಿರುವ ಹಲವು ಪ್ರಕರಣಗಳು ರಾಜ್ಯದ ವಿವಿಧ ಭಾಗಗಳಿಂದ ವರದಿಯಾಗಿವೆ. ಇಂಥ ದೂರುಗಳಿಗೆ ಆಸ್ಪದ ಕೊಡದಂತೆ ಅಂಗನವಾಡಿಗಳನ್ನು ಬಲಪಡಿಸಲು ಸರ್ಕಾರ ಕ್ರಿಯಾಶೀಲವಾಗಬೇಕು ಹಾಗೂ ಶಾಲಾಪೂರ್ವ ಶೈಕ್ಷಣಿಕ ಚಟುವಟಿಕೆಗಳಿಗೆ ಅನುದಾನದ ಕೊರತೆ ಉಂಟಾಗದಂತೆ ಎಚ್ಚರ ವಹಿಸಬೇಕು.

## ದಿನದ ಟ್ವೀಟ್


### ತರಬೇತಿ ಬೇಕಾಗಿದೆ



ಭಾರತದ ಬಹುಪಾಲು ವಯಸ್ಕರಿಗೆ (ಅವರು ವಿದ್ಯಾವಂತರಾಗಿದ್ದರೂ) ಶೌಚಾಲಯ ಬಳಕೆಯ ಬಗ್ಗೆ ತರಬೇತಿ ನೀಡಬೇಕಾದ ಅಗತ್ಯವಿದೆ. ಆಸ್ಪತ್ರೆ, ಕಚೇರಿ ಅಥವಾ ಯಾವುದೇ ಸಾರ್ವಜನಿಕ ಸ್ಥಳದಲ್ಲಿನ ಸಾರ್ವಜನಿಕ ಶೌಚಾಲಯಕ್ಕೆ ನೀವು ಭೇಟಿ ನೀಡಿದ್ದರೆ, ನಾನು ಏನು ಹೇಳುತ್ತಿದ್ದೇನೆ ಎಂಬುದು ನಿಮಗೆ ತಿಳಿಯುತ್ತದೆ.

**ಡಾ. ಅಂಬರೀಶ್ ಮಿತ್ತಲ್,** ತಜ್ಞ ವೈದ್ಯ

## ಕಿಡಿನುಡಿ



ರಿಷಿ ಸುನಕ್, ಪ್ರೀತಿ ಪಟೇಲ್ ಮತ್ತು ಕಮಲಾ ಹ್ಯಾರಿಸ್ ಅವರನ್ನು ಭಾರತದಲ್ಲಿ ಮಾತ್ರ ಭಾರತೀಯರು ಎಂದು ಪರಿಗಣಿಸಲಾಗಿದೆ. ಆದರೆ ಸೋನಿಯಾ ಗಾಂಧಿ ಅವರನ್ನು ಇಟಾಲಿಯನ್ ಎಂದು ಕರೆಯಲಾಗುತ್ತದೆ. ಸುನಕ್ ಮತ್ತು ಪಟೇಲ್ ಬ್ರಿಟಿಷರು. ಇದು ಬ್ರಿಟನ್‌ನ ಹೃದಯ ವೈಶಾಲ್ಯವನ್ನು ತೋರಿಸುತ್ತದೆ. ಹ್ಯಾರಿಸ್ ಅಮೆರಿಕನ್ನರು. ಭಾರತದಲ್ಲಿ ಮಾತ್ರ ಸೋನಿಯಾ ಚರ್ಚೆಯ ವಸ್ತುವಾಗುತ್ತಾರೆ. ಆತ್ಮಾವಲೋಕನಕ್ಕೆ ಸಕಾಲ. ಸುಷ್ಮಾ ಈಗಿಲ್ಲ. ಆದರೆ ಈ ವಿಷಯದ ಬಗ್ಗೆ ಅವರ ನಿಲುವು ಮತ್ತು ತಮಾಷೆಯಂತಿದ್ದ ಅವರ ಬೆದರಿಕೆ ಸಂಪೂರ್ಣ ತಪ್ಪು.

**ಸಲೀಲ್ ತ್ರಿಪಾಠಿ,** ಲೇಖಕ

## 25 ವರ್ಷಗಳ ಹಿಂದೆ
ಬುಧವಾರ, 9-7-1997

● **ಪಂಜಾಬ್: ರೈಲಿನಲ್ಲಿ ಸ್ಫೋಟ 34 ಮಂದಿ ಸಾವು**

**ಚಂಡೀಗಡ, ಜುಲೈ 8 (ಯುಎನ್‌ಐ, ಪಿಟಿಐ)**– ಚಲಿಸುತ್ತಿದ್ದ ಪ್ರಯಾಣಿಕರ ರೈಲೊಂದರಲ್ಲಿ ಬಾಂಬ್ ಸ್ಫೋಟಗೊಂಡು 34 ಜನರು ಸತ್ತು, 66 ಮಂದಿ ಗಾಯಗೊಂಡ ಘಟನೆ ಪಂಜಾಬಿನ ಭಟಿಂಡ ಜಿಲ್ಲೆಯ ಲೆಹರ್ ಖಾನ್ ರೈಲು ನಿಲ್ದಾಣದಲ್ಲಿ ಇಂದು ಮಧ್ಯಾಹ್ನ ಸಂಭವಿಸಿದೆ. ಗಾಯಗೊಂಡವರಲ್ಲಿ 30 ಜನರ ಸ್ಥಿತಿ ಚಿಂತಾಜನಕವಾಗಿದೆ. ಉಗ್ರಗಾಮಿಗಳ ಕೃತ್ಯವೆಂದು ಶಂಕಿಸಲಾಗಿದೆ.

ಸತ್ತವರಲ್ಲಿ 9 ಮಹಿಳೆಯರು ಹಾಗೂ 6 ಮಕ್ಕಳು ಸೇರಿದ್ದಾರೆ.

ಅಂಬಾಲಕ್ಕೆ ಮಧ್ಯಾಹ್ನ 1.20 ಗಂಟೆಗೆ ಭಟಿಂಡದಿಂದ ಪ್ರಯಾಣ ಬೆಳೆಸಿದ ಈ ರೈಲು ಲೆಹರ್‌ಖಾನ್ ರೈಲು ನಿಲ್ದಾಣವನ್ನು ಎರಡು ಗಂಟೆಗೆ ತಲುಪಿದಾಗ ಈ ದುರಂತ ಸಂಭವಿಸಿದೆ.

ಭಟಿಂಡದಿಂದ ಉನ್ನತ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಪರಿಹಾರ ಕಾರ್ಯದಲ್ಲಿ ತೊಡಗಿದ್ದಾರೆ ಎಂದು ಭಟಿಂಡದಿಂದ ಬಂದ ವರದಿಗಳು ತಿಳಿಸಿವೆ. ಸ್ಫೋಟ ಸಂಭವಿಸಿದ ಸ್ಥಳ ಭಟಿಂಡದಿಂದ 18 ಕಿ.ಮೀ. ದೂರದಲ್ಲಿದೆ.

## 50 ವರ್ಷಗಳ ಹಿಂದೆ
ಭಾನುವಾರ, 9-7-1972

● **ಮಿಂಚಿನ ವೇಗದಲ್ಲಿ 32 ಗ್ರಾಮಗಳ ತೆರವು ಕಾರ್ಯ**

**ಬೆಳಗಾವಿ, ಜುಲೈ 8**– ಮಲಪ್ರಭಾ ಜಲಾಶಯದಲ್ಲಿ ನೀರು ಸಂಗ್ರಹಣೆಯಿಂದ ಈಗ ಮುಳುಗಡೆಯಾಗುತ್ತಲಿರುವ ಸವದತ್ತಿ ಹಾಗೂ ಬೈಲಹೊಂಗಲ ತಾಲ್ಲೂಕುಗಳ 32 ಗ್ರಾಮಗಳನ್ನು ತೆರವು ಮಾಡುವ ಕೆಲಸ ಮಿಂಚಿನ ವೇಗದಿಂದ ನಡೆದಿದೆ.

ಈ ಗ್ರಾಮಗಳ ನಿವಾಸಿಗಳನ್ನು ಅವರಿಗಾಗಿಯೇ ಕಟ್ಟಲಾದ ಹೊಸ ಗ್ರಾಮಗಳಿಗೆ ಅಥವಾ ಸವದತ್ತಿಯಲ್ಲಿ ನಿರ್ಮಿಸಲಾದ ತಾತ್ಪೂರ್ತಿಕ ಶಿಬಿರಕ್ಕೆ ಸುವ್ಯವಸ್ಥಿತವಾಗಿ ಸಾಗಿಸುವ ಪ್ರಯತ್ನ ನಡೆದಿದೆ.

ಸುಮಾರು 60 ಟ್ರಕ್‌ಗಳು ಹಾಗೂ ಅನೇಕ ಎತ್ತಿನ ಬಂಡಿಗಳು ಗ್ರಾಮಸ್ಥರನ್ನು, ಅವರ ವಸ್ತು, ಒಡವೆಗಳನ್ನು ಸಾಗಿಸುವ ಕಾರ್ಯದಲ್ಲಿ ಹಗಲು ಇರುಳು, ಮಳೆ- ಬಿಸಿಲು ಎನ್ನದೆ ಒಂದೇ ಸಮನೆ ಓಡಾಡುತ್ತಿವೆ.

● **‘ಕಾನೂನು ಬದಲಿಸದೆ ರಾಜ್ಯದ ಬಡ ರೈತರ ಹಿತರಕ್ಷಣೆ ಅಸಾಧ್ಯ’**

**ಬೆಂಗಳೂರು, ಜುಲೈ 8**– ಖಾತೆ ಪತ್ರ ಸ್ವಾಧೀನವಿರುವ ಭೂ ಮಾಲೀಕನ ಪರವಾಗಿ ಪೊಲೀಸರು ವರ್ತಿಸುವ ಕಾನೂನನ್ನು ಬದಲಾಯಿಸದೆ, ರಾಜ್ಯದಲ್ಲಿ ಬಡ ರೈತರ ಹಿತರಕ್ಷಣೆ ಸರ್ಕಾರದಿಂದ ಸಾಧ್ಯವಿಲ್ಲ ಎಂದು ವಿಧಾನಸಭೆಯಲ್ಲಿ ಇಂದು ಹಲವರು ಸದಸ್ಯರು ಸರ್ಕಾರಕ್ಕೆ ಸ್ಪಷ್ಟಪಡಿಸಿದರು.

ಭೂ ಪರಿಮಿತಿ ಮತ್ತು ನಗರ ಪರಿಮಿತಿ ಕಾನೂನು ಜಾರಿಗೆ ಬರಲಿರುವ ಸನ್ನಿವೇಶದಲ್ಲಿ ಆಸ್ತಿ, ಜಮೀನು ಪರಭಾರೆ ಮಾಡುವುದನ್ನು ನಿಷೇಧಿಸಿ ಸರ್ಕಾರ ಆದೇಶ ಹೊರಡಿಸಬೇಕು ಎಂದು ಕೆಲವರು ಒತ್ತಾಯಪಡಿಸಿದರು.

ಅಮೆರಿಕದ ಸುಪ್ರೀಂ ಕೋರ್ಟ್ ತೀರ್ಪು ಜಾಗತಿಕವಾಗಿಯೂ ಪ್ರಭಾವ ಬೀರುವ ಸಾಧ್ಯತೆ ಇದೆ

# ಗರ್ಭಪಾತ ಮತ್ತು ಆಯ್ಕೆ ಹಕ್ಕು



ವಿಶ್ಲೇಷಣೆ

ಡಾ. ಗೀತಾ ಕೃಷ್ಣಮೂರ್ತಿ

**ಅಮೆರಿಕದ** ಮಹಿಳಾ ಹಕ್ಕುಗಳ ಹೋರಾಟದ ಇತಿಹಾಸದಲ್ಲಿ, ರೋ ಮತ್ತು ವೇಡ್ ನಡುವಣ ಪ್ರಕರಣಕ್ಕೆ ಸಂಬಂಧಿಸಿದಂತೆ 1973ರಲ್ಲಿ ಅಲ್ಲಿನ ಸುಪ್ರೀಂ ಕೋರ್ಟ್ ನೀಡಿದ ತೀರ್ಪು ಒಂದು ಮೈಲಿಗಲ್ಲು. ಈ ತೀರ್ಪು ಅಮೆರಿಕದ ಮಹಿಳೆಯರಿಗೆ ನಿರ್ದಿಷ್ಟ ಅವಧಿಯೊಳಗೆ ಗರ್ಭಪಾತ ಮಾಡಿಸಿಕೊಳ್ಳುವ ಹಕ್ಕನ್ನು ಕಲ್ಪಿಸಿತ್ತು. ಐವತ್ತು ವರ್ಷಗಳಿಂದ ಮಹಿಳೆಯರು ಅನುಭವಿಸಿಕೊಂಡು ಬಂದಿದ್ದ ಈ ಮೂಲಭೂತ ಹಕ್ಕಿಗೆ ಈಗ ಚ್ಯುತಿ ಬಂದಿದೆ. ರೋ ಮತ್ತು ವೇಡ್ ನಡುವಣ ಪ್ರಕರಣದಲ್ಲಿ ನೀಡಿದ್ದ ತೀರ್ಪನ್ನು ಜೂನ್ 24ರಂದು ಸುಪ್ರೀಂ ಕೋರ್ಟ್ ಅಸಿಂಧುಗೊಳಿಸಿರುವುದೇ ಇದಕ್ಕೆ ಕಾರಣ.

ಅಮೆರಿಕದ ರಾಜ್ಯಗಳು ಪ್ರತ್ಯೇಕ ಕಾನೂನು ರೂಪಿಸುವ ಮೂಲಕ, ನಿರ್ದಿಷ್ಟ ಅವಧಿಯವರೆಗಿನ ಗರ್ಭಪಾತವನ್ನು ನಿಷೇಧಿಸಲು ಈ ತೀರ್ಪು ಅನುವಾಗಿಸುತ್ತದೆ. ಒಂಬತ್ತು ಮಂದಿ ನ್ಯಾಯಮೂರ್ತಿಗಳು ಇದ್ದ ನ್ಯಾಯಪೀಠವು 6–3ರ ಬಹುಮತದ ಆಧಾರದಲ್ಲಿ ಈ ತೀರ್ಪು ನೀಡಿದೆ. ಈ ತೀರ್ಪು ಗರ್ಭಪಾತಕ್ಕೆ ಸಂಬಂಧಿಸದೇ ಇರುವ ಮಹಿಳೆಯರ ಇತರ ಹಕ್ಕುಗಳನ್ನು ಮೊಟಕುಗೊಳಿಸುತ್ತದೆ ಎಂದು ಭಾವಿಸಬೇಕಿಲ್ಲ ಎಂದು, ನಿಷೇಧದ ಪರವಾಗಿ ತೀರ್ಪು ಬರೆದಿರುವ ಆರು ಮಂದಿ ನ್ಯಾಯಮೂರ್ತಿಗಳು ಸ್ಪಷ್ಟಪಡಿಸಿದ್ದಾರೆ. ಆದರೆ, ಭಿನ್ನ ನಿಲುವನ್ನು ತಳೆದು, ಗರ್ಭಪಾತಕ್ಕೆ ಮಹಿಳೆಯರಿಗೆ ಇರುವ ಸ್ವಾತಂತ್ರ್ಯವನ್ನು ಬೆಂಬಲಿಸಿದ ಉಳಿದ ಮೂವರು ನ್ಯಾಯಮೂರ್ತಿಗಳು, ವಿವಾಹ, ಲೈಂಗಿಕತೆ ಮತ್ತು ಜನನ ನಿಯಂತ್ರಣಕ್ಕೆ ಸಂಬಂಧಿಸಿದ ಇತರ ಸ್ವಾತಂತ್ರ್ಯಗಳನ್ನೂ ಮೊಟಕುಗೊಳಿಸಲು ಈ ತೀರ್ಪು ದಾರಿ ಮಾಡಿಕೊಡುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ತೀರ್ಪಿನ ಪರಿಣಾಮವಾಗಿ ಅಮೆರಿಕದ ಅರ್ಧಕ್ಕೂ ಹೆಚ್ಚು ರಾಜ್ಯಗಳು ಗರ್ಭಪಾತವನ್ನು ನಿಷೇಧಿಸಲು ಮುಂದಾಗಬಹುದು ಎಂಬ ಕಳವಳ ವ್ಯಕ್ತವಾಗಿದೆ. ಬೇರೆ ಬೇರೆ ನೆಲೆಯಲ್ಲಿ ಜಾಗತಿಕವಾಗಿಯೂ ಇದು ಪ್ರಭಾವ ಬೀರುವ ಸಾಧ್ಯತೆ ಇದೆ.

‘ಗರ್ಭಪಾತ’ ಎಂದರೆ ಮೂಡಿದ ಜೀವವನ್ನು ಕೊಲ್ಲುವುದು ಎಂದರ್ಥ. ಹಾಗಾಗಿ ಗರ್ಭಪಾತದ ಬಗ್ಗೆ ಚರ್ಚೆ ಎಂದರೆ, ಕಾನೂನಿನ ಪ್ರಕಾರ ಅದಕ್ಕೆ ಅನುಮತಿ ಇದೆಯೇ ಇಲ್ಲವೇ ಎಂಬಷ್ಟಕ್ಕೆ ಮಾತ್ರ ಸೀಮಿತವಾಗುವುದಿಲ್ಲ. ಅದರಲ್ಲಿ ಧಾರ್ಮಿಕ ನಂಬಿಕೆಯೂ ತಳುಕು ಹಾಕಿಕೊಂಡಿರುತ್ತದೆ. ಹಾಗಾಗಿ ಈ ಚರ್ಚೆ, ವೈಯಕ್ತಿಕ ಹಕ್ಕುಗಳ ನೆಲೆಯನ್ನು ದಾಟಿ ಧಾರ್ಮಿಕ ನೆಲೆಗಟ್ಟಿನ ಆಯಾಮವನ್ನು ಪಡೆದುಕೊಳ್ಳುತ್ತದೆ. ಗರ್ಭಪಾತಕ್ಕೆ ಪೂರ್ಣ ಅವಕಾಶವನ್ನು ಕೊಟ್ಟಿದ್ದೇ ಆದರೆ, ಅದು ಸಾಮಾಜಿಕ ಸಮಸ್ಯೆಗಳ ಸರಣಿಯನ್ನೇ ಸೃಷ್ಟಿಸಬಹುದಾದ ಸಾಧ್ಯತೆ ಇರುವುದರಿಂದ, ಈ ಚರ್ಚೆಯನ್ನು ಸಾಮಾಜಿಕ ನೆಲೆಗಟ್ಟಿನ ಆಯಾಮದಿಂದಲೂ ವಿಶ್ಲೇಷಿಸಬೇಕಾಗುತ್ತದೆ. ಈ ಬಗೆಗಿನ ಎಲ್ಲ ಆಯಾಮಗಳಲ್ಲಿ ನಡೆಯುವ ವಾದಗಳೂ ಜೀವಪರ ಮತ್ತು ಆಯ್ಕೆ ಪರವಾದ ಗುಂಪುಗಳ ವಾದಗಳೇ ಆಗಿರುತ್ತವೆ. ಹಾಗಾಗಿ ಅವು ವೈಯಕ್ತಿಕ ಸ್ವಾತಂತ್ರ್ಯ ಮತ್ತು ನೈತಿಕತೆ ನಡುವಿನ ಸಂಘರ್ಷವಾಗುತ್ತವೆ.

ಗರ್ಭಪಾತದ ಹಕ್ಕು, ಮಹಿಳಾ ಹಕ್ಕುಗಳ ಚಳವಳಿಯ ಒಂದು ಬೇಡಿಕೆಯಾಗಿ ಚರ್ಚೆಗೆ ಒಳಗಾಗುತ್ತಲೇ ಬಂದಿದೆ. ಒತ್ತಾಯ, ತಾರತಮ್ಯ, ಹಿಂಸೆಗಳಿಂದ ಮುಕ್ತವಾದ ಲೈಂಗಿಕತೆ ಮತ್ತು ಆ ಬಗ್ಗೆ ಮುಕ್ತವಾಗಿ, ವಿವೇಚನೆಯಿಂದ ನಿರ್ಧಾರ ಕೈಗೊಳ್ಳುವ ಹಕ್ಕು ಮತ್ತು ಪ್ರಜನನ ಸ್ವಾತಂತ್ರ್ಯದ ಹಕ್ಕುಗಳೂ ಮಹಿಳೆಯರ ಮಾನವ ಹಕ್ಕುಗಳಲ್ಲಿ ಸೇರುತ್ತವೆ. ಪ್ರಜನನ ಹಕ್ಕುಗಳಲ್ಲಿ ಬಹು ಮುಖ್ಯವಾದುದೆಂದರೆ ಗರ್ಭಪಾತದ ಹಕ್ಕು. ಇದು ಖಾಸಗಿತನಕ್ಕೆ ಇರುವ ಹಕ್ಕಿನ ಒಂದು ಭಾಗ ಎಂಬುದು ಈ ವಾದದ ಮುಖ್ಯ ಅಂಶ. ಈ ವಾದ ವಿವಾದಗಳಿಂದಾದ ಒಂದು ರಚನಾತ್ಮಕ ಬದಲಾವಣೆಯೆಂದರೆ, ಗರ್ಭಪಾತ ಅಪರಾಧ ಎಂಬ ಭಾವನೆ ಬದಲಾದುದು ಮತ್ತು ಅದು ಮಹಿಳೆಯರ ಹಕ್ಕು ಎಂದು ಪರಿಗಣಿಸುವ ದಿಸೆಯಲ್ಲಿ ಮನೋಭೂಮಿಕೆ ಸಿದ್ಧವಾದುದು. ಇದರ ಫಲವಾಗಿ, ತಾಯಿಯ ಜೀವವನ್ನು ಉಳಿಸಲು ಗರ್ಭಪಾತಕ್ಕೆ ಅನುಮತಿ ನೀಡಬಹುದು ಎಂಬ ಮಟ್ಟಿಗೆ ನೈತಿಕ ನಿಲುವು ಉದಾರಗೊಂಡಿತು. ಎಲ್ಲ ದೇಶಗಳ ಎಲ್ಲ ಧರ್ಮಗಳೂ ನೈತಿಕತೆಯ ನೆಲೆಯಲ್ಲಿ ಗರ್ಭಪಾತವನ್ನು ವಿರೋಧಿಸಿದವುಗಳೇ! ಆದರೆ ಸಾಮಾಜಿಕ ಸ್ಥಿತ್ಯಂತರಗಳಿಗೆ ಹೊಂದುವಂತೆ ಸರಿಸುಮಾರು ಎಲ್ಲ ದೇಶಗಳೂ ತಮ್ಮ ನಿಲುವಿನಲ್ಲಿ ಬದಲಾವಣೆಗಳನ್ನು ಮಾಡಿಕೊಂಡಿವೆ.

ಗರ್ಭಪಾತಕ್ಕೆ ಅನುಮತಿ ನೀಡಬಹುದಾದ ಅವಧಿಯನ್ನು ಬಹುಪಾಲು ದೇಶಗಳ ಕಾನೂನುಗಳು 20 ವಾರಗಳಿಂದ 25 ವಾರಗಳು ಎಂದು ನಿಗದಿಪಡಿಸಿವೆ. ಇದರ ಉದ್ದೇಶ, 20-25 ವಾರಗಳನ್ನು ದಾಟಿದ ನಂತರ ಭ್ರೂಣ ಸಾಕಷ್ಟು ಬೆಳೆದಿರುತ್ತದೆ. ಆಗ ಗರ್ಭಪಾತ ಮಾಡಿಸಿಕೊಂಡರೆ ತಾಯಿಯ ಜೀವಕ್ಕೆ ಅಪಾಯ ಆಗುತ್ತದೆ ಎಂಬುದು. ಆದರೆ, ಮಗು ಗರ್ಭಾವಸ್ಥೆಯಲ್ಲೇ ಜೀವಿಸುವ ಹಕ್ಕನ್ನು ಪಡೆದಿರುತ್ತದೆ ಎಂಬುದು ಧಾರ್ಮಿಕ ನಂಬಿಕೆ. ಜೀವ ಯಾವಾಗ ಆರಂಭವಾಗುತ್ತದೆ? ವೀರ್ಯಾಣು ಹಾಗೂ ಅಂಡಾಣು ಸೇರಿದ ಕ್ಷಣದಿಂದಲೋ? ಅಥವಾ ಭ್ರೂಣ 24-28 ವಾರಗಳನ್ನು ಕಳೆದ ನಂತರವೋ? ಅಥವಾ ಮಗು ತಾಯಿಯ ಹೊಟ್ಟೆಯಿಂದ ಹೊರಬಂದು ಸ್ವತಂತ್ರವಾಗಿ ಜೀವಿಸಲು ಆರಂಭಿಸಿದ ದಿನದಿಂದಲೋ? ಚರ್ಚೆ ನಡೆದೇ ಇದೆ.

ನಾಡಿನ ಕಾನೂನು, ಧಾರ್ಮಿಕ ನಂಬಿಕೆಗಳು ಮತ್ತು ಆರೋಗ್ಯ ಸಮಸ್ಯೆಗಳು ಇವು ಯಾವುವೂ ಗರ್ಭವನ್ನು ಇಳಿಸಿಕೊಳ್ಳ ಬಯಸುವ ಮಹಿಳೆಗೆ ಮುಖ್ಯವಾಗುವುದಿಲ್ಲ. ಆ ಕ್ಷಣಕ್ಕೆ ಅವಳಿಗೆ ಬೇಕಾಗುವುದು ಅದಕ್ಕೆ ಅಗತ್ಯವಾದ ವೈದ್ಯಕೀಯ ನೆರವು ಅಷ್ಟೇ. ಆದರೆ ಈ ಸುಳಿಗಳ ನಡುವೆ ಅವಳು ಅಸಹಾಯಕಳಾಗಿರುತ್ತಾಳೆ! ಸಂದಿಗ್ಧತೆ, ಅನುಮಾನ ಇದ್ದಾಗ, ವಿವೇಚನಾಯುತ ತೀರ್ಮಾನಗಳಿಗೆ ಧಾರ್ಮಿಕ ನಂಬಿಕೆಗಳು ಅಡ್ಡಬಂದಾಗ ಮೊರೆ ಹೋಗುವುದು ಕಾನೂನನ್ನೇ. ಆದ್ದರಿಂದ ಈ ಬಗ್ಗೆ ದೇಶದ ಕಾನೂನು ಅನುಮತಿ ನೀಡುತ್ತದೆಯೇ ಇಲ್ಲವೇ ಎನ್ನುವುದಷ್ಟೇ ಮುಖ್ಯವಾಗುತ್ತದೆ.

ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಹೈಕಮಿಷನರ್ ಮಿಷೆಲ್ ಬ್ಯಾಚಲೆಟ್ ಅವರು, ಗರ್ಭಪಾತಕ್ಕೆ ಸಂಬಂಧಿಸಿದಂತೆ ಅಮೆರಿಕದ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಮಹಿಳೆಯರ ಹಕ್ಕುಗಳಿಗೆ ಮತ್ತು ಲಿಂಗ ಸಮಾನತೆಗೆ ಕೊಟ್ಟ ದೊಡ್ಡ ಪೆಟ್ಟು ಎಂದಿದ್ದಾರೆ. ಗರ್ಭಪಾತಕ್ಕೆ ನಿರ್ಬಂಧ ಹೇರಿದ ಮಾತ್ರಕ್ಕೆ ಗರ್ಭಪಾತ ಮಾಡಿಸಿಕೊಳ್ಳುವವರ ಸಂಖ್ಯೆಯೇನೂ ಕಡಿಮೆಯಾಗುವುದಿಲ್ಲ. ಅಷ್ಟೇ ಅಲ್ಲ, ಅನ್ಯ ಮಾರ್ಗಗಳನ್ನು ಅವಲಂಬಿಸುವುದರಿಂದ ಇನ್ನಷ್ಟು ಅಪಾಯಕಾರಿಯನ್ನಾಗಿಸುತ್ತದೆ ಎಂದು ಪರಿಣತರು ಅಭಿಪ್ರಾಯ ಪಟ್ಟಿದ್ದಾರೆ.

ವಿಶ್ವಸಂಸ್ಥೆಯ ಜನಸಂಖ್ಯಾ ನಿಧಿಯು ಜಗತ್ತಿನ ಜನಸಂಖ್ಯೆಯ ಸ್ಥಿತಿಗತಿ ಬಗೆಗೆ ಸಲ್ಲಿಸಿರುವ ವರದಿಯ ಪ್ರಕಾರ, ಈಗ ಆಗುತ್ತಿರುವ ಗರ್ಭಪಾತಗಳ ಪೈಕಿ ಶೇ 45ರಷ್ಟು ಸುರಕ್ಷಿತವಲ್ಲದ ಗರ್ಭಪಾತಗಳು. ಇನ್ನು, ಕಾನೂನು ತೊಡಕು ಉಂಟಾದರೆ ಈ ಪ್ರಮಾಣ ಇನ್ನೂ ಹೆಚ್ಚುತ್ತದೆ ಮತ್ತು ತಾಯಂದಿರ ಸಾವಿಗೆ ಇದು ಮುಖ್ಯ ಕಾರಣವೂ ಆಗಬಹುದು ಎಂಬ ಎಚ್ಚರಿಕೆಯನ್ನು ನೀಡಿದೆ.

ಗರ್ಭಪಾತಕ್ಕೆ ಸಂಬಂಧಿಸಿದ ಕಟ್ಟುನಿಟ್ಟಾದ ಕಾನೂನನ್ನು ಸಡಿಲಿಸಬೇಕೆಂಬ ಅಂತರರಾಷ್ಟ್ರೀಯ ಒಡಂಬಡಿಕೆಯ ಆಶಯಕ್ಕೆ ಅಮೆರಿಕ ಸುಪ್ರೀಂ ಕೋರ್ಟ್‌ನ ಈಗಿನ ತೀರ್ಪು ವಿರುದ್ಧವಾದುದಾಗಿದೆ. ಜಗತ್ತಿನಲ್ಲೇ ಅತಿ ಮುಂದುವರಿದ ದೇಶ ಎಂಬ ಹಿರಿಮೆಗೆ ಪಾತ್ರವಾಗಿರುವ ಅಮೆರಿಕದಲ್ಲಿ, ಗರ್ಭಪಾತ ಕುರಿತಂತೆ ಹೊರಬಿದ್ದಿರುವ ಈ ತೀರ್ಪು ಪ್ರತಿಗಾಮಿಯಾಗಿದೆ ಎಂಬ ಅಭಿಪ್ರಾಯಗಳು ವ್ಯಾಪಕವಾಗಿ ವ್ಯಕ್ತವಾಗಿವೆ. ಇದಕ್ಕೆ ಅಮೆರಿಕದಲ್ಲಿ ವ್ಯಾಪಕ ಪ್ರತಿರೋಧವೂ ವ್ಯಕ್ತವಾಗಿದೆ. ತೀರ್ಪಿನ ಪ್ರಭಾವವು ಜಗತ್ತಿನ ಬೇರೆ ಬೇರೆ ದೇಶಗಳ ಮೇಲೂ ಆಗಬಹುದು ಎಂಬ ಆತಂಕ ಎದುರಾಗಿದೆ.

ಭಾರತದಲ್ಲಿ ಜಾರಿಯಲ್ಲಿರುವ ವೈದ್ಯಕೀಯ ಗರ್ಭಪಾತಕ್ಕೆ ಸಂಬಂಧಿಸಿದ ಕಾನೂನಿನ ಪ್ರಕಾರ, ಗರ್ಭಪಾತಕ್ಕೆ ಅನುಮತಿಯನ್ನು ವಿಸ್ತೃತವಾದ ವೈದ್ಯಕೀಯ, ಮಾನವೀಯ ಮತ್ತು ಸಾಮಾಜಿಕ ಕಾರಣಗಳಿಗಾಗಿ ನೀಡಬಹುದಾಗಿದೆ.



## ಚುರುಮುರಿ



### ಹರಾಜು- ಅದೃಷ್ಟ!

● ಚಂದ್ರಕಾಂತ ವಡ್ಡು

**‘ನೇಮಕಾತಿ** ‘ಮುಖ್ಯಸ್ಥ’ರಿಗೆ 20 ಪರ್ಸೆಂಟ್ ಆದರೆ ‘ಪ್ರಭಾವಿ’ಗಳಿಗೆ ಎಷ್ಟು?’ ತಿಂಗಳೇಶನ ಪ್ರಶ್ನೆಗೆ ಮಗನಲ್ಲಿ ಉತ್ತರ ಇರಲಿಲ್ಲ. ‘ಪ್ರಭಾವಿ’ ಖಾತೆಗೆ 30 ಪರ್ಸೆಂಟ್ ಎಂದು ಅಪ್ಪನೇ ಹೇಳಿದ.

‘ಹೋಗಲಿ, ಉಳಿದ 50 ಪರ್ಸೆಂಟ್ ಎಲ್ಲಿಗೆ ಹೋಯಿತು?’ ಉಹ್ಞೂಂ... ಮಗನಿಂದ ನಿರುತ್ತರ. ‘ರಾಜ್ಯದಲ್ಲಿ ಬಂಧನಕ್ಕೆ ಒಳಗಾಗಿರುವ ಪೊಲೀಸ್ ಅಧಿಕಾರಿಗಳ ಸಂಖ್ಯೆ ಎಷ್ಟು?’

ಅಪ್ಪನ ಪ್ರಶ್ನೆಗಳು ಆರಿದ್ರ ಮಳೆಯಂತೆ ಅಪ್ಪಳಿಸತೊಡಗಿದವು. ಐಎಎಸ್ ಮಾಡ್ತೀನಿ ಎಂದು ಹೇಳಿಕೊಂಡು ಐದಾರು ವರ್ಷಗಳಿಂದ ಮೈಲೇಜ್ ತೆಗೆದುಕೊಳ್ಳುತ್ತಿದ್ದ ಮಗರಾಯನಲ್ಲಿ ಸಾಮಾನ್ಯ ಜ್ಞಾನದ ಕೊರತೆ.

‘ಹೋಗಲಿ, ಜಿಲ್ಲಾಧಿಕಾರಿಯಾಗಿದ್ದವರು ಈಗ ಬಂಧನದಲ್ಲಿದ್ದಾರೆ. ಪರಪ್ಪನ ಅಗ್ರಹಾರದಲ್ಲಿ ಅವರಿಗೆ ನೀಡಿರುವ ಕೈದಿ ಸಂಖ್ಯೆ ಎಷ್ಟು?’

‘ಗೊತ್ತಿಲ್ಲ ಅಪ್ಪ, ಇವೆಲ್ಲಾ ನಮ್ಮ ಸಿಲೆಬಸ್‌ನಲ್ಲಿ ಇಲ್ಲ. ಆದರೆ ನನ್ನ ಸಹಪಾಠಿಗಳು, ಸ್ನೇಹಿತರು ನೇಮಕಾತಿಗೆ ಎಷ್ಟು ಹಣ ಕೊಟ್ಟಿದ್ದಾರೆ ಅಂತ ನನಗೆ ಕರೆಕ್ಟ್ ಗೊತ್ತು’.

‘ಹುದ್ದೆಗೆ ದುಡ್ಡು ಹೊಂದಿಸಿದ ಅವರ ಅಪ್ಪಂದಿರು ಈಗ ತೀರ್ಥಯಾತ್ರೆಗೆ ಹೋಗಿದ್ದಾರೋ?’ ಅಪ್ಪನ ವಿಕಟ ಸಂತಾಪ.

‘ಪಾಪ... ಹಾಗೇ ಆಗಿದೆ ಅವರ ಪರಿಸ್ಥಿತಿ. ಆದರೆ ಬದ್ರಿ ಅಂಕಲ್ ಮಗ ಸೀನಿ ಮಾತ್ರ ಫುಲ್ ಖುಷಿಯಲ್ಲಿದ್ದಾನೆ’.

‘ಅವರಪ್ಪ ಹಣ ಹೊಂದಿಸಿರಲಿಲ್ಲವೇ?’

‘ಹೌದು, ಅವರ ಬಳಿ ಹಣ ಇರಲಿಲ್ಲ, ಸೀನಿಯ ಸೋದರಮಾವ ಮಗಳನ್ನು ಮದುವೆ ಮಾಡಿಕೊಳ್ಳಬೇಕು ಎಂಬ ಷರತ್ತಿನ ಮೇಲೆ ಹಣ ಹೊಂದಿಸಿದ್ದರು. ಆದರೆ...’

‘ಆದರೆ... ಏನು? ಹಣ, ಹುದ್ದೆ ಇತ್ತು, ಹರಾಜು ಇತ್ತು, ಪಾಲ್ಗೊಳ್ಳಲು ಏನಾಗಿತ್ತು?’

‘ಅವರ ಅದೃಷ್ಟ ಚೆನ್ನಾಗಿತ್ತು! ಸರ್ಕಾರದ ಮುಖ್ಯಸ್ಥಾನದಲ್ಲಿರುವ ಪರಿಚಿತರೊಬ್ಬರು ಬದ್ರಿ ಅಂಕಲ್‌ಗೆ, ‘ನಿನ್ನ ಮಗನಿಗೆ ಅಲ್ಲದೆ ಇನ್ಯಾರಿಗೆ ನೌಕರಿ ಕೊಡಿಸಲಿ? ಸೀನಿ ಸೆಲೆಕ್ಷನ್ ಗ್ಯಾರಂಟಿ’ ಅಂತ ಭರವಸೆ ಕೊಟ್ಟಿದ್ದರಂತೆ. ಹಾಗಾಗಿ ಹರಾಜಿನಲ್ಲಿ ಭಾಗವಹಿಸಿರಲಿಲ್ಲ’.

‘ನೋಡು, ಆ ವ್ಯಕ್ತಿಯ ರೂಪದಲ್ಲಿ ದೇವರೇ ಬಂದು ಬದ್ರಿಯ ಹಣ... ಅಲ್ಲಲ್ಲ... ಬದ್ರಿ ಬೀಗರ ಹಣ ಉಳಿಸಿದ!’

## ಸಂಗತ

# ಕನ್ನಡ ಕಲಿಕೆ: ಜಾರಿಕೊಳ್ಳುವುದೇಕೆ?

ಪಿಯುಸಿ ವಿದ್ಯಾರ್ಥಿಗಳು ಭಾಷೆಯನ್ನು ಆಯ್ದುಕೊಳ್ಳುವಾಗ, ಅದರ ಹಿಂದೆ ಇರುವ ಅವರ ಮನಃಸ್ಥಿತಿಯನ್ನು ಗಮನಿಸಬೇಕಾಗುತ್ತದೆ

● ಟಿ.ಎ.ಎನ್. ಖಂಡಿಗೆ

**ಪಿಯುಸಿ** ವಿದ್ಯಾರ್ಥಿಗಳು ಯಾವುದೇ ಎರಡು ಭಾಷೆಗಳ ಆಯ್ಕೆಯ ವಿಷಯಕ್ಕೆ ಬಂದಾಗ, ಕನ್ನಡದ ಬಗ್ಗೆ ಅಸಹನೆ ಮತ್ತು ಆತಂಕ ವ್ಯಕ್ತಪಡಿಸುತ್ತಿರುವುದನ್ನು ಕೆಲವು ವರ್ಷಗಳಿಂದ ಗಮನಿಸುತ್ತಾ ಬಂದಿದ್ದೇನೆ.

ನನ್ನ ಕಾಲೇಜಿನಲ್ಲಿ ಪ್ರಥಮ ಪಿಯುಸಿಗೆ ಇಂಗ್ಲಿಷ್ ಮತ್ತು ಕನ್ನಡವನ್ನು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳು ಮುಂದೆ ತಮ್ಮ ತಂಗಿ, ತಮ್ಮ ಅಥವಾ ನೆರೆಕರೆಯವರನ್ನು ಪಿಯುಸಿಗೆ ಸೇರಿಸುವಾಗ, ಭಾಷೆಗಳ ವಿಷಯದಲ್ಲಿ ಇಂಗ್ಲಿಷ್ ಮತ್ತು ಹಿಂದಿ ಅಥವಾ ಸಂಸ್ಕೃತವನ್ನು ಆಯ್ಕೆ ಮಾಡಿ ಕನ್ನಡವನ್ನು ದೂರ ಮಾಡುತ್ತಿದ್ದರು. ಹೀಗೇಕೆ ಎಂದು ಕೇಳಿದಾಗ ಮೂರು ಕಾರಣಗಳನ್ನು ಹೇಳಿದರು. ಕನ್ನಡ ಪರೀಕ್ಷೆಗೆ ಓದಲು ತುಂಬಾ ಪಾಠಗಳಿವೆ, ಬರೆಯಲು ಮೂರು ಗಂಟೆ ಸಾಲದು, ಎಷ್ಟು ಸರಿಯಾಗಿ ಬರೆದರೂ ಪೂರ್ಣ ಅಂಕ ಕೊಡುವುದಿಲ್ಲ.


ಕನ್ನಡದಲ್ಲಿ ಕೆಲವು ಪಾಠಗಳು ಅತಿ ದೀರ್ಘವಾಗಿರುವುದು ಮಾತ್ರವಲ್ಲದೆ ವಿದ್ಯಾರ್ಥಿಗಳ ಆಸಕ್ತಿಯನ್ನು ಅರಳಿಸುವಲ್ಲಿ ಸೋಲುತ್ತವೆ. ಇನ್ನು ಕನ್ನಡದಲ್ಲಿ ಹೆಚ್ಚು ಬರೆಯಬೇಕಾಗಿರುವುದರ ಕಷ್ಟ. ಎಷ್ಟೇ ವೇಗವಾಗಿ ಬರೆಯುವವರೂ ‘ನಮಗೆ ಮೂರು ಗಂಟೆ ಸಾಕಾಗದು’ ಎನ್ನುತ್ತಾರೆ. ಆದರೆ ಸಂಸ್ಕೃತ ಮತ್ತು ಹಿಂದಿ ಎರಡೂವರೆ ಗಂಟೆ ಬರೆದರೂ 100ಕ್ಕೆ 100 ಅಂಕ ಪಡೆಯಲು ಸಾಧ್ಯವಾಗುತ್ತದೆ. ಹಿಂದಿ, ಇಂಗ್ಲಿಷ್ ಮತ್ತು ಸಂಸ್ಕೃತದಲ್ಲಿ ಹೊಂದಿಸಿ ಬರೆಯುವುದು, ಸರಿಯಾದ ಉತ್ತರ ಆಯ್ಕೆ ಮಾಡುವುದು ಮತ್ತು ವಾಕ್ಯ ಕಂಡಿಕೆಗಳನ್ನು ಕೊಟ್ಟು ಅದರಿಂದ ಪ್ರಶ್ನೆ ಕೇಳಿ ಉತ್ತರ ಪಡೆಯುವ ರೀತಿ ಸುಲಭದಲ್ಲಿ ಅಂಕಗಳನ್ನು ಪಡೆಯುವ ಮಾದರಿಗಳಿವೆ. ಇಂಥ ಸೌಕರ್ಯಗಳು ಕನ್ನಡದಲ್ಲಿ ಇಲ್ಲ.

ಇನ್ನು, ಸಂಸ್ಕೃತ, ಹಿಂದಿಯಲ್ಲಿ 10 ವಿದ್ಯಾರ್ಥಿಗಳಿಗೆ ನೂರು ಅಂಕಗಳು ಬರುವಾಗ, ಕನ್ನಡದಲ್ಲಿ ಒಬ್ಬರಿಗೋ ಇಬ್ಬರಿಗೋ ನೂರು ಅಂಕಗಳು ಬರುತ್ತವೆ. ಇದಕ್ಕೆ ಕಾರಣಗಳು ಹಲವಾರು. ಮುಖ್ಯವಾಗಿ ಮೌಲ್ಯಮಾಪನ ಪ್ರಕ್ರಿಯೆ. ಎಷ್ಟೋ ಮೌಲ್ಯಮಾಪಕರಿಗೆ ಯಾವ ಪ್ರಶ್ನೆಗೆ ಎಷ್ಟು ಉತ್ತರ ಹೇಗೆ ಬರೆಯಬೇಕೆಂದು ಗೊತ್ತಿಲ್ಲ. ನನ್ನ 15 ವರ್ಷಗಳ ಬೋಧನಾನುಭವದಲ್ಲಿ ಸುಮಾರು 18 ವಿದ್ಯಾರ್ಥಿಗಳಿಗೆ 100 ಅಂಕಗಳು ಬಂದಿವೆ. ಆದರೆ ನಿಜವಾಗಿ ಸಿಗಬೇಕಾದ ವಿದ್ಯಾರ್ಥಿಗಳಿಗೆ ಸಿಗದೆ ನಿರಾಸೆಯಾಗಿದೆ. ಉತ್ತರ ಪತ್ರಿಕೆಗಳ ಛಾಯಾಪ್ರತಿ ತರಿಸಿ ನೋಡಿದರೆ, ಅಲ್ಲಿ 98, 99 ಅಂಕಗಳಲ್ಲಿ ನಿಲ್ಲಿಸಲಾಗಿರುತ್ತದೆ. ಅಲ್ಲಿ 1, 2 ಅಂಕಗಳನ್ನು ಕಳೆಯುವ ಯಾವ ತಪ್ಪೂ ಇರುವುದಿಲ್ಲ. ಒಮ್ಮೆ ಮೌಲ್ಯಮಾಪನ ಮಾಡುವಾಗ, ‘ಇದು ಯಾಕೆ 5 ಅಂಕಗಳನ್ನು ಕೊಡಬಹುದಾದಲ್ಲಿ 4 ಕೊಟ್ಟಿದ್ದೀರಿ, ಇದರಲ್ಲಿ ಏನೂ ತಪ್ಪಿಲ್ಲವಲ್ಲ’ ಎಂದು ಸಹ ಮೌಲ್ಯಮಾಪಕರನ್ನು ಕೇಳಿದ್ದೆ. ‘ಇರಲಿ ಬಿಡಿ ಸರ್’ ಎಂದು ಹೇಳಿ ತಮ್ಮ ಕೆಲಸದಲ್ಲಿ ತೊಡಗಿದ್ದರು.

ಮೌಲ್ಯಮಾಪಕರಲ್ಲಿನ ಇನ್ನೊಂದು ದುರ್ಗುಣ ಎಂದರೆ ಸೋಮಾರಿತನ. 98, 99, 100 ಅಂಕಗಳು ಬಂದ ಉತ್ತರಪತ್ರಿಕೆಗಳನ್ನು ವಿಶೇಷ ಪರಿವೀಕ್ಷಕರು ಪರಿಶೀಲಿಸಬೇಕು. ಉತ್ತರ ಪತ್ರಿಕೆಗಳನ್ನು ಪರಿವೀಕ್ಷಕರಿಗೆ ತಲುಪಿಸಿದ ಬಳಿಕ ಪರಿಶೀಲನೆಗಾಗಿ ಅವರಿಗೆ ಸ್ವಲ್ಪ ಸಮಯ ಬೇಕಾಗುತ್ತದೆ. ಅದರ ಬದಲು ಅಂಕಗಳನ್ನು 97ಕ್ಕೆ ನಿಲ್ಲಿಸಿಬಿಟ್ಟರೆ ಸಮಸ್ಯೆಯೇ ಇರುವುದಿಲ್ಲ. ಇದನ್ನು ಸೋಮಾರಿತನವೊ ವ್ಯವಸ್ಥೆಯ ದೋಷವೊ ಏನೆಂದು ಕರೆಯುವುದು? ಅಂತೂ ಆ ಮಕ್ಕಳಿಗೆ ನೂರರ ಭಾಗ್ಯವಿಲ್ಲ.

ಉತ್ತರ ಪತ್ರಿಕೆಯ ಒಂದು ಲಕೋಟೆಯಲ್ಲಿ 12 ಉತ್ತರ ಪತ್ರಿಕೆಗಳಿರುತ್ತವೆ. ಇದನ್ನು ಸರಿಯಾಗಿ ಮೌಲ್ಯಮಾಪನ ಮಾಡಬೇಕಾದರೆ ಕನಿಷ್ಠ ಎರಡು ಗಂಟೆಯಾದರೂ ಬೇಕು. ಆದರೆ ಅರ್ಧಗಂಟೆಯಲ್ಲೇ ಮಾಡುವ ಪರಾಕ್ರಮಿಗಳು ಇದ್ದಾರೆ. ಇವರ ವಿರುದ್ಧ ಕ್ರಮ ಕೈಗೊಳ್ಳುವ ಬದಲು, ನಿಧಾನವಾಗಿ ಮೌಲ್ಯಮಾಪನ ಮಾಡುವವರನ್ನು ಅಪರಾಧಿಗಳಂತೆ ನೋಡಲಾಗುತ್ತದೆ. ಇಷ್ಟಾದರೂ ಪ್ರಾಮಾಣಿಕವಾಗಿ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮೌಲ್ಯಮಾಪನ ಮಾಡುವ ಕೆಲವು ಮೌಲ್ಯಮಾಪಕರು ಇದ್ದಾರೆ. ಅವರಿಂದಾಗಿಯೇ ಅದರ ಮೌಲ್ಯ ಇನ್ನೂ ಉಳಿದಿದೆ.

ಪ್ರತಿವರ್ಷ ಕನ್ನಡದಿಂದ ಜಾರುವವರ ಸಂಖ್ಯೆ ಜಾಸ್ತಿಯಾದರೆ ಅದರ ದೂರಗಾಮಿ ಪರಿಣಾಮವನ್ನು ಎದುರಿಸಬೇಕಾಗಿ ಬರಬಹುದು. ಎಷ್ಟೋ ಜನ ಕನ್ನಡ





ಅಧ್ಯಾಪಕರಿಗೆ ಉದ್ಯೋಗ ಇಲ್ಲದೇ ಹೋಗಬಹುದು. ಆಗ ಎರಡು ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಭಾಷೆ, ಸಂಸ್ಕೃತಿ, ಸಾಹಿತ್ಯವನ್ನು ಯಾರಿಗೆ ಬೋಧಿಸುವುದು ಎಂದು ಯೋಚಿಸಬೇಕು. ಯಾವುದೇ ಒಂದು ಭಾಷೆಯನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ವಿದ್ಯಾರ್ಥಿಗಳ ಮೊದಲ ಆದ್ಯತೆ ಅಂಕಗಳು. ಎರಡನೆಯದ್ದು ಸುಲಭ ಬರವಣಿಗೆ. ಕೊನೆಯದ್ದು ಭಾಷಾಭಿಮಾನ. ಇದು ಭಾಷೆ ಆಯ್ಕೆಯ ಹಿಂದೆ ಇರುವ ವಿದ್ಯಾರ್ಥಿಗಳ ಮನಃಸ್ಥಿತಿ.

ಇದಕ್ಕೆಲ್ಲಾ ಪರಿಹಾರ ಏನೆಂದು ಯೋಚಿಸಬೇಕು. ಪಿಯುಸಿ ಪಠ್ಯ ಮತ್ತು ಪ್ರಶ್ನೆಪತ್ರಿಕೆಯ ಮಾದರಿಯಲ್ಲಿ ಬದಲಾವಣೆ ಆಗಬೇಕು. ಹಿಂದಿ, ಸಂಸ್ಕೃತದ ಮಾದರಿಯನ್ನು ಸ್ವಲ್ಪಮಟ್ಟಿಗೆ ಬಳಸಿಕೊಳ್ಳಬಹುದು. ಇದಲ್ಲದೆ ಪ್ರಶ್ನೆಪತ್ರಿಕೆಯ ಎಲ್ಲ ಪ್ರಶ್ನೆಗಳಿಗೂ ನುರಿತ ಪಿಯುಸಿ ಅಧ್ಯಾಪಕರಿಂದಲೇ ಕೇರಳದ ಮಾದರಿಯಲ್ಲಿ ‘ಅಧ್ಯಾಪಕರ ಕೈಪಿಡಿ’ ತಯಾರಾಗಬೇಕು. ಮೌಲ್ಯಮಾಪನದಲ್ಲಿ ಅಂಕಗಳನ್ನು ನೀಡುವುದಕ್ಕೆ ಸ್ಪಷ್ಟ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಬೇಕು. ಹೀಗಾದರೆ ಮರುಮೌಲ್ಯಮಾಪನದಲ್ಲಿ ಬರುವ ಭಾರಿ ಅಂಕಗಳ ವ್ಯತ್ಯಾಸವನ್ನು ಸರಿಪಡಿಸಬಹುದು. ಇದು ವಿದ್ಯಾರ್ಥಿಗಳಲ್ಲಿ ಕನ್ನಡದ ಬಗ್ಗೆ ಪ್ರೀತಿ, ಅಭಿಮಾನ, ಧೈರ್ಯ ಉಂಟು ಮಾಡುತ್ತದೆ. ಆಗ ಕನ್ನಡ ಕಲಿಕೆಯಿಂದ ಅರಿವು ಮತ್ತು ಆನಂದ ದೊರೆಯಬಹುದು.

ಲೇಖಕ: ಕನ್ನಡ ಉಪನ್ಯಾಸಕ
ಆಳ್ವಾಸ್ ಕಾಲೇಜು, ಮೂಡುಬಿದಿರೆ

## ವಾಚಕರ ವಾಣಿ

### ‘ಮೈತ್ರಿ ಕಪ್’: ಯೋಜನೆ ವಿಸ್ತರಿಸಿ

ಈ ಸಾಲಿನ ರಾಜ್ಯ ಬಜೆಟ್‌ನಲ್ಲಿ ಘೋಷಿಸಿದಂತೆ, ಹದಿಹರೆಯದ ಹೆಣ್ಣು ಮಕ್ಕಳಿಗೆ ಮುಟ್ಟಿನ ಕಪ್ ವಿತರಿಸುವ ‘ಮೈತ್ರಿ ಕಪ್’ ಯೋಜನೆಯು ಪ್ರಾಯೋಗಿಕವಾಗಿ ರಾಜ್ಯದ ಎರಡು ಜಿಲ್ಲೆಗಳಲ್ಲಿ ಜಾರಿಗೆ ಬಂದಿರುವುದು ಸ್ವಾಗತಾರ್ಹ. ಸರ್ಕಾರವು ಈ ಯೋಜನೆಯನ್ನು ರಾಜ್ಯದ ಎಲ್ಲೆಡೆಗೂ ವಿಸ್ತರಿಸಲಿ. ಇದರೊಂದಿಗೆ ಮುಂದಿನ ದಿನಗಳಲ್ಲಿ ಉದ್ಯೋಗಸ್ಥ ಮಹಿಳೆಯರಿಗೆ ಮುಟ್ಟಿನ ಸಮಯದಲ್ಲಿ ಎರಡು ದಿನಗಳ ರಜೆ ಸೌಲಭ್ಯ ಕಲ್ಪಿಸಲು ಕ್ರಮ ಜರುಗಿಸಲಿ. ಮುಟ್ಟಿನ ಸಮಯದಲ್ಲಿ ಮಹಿಳೆಯರು ದೈಹಿಕವಾಗಿ ಹಾಗೂ ಮಾನಸಿಕವಾಗಿ ಕಿರಿಕಿರಿ ಅನುಭವಿಸುತ್ತಾರೆ ಎಂಬುದು ವೈಜ್ಞಾನಿಕವಾಗಿ ದೃಢಪಟ್ಟಿದೆ. ಹೀಗಾಗಿ, ಆ ಸಮಯದಲ್ಲಿ ರಜೆ ನೀಡುವುದರಿಂದ, ನಂತರದ ದಿನಗಳಲ್ಲಿ ಮಹಿಳೆಯರು ಆರೋಗ್ಯಪೂರ್ಣವಾಗಿ ಹಾಗೂ ಹೆಚ್ಚು ಉತ್ಸಾಹದಿಂದ ಕೆಲಸ ನಿರ್ವಹಿಸಲು ಪೂರಕವಾದ ವಾತಾವರಣವನ್ನು ಕಲ್ಪಿಸಿದಂತೆ ಆಗುತ್ತದೆ.

**ನವೀನ್ ಕುಮಾರ್,** ಹೊನ್ನೇನಹಳ್ಳಿ, ಚಿತ್ರದುರ್ಗ

### ಭರವಸೆ ಕೃತಿಗೆ ಇಳಿಯಲಿ

ಈ ಹಿಂದಿನ ಕರ್ನಾಟಕ ವಿದ್ಯುತ್ ಮಂಡಳಿಯಲ್ಲಿ (ಕೆಇಬಿ) ವಿದ್ಯುತ್ ಕಂಬ ಮತ್ತು ಹೊಸ ಮಾರ್ಗ ಅಳವಡಿಕೆ ಕೆಲಸಗಳಿಗೆ ದಿನಗೂಲಿ ಕಾರ್ಮಿಕರನ್ನು ನೇಮಿಸಿಕೊಳ್ಳುವ ಪದ್ಧತಿ ಇತ್ತು. ಲೈನ್‌ಮ್ಯಾನ್ ಹುದ್ದೆಗಳಿಗೆ ಅರ್ಜಿ ಕರೆದಾಗ ಇವರಿಗೂ ಸಂದರ್ಶನಕ್ಕೆ ಅವಕಾಶ ಕೊಟ್ಟು, ಅರ್ಹರಾದವರನ್ನು ಸಹಾಯಕ ಲೈನ್‌ಮ್ಯಾನ್ ಆಗಿ ನೇಮಿಸಿಕೊಳ್ಳುವುದು ರೂಢಿಯಲ್ಲಿತ್ತು. ಇದರಿಂದಾಗಿ, ಇಂದಲ್ಲ ನಾಳೆ ತಮ್ಮ ಸೇವೆಯನ್ನು ಕಾಯಂಗೊಳಿಸುತ್ತಾರೆ ಎನ್ನುವ ನಿರೀಕ್ಷೆಯಿಂದ, ದಿನಗೂಲಿ ಕಾರ್ಮಿಕರಾಗಿ ಕರ್ತವ್ಯ ನಿರ್ವಹಿಸುವಾಗಲೂ ಅವರಲ್ಲಿ ಶ್ರದ್ಧೆ ಇರುತ್ತಿತ್ತು. ದಿನಗೂಲಿ ಕಾರ್ಮಿಕರಿಗೆ ಉದ್ಯೋಗ ಭದ್ರತೆ ಕಲ್ಪಿಸುವ ಅವಕಾಶ ಸಹ ಇರುತ್ತಿತ್ತು. ಇತರ ಇಲಾಖೆಗಳಲ್ಲೂ ಇಂತಹ ವ್ಯವಸ್ಥೆ ಇದ್ದಿರಬಹುದು. ಆದರೆ ಪೌರಕಾರ್ಮಿಕರ ಇತ್ತೀಚಿನ ಮುಷ್ಕರವನ್ನು ಗಮನಿಸಿದರೆ, ಈಗ ಇಂತಹ ವ್ಯವಸ್ಥೆ ಇದ್ದಂತೆ ಕಾಣುತ್ತಿಲ್ಲ. ಅದರ ಪರಿಣಾಮವಾಗಿ, ಕೆಲವು ಇಲಾಖೆಗಳಲ್ಲಿ ಅನೇಕ ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದರೂ ಭವಿಷ್ಯದ ಬಗೆಗೆ ಅಸ್ಥಿರತೆಯು ಕಾರ್ಮಿಕರನ್ನು ಕಾಡುತ್ತಿದೆ. ಈಗ ಪೌರಕಾರ್ಮಿಕರ ಸಮಸ್ಯೆಗಳಿಗೆ ಸ್ಪಂದಿಸಿರುವ ಸರ್ಕಾರ, ಅವರ ಸೇವೆ ಕಾಯಂಗೊಳಿಸುವ ಕುರಿತು ಪರಿಶೀಲಿಸುವುದಾಗಿ ಹೇಳಿದೆ. ಈ ಭರವಸೆ ಕೃತಿಗೆ ಇಳಿಯಲಿ.

**ಸತ್ಯಬೋಧ,** ಬೆಂಗಳೂರು

### ನೀರಿನ ಮೂಲ ಗುರುತಿಸಿ

ದೇಶದ ಗ್ರಾಮೀಣ ಪ್ರದೇಶದ ಎಲ್ಲಾ ಮನೆಗಳಿಗೆ ಶುದ್ಧ ಕುಡಿಯುವ ನೀರನ್ನು ಪೂರೈಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಜಲಜೀವನ್ ಮಿಷನ್ ಅಭಿಯಾನವು ಸರಿಯಾದ ರೀತಿಯಲ್ಲಿ ಅನುಷ್ಠಾನಕ್ಕೆ ಬಂದರೆ ಒಳ್ಳೆಯ ಯೋಜನೆಯೇ. ಆದರೆ ಈಗ ಹಳ್ಳಿಗಳಲ್ಲಿ ಸರಿಯಾಗಿ ನೀರಿನ ಮೂಲವನ್ನು ಗುರುತಿಸದೆಯೇ ಪೈಪ್‌ಲೈನ್ ತೆಗೆಯುತ್ತಾ ಹೋಗುತ್ತಿದ್ದಾರೆ. ಆ ಬಗ್ಗೆ ಜನ ಪ್ರಶ್ನಿಸಿದರೆ, ನೀರಿನ ಮೂಲದ ಬಗ್ಗೆ ಸಂಬಂಧಪಟ್ಟ ಇಲಾಖೆಯವರು ಅಸ್ಪಷ್ಟ ಮಾಹಿತಿ ನೀಡುತ್ತಾರೆ. ಮೊದಲು ನೀರಿನ ಮೂಲವನ್ನು ಕಂಡುಕೊಂಡು ಆನಂತರ ಮುಂದಿನ ಕೆಲಸವನ್ನು ಮಾಡಿದರೆ ಆ ಯೋಜನೆಯ ಬಗ್ಗೆ ಜನರಲ್ಲಿ ನಂಬಿಕೆ ಮೂಡುತ್ತದೆ. ಮಲೆನಾಡಿನ ಹಳ್ಳಿಗಳಲ್ಲಂತೂ ಅಲ್ಲಲ್ಲೇ ಕಿರು ತೊರೆಗಳಂಥ ನೀರಿನ ಮೂಲಗಳು ಸಿಗುತ್ತವೆ. ಅವುಗಳನ್ನೇ ಅಭಿವೃದ್ಧಿಪಡಿಸಿ ಮನೆ ಮನೆಗಳಿಗೆ ನೀರನ್ನು ಒದಗಿಸುವ ಯೋಜನೆ ಹಾಕಿಕೊಂಡರೆ ತುಂಬಾ ಒಳ್ಳೆಯದು.

**ಚಾವಲ್ಮನೆ ಸುರೇಶ್ ನಾಯಕ್,** ಹಾಲ್ಮತ್ತೂರು, ಕೊಪ್ಪ

### ಸಲ್ಲಿಕೆಯಾಗದ ಆಸ್ತಿ ವಿವರ: ಕೆಟ್ಟ ಮಾದರಿ

ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಪ್ರಕಾರ, ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಸದಸ್ಯರು ಪ್ರತಿವರ್ಷ ಜೂನ್ 30ರೊಳಗೆ ತಮ್ಮ ಆಸ್ತಿ ಮತ್ತು ಬಾಧ್ಯತೆಯ ವಿವರವನ್ನು ಸಲ್ಲಿಸುವುದು ಕಡ್ಡಾಯ. ಆದರೂ ವಿಧಾನಸಭೆಯ 114 ಮತ್ತು ವಿಧಾನಪರಿಷತ್ತಿನ 49 ಸದಸ್ಯರು ಕಳೆದ ಆರ್ಥಿಕ ವರ್ಷದ ಆಸ್ತಿ ಮತ್ತು ಬಾಧ್ಯತೆಯ ವಿವರಗಳ ಪ್ರಮಾಣಪತ್ರವನ್ನು ಇದುವರೆಗೆ ಸಲ್ಲಿಸದಿರುವುದು ವರದಿಯಾಗಿದೆ (ಪ್ರ.ವಾ., ಜುಲೈ 7). ಇವರಲ್ಲಿ ಗೃಹ ಸಚಿವ ಆರಗ ಜ್ಞಾನೇಂದ್ರ, ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ಮತ್ತು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಪ್ರಮುಖರು. ಇವರೆಲ್ಲರೂ ಶಾಸಕರು, ಶಾಸನಗಳನ್ನು ರೂಪಿಸುವವರು! ಕಾಯ್ದೆ-ಕಾನೂನುಗಳನ್ನು ಇವರೇ ಪಾಲಿಸದಿದ್ದರೆ ಹೇಗೆ? ತಾವು ರೂಪಿಸಿದ ಕಾನೂನುಗಳು ಸಾರ್ವಜನಿಕರು ಪಾಲಿಸುವುದಕ್ಕಾಗಿ ಮಾತ್ರ, ತಮಗಲ್ಲ ಎಂಬ ಮನೋಭಾವ ಇದ್ದಿರಬಹುದು. ಇಲ್ಲವೇ ‘ಅನುಕೂಲವಾದಾಗ ಸಲ್ಲಿಸಿದರಾಯಿತು’ ಎಂಬ ಉಡಾಫೆಯ ಧೋರಣೆಯಾದರೂ ಇದರ ಹಿಂದೆ ಕೆಲಸ ಮಾಡಿರಬಹುದು.

**ಶ್ರುತಿ ಪಿ. ಗೌಡ,** ಬೆಂಗಳೂರು

### ದೈಹಿಕ ಶಿಕ್ಷಣ: ವಿಶೇಷ ವಿಷಯವಲ್ಲ!

ಶಿಕ್ಷಣ ಇಲಾಖೆ ಆಯುಕ್ತರು ಇತ್ತೀಚೆಗೆ ಹೊರಡಿಸಿರುವ ಜ್ಞಾಪನಾ ಪತ್ರವೊಂದರಲ್ಲಿ, ದೈಹಿಕ ಶಿಕ್ಷಣ ವಿಷಯವನ್ನು ‘ವಿಶೇಷ ವಿಷಯ’ ಎಂದು ಉಲ್ಲೇಖಿಸಲಾಗಿದೆ. ಈಗಾಗಲೇ 6ರಿಂದ 10ನೇ ತರಗತಿವರೆಗೆ ದೈಹಿಕ ಶಿಕ್ಷಣ ಪಠ್ಯ ಪುಸ್ತಕವಿದ್ದು, ತಾತ್ವಿಕ ಹಾಗೂ ಪ್ರಾಯೋಗಿಕ ತರಗತಿಗಳು ನಡೆಯುತ್ತಿವೆ. ಹಾಗಾಗಿ ದೈಹಿಕ ಶಿಕ್ಷಣ ‘ವಿಶೇಷ ವಿಷಯ’ ಆಗುವುದಿಲ್ಲ. ಸರ್ಕಾರ ಜಾರಿಗೆ ತಂದಿರುವ ಯೋಗ ಶಿಕ್ಷಣ ‘ಫಿಟ್ ಇಂಡಿಯಾ’ ಹಾಗೂ ‘ಖೇಲೋ ಇಂಡಿಯಾ’ ಯೋಜನೆಗಳು ಮಕ್ಕಳಲ್ಲಿ ಕ್ರೀಡಾಸಕ್ತಿ ಬೆಳೆಸುವಲ್ಲಿ ಪರಿಣಾಮಕಾರಿಯಾಗಿದ್ದು, ದೈಹಿಕ ಶಿಕ್ಷಣ ಶಿಕ್ಷಕರು ಈ ಯೋಜನೆಗಳನ್ನು ಕ್ರಿಯಾಶೀಲವಾಗಿ ಕಾರ್ಯರೂಪಕ್ಕೆ ತರಲು ಶ್ರಮಿಸುತ್ತಿದ್ದಾರೆ. ದೈಹಿಕ ಶಿಕ್ಷಣವನ್ನು ಪಾರ್ಟ್ ‘ಎ’ ಎಂದು ಪರಿಗಣಿಸಬೇಕು, ದೈಹಿಕ ಶಿಕ್ಷಣ ಶಿಕ್ಷಕರನ್ನು ಸಹ ಶಿಕ್ಷಕರು ಎಂದು ಪರಿಗಣಿಸಬೇಕು ಎಂದು ಹೋರಾಡುತ್ತಿರುವ ಸಂದರ್ಭದಲ್ಲಿ (ಈಗಾಗಲೇ ಮುಖ್ಯ ಶಿಕ್ಷಕರ ಹುದ್ದೆ ಖಾಲಿ ಇದ್ದ ಸಂದರ್ಭದಲ್ಲಿ ದೈಹಿಕ ಶಿಕ್ಷಣ ಶಿಕ್ಷಕರನ್ನು ಜ್ಯೇಷ್ಠತೆಯ ಮೇಲೆ ಪ್ರಭಾರ ಎಂದ ಪರಿಗಣಿಸಲು ಆದೇಶವಾಗಿರುತ್ತದೆ) ಮತ್ತೆ ದೈಹಿಕ ಶಿಕ್ಷಣವನ್ನು ವಿಶೇಷ ವಿಷಯ (ಪಾರ್ಟ್ ‘ಬಿ’) ಎಂದು ಉಲ್ಲೇಖಿಸಲಾಗಿದೆ. ಇದನ್ನು ಇಲಾಖೆಯು ಮರುಪರಿಶೀಲಿಸಬೇಕು.

**ಸನಾವುಲ್ಲಾ ನವಿಲೇಹಾಳ್,** ದಾವಣಗೆರೆ

Printed and published by B A Ravi on behalf of The Printers (Mysore) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಶಾಸಕರು ಗುಂಪು ಗುಂಪಾಗಿ ಪಕ್ಷಾಂತರ ಮಾಡಿದರೂ ಅದು ಮತದಾರರ ಮೇಲೆ ಬೀರುವ ಪ್ರಭಾವ ನಗಣ್ಯ. ಏಕೆ?

# ಪಕ್ಷಾಂತರಿಗಳ ಮರು ಆಯ್ಕೆ ಮತದಾರರು ಚಿಂತಿಸಬೇಕು



ಹಣ ಮತ್ತು ಅಧಿಕಾರ ಬಲವನ್ನು ಬಳಸಿಯೇ ದೊಡ್ಡ ಮಟ್ಟದ ಪಕ್ಷಾಂತರಗಳನ್ನು ನಡೆಸಲಾಗುತ್ತಿದೆ. ಪ್ರತಿಫಲದ ಆಸೆ ಅಥವಾ ಬೆದರಿಕೆಯ ಕಾರಣದಿಂದ ಪಕ್ಷಾಂತರ ಮಾಡಿ, ಸರ್ಕಾರ ರಚಿಸುವ ಶಾಸಕರು ದೀರ್ಘಾವಧಿಯಲ್ಲಿ ಉತ್ತಮ ಆಳ್ವಿಕೆ ನೀಡಲು ಸಾಧ್ಯವಿಲ್ಲ. ಕೊನೆಯದಾಗಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾರರ ತೀರ್ಮಾನವೇ ಅಂತಿಮ

ಪ್ರಜಾವಾಣಿ ಚರ್ಚೆ

• ತ್ರಿಲೋಚನ್ ಶಾಸ್ತ್ರಿ

ಶಾಸಕರು ಪಕ್ಷ ಬದಲಾಯಿಸುವುದು ಮತ್ತು ಸರ್ಕಾರಗಳನ್ನು ಉರುಳಿಸುವುದು ಮತ್ತೆ ತೀವ್ರಗೊಂಡಿದೆ. ಮಹಾರಾಷ್ಟ್ರ, ಕರ್ನಾಟಕ, ಗೋವಾ ಮತ್ತು ಇತರ ರಾಜ್ಯಗಳಲ್ಲಿ ಇದು ಆಗಿದೆ. ಇದು ಕೆಲವು ಮೂಲ ಪ್ರಶ್ನೆಗಳನ್ನು ಹುಟ್ಟು ಹಾಕಿದೆ– ಮತದಾರರು ಯಾರನ್ನು ಆಯ್ಕೆ ಮಾಡುತ್ತಿದ್ದಾರೆ– ಶಾಸಕರನ್ನೋ ಪಕ್ಷವನ್ನೋ ಅಥವಾ ಈ ಎರಡರ ಸಂಯೋಜನೆಯನ್ನೋ? ಪಕ್ಷಾಂತರ ಮಾಡುವ ಶಾಸಕರು ಯಾಕಾಗಿ ಪಕ್ಷಾಂತರ ಮಾಡಿದ್ದೇವೆ ಎಂಬುದನ್ನು ಮತದಾರರಿಗೆ ಎಂದೂ ವಿವರಿಸುವುದಿಲ್ಲ.

ಪಕ್ಷಾಂತರದ ಸಮಸ್ಯೆಗೆ ಪರಿಹಾರವಾಗಿ ಪಕ್ಷಾಂತರ ನಿಷೇಧ ಕಾಯ್ದೆಯನ್ನು 1985ರಲ್ಲಿ ಅಂಗೀಕರಿಸಲಾಯಿತು ಮತ್ತು 2003ರಲ್ಲಿ ಅದಕ್ಕೆ ತಿದ್ದುಪಡಿ ತರಲಾಯಿತು. ಶಾಸಕನೊಬ್ಬ ಬೇರೆ ಪಕ್ಷಕ್ಕೆ ಸೇರಬೇಕಾದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು. ಸಾಮಾನ್ಯವಾಗಿ, ರಾಜೀನಾಮೆಯ ಬಳಿಕ ಉಪಚುನಾವಣೆ ನಡೆಯುತ್ತದೆ ಮತ್ತು ಅದೇ ಶಾಸಕ ತಾನು ಹೊಸದಾಗಿ ಸೇರಿದ ಪಕ್ಷದಿಂದ ಸ್ಪರ್ಧಿಸಿ ಗೆಲ್ಲುತ್ತಾನೆ. ಉಪಚುನಾವಣೆ ನಡೆಸಲು ತೆರಿಗೆದಾರರ ಹಣವನ್ನು ವೆಚ್ಚ ಮಾಡಲಾಗುತ್ತದೆ. ಯಾವುದೇ ಪಕ್ಷದ ಮೂರನೇ ಒಂದರಷ್ಟು ಶಾಸಕರು ಪಕ್ಷ ಬಿಟ್ಟರೆ ಅದನ್ನು ಪಕ್ಷ ವಿಭಜನೆ ಎಂದು 2003ರವರೆಗೆ ಪರಿಗಣಿಸಲಾಗುತ್ತಿತ್ತು. ಈ ರೀತಿಯಲ್ಲಿಯೂ ಹಲವು ಬಾರಿ ನಡೆದಿದೆ. ಹಾಗಾಗಿ, ಈ ಅವಕಾಶವನ್ನು ರದ್ದುಪಡಿಸಲಾಯಿತು. ಈಗ, ಯಾವುದೇ ಪಕ್ಷದ ಕನಿಷ್ಠ ಮೂರನೇ ಎರಡರಷ್ಟು ಶಾಸಕರು ಬೇರೊಂದು ಪಕ್ಷಕ್ಕೆ ಸೇರಿದರೆ ಅದನ್ನು ಆ ಪಕ್ಷದ ಜೊತೆಗೆ ವಿಲೀನ ಎಂದು ಪರಿಗಣಿಸಲು ಅವಕಾಶ ಇದೆ.

ಇನ್ನೊಂದು ಕಳವಳಕಾರಿ ವಿಚಾರವೂ ಇದೆ. ಕಾಯ್ದೆ ಇದ್ದರೂ ಸುಪ್ರೀಂ ಕೋರ್ಟ್ ಹಲವು ಬಾರಿ ಆದೇಶಗಳನ್ನು ನೀಡಿದ್ದರೂ ಪಕ್ಷಾಂತರ ಮಾಡಿದ ಶಾಸಕರನ್ನು ಅನರ್ಹಗೊಳಿಸದ ಸ್ಪೀಕರ್‌ಗಳು ಇದ್ದಾರೆ; ಅಥವಾ ಅವರು ತಮ್ಮ ಮೂಲ ಪಕ್ಷಕ್ಕೆ ಅನುಕೂಲವಾಗುವ ನಿರ್ಧಾರ ಕೈಗೊಂಡಿದ್ದಾರೆ. ನ್ಯಾಯಾಲಯದಲ್ಲಿ ಇವೆಲ್ಲ ಇತ್ಯರ್ಥವಾಗುವ ಹೊತ್ತಿಗೆ ಶಾಸನ ಸಭೆಯ ಅವಧಿಯೇ ಮುಗಿದಿರುತ್ತದೆ.

ಯಾವ ರೀತಿಯ ಕಾಯ್ದೆ ನಮ್ಮಲ್ಲಿ ಇರಬೇಕು ಎಂಬುದರಲ್ಲಿ ಇಂತಹ ಪ್ರಶ್ನೆಗಳಿಗೆ ಉತ್ತರ ಇದೆ. ಆದರೆ, ಯಾವುದೇ ರೀತಿಯಲ್ಲಿಯಾದರೂ ಸರಿ ಅಧಿಕಾರಕ್ಕೆ ಏರಬೇಕು ಎಂಬುದಷ್ಟೇ ಇದ್ದಾಗ ಕಾನೂನಿನ ಕುಣಿಕೆಯನ್ನು ತಪ್ಪಿಸಿಕೊಳ್ಳುವುದಕ್ಕೆ ದಾರಿ ಇರುತ್ತದೆ. ಮತ್ತೊಂದು ಅಂಶವೆಂದರೆ, ಪಕ್ಷಾಂತರಗಳನ್ನು ಯೋಜಿಸುವ ಅದೇ ರಾಜಕೀಯ ವರ್ಗವೇ ಕಾಯ್ದೆಯನ್ನೂ ರೂಪಿಸುತ್ತದೆ. ಕಾನೂನಿನ ಮೂಲಕ ಮಾತ್ರ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ಪಕ್ಷಾಂತರ ಕಾಯ್ದೆ ಅಂಗೀಕಾರವಾದ 1985 ಮತ್ತು ಅದಕ್ಕೆ ತಿದ್ದುಪಡಿಯಾದ 2003ರ ಬಳಿಕ ನಡೆದ ಘಟನೆಗಳು ದೃಢಪಡಿಸಿವೆ. ಪಕ್ಷಾಂತರ ಮಾಡಿದವರು ಎರಡು ವರ್ಷಗಳವರೆಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹರಲ್ಲ ಎಂಬ ಕಾನೂನು ರೂಪಿಸಿದರೆ ಶಾಸಕರ ಪಕ್ಷಾಂತರಕ್ಕೆ ಸ್ವಲ್ಪ ಮಟ್ಟಿಗೆ ತಡೆ ಒಡ್ಡಬಹುದು.

ನಿಜವಾದ ಸಮಸ್ಯೆ ಬೇರೆಡೆಯೇ ಇದೆ. ಹಲವು ಪ್ರಕರಣಗಳಲ್ಲಿ, ದೊಡ್ಡ ಸಂಖ್ಯೆಯ ಶಾಸಕರನ್ನು ದೂರದ ರಾಜ್ಯಕ್ಕೆ ಕರೆದೊಯ್ದು, ದುಬಾರಿ ರೆಸಾರ್ಟ್‌ಗಳನ್ನು ಪೂರ್ಣವಾಗಿ ಅವರಿಗಾಗಿ ಕಾಯ್ದಿರಿಸಿ, ಅವರನ್ನು ಅಲ್ಲಿ ಉಳಿಸಲಾಗುತ್ತದೆ. ಇದು ಎಲ್ಲರಿಗೂ ಗೊತ್ತಿರುವ ಸತ್ಯ. ಆದರೆ, ಈ ಪ್ರವಾಸಕ್ಕೆ ಹಣ ವೆಚ್ಚ ಮಾಡುವವರು ಯಾರು ಎಂಬುದು ನಮಗೆ ತಿಳಿಯುವುದೇ ಇಲ್ಲ. ಇಂತಹ ಪ್ರಯಾಣ ಮತ್ತು ವಾಸ್ತವ್ಯಕ್ಕೆ ಮಾಡುವ ಖರ್ಚು ನ್ಯಾಯಬದ್ಧವೇ ಎಂಬುದೂ ನಮಗೆ ಗೊತ್ತಿಲ್ಲ. ಪಕ್ಷಾಂತರ ಮಾಡುವ ಶಾಸಕರಿಗೆ ವಿವಿಧ ಭರವಸೆಗಳನ್ನು ನೀಡಲಾಗುತ್ತದೆ ಮತ್ತು ಬೆದರಿಕೆಯನ್ನೂ ಒಡ್ಡಲಾಗುತ್ತದೆ ಎಂದೂ ಜನರು ಭಾವಿಸಿದ್ದಾರೆ. ಹಣ ನೀಡುವುದು, ಸಚಿವ ಸ್ಥಾನ ಮುಂತಾದವು ಭರವಸೆ ಅಥವಾ ಆಮಿಷಗಳಲ್ಲಿ ಸೇರಿವೆ. ಹಾಗೆಯೇ, ಆದಾಯ ತೆರಿಗೆ ಇಲಾಖೆ, ಜಾರಿ ನಿರ್ದೇಶನಾಲಯ ಅಥವಾ ಸಿಬಿಐಯಂತಹ ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ಕ್ರಮ ಕೈಗೊಳ್ಳುವುದು ಬೆದರಿಕೆಯಲ್ಲಿ ಸೇರಿವೆ. ಆದರೆ, ರಿಸಾರ್ಟ್ ರಾಜಕಾರಣದ ಬಗ್ಗೆ ಆದಾಯ ತೆರಿಗೆ ಅಥವಾ ಪೊಲೀಸರು ತನಿಖೆ ನಡೆಸಿದ ನಿದರ್ಶನ ಇಲ್ಲವೇ ಇಲ್ಲ.

ಈ ರೀತಿಯ ಸಮಸ್ಯೆಗಳನ್ನು ಬೇರೆ ದೇಶಗಳು ಹೇಗೆ ನಿರ್ವಹಿಸಿವೆ? ಹಳೆಯ ಮತ್ತು ಹೆಚ್ಚು ಪ್ರಬುದ್ಧವಾದ ಪ್ರಜಾತಂತ್ರ ವ್ಯವಸ್ಥೆಗಳಲ್ಲಿ, ಒಂದು ಅಥವಾ ಎರಡು ಹಗರಣಗಳು ಒಬ್ಬ ರಾಜಕಾರಣಿಯ ವೃತ್ತಿಜೀವನವನ್ನೇ ಮುಗಿಸಲು ಸಾಕು. ಅಂತಹ ರಾಜಕಾರಣಿಯ ಮೇಲಿನ ವಿಶ್ವಾಸವನ್ನು ಮತದಾರರು ಕಳೆದುಕೊಳ್ಳುತ್ತಾರೆ. ಭಾರತವು ಅಂತಹ ಮಟ್ಟಕ್ಕೆ ಇನ್ನೂ ತಲುಪಿಲ್ಲ. ಅಂತಹ ಪ್ರಬುದ್ಧತೆ ಇಲ್ಲದಿರುವ ಕಾರಣ ನಾವು ಕಾನೂನು ಮತ್ತು ನ್ಯಾಯಾಲಯಗಳಲ್ಲಿ ಪರಿಹಾರ ಕಂಡುಕೊಳ್ಳುತ್ತೇವೆ. ನಾವು ಬ್ರಿಟಿಷರಿಂದ ಪಡೆದುಕೊಂಡಿರುವ ಮೂಲ ವ್ಯವಸ್ಥೆಯನ್ನು ಮರುಪರಿಶೀಲನೆಗೆ ಒಳಪಡಿಸಬೇಕಾದ ಸಮಯ ಬಹುಶಃ ಬಂದಿದೆ ಅನಿಸುತ್ತದೆ. ಚುನಾವಣೆಯಲ್ಲಿ ಗರಿಷ್ಠ ಮತಗಳನ್ನು ಪಡೆದ ಅಭ್ಯರ್ಥಿಯನ್ನು ವಿಜೇತ ಎಂದು ಪರಿಗಣಿಸುವ ವ್ಯವಸ್ಥೆ ನಮ್ಮದು. ಮುಖ್ಯಮಂತ್ರಿಯು ನೇರವಾಗಿ ಜನರಿಂದ ಆಯ್ಕೆ ಆಗುವುದಿಲ್ಲ; ಬದಲಿಗೆ, ಬಹುಮತ ಪಡೆದ ಪಕ್ಷದ ಶಾಸಕರು ಮುಖ್ಯಮಂತ್ರಿಯನ್ನು ಆಯ್ಕೆ ಮಾಡುತ್ತಾರೆ. ಬೇರೆ ದೇಶಗಳಲ್ಲಿ ಮೂರು ರೀತಿಯ ವ್ಯವಸ್ಥೆಗಳನ್ನು ಕಾಣಬಹುದು. ಮತದಾರರು ನೇರವಾಗಿ ಮುಖ್ಯಮಂತ್ರಿಯನ್ನು ಆಯ್ಕೆ ಮಾಡುವುದು ಒಂದು ವ್ಯವಸ್ಥೆ– ಅಮೆರಿಕದಲ್ಲಿ ರಾಜ್ಯದ ಗವರ್ನರ್‌ಗಳನ್ನು ಮತದಾರರು ನೇರವಾಗಿ ಆಯ್ಕೆ ಮಾಡುತ್ತಾರೆ. ಪ್ರಮಾಣಕ್ಕೆ ಅನುಗುಣವಾದ ಪ್ರಾತಿನಿಧ್ಯ ವ್ಯವಸ್ಥೆ ಇರುವ ದೇಶಗಳೂ ಇವೆ. ಅಂದರೆ, ಪಕ್ಷಗಳು ಪಡೆಯುವ ಮತದ ಪ್ರಮಾಣಕ್ಕೆ ಅನುಗುಣವಾಗಿ ಹೆಚ್ಚುವರಿ ಸ್ಥಾನಗಳನ್ನು ಪಕ್ಷಗಳಿಗೆ ನೀಡಲಾಗುತ್ತದೆ. ಫ್ರಾನ್ಸ್‌ನಲ್ಲಿ ಬೇರೊಂದು ರೀತಿಯ ವ್ಯವಸ್ಥೆ ಇದೆ. ಅಲ್ಲಿ ಗರಿಷ್ಠ ಮತಗಳನ್ನು ಪಡೆದ ಇಬ್ಬರು ಅಭ್ಯರ್ಥಿಗಳ ನಡುವೆ ಎರಡನೇ ಸುತ್ತಿನ ಸ್ಪರ್ಧೆ ನಡೆಯುತ್ತದೆ. ವಿಜೇತ ಅಭ್ಯರ್ಥಿಗೆ ಶೇ 50ಕ್ಕಿಂತ ಹೆಚ್ಚು ಮತದಾರರ ಬೆಂಬಲವನ್ನು ಖಾತರಿಪಡಿಸಿಕೊಳ್ಳುವುದಕ್ಕಾಗಿ ಈ ಮಾದರಿಯನ್ನು ಅನುಸರಿಸಲಾಗುತ್ತಿದೆ. ಬಹುಪ್ರತಿನಿಧಿ ಕ್ಷೇತ್ರಗಳ ವ್ಯವಸ್ಥೆ ಜಪಾನ್‌ನಲ್ಲಿ ಇದೆ. ಇಲ್ಲಿ, ಒಂದು ಕ್ಷೇತ್ರಕ್ಕೆ ಇಬ್ಬರು ಪ್ರತಿನಿಧಿಗಳು. ಯಾವ ರೀತಿಯ ವ್ಯವಸ್ಥೆಯು ಭಾರತಕ್ಕೆ ಉತ್ತಮ ಎಂಬ ಬಗ್ಗೆ ನಾವು ಚರ್ಚೆ ನಡೆಸಬೇಕಾದ ಅಗತ್ಯ ಇದೆ. ಹಲವು ಆಯೋಗಗಳು ಈ ವಿಚಾರಗಳ ಬಗ್ಗೆ ವಿವಿಧ ರೀತಿಯ ಶಿಫಾರಸುಗಳನ್ನು ನೀಡಿವೆ.

ಒಟ್ಟಿನಲ್ಲಿ, ಮೂಲ ವಿಷಯ ಏನು ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕಿದೆ. ಹಣ ಮತ್ತು ಅಧಿಕಾರ ಬಲವನ್ನು ಬಳಸಿಯೇ ದೊಡ್ಡ ಮಟ್ಟದ ಪಕ್ಷಾಂತರಗಳನ್ನು ನಡೆಸಲಾಗುತ್ತಿದೆ. ಪ್ರತಿಫಲದ ಆಸೆ ಅಥವಾ ಬೆದರಿಕೆಯ ಕಾರಣದಿಂದ ಪಕ್ಷಾಂತರ ಮಾಡಿ, ಸರ್ಕಾರ ರಚಿಸುವ ಶಾಸಕರು ದೀರ್ಘಾವಧಿಯಲ್ಲಿ ಉತ್ತಮ ಆಳ್ವಿಕೆ ನೀಡಲು ಸಾಧ್ಯವಿಲ್ಲ. ಕೊನೆಯದಾಗಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾರರ ತೀರ್ಮಾನವೇ ಅಂತಿಮ. ಪಕ್ಷಾಂತರಿಗಳನ್ನು ಮರು ಆಯ್ಕೆ ಮಾಡುವ ಕುರಿತು ಮತದಾರರು ಚಿಂತಿಸುವ ಅಗತ್ಯ ಇದೆ.

ಲೇಖಕ: ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್‌ನ ಅಧ್ಯಕ್ಷ, ಐಐಎಂ ಬೆಂಗಳೂರಿನಲ್ಲಿ ಪ್ರಾಧ್ಯಾಪಕ



ಮಹಾರಾಷ್ಟ್ರ ಮುಖ್ಯಮಂತ್ರಿಯಾಗಿದ್ದ ಉದ್ಧವ್ ಠಾಕ್ರೆ ವಿರುದ್ಧ ಬಂಡೆದ್ದ ಶಿವಸೇನಾ ಶಾಸಕರ ಗುಂಪು ಗುವಾಹಟಿಯ ರೆಸಾರ್ಟ್‌ನಲ್ಲಿ ಇತ್ತೀಚೆಗೆ ತಂಗಿ ಸಮಾಲೋಚನೆ ನಡೆಸಿದ್ದ ದೃಶ್ಯ –ಪಿಟಿಐ ಚಿತ್ರ



## ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 168

### ಶಿವನ ಮನದಿಂದ ದೂರಾದ ಸತಿ

‘ನಾನು ಈಗ ರಾಮನ ಅವತಾರ ತಾಳಿದ್ದೇನೆ. ನನ್ನ ತಂದೆ ದಶರಥನ ಅಪ್ಪಣೆಯಂತೆ ಸೀತೆ ಮತ್ತು ಲಕ್ಷ್ಮಣರೊಡನೆ ಈ ಕಾಡಿಗೆ ಬಂದಿರುವೆ. ಓರ್ವ ರಾಕ್ಷಸ ನನ್ನ ಹೆಂಡತಿಯಾದ ಸೀತೆಯನ್ನು ಅಪಹರಿಸಿರುವ. ನಾನು ತಮ್ಮನೊಡನೆ ನನ್ನ ಪತ್ನಿಯನ್ನು ಹುಡುಕುತ್ತಲಿದ್ದೆ. ಇದರ ಮಧ್ಯೆ ಸರ್ವಮಂಗಳೆಯಾದ ನಿನ್ನ ದರ್ಶನವಾಗಿರುವುದರಿಂದ ಮಂಗಳವಾಗುವುದೆಂದು ಭಾವಿಸುವೆ. ಸೀತೆಯನ್ನ ಅಪಹರಿಸಿದ ದುಷ್ಟ ರಾಕ್ಷಸನನ್ನು ಸಂಹರಿಸಿ, ಸೀತೆಯನ್ನು ಮರಳಿ ಪಡೆಯುವಂತೆ ನನ್ನ ಅನುಗ್ರಹಿಸು’ ಎಂದು ಪ್ರಾರ್ಥಿಸುತ್ತಾನೆ ರಾಮ. ನಂತರ ಸತೀದೇವಿಯ ಆಶೀರ್ವಾದ ಪಡೆದು, ಸೀತೆಯನ್ನು ಹುಡುಕಲು ಹೊರಡುತ್ತಾನೆ.


‘ಎಲೈ ಸತಿ, ರಾಮನ ಪರೀಕ್ಷೆ ಮಾಡಿದೆಯಾ?’ ಎಂದು ಪ್ರೀತಿಯಿಂದ ಕೇಳಿದ ಶಿವ. ಆಗ ಸತೀದೇವಿಯು ಏನನ್ನೂ ಹೇಳದೆ, ಮುಖವನ್ನು ಬಗ್ಗಿಸಿ ಸುಮ್ಮನೆ ನಿಂತಳು. ಲೋಕಮರ್ಯಾದೆಯನ್ನು ರಕ್ಷಿಸುವ ಶಿವನು ತಾನು ಹಿಂದೆ ಮಾಡಿದ ಪ್ರತಿಜ್ಞೆಯನ್ನು ಸ್ಮರಿಸಿದ. ಧರ್ಮಕರ್ತನೂ ಧರ್ಮವಕ್ತೃವೂ ಧರ್ಮಪಾಲಕನೂ ಆದ ತಾನು ಸತಿಯಲ್ಲಿ ಸ್ನೇಹವನ್ನಿಟ್ಟರೆ ತನ್ನ ಪ್ರತಿಜ್ಞೆ ನಷ್ಟವಾಗುವುದು. ಆದ್ದರಿಂದ ಸತಿಯು ನನ್ನ ಮಾತಿನಲ್ಲಿ ಅಪನಂಬಿಕೆಯುಳ್ಳವಳಾದರೆ ಅವಳನ್ನು ತ್ಯಜಿಸುವೆ – ಎಂದು ತಾನು ಮಾಡಿದ ಪ್ರತಿಜ್ಞೆಯಂತೆ ಸತೀದೇವಿಯನ್ನು ಮನಸ್ಸಿನಿಂದಲೇ ಬಿಟ್ಟು, ತನ್ನ ವಾಸಸ್ಥಾನವಾದ ಕೈಲಾಸಗಿರಿಗೆ ತೆರಳಿದ. ಮುಂದೆ ತನಗೂ ಸತೀದೇವಿಗೂ ಸಂಬಂಧವಿಲ್ಲವೆಂದು ಪ್ರಕಟಿಸಿದ.

ಆಗ ಆಕಾಶವಾಣಿಯೊಂದು ಹೇಳಿತು: ‘ಓ ಪರಮೇಶ್ವರ ನೀನು ಧನ್ಯ. ನಿನ್ನಂತೆ ಪ್ರತಿಜ್ಞೆಯನ್ನು ನಿರ್ವಹಿಸುವವರು ದುರ್ಲಭ.’ ಆಕಾಶವಾಣಿಯನ್ನು ಕೇಳಿದ ಸತೀದೇವಿಯು ‘ಓ ನಾಥ, ನೀನೇನು ಪ್ರತಿಜ್ಞೆಯನ್ನು ಮಾಡಿರುವೆ? ನನಗೆ ಹೇಳು’ ಎಂದು ಶಿವನನ್ನು ಕೇಳಿದಳು. ಪರಮೇಶ್ವರನು ಹಿಂದೆ ತನ್ನ ಮದುವೆಯ ಕಾಲದಲ್ಲಿ ಹರಿ-ಬ್ರಹ್ಮರ ಎದುರಿಗೆ ತಾನು ಮಾಡಿದ ಪ್ರತಿಜ್ಞೆಯನ್ನು ಹೇಳಲಿಲ್ಲ. ಆಗ ಸತೀದೇವಿ ಶಿವನನ್ನು ಭಕ್ತಿಯಿಂದ ಧ್ಯಾನಿಸಿ, ಹಿಂದೆ ನಡೆದ ಪ್ರತಿಜ್ಞೆಯನ್ನು ತಿಳಿದುಕೊಂಡಳು. ಪ್ರತಿಜ್ಞೆಯಂತೆ ಶಿವ ತನ್ನನ್ನು ಮನಸ್ಸಿನಿಂದ ತ್ಯಾಗ ಮಾಡಿರುವನೆಂದು ತಿಳಿದು ತುಂಬಾ ಶೋಕಿಸಿದಳು.

ಸತಿಯ ದುಃಖವನ್ನು ತಿಳಿದ ಶಿವ, ಅವಳ ದುಃಖ ಮರೆಯುವಂತೆ ಅನೇಕ ಮನೋಹರವಾದ ಕಥೆಗಳನ್ನು ಹೇಳಿದ. ಕಥೆಯನ್ನು ಹೇಳುತ್ತಾ ಶಿವನು ಸತಿಯೊಡನೆ ಕೈಲಾಸಗಿರಿಗೆ ಹೋದ. ಅಲ್ಲಿ ಸಮಾಧಿಸ್ಥನಾಗಿ ತನ್ನ ಪರಮಾತ್ಮಸ್ವರೂಪವನ್ನು ಧ್ಯಾನಿಸತೊಡಗಿದ. ಸತೀದೇವಿಯೂ ದುಃಖಿತಳಾಗಿ ಸ್ವಸ್ವರೂಪನದಲ್ಲಿ ಧ್ಯಾನಾಸಕ್ತಳಾದಳು. ಬಹಳ ಕಾಲ ಸತೀ-ಶಿವರು ಸಮಾಧಿಸ್ಥರಾಗಿ ಧ್ಯಾನಿಸುತ್ತಿದ್ದರು. ಕೆಲವುಕಾಲದ ನಂತರ ಪರಮೇಶ್ವರ ಸಮಾಧಿಸ್ಥಿತಿಯಿಂದ ಹೊರಬಂದ. ಇದನ್ನು ತಿಳಿದ ಸತೀದೇವಿಯು ಶಿವನ ಬಳಿಗೆ ದುಗುಡ ತುಂಬಿದ ಮನದಿಂದ ಬಂದು ನಮಸ್ಕರಿಸಿದಳು. ಆಗ ದಯಾಮಯನಾದ ಶಿವ ಮನೋಹರವಾದ ಅನೇಕ ಕಥೆಗಳನ್ನು ಹೇಳಿ, ಸತೀದೇವಿಯ ಶೋಕವನ್ನು ಹೋಗಲಾಡಿಸಿದ. ಮತ್ತೆ ಮೊದಲಿನಂತೆ ಸತೀದೇವಿ ಸಂತೋಷವನ್ನು ಹೊಂದಿದಳು.

ಹೀಗೆ ಶಿವಸತಿಯರ ವಿಯೋಗದ ಕಥೆಯನ್ನು ನಾರದನಿಗೆ ಹೇಳಿದ ಬ್ರಹ್ಮ, ‘ಎಲೈ ನಾರದ, ಶಿವ ತನ್ನ ಪ್ರತಿಜ್ಞೆಯನ್ನು ನಿರ್ವಹಿಸಿದ ಎಂದು ಕೆಲವು ಮುನಿಗಳು ಶಿವಸತೀದೇವಿಯರ ವಿಯೋಗವನ್ನು ವರ್ಣಿಸುವರು. ಆದರೆ ಇದು ಸರಿಯಾದುದಲ್ಲ. ವಾಗರ್ಥಗಳಂತೆ ಸದಾ ಸೇರಿರುವ ಶಿವಸತಿಯರಿಗೆ ನಿಜವಾಗಿ ವಿಯೋಗವಿಲ್ಲ. ಶಿವ-ಸತೀದೇವಿಯರ ಚರಿತ್ರೆಯನ್ನು ಪಾರಮಾರ್ಥಿಕವಾಗಿ ಯಾರೂ ತಿಳಿಯಲಾರರು. ಅವರು ಅನಾದಿದಂಪತಿಗಳು. ಅವರಿಗೆ ಎಂದಿಗೂ ವಿಯೋಗವೆಂಬುದಿಲ್ಲ. ಆದರೆ ಸ್ವೇಚ್ಛೆಯಿಂದಲೇ ಅವರಿಗೆ ವಿಯೋಗವು ಆದರಾಗಬಹುದು’ ಅಂತ ಬ್ರಹ್ಮ ಹೇಳುವಲ್ಲಿಗೆ ಸತೀಖಂಡದ ಇಪ್ಪತ್ತೈದನೆಯ ಅಧ್ಯಾಯ ಮುಗಿಯುತ್ತದೆ.

# ಅದೃಶ್ಯ ಮತದಾರ ಪಾಠ ಕಲಿಸಲಿ



ರಾಜಕೀಯದಲ್ಲಿ ಆಮೂಲಾಗ್ರ ಬದಲಾವಣೆ ತರಬೇಕಾದರೆ ಪಕ್ಷಾಂತರ ನಿಷೇಧ ಕಾಯ್ದೆ ಹಾಗೂ ಸಂವಿಧಾನದ 10ನೇ ಪರಿಚ್ಛೇದಕ್ಕೆ ತಿದ್ದುಪಡಿ ಮಾಡಬೇಕು. ಪಕ್ಷಾಂತರ ಮಾಡಿದವರನ್ನು ಅನರ್ಹಗೊಳಿಸಿ ಮುಂದಿನ ಆರು ವರ್ಷಗಳವರೆಗೆ ಸ್ಪರ್ಧಿಸಲು ಅವಕಾಶ ನೀಡಬಾರದು. ಪಕ್ಷಾಂತರಿಗಳನ್ನು ಅನರ್ಹಗೊಳಿಸುವುದಕ್ಕಾಗಿಯೇ ನ್ಯಾಯ ಮಂಡಳಿಯನ್ನು ರಚಿಸಬೇಕು. ಹೈಕೋರ್ಟ್ ಹಾಲಿ ನ್ಯಾಯಮೂರ್ತಿಯನ್ನು ಈ ನ್ಯಾಯಮಂಡಳಿಯ ಮುಖ್ಯಸ್ಥರನ್ನಾಗಿ ನೇಮಿಸಿ, ಅನರ್ಹಗೊಳಿಸುವ ಅಧಿಕಾರ ನೀಡಬೇಕು

• ಎಂ.ಸಿ. ನಾಣಯ್ಯ

ಪ್ರತಿಯೊಂದು ರಾಜಕೀಯ ಪಕ್ಷವೂ ಪಕ್ಷಾಂತರದ ಲಾಭ ಪಡೆಯುತ್ತಿದೆ. ಪಕ್ಷಾಂತರವು ಸ್ವಾರ್ಥಕ್ಕಾಗಿ ನಡೆಯುತ್ತಿದೆಯೇ ಹೊರತು ಬೇರೆ ಯಾವ ಉದ್ದೇಶವೂ ಇಲ್ಲ. ಪಕ್ಷಾಂತರ ಸಂದರ್ಭದಲ್ಲಿ ನಡೆಯುವ ಭ್ರಷ್ಟಾಚಾರದಲ್ಲಿ ಮಂತ್ರಿಗಳು, ಶಾಸಕರು ಹಾಗೂ ಅಧಿಕಾರಿ ವರ್ಗ ಸೇರಿದಂತೆ ಎಲ್ಲರೂ ಭಾಗಿಯಾಗುತ್ತಿದ್ದಾರೆ.

ತೋಳ್ಬಲ, ಹಣ ಬಲ, ಜಾತಿ ಬಲದ ಆಧಾರದ ಮೇಲೆ ನಡೆಯುವ ಪಕ್ಷಾಂತರ, ಪ್ರಜಾತಂತ್ರ ವ್ಯವಸ್ಥೆಯನ್ನೇ ಸಂಪೂರ್ಣ ಬುಡಮೇಲು ಮಾಡುವ ಅಪಾಯದ ಪರಿಸ್ಥಿತಿಯನ್ನು ಸೃಷ್ಟಿಸಿದೆ. ಯಾವ ಪಕ್ಷವೂ ಪಕ್ಷಾಂತರದ ಕಳಂಕದಿಂದ ಹೊರತಾಗಿಲ್ಲ.

ಪಕ್ಷಾಂತರ ನಿಷೇಧ ಕಾಯ್ದೆ ಬೇಕು ಎಂಬ ಬೇಡಿಕೆ ಮೊದಲು ಕೇಳಿ ಬಂದಿದ್ದು ಹರಿಯಾಣದಲ್ಲಿ. 1965ರಲ್ಲಿ ಪಕ್ಷೇತರರಾಗಿ ಗೆದ್ದು ಬಂದಿದ್ದ ದಯಾಲಾಲ್ ಎನ್ನುವವರು, ಒಂದೇ ದಿನದಲ್ಲಿ ಮೂರು ಪಕ್ಷಗಳನ್ನು ಬದಲಾಯಿಸುತ್ತಾರೆ. ಇದರಿಂದಾಗಿಯೇ, ‘ಆಯಾ ರಾಮ್ ಗಯಾ ರಾಮ್’ ಎನ್ನುವ ಮಾತು ಹುಟ್ಟಿಕೊಂಡಿತು.

ಪಕ್ಷಾಂತರದಿಂದಾಗಿ ದೇಶದ ಪ್ರಜಾತಂತ್ರ ವ್ಯವಸ್ಥೆಯೇ ಬುಡಮೇಲಾಗಬಹುದು ಎಂದು ಭಾವಿಸಿದ್ದ ಆಗಿನ ಪ್ರಧಾನಿ ರಾಜೀವ್ ಗಾಂಧಿ ಅವರು 1985ರಲ್ಲಿ ಪಕ್ಷಾಂತರ ನಿಷೇಧ ಕಾಯ್ದೆಯನ್ನು ಜಾರಿಗೆ ತಂದರು. ಆದರೆ, ಈ ಕಾಯ್ದೆಗೆ ಹಲ್ಲುಗಳಿಲ್ಲ. ಈ ಕಾಯ್ದೆಯನ್ನು ಬಳಸಿ ಯಾರನ್ನೂ ಅನರ್ಹಗೊಳಿಸಲಾಗದು ಎಂಬ ಸ್ಥಿತಿ ಇತ್ತು. ಜತೆಗೆ, ಯಾವುದೇ ರಾಜಕೀಯ ಪಕ್ಷಕ್ಕೂ ಈ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎನ್ನುವ ಇಚ್ಛಾಶಕ್ತಿಯೂ ಇಲ್ಲ. ರಾಜಕೀಯ ಅಸ್ತಿತ್ವ ಉಳಿಸಿಕೊಳ್ಳುವುದು ಪಕ್ಷಗಳಿಗೆ ಮುಖ್ಯವಾಗಿದೆಯೇ ಹೊರತು ಪ್ರಜಾತಂತ್ರ ವ್ಯವಸ್ಥೆ ಉಳಿಯಬೇಕು ಎನ್ನುವ ಉದ್ದೇಶ ಇಲ್ಲ.

ಲೋಕಸಭೆ ಅಥವಾ ವಿಧಾನಸಭೆ ಸ್ಪೀಕರ್ ಮತ್ತು ವಿಧಾನ ಪರಿಷತ್ ಸಭಾಪತಿಯಾಗಿ ಸಾಮಾನ್ಯವಾಗಿ ಆಡಳಿತಾರೂಢ ಪಕ್ಷದವರನ್ನೇ ಆಯ್ಕೆ ಮಾಡಲಾಗುತ್ತಿದೆ. ಇಂತಹ ಸಂದರ್ಭದಲ್ಲಿ ಇತರ ಪಕ್ಷದ ಶಾಸಕರು ಪಕ್ಷಾಂತರ ಮಾಡಿ ಆಡಳಿತ ಪಕ್ಷಕ್ಕೆ ಸೇರಿದರೆ ತೀರ್ಮಾನ ಕೈಗೊಳ್ಳುವವರು ಸ್ಪೀಕರ್ ಅಥವಾ ಸಭಾಪತಿ. ಆಡಳಿತ ಪಕ್ಷದ ಪರವಾಗಿಯೇ ಇವರು ತೀರ್ಮಾನಗಳನ್ನು ಕೈಗೊಳ್ಳುವುದು ಸಾಮಾನ್ಯವಾಗಿದೆ. ಇಂತಹ ಹಲವಾರು ಪ್ರಕರಣಗಳು ದೇಶದಲ್ಲಿ ನಡೆದಿವೆ. ಕರ್ನಾಟಕದಲ್ಲೂ ನಾವು ನೋಡಿದ್ದೇವೆ. ಎಚ್.ಡಿ. ಕುಮಾರಸ್ವಾಮಿ ಅವರು ಬಿಜೆಪಿ ಜತೆ ಸರ್ಕಾರ ರಚಿಸಿದ ಸಂದರ್ಭದಲ್ಲಿ ಪಕ್ಷಾಂತರ ನಡೆಯಿತು. ಆದರೆ, ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರು ಒಪ್ಪಲಿಲ್ಲ. ಕೊನೆಗೆ ಪಕ್ಷಾಂತರ ನಿಷೇಧ ಕಾಯ್ದೆ ಅಡಿ ನೋಟಿಸ್ ನೀಡಲಾಯಿತು. ಅವರನ್ನು ಅನರ್ಹಗೊಳಿಸಬೇಕು ಎನ್ನುವ ಪರಿಸ್ಥಿತಿ ನಿರ್ಮಾಣವಾಯಿತು. ಆ ಸಂದರ್ಭದಲ್ಲಿ ಕೃಷ್ಣ ಅವರು ಸಭಾಧ್ಯಕ್ಷರಾಗಿದ್ದರು. ಅವರು ಒಳ್ಳೆಯ ರಾಜಕಾರಣಿ. ಆದರೆ, ಅವರು ಪಕ್ಷಾಂತರ ನಿಷೇಧ ಕಾಯ್ದೆ ಜಾರಿಗೊಳಿಸದಂತಹ ಪರಿಸ್ಥಿತಿ ಸೃಷ್ಟಿಸಲಾಯಿತು. ಅವರಿಂದ ಏನು ಮಾಡಲೂ ಆಗಲಿಲ್ಲ. ತಕ್ಷಣಕ್ಕೆ ಪಕ್ಷಾಂತರ ನಿಷೇಧ ಕಾಯ್ದೆ ಅರ್ಜಿ ಬಗ್ಗೆ ತೀರ್ಮಾನವನ್ನೇ ಕೈಗೊಳ್ಳಲಿಲ್ಲ. ಕೆಲ ದಿನಗಳ ಬಳಿಕ ಸರ್ಕಾರವೇ ಪತನಗೊಂಡ ಪರಿಣಾಮ ಅಲ್ಲಿಗೆ ಈ ಪ್ರಕರಣ ಮುಗಿಯಿತು. ಈ ರೀತಿಯ ಹಲವಾರು ಪ್ರಕರಣಗಳು ಮತ್ತೆ, ಮತ್ತೆ ನಡೆಯುತ್ತಿವೆ.

ಈಗ ಮಹಾರಾಷ್ಟ್ರದಲ್ಲಿ ನಡೆದ ರಾಜಕೀಯ ಬೆಳವಣಿಗೆಗಳ ಬಗ್ಗೆ ಯಾವ ಒಬ್ಬ ರಾಜಕಾರಣಿಯೂ ಕಟುವಾಗಿ ಮಾತನಾಡಲಿಲ್ಲ. ಅಧಿಕಾರ ಬೇಕಾದರೆ ಯಾರ ಜತೆಗೂ ಸೇರಬಹುದು ಅಥವಾ ಅಧಿಕಾರ ಹೋಗುತ್ತದೆ ಎನ್ನುವ ಹಂತದಲ್ಲಿ ಯಾರ ಜತೆಯೂ ಸೇರಬಹುದು ಎನ್ನುವುದು ಇಂದಿನ ರಾಜಕೀಯ ಪರಿಸ್ಥಿತಿ.

ಇಂತಹ ರಾಜಕೀಯ ವಾತಾವರಣ ಅಥವಾ ಪರಿಸ್ಥಿತಿ ಜನರ ಮೇಲೆ ಯಾವುದೇ ರೀತಿ ಪರಿಣಾಮ ಬೀರಿಲ್ಲ ಎನ್ನುವುದು ಮಾತ್ರ ಸ್ಪಷ್ಟ. ಒಂದೇ ಒಂದು ಸಂದರ್ಭದಲ್ಲಿ ಈ ರಾಷ್ಟ್ರದ ಅದೃಶ್ಯ ಮತದಾರರು ಮಾತ್ರ ಯಾವುದೇ ಸುಳಿವು ನೀಡದೆ ಸ್ಪಷ್ಟವಾದ ತೀರ್ಪು ನೀಡಿ ಸರ್ಕಾರವನ್ನೇ ಕಿತ್ತು ಹಾಕಿದ್ದರು. ಅದು ತುರ್ತು ಪರಿಸ್ಥಿತಿಯ ಬಳಿಕ. ಇಂದಿರಾ ಗಾಂಧಿ ಅವರು ತುರ್ತು ಪರಿಸ್ಥಿತಿ ಹೇರಿದ ಬಳಿಕ ಅಧಿಕಾರಕ್ಕೆ ಆಸೆ ಪಡದ ಜಯಪ್ರಕಾಶ್ ನಾರಾಯಣ್ ಅವರು, ಈ ದೇಶದಲ್ಲಿ ಪ್ರಜಾಪ್ರಭುತ್ವ ಉಳಿಸಿಕೊಳ್ಳಬೇಕು ಎನ್ನುವುದಕ್ಕಾಗಿ ಹೋರಾಟ ಮಾಡಿದರು. ಹೋರಾಟದ ಫಲ ಚುನಾವಣೆಯಲ್ಲಿ ಕಂಡಿತ್ತು. ಈ ರಾಜಕೀಯ ಬೆಳವಣಿಗೆ ನಂತರ, 45 ವರ್ಷಗಳು ಉರುಳಿದ್ದರೂ ಯಾವುದೇ ಬದಲಾವಣೆ ಕಾಣುತ್ತಿಲ್ಲ. ಭವಿಷ್ಯದಲ್ಲಿ ಅದೃಶ್ಯ ಮತದಾರರು ಪಕ್ಷಾಂತರಿಗಳಿಗೆ ತಕ್ಕ ಪಾಠ ಕಲಿಸಬಹುದು.

ಪಕ್ಷಾಂತರ ನಿಷೇಧ ಕಾಯ್ದೆಯನ್ನು ಮೊದಲ ಬಾರಿ ಜಾರಿಗೊಳಿಸಿದಾಗ ಕೆಲ ನಿಯಮಾವಳಿಗಳನ್ನು ರೂಪಿಸಲಾಯಿತು. ಯಾವುದೇ ಪಕ್ಷದಿಂದ ಆಯ್ಕೆಯಾದ ಜನಪ್ರತಿನಿಧಿಗಳಲ್ಲಿ ಮೂರನೇ ಒಂದರಷ್ಟು ಮಂದಿ ಪಕ್ಷ ಬಿಟ್ಟು ಹೋದರೆ, ಅವರನ್ನು ಅನರ್ಹಗೊಳಿಸುವ ಅಧಿಕಾರ ಇಲ್ಲ. ಇವರು ಸ್ವತಂತ್ರವಾಗಿ ಒಂದು ಗುಂಪಾಗಿ ಸದನದಲ್ಲಿ ಕುಳಿತುಕೊಳ್ಳಲು ಅವಕಾಶವಿದೆ. ಜತೆಗೆ, ಮೂರನೇ ಎರಡು ಭಾಗದಷ್ಟು ಶಾಸಕರು ಒಗ್ಗೂಡಿ ಇನ್ನೊಂದು ಪಕ್ಷದ ಜತೆ ವಿಲೀನಗೊಳ್ಳಬಹುದು. ಆಗ ಆಡಳಿತ ಪಕ್ಷ ಅಧಿಕಾರ ಕಳೆದುಕೊಂಡು ವಿರೋಧ ಪಕ್ಷವೇ ಅಧಿಕಾರಕ್ಕೆ ಬರಬಹುದು. ಕಾನೂನಿನಲ್ಲಿರುವ ಇಂತಹ ಅವಕಾಶಗಳ ಪ್ರಯೋಜನವನ್ನು ಶಾಸಕರು ಇತ್ತೀಚೆಗೆ ಹೆಚ್ಚು ಹೆಚ್ಚಾಗಿ ಪಡೆದುಕೊಳ್ಳುತ್ತಿದ್ದಾರೆ.

ರಾಜಕೀಯದಲ್ಲಿ ಆಮೂಲಾಗ್ರ ಬದಲಾವಣೆ ತರಬೇಕಾದರೆ ಪಕ್ಷಾಂತರ ನಿಷೇಧ ಕಾಯ್ದೆ ಹಾಗೂ ಸಂವಿಧಾನದ 10ನೇ ಪರಿಚ್ಛೇದಕ್ಕೆ ತಿದ್ದುಪಡಿ ಮಾಡಬೇಕು. ಪಕ್ಷಾಂತರ ಮಾಡಿದವರನ್ನು ಅನರ್ಹಗೊಳಿಸಿ ಮುಂದಿನ ಆರು ವರ್ಷಗಳವರೆಗೆ ಸ್ಪರ್ಧಿಸಲು ಅವಕಾಶ ನೀಡಬಾರದು. ಪಕ್ಷಾಂತರ ಮಾಡಿದ ವ್ಯಕ್ತಿಯನ್ನು ಅನರ್ಹಗೊಳಿಸುವ ಅಧಿಕಾರವನ್ನು ಲೋಕಸಭೆ ಅಥವಾ ವಿಧಾನಸಭೆ ಸ್ಪೀಕರ್ ಅಥವಾ ವಿಧಾನಪರಿಷತ್ ಸಭಾಪತಿಗೆ ಕೊಡಲೇಬಾರದು. ಇದಕ್ಕಾಗಿಯೇ ನ್ಯಾಯ ಮಂಡಳಿಯನ್ನು ರಚಿಸಬೇಕು. ಹೈಕೋರ್ಟ್ ಹಾಲಿ ನ್ಯಾಯಮೂರ್ತಿಯನ್ನು ಈ ನ್ಯಾಯಮಂಡಳಿಯ ಮುಖ್ಯಸ್ಥರನ್ನಾಗಿ ನೇಮಿಸಿ, ಅನರ್ಹಗೊಳಿಸುವ ಅಧಿಕಾರ ನೀಡಬೇಕು. ಈ ಮಂಡಳಿಗೆ ಇತರ ಇಬ್ಬರು ಸದಸ್ಯರನ್ನು ನೇಮಿಸಬೇಕು.

ಶಾಸಕರು ರಾಜೀನಾಮೆ ನೀಡಿ, ಉಪಚುನಾವಣೆಯಲ್ಲಿ ಗೆದ್ದು ಬರುವುದು ಸಹ ಇತ್ತೀಚೆಗೆ ಸಾಮಾನ್ಯವಾಗಿದೆ. ಆದರೆ, ಸುಪ್ರೀಂ ಕೋರ್ಟ್ ಸಹ ಈ ಬಗ್ಗೆ ತೀರ್ಪುಗಳನ್ನು ನೀಡಿದೆ. ರಾಜೀನಾಮೆ ನೀಡುವುದು ಆಯಾ ಶಾಸಕರ ಅಧಿಕಾರ. ನಿರ್ದಿಷ್ಟ ಪಕ್ಷದಿಂದ ಆಯ್ಕೆಯಾದ ಶಾಸಕ, ವಿವಿಧ ಕಾರಣಗಳಿಗೆ ರಾಜೀನಾಮೆ ನೀಡಿ ಹೊರ ಹೋಗಬಹುದು. ಶಾಸಕರ ಈ ಅಧಿಕಾರವನ್ನು ಮೊಟಕುಗೊಳಿಸಲು ಸಾಧ್ಯವಿಲ್ಲ.

ಹೀಗಾಗಿ, ರಾಜೀನಾಮೆ ನೀಡಿದ ಶಾಸಕರನ್ನು ಕನಿಷ್ಠ ನಾಲ್ಕು ವರ್ಷಗಳ ಕಾಲ ಅನರ್ಹಗೊಳಿಸುವ ಕಾಯ್ದೆ ರೂಪಿಸಬೇಕು. ಆದರೆ, ಉಪಚುನಾವಣೆ ತಪ್ಪಿಸಲು ಸಾಧ್ಯವಾಗುವುದಿಲ್ಲ. ಒಂದು ವೇಳೆ ಕಾಯ್ದೆ ರೂಪಿಸಿದರೂ ಸುಪ್ರೀಂ ಕೋರ್ಟ್ ಒಪ್ಪುವ ಸಾಧ್ಯತೆಗಳು ಸಹ ಕಡಿಮೆ.

ಪ್ರಜಾತಂತ್ರ ವ್ಯವಸ್ಥೆ ಗಟ್ಟಿಗೊಳಿಸುವ ದಿಸೆಯಲ್ಲಿ, ಪಕ್ಷಾಂತರ ನಿಷೇಧ ಕಾಯ್ದೆಯನ್ನು ಬಲಪಡಿಸದಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ. ಇದು ತುರ್ತು ಅಗತ್ಯ. ಇದಕ್ಕಾಗಿಯೇ ಎಲ್ಲ ಪಕ್ಷಗಳೂ ಒಗ್ಗೂಡಿ ಸಂಸದೀಯ ಸಮಿತಿ ರಚಿಸಲಿ. ಪಕ್ಷಾಂತರ ಪಿಡುಗನ್ನು ಒಮ್ಮತದ ಆಧಾರದ ಮೇಲೆಯೇ ರಾಷ್ಟ್ರದ ರಾಜಕೀಯ ಭಿತ್ತಿಯಿಂದ ತೆಗೆದು ಹಾಕುವ ಇಚ್ಛಾಶಕ್ತಿ ಪ್ರದರ್ಶಿಸಲಿ.

ಲೇಖಕ: ಹಿರಿಯ ರಾಜಕಾರಣಿ

ನಿರೂಪಣೆ: ಸಚ್ಚಿದಾನಂದ ಕುರಗುಂದ

## ಪದಬಂಧ 5013


– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ಶ್ರೀಗಂಧವನ್ನು ಹೀಗೂ ಹೇಳುವರು (4)
3.ಅಗ್ನಿ ಇಲ್ಲಿದೆ (4)
5.ಹೊಟ್ಟೆಯಿಂದ ಮುಂದೆ ಸರಿ! (3)
7.ಪತ್ರ ಬರೆದಿರುವ ಸ್ನೇಹಿತ ಇಲ್ಲಿದ್ದಾನೆ (2)
9.ಮನಸ್ಸಿಗೆ ಅರಿವಾಗುವಿಕೆ (5)
11.ಒಂದು ಸ್ಥಳದ ಬಗ್ಗೆ ಹೇಳುವ ಸಾಂಪ್ರದಾಯಿಕ ಕಥೆ (5)
13.ಒಪ್ಪಿಗೆಯನ್ನು ಸೂಚಿಸುವಾಗ ಹೇಳುವ ಮಾತು (2)
16.ನಾಯಕನ ಹತ್ತಿರ ಹಾಡುಗಾರ ಇದ್ದಾನೆ (3)
18.ಧ್ಯಾನ ಮಾಡುವವನ ಎದುರು! (4)
19.ಸರಿ ರಾತ್ರಿಯಲ್ಲಿಯೂ ಕಾಣಿಸುತ್ತಿರುವ ಸಮುದ್ರ (4)

**ಮೇಲಿಂದ ಕೆಳಕ್ಕೆ**

1.ಗಿಡಮರಗಳೇನೂ ಬೆಳೆಯದ ಬಂಜರು ನೆಲ (4)
2.ಜನತೆಯಲ್ಲಿ ಜೋಡಿಯನ್ನು ಹುಡುಕಿ! (2)
3.ನೆಯ್ಗೆಯಲ್ಲಿ ಎಳೆಗಳು ಒಂದಕ್ಕೊಂದು-ದೂರವಾಗಿರುವುದು (2)
4.ಗುರು ಹಿರಿಯರಿಗೆ ಕೊಡುವ ಸಂಭಾವನೆ (3)
6.ಗಿಡ್ಡಿ ಗುದ್ದಿದರೆ ನೂರು ಮಕ್ಕಳು ಈ ಒಗಟಿನ ಉತ್ತರ? (3)
8.ನ್ಯಾಯ ತೀರ್ಮಾನ ಮಾಡುವವನು (3)
10.ಕೆಲವರು ಮಾಡುವ ಕಾರ್ಯ! (3)
12.ಕರ್ಣನ ಇನ್ನೊಂದು ಹೆಸರು (3)
14.ರೀತಿ ನಿಯಮದಂತೆ ಸಿಕ್ಕಿರುವ ಸೋಡಿ! (4)
15.ಪ್ರಸವದ ಸಮಯದಲ್ಲಿ ಆಗಿರುವ ಸುಸ್ತು (3)
16.ಗಾಂಪನ ಬಾಯಲ್ಲಿ ಹೇಳಿಸಿದ ಹಾಡು (2)
17.ಸರೀಕನ ಮನೆಯಲ್ಲಿರುವ ಗಲೀಜು! (2)



### 5012ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸುಧಾರಕ 3.ವನಸ್ಪತಿ 5.ದಹನ 7.ನಗು 9.ಮಂಕ 11.ಲಾಕ್ಷಣಿಕ 12.ಪರಪಂಚ 13.ನಾರಿ 14.ನೆಪ 16.ಅರಸ 18.ಕರೆಯೋಲೆ 19.ವಿದ್ಯಮಾನ

ಮೇಲಿಂದ ಕೆಳಕ್ಕೆ:
1.ಸುಮ್ಮಾನ 2.ಕದ 3.ವನ 4.ತಿರುಕ 6.ಹವ್ಯಕ 8.ಗುಲಾಮಗಿರಿ 9.ಮಂತ್ರಾಲೋಚನೆ 12.ಪದರ 13.ನಾಸಿಕ 15.ಪವನ 16.ಅಲೆ 17.ಸವಿ

## ಸುಡೊಕು 5399

| | | | | | | | | |
|---|---|---|---|---|---|---|---|---|
| | 5 | | 7 | | 2 | | 8 | 6 |
| | | | | | | 3 | 7 | 4 |
| | 7 | 8 | 3 | | 9 | | 1 | |
| 1 | | 4 | | | 5 | | 2 | 3 |
| | | | | 3 | | | | |
| 8 | | 7 | 6 | | | | 5 | 9 |
| | | | 9 | | 6 | 5 | | 8 |
| | | | | | | | | |
| | 8 | | 5 | | 4 | | 3 | 2 |

### 5398 ಸುಡೊಕು

| | | | | | | | | |
|---|---|---|---|---|---|---|---|---|
| 5 | 6 | 3 | 9 | 2 | 7 | 8 | 1 | 4 |
| 8 | 1 | 7 | 6 | 5 | 4 | 2 | 3 | 9 |
| 4 | 2 | 9 | 3 | 8 | 1 | 7 | 5 | 6 |
| 2 | 4 | 6 | 7 | 1 | 3 | 9 | 8 | 5 |
| 3 | 9 | 1 | 8 | 4 | 5 | 6 | 7 | 2 |
| 7 | 5 | 8 | 2 | 9 | 6 | 3 | 4 | 1 |
| 6 | 8 | 5 | 1 | 7 | 9 | 4 | 2 | 3 |
| 1 | 3 | 2 | 4 | 6 | 8 | 5 | 9 | 7 |
| 9 | 7 | 4 | 5 | 3 | 2 | 1 | 6 | 8 |

### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

## ಗುಂಡಣ್ಣ




## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಜುಲೈ 9, 2022

**ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ:** ಆಷಾಢ ಶುಕ್ಲ ದಶಮಿ ಗಂ. 16-40 ನಕ್ಷತ್ರ: ಸ್ವಾತಿ ಗಂ. 11-25 ಯೋಗ: ಸಿದ್ಧ ಗಂ. 06-48 ಸಾಧ್ಯ ಗಂ. 28-02 ಕರಣ: ತೈತಿಲ ಗಂ 05-38, ಮಿಥುನ ಮಾಸದ 24 ನೇ ದಿನ.
**ರಾಹುಕಾಲ:** ಬೆಳಿಗ್ಗೆ 09:00–10:30
**ಸೂರ್ಯೋದಯ:** 06-13 **ಸೂರ್ಯಾಸ್ತ:** 06-58
**ಮುಸ್ಲಿಂ ದಿನಾಂಕ:** 09 ಜುಲ್‌ಹಿಜಾ
**ದಿನ ವಿಶೇಷ:** ಪುನರ್ಯಾತ್ರಾ, ಅಲ್ತರತ್ (ಒರಿಸ್ಸಾ), ಬಹುದಾ ಯಾತ್ರಾ
**ಅದೃಷ್ಟ ಸಂಖ್ಯೆ:** 2, 8

**ಮೇಷ:** ವಿಚಾರಗಳನ್ನು ಭಿನ್ನ ಭಿನ್ನವಾದ ದೃಷ್ಟಿಯಿಂದ ನೋಡಲು ಪ್ರಯತ್ನಿಸಿ. ಸರಿ ತಪ್ಪಿನ ಅರಿವು ಸ್ವತಃ ನಿಮಗೇ ಆಗಲಿದೆ. ಸಣ್ಣ ಕೆಲಸಕ್ಕೂ ಅಧಿಕ ಹಣ ವ್ಯಯವಾಗುವುದು. ಯಾವ ವಿಚಾರಕ್ಕೇ ಆದರೂ ಬೇಸರ ಬೇಡ.

**ವೃಷಭ:** ನೂತನ ಬಂಧುತ್ವದ ಬೆಸುಗೆ ಸಾಂಸಾರಿಕವಾಗಿ ಹೆಚ್ಚು ಫಲ ಕೊಟ್ಟೀತು. ಆಹಾರ ಪದಾರ್ಥದ ಉದ್ದಿಮೆದಾರರಿಗೆ ಹೊಸ ಯೋಜನೆ ಸಾಫಲ್ಯ ತರಲಿದೆ. ಬರುವ ಅವಕಾಶಗಳು ನಿಮ್ಮ ಭವಿಷ್ಯಕ್ಕೆ ಅನುಕೂಲವಾಗಿರುವುದು.

**ಮಿಥುನ:** ಯಾರೋ ಮಾಡಿದ ತಪ್ಪುಗಳಿಗೆ ನೇರ ಹೊಣೆಗಾರಿಕೆ ನೀವಾಗುವಿರಿ. ಹಾಗೆಯೇ ನೀವು ತಪ್ಪುಗಳನ್ನು ಸರಿಪಡಿಸಬೇಕಾಗುವುದು. ಭದ್ರ ಮಾಡಿ ಇಟ್ಟಂಥ ವಸ್ತುಗಳು ಕಣ್ಮರೆಯಾಗುವಂತಾಗಬಹುದು.

**ಕರ್ಕಾಟಕ:** ಬಹು ಕೆಲಸಗಳ ಹೊಣೆ ಇರುವ ನಿಮಗೆ ಇಂದಿನ ವಿನಾಕಾರಣದ ಅಲೆದಾಟದಿಂದ ಬೇಸರ. ಲೆಕ್ಕಪತ್ರಗಳ ಪರಿಶೀಲಿಸಿ. ಷೇರು ವ್ಯವಹಾರದಲ್ಲಿ ಹೆಚ್ಚಿನ ಕಮಿಷನ್ ದೊರೆಯುವ ಸಾಧ್ಯತೆಗಳಿವೆ.

**ಸಿಂಹ:** ತೆರಿಗೆ ಪಾವತಿ ವಿಚಾರದಲ್ಲಿ ಹಿರಿಯರ ಸಲಹೆ ಸಹಕಾರವನ್ನು ಕೇಳುವುದು ಸರಿ ಎನಿಸಲಿದೆ. ಇಲೆಕ್ಟ್ರಾನಿಕ್ ಉಪಕರಣಗಳ ತಯಾರಿಕೆ ಅಥವಾ ರಿಪೇರಿ ಮಾಡುವವರಿಗೆ ಸುದಿನ. ಸಜ್ಜನರ ಸಹವಾಸದ ಬೆಲೆ.

**ಕನ್ಯಾ:** ಇಂದು ನಿಮ್ಮ ಉದಾರ ಮನೋಭಾವವು ವ್ಯವಹಾರದಲ್ಲಿ ನಷ್ಟ ಅಥವಾ ಸೋಲೆನಿಸಿದರೂ ಮುಂದೆ ನಿಮಗೆ ಅನುಕೂಲ ಒದಗಿಸಲಿದೆ. ಸಾಂಕ್ರಾಮಿಕ ರೋಗಕ್ಕೆ ಒಳಗಾಗುವ ಪರಿಸ್ಥಿತಿ, ಎಚ್ಚರ ವಹಿಸಿ.

**ತುಲಾ:** ಹೊಸ ಜನರನ್ನು ಭೇಟಿಯಾಗುವ ಮೂಲಕ ಉದ್ಯೋಗದಲ್ಲಿ ಹೊಸ ಹುರುಪು ಮೂಡಲಿದೆ. ಪಿತೃ ವರ್ಗದ ಆಶೀರ್ವಾದದಿಂದ ಮನೆಯಲ್ಲಿ ಶುಭ. ಮನೆಯ ಆಗುಹೋಗುಗಳಲ್ಲಿ ಕೆಲವೊಂದು ಬದಲಾವಣೆ.

**ವೃಶ್ಚಿಕ:** ವಾಹನ ಚಾಲನೆಯಂತಹ ಕಾರ್ಯದಲ್ಲಿ ಯಾವುದೇ ರೀತಿಯ ಆತುರವು ಒಳ್ಳೆಯದಲ್ಲ. ಋಣ ಮುಕ್ತರಾಗುವ ಉದ್ದೇಶದಿಂದ ಹಣದ ವಿಚಾರದಲ್ಲಿ ಮಿತವ್ಯಯಿಗಳಾಗಿರಿ.

**ಧನು:** ನಿಮ್ಮ ಹೆಜ್ಜೆ ಬಿರುಸಾಗಿ ಮತ್ತು ಕೇವಲ ನಿಮಗಲ್ಲದೆ ಸಂಸ್ಥೆಗೂ ಲಾಭದಾಯಕ. ಆದ್ದರಿಂದ ಕೆಲಸದಲ್ಲಿ ಪ್ರಶಂಸೆ. ಕುಟುಂಬದವರು ಹಾಗೂ ಸ್ನೇಹಿತರೊಂದಿಗೆ ಪ್ರವಾಸದ ಯೋಜನೆಗಳನ್ನು ಹಾಕುವಿರಿ.

**ಮಕರ:** ಗುರಿಯನ್ನು ಮುಟ್ಟುವತ್ತ ನಿಮ್ಮ ಹಾದಿಯನ್ನು ಮಾರ್ಗದರ್ಶಕರ ಸಲಹೆ ಮೇರೆಗೆ ಬದಲಿಸಿಕೊಂಡಲ್ಲಿ ನಿಮ್ಮ ಯೋಜನೆಗಳು ನೀವು ಆಲೋಚಿಸಿದಕ್ಕಿಂತಲೂ ಹೆಚ್ಚು ಪ್ರಾಯೋಗಿಕವಾಗಿ ನೆರವೇರುವುದು.

**ಕುಂಭ:** ಸಹೋದರರಲ್ಲಿನ ಭಿನ್ನಾಭಿಪ್ರಾಯಕ್ಕೆ ದಾಯಾದಿಗಳು ಪುನಃ ಹುಳಿಹಿಂಡುವ ಕೆಲಸ ಮಾಡಲಿದ್ದಾರೆ. ಅನಿರೀಕ್ಷಿತ ಘಟನೆಯಿಂದ ವಿಚಲಿತರಾಗದೆ ಕಾರ್ಯೋನ್ಮುಖರಾಗಿ ಮುಂದುವರೆಯಿರಿ.

**ಮೀನ:** ಎಲ್ಲವನ್ನು ಹೊಂದಿರುವ ನಿಮಗೆ ಮನಃಶಾಂತಿಯ ಕೊರತೆಯಿಂದಾಗಿ ಜೀವನೋಲ್ಲಾಸವನ್ನು ಕಳೆದುಕೊಂಡಿರುತ್ತೀರಿ. ಮನಃಶಾಂತಿ ಪಡೆಯಲು ಜಗವನ್ನು ಬೆಳಗುವ ಸೂರ್ಯನಾರಾಯಣನನ್ನು ನಮಸ್ಕರಿಸಿ, ಪ್ರಾರ್ಥಿಸಿ.

## ‘ಹಳೆಯ ಅರ್ಜಿಗಳಿಗೆ ಅನುಮತಿ: ಚಿಂತನೆ’

ಹಾಸನ: ‘ರಾಜ್ಯದಲ್ಲಿ ಬೇಡಿಕೆಯಷ್ಟು ಮರಳು, ಜಲ್ಲಿಕಲ್ಲು, ಗ್ರಾನೈಟ್ ಪೂರೈಕೆ ಮಾಡುವ ಉದ್ದೇಶದಿಂದ, 2016ಕ್ಕಿಂತ ಮೊದಲು ಅರ್ಜಿ ಸಲ್ಲಿಸಿರುವ 5 ಸಾವಿರಕ್ಕೂ ಹೆಚ್ಚು ಗುತ್ತಿಗೆದಾರರಿಗೆ ಅನುಮತಿ ನೀಡಲು ಚಿಂತನೆ ನಡೆದಿದೆ’ ಎಂದು ಗಣಿ, ಭೂವಿಜ್ಞಾನ ಖಾತೆ ಸಚಿವ ಹಾಲಪ್ಪ ಆಚಾರ್ ಶುಕ್ರವಾರ ತಿಳಿಸಿದರು.

‘ರಾಜ್ಯದಲ್ಲಿ ಬೇಡಿಕೆಯಷ್ಟು ಮರಳು, ಜಲ್ಲಿಕಲ್ಲು ಪೂರೈಸಲಾಗುತ್ತಿಲ್ಲ. ಹೀಗಾಗಿ ಹೊರ ರಾಜ್ಯದಿಂದ ಮರಳು ಬರುತ್ತಿದೆ. ಹಿಂದೆ ಸಲ್ಲಿಕೆಯಾಗಿದ್ದ ಅರ್ಜಿದಾರರಿಗೂ ಅನುಮತಿ ನೀಡಿ ಕೊರತೆ ನೀಗಿಸುವ ಯತ್ನ ನಡೆದಿದೆ’ ಎಂದರು.

‘ಹಾಸನ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಕೊಡಗುಗಳಲ್ಲಿ ಗರ್ಭಿಣಿಯರು, ಬಾಣಂತಿಯರಿಗೆ ಮನೆಗಳಿಗೆ ಆಹಾರ ಪೂರೈಸಲಾಗುವುದು’ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರೂ ಆದ ಅವರು ಹೇಳಿದರು.

## ನಾರಾಯಣ ಭಟ್ಟರಿಗೆ ‘ಶ್ರೀನರಹರಿ ತೀರ್ಥ’ ಪ್ರಶಸ್ತಿ



ಪೆರುವೋಡಿ ನಾರಾಯಣ ಭಟ್ಟ

ಪುತ್ತೂರು (ದಕ್ಷಿಣ ಕನ್ನಡ): ಉಡುಪಿ ಅದಮಾರು ಮಠ ಪ್ರಾಯೋಜಿಸುವ ‘ಶ್ರೀ ನರಹರಿ ತೀರ್ಥ ಪ್ರಶಸ್ತಿ’ಗೆ ಇಲ್ಲಿಯ ಯಕ್ಷಗಾನದ ಹಾಸ್ಯ ಕಲಾವಿದ ಪೆರುವೋಡಿ ನಾರಾಯಣ ಭಟ್ಟರು ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ₹50 ಸಾವಿರ ಗೌರವಧನ ಒಳಗೊಂಡಿದೆ. ಜುಲೈ 11ರಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

### ದತ್ತಾಂಶ ಒತ್ತಡ • ಕಾರ್ಯಾಚರಣೆ ನಿಲ್ಲಿಸಿದ ನಿರ್ಮಾಣ್ 2.0 ಸಾಫ್ಟ್‌ವೇರ್

# ಕಟ್ಟಡ ನಿರ್ಮಾಣ ಅನುಮತಿ ಸ್ಥಗಿತ

• ಓದೇಶ ಸಕಲೇಶಪುರ



ನಿರ್ಮಾಣ್–2.0 ಮೇಲೆ ಕ್ಲಿಕ್ ಮಾಡಿದಾಗ ಕಾಣಿಸಿಕೊಳ್ಳುವ ವಿಂಡೊ

ಹುಬ್ಬಳ್ಳಿ: ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದ ನಿರ್ಮಾಣ್–2.0 ಸಾಫ್ಟ್‌ವೇರ್‌ನಲ್ಲಿ ದೋಷ ಕಾಣಿಸಿಕೊಂಡಿದ್ದು, 12 ದಿನದಿಂದ ಕಾರ್ಯಾಚರಣೆ ಸ್ಥಗಿತಗೊಂಡಿದೆ. ಇದರಿಂದಾಗಿ, ರಾಜ್ಯದಾದ್ಯಂತ ನಗರಗಳಲ್ಲಿ ಕಟ್ಟಡ, ಮನೆ ನಿರ್ಮಾಣಕ್ಕೆ ಸಂಬಂಧಿಸಿದ ಅನುಮತಿಗಳು ಬಾಕಿ ಉಳಿದಿವೆ.

‘ನಿರ್ಮಾಣ್’ ಸಾಫ್ಟ್‌ವೇರ್‌ನ ಕಾರ್ಯನಿರ್ವಹಣೆಗೆ ಯತ್ನಿಸಿ ಕ್ಲಿಕ್ ಮಾಡಿದರೆ, ಎಲ್‌ಬಿಪಿಎಸ್ ವೆಬ್‌ಸೈಟ್ ನಿರ್ವಹಣೆಯಲ್ಲಿದೆ. ಸಿಸ್ಟಂ ಅಪ್‌ಗ್ರೇಡ್ ಆದ ಬಳಿಕ ಸರಿ ಹೋಗಲಿದೆ ಎಂಬ ಸಂದೇಶ ಗೋಚರಿಸಲಿದೆ.

ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಟ್ಟಡ ನಿರ್ಮಾಣ ಪರವಾನಗಿ ಅರ್ಜಿಗಳ ನಿರ್ವಹಣೆಗೆ ಕರ್ನಾಟಕ ಮುನ್ಸಿಪಲ್ ಡೇಟಾ ಸೊಸೈಟಿಯು (ಕೆಎಂಡಿಎಸ್) ‘ನಿರ್ಮಾಣ್–2.0’ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಿದೆ. ಇದರಿಂದಾಗಿ, ಜನರು ಕಚೇರಿಗೆ ಹೋಗದೆ ಆನ್‌ಲೈನ್‌ನಲ್ಲಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿ ಕುಳಿತಲ್ಲಿಯೇ ಅನುಮತಿಯನ್ನು ಪಡೆಯಬಹುದಿತ್ತು.

ಇದೀಗ ಸಾಫ್ಟ್‌ವೇರ್ ಸ್ಥಗಿತಗೊಂಡಿರುವುದರಿಂದ, ಮನೆ, ಕಟ್ಟಡ ನಿರ್ಮಾಣ ಕಾರ್ಯಕ್ಕೆ ಮುಂದಾಗಿರುವವರು ಅರ್ಜಿ ಸಲ್ಲಿಸಲು ಸಾಧ್ಯವಾಗದೆ ಪರದಾಡುತ್ತಿದ್ದಾರೆ. ತುರ್ತು ಅಗತ್ಯವುಳ್ಳವರು ಅರ್ಜಿ ಹಿಡಿದು ಕಚೇರಿಗಳಿಗೆ ಅಲೆದಾಡಬೇಕಾದ ಸ್ಥಿತಿ ನಿರ್ಮಾಣವಾಗಿದೆ.

**ದತ್ತಾಂಶದ ಒತ್ತಡ:** ‘ನಿರ್ಮಾಣ್ ಸಾಫ್ಟ್‌ವೇರ್ ಕಟ್ಟಡ ಪರವಾನಗಿಗೆ ಸಂಬಂಧಿಸಿದ ಕೇಂದ್ರೀಕೃತ ನಿರ್ವಹಣಾ ವ್ಯವಸ್ಥೆಯಾಗಿದೆ. ಆನ್‌ಲೈನ್ ಮೂಲಕ ರಾಜ್ಯದಾದ್ಯಂತ ನಿತ್ಯ ಅರ್ಜಿಗಳು ಸಲ್ಲಿಕೆಯಾಗುತ್ತವೆ. ಜೊತೆಗೆ, ಇತರ ಪ್ರಕ್ರಿಯೆಗಳಿಂದಾಗಿ ದತ್ತಾಂಶದ ಒತ್ತಡ ಹೆಚ್ಚಾಗಿದೆ. ಹಾಗಾಗಿ, ಕಾರ್ಯಾಚರಣೆ ನಿಲ್ಲಿಸಿದೆ’ ಎಂದು ಹೆಸರು ಹೇಳಲಿಚ್ಛಿಸದ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಸಾಫ್ಟ್‌ವೇರ್ ನಿರ್ವಹಣೆಯ ಹೊಣೆ ಹೊತ್ತಿರುವ ಕಂಪನಿಯವರು ದೋಷ ಸರಿಪಡಿಸಲು ಸತತ ಪ್ರಯತ್ನ ಮಾಡುತ್ತಿದ್ದಾರೆ. ಹಾಗಾಗಿ, ಹಳೆಯ ನಿರ್ಮಾಣ್–1 ಸಾಫ್ಟ್‌ವೇರ್ ಮೂಲಕ ಅರ್ಜಿಗಳನ್ನು ತಾತ್ಕಾಲಿಕವಾಗಿ ನಿರ್ವಹಿಸಲು ಸೂಚನೆ ನೀಡಲಾಗಿದೆ’ ಎಂದರು.

**ಸಿಬ್ಬಂದಿಯಿಂದ ನಿರ್ವಹಣೆ:** ‘ಪರವಾನಗಿ ಕೋರಿ ಬರುತ್ತಿದ್ದ ಅರ್ಜಿಗಳನ್ನು ನಿರ್ಮಾಣ್ ಸಾಫ್ಟ್‌ವೇರ್ ಸ್ವಯಂ ಪರಿಶೀಲಿಸುತ್ತಿತ್ತು. ಅದರಲ್ಲಿ ತಾಂತ್ರಿಕ ಸಮಸ್ಯೆ ಕಾಣಿಸಿ ಕೊಂಡಿರುವುದರಿಂದ, ಹಳೇ ನಿರ್ಮಾಣ್–1 ಸಾಫ್ಟ್‌ವೇರ್‌ನಲ್ಲಿ ಕೆಲಸ ಮಾಡಲು ಸೂಚನೆ ಬಂದಿದೆ. ಇದರಲ್ಲಿ, ಸೆಟ್‌ಬ್ಯಾಕ್ ಸೇರಿದಂತೆ ನಿರ್ಮಾಣಕ್ಕೆ ಸಂಬಂಧಿಸಿದ ಕೆಲ ಪ್ರಕ್ರಿಯೆಗಳನ್ನು ಸಿಬ್ಬಂದಿ ಭೌತಿಕವಾಗಿ ನಿರ್ವಹಿಸಬೇಕಿದೆ’ ಎಂದು ಮಹಾನಗರ ಪಾಲಿಕೆಯ ನಗರ ಯೋಜನಾ ವಿಭಾಗದ ಆರ್.ಎಂ. ಕುಲಕರ್ಣಿ ತಿಳಿಸಿದರು.

‘ಸಾಫ್ಟ್‌ವೇರ್ ಕಾರ್ಯ ನಿರ್ವಹಣೆ ಸ್ಥಗಿತಗೊಂಡು 12 ದಿನವಾದರೂ, ಸಂಬಂಧಪಟ್ಟವರು ಸರಿಪಡಿಸುವ ಗೋಜಿಗೆ ಹೋಗಿಲ್ಲ. ಸಾಫ್ಟ್‌ವೇರ್ ನಿರ್ವಹಣೆಯ ಟೆಂಡರ್ ಪಡೆದಿರುವವರು ಸಮಸ್ಯೆಗೆ ಪರಿಹಾರ ಕಂಡುಹಿಡಿಯದೆ ಕೈ ಚೆಲ್ಲಿ ಕುಳಿತಿದ್ದಾರೆ. ಜನ ಮುಂಚಿನಂತೆ ಅರ್ಜಿ ಹಿಡಿದು ಕಚೇರಿಗಳಿಗೆ ಅಲೆದಾಡಬೇಕಾದ ಸ್ಥಿತಿ ನಿರ್ಮಾಣವಾಗಿದೆ’ ಎಂದು ನಗರದ ಸಾಮಾಜಿಕ ಕಾರ್ಯಕರ್ತ ಅತೀಕ್ ಕೊಪ್ಪಳ ದೂರಿದರು.

**ಭೌತಿಕ ಕಡತಗಳಲ್ಲೇ ನಿರ್ವಹಣೆಗೆ ಸೂಚನೆ**

‘ನಿರ್ಮಾಣ್–2.0’ ಸಾಫ್ಟ್‌ವೇರ್ ಸಮಸ್ಯೆಯಿಂದಾಗಿ ಕಟ್ಟಡ ಪರವಾನಗಿಗೆ ಸಂಬಂಧಿಸಿದ ಅರ್ಜಿಗಳ ವಿಲೇವಾರಿ ವಿಳಂಬವಾಗಿರುವ ಬೆನ್ನಲ್ಲೇ, ಕೆಎಂಡಿಎಸ್‌ಯು ಪರ್ಯಾಯ ವ್ಯವಸ್ಥೆಗೆ ಸೂಚನೆ ನೀಡಿದೆ.

ಈಗಾಗಲೇ ಸಲ್ಲಿಕೆಯಾಗಿರುವ ಅರ್ಜಿಗಳನ್ನು ನಿಯಮಾನುಸಾರವಾಗಿ ಪರಿಶೀಲಿಸಿ, ಭೌತಿಕ ಕಡತಗಳಲ್ಲಿ ಅಥವಾ ಹಿಂದೆ ಇದ್ದ ‘ನಿರ್ಮಾಣ್–1’ ಸಾಫ್ಟ್‌ವೇರ್ ಮೂಲಕ ನಿರ್ವಹಣೆ ಮಾಡಬೇಕು. ‘ನಿರ್ಮಾಣ್–2.0’ ಕಾರ್ಯಾಚರಣೆ ಮರು ಆರಂಭದವರೆಗೆ ಹೊಸ ಅರ್ಜಿಗಳನ್ನು ‘ನಿರ್ಮಾಣ್–1’ ಮೂಲಕವೇ ನಿರ್ವಹಿಸಬೇಕು ಎಂದು ಸುತ್ತೋಲೆ ಹೊರಡಿಸಿದೆ.

ಪ್ರಜಾವಾಣಿ ವಿಶೇಷ

> ಸಾಫ್ಟ್‌ವೇರ್‌ನಲ್ಲಿ ತಾಂತ್ರಿಕ ಸಮಸ್ಯೆ ತಲೆದೋರಿದೆ. ಸಾರ್ವಜನಿಕರಿಗೆ ಸಮಸ್ಯೆಯಾಗದಂತೆ ಪರ್ಯಾಯ ವ್ಯವಸ್ಥೆಗೆ ಸೂಚನೆ ನೀಡಲಾಗಿದೆ
>
> **ಕೆ.ಎಂ.ಜಾನಕಿ**
> ಹೆಚ್ಚುವರಿ ಕಾರ್ಯದರ್ಶಿ, ಜಂಟಿ ನಿರ್ದೇಶಕಿ, ಕರ್ನಾಟಕ ಮುನ್ಸಿಪಲ್ ಡಾಟಾ ಸೊಸೈಟಿ

## ಸುದ್ದಿ 2 ನಿಮಿಷ

### ಸಾಲುಮರದ ತಿಮ್ಮಕ್ಕಗೆ ಸಂಪುಟದರ್ಜೆ ಸಚಿವ ಸ್ಥಾನಮಾನ



ಬೆಂಗಳೂರು: ಸಾಲುಮರದ ತಿಮ್ಮಕ್ಕ ಅವರನ್ನು ಪರಿಸರ ರಾಯಭಾರಿಯನ್ನಾಗಿ ನೇಮಿಸಿರುವ ರಾಜ್ಯ ಸರ್ಕಾರ, ಮುಂದಿನ ಆದೇಶದವರೆಗೆ ಅವರಿಗೆ ಸಂಪುಟ ದರ್ಜೆ ಸಚಿವರ ಸ್ಥಾನಮಾನ ನೀಡಿ ಶುಕ್ರವಾರ ಆದೇಶ ಹೊರಡಿಸಿದೆ.

ತಿಮ್ಮಕ್ಕ ಅವರಿಗೆ ಸಂಪುಟ ದರ್ಜೆ ಸ್ಥಾನಮಾನ ನೀಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇತ್ತೀಚೆಗೆ ಘೋಷಿಸಿದ್ದರು. ಅದರಂತೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಶಿಷ್ಟಾಚಾರ ವಿಭಾಗ ಅಧಿಸೂಚನೆ ಹೊರಡಿಸಿದೆ.

ತಿಮ್ಮಕ್ಕ ಅವರಿಗೆ ವೇತನ ಮತ್ತು ಭತ್ಯೆ, ವಸತಿಗೃಹ, ಸಿಬ್ಬಂದಿ, ಕಾರು ಸೇರಿದಂತೆ ಸಂಪುಟ ದರ್ಜೆ ಸಚಿವರಿಗೆ ದೊರೆಯುವ ಹಲವು ಸೌಲಭ್ಯಗಳು ದೊರೆಯಲಿವೆ ಎಂದು ಡಿಪಿಎಆರ್ ಮೂಲಗಳು ತಿಳಿಸಿವೆ.

### 2023ರ ರಣರಂಗಕ್ಕೆ ಬನ್ನಿ: ರೇವಣ್ಣ

ಹಾಸನ: ‘ಹರಿಯಾಣದಲ್ಲಿ ದೇವಿಲಾಲ್ ಅವರ ಕುಟುಂಬವನ್ನು ಮುಗಿಸಿದಂತೆ, ರಾಜ್ಯದಲ್ಲಿ ಜೆಡಿಎಸ್ ಮುಗಿಸಲು ಹೊರಟಿದ್ದಾರೆ. 2023ರ ರಣರಂಗಕ್ಕೆ ಬನ್ನಿ, ಸರಿಯಾಗಿ ಉತ್ತರ ನೀಡುತ್ತೇವೆ’ ಎಂದು ಶಾಸಕ ಎಚ್.ಡಿ. ರೇವಣ್ಣ ತಿರುಗೇಟು ನೀಡಿದ್ದಾರೆ.

‘ದೇವೇಗೌಡರಿಗೆ ವಯಸ್ಸಾಗಿದೆ, ಆರೋಗ್ಯ ಸರಿಯಿಲ್ಲ’ ಎಂಬ ಕೇಂದ್ರ ಸಚಿವ ಕೃಷ್ಣಪಾಲ್ ಗುರ್ಜರ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ದೇವೇಗೌಡರ ಆರೋಗ್ಯ ಸರಿ ಇಲ್ಲ. ಸಕ್ರಿಯ ರಾಜಕಾರಣ ಮಾಡಲು ಆಗುತ್ತಿಲ್ಲ ಎಂದು ಹೇಳಲು ಅವರು ಯಾರು’ ಎಂದು ಪ್ರಶ್ನಿಸಿದರು.

‘90 ವರ್ಷವಾಗಿದ್ದರೂ ದೇವೇಗೌಡರು ಸಂಸತ್ ಅಧಿವೇಶನದಲ್ಲಿ ಪಾಲ್ಗೊಳ್ಳುತ್ತಾರೆ. ರೈಲ್ವೆ ಇಲಾಖೆಯಿಂದ ರಾಜ್ಯಕ್ಕೆ ಅನ್ಯಾಯ ಆದಾಗ, ಖುದ್ದು ರೈಲ್ವೆ ಸಚಿವರನ್ನು ಭೇಟಿ ಮಾಡಿ ಈ ಬಗ್ಗೆ ಚರ್ಚಿಸಿದ್ದಾರೆ. ಇದು ಸಕ್ರಿಯ ರಾಜಕಾರಣವಲ್ಲವೇ’ ಎಂದು ಪ್ರಶ್ನಿಸಿದರು.

‘ಕುಮಾರಸ್ವಾಮಿ ರಾಜ್ಯದಲ್ಲಿ ಬಿಜೆಪಿ ಜೊತೆ ಸೇರಿ ಸರ್ಕಾರ ರಚಿಸಿದ್ದರಿಂದಲೇ ಆ ಪಕ್ಷ ಈ ಮಟ್ಟಕ್ಕೆ ಬೆಳೆದಿದೆ. ಬಿಜೆಪಿ ಮುಖಂಡರು ತಮ್ಮ ಕಚೇರಿಯಲ್ಲಿ ಕುಮಾರಸ್ವಾಮಿ ಫೋಟೊ ಹಾಕಬೇಕು’ ಎಂದು ತಿರುಗೇಟು ನೀಡಿದರು.

## ಹಾಸನ: ಬಿಜೆಪಿ ಸಭೆ ಇಂದಿನಿಂದ

ಹಾಸನ: ಬಿಜೆಪಿ ರಾಜ್ಯ ಪದಾಧಿಕಾರಿಗಳ ಸಭೆ ಶನಿವಾರ (ಜು.9) ಹಾಗೂ ಭಾನುವಾರ (ಜು.10) ನಗರದ ಅಶೋಕ ಹೋಟೆಲ್‌ನಲ್ಲಿ ನಡೆಯಲಿದೆ.

ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಇತರರು ಭಾಗವಹಿಸುವರು. ಸಿ.ಎಂ ಬಸವರಾಜ ಬೊಮ್ಮಾಯಿ ಅವರು ಪಾಲ್ಗೊಳ್ಳುತ್ತಿಲ್ಲ.

# ನಿವೃತ್ತರಿಗೂ ‘ಆರೋಗ್ಯ ಸಂಜೀವಿನಿ’

ಪ್ರಜಾವಾಣಿ ವಾರ್ತೆ


ಕಾರ್ಯಕ್ರಮವದಲ್ಲಿ ಭಾಗವಹಿಸಿದ್ದ ನಿವೃತ್ತ ನೌಕರರು

ಬೆಂಗಳೂರು: ‘ಸರ್ಕಾರಿ ನೌಕರರಿಗೆ ಜಾರಿಗೆ ತಂದಿರುವ ನಗದು ರಹಿತ ‘ಆರೋಗ್ಯ ಸಂಜೀವಿನಿ’ ಯೋಜನೆಯನ್ನು 4.30 ಲಕ್ಷ ನಿವೃತ್ತರು, 1 ಲಕ್ಷ ಪಿಂಚಣಿದಾರರಿಗೂ ಅನ್ವಯಿಸಲು ಕ್ರಮಕೈಗೊಳ್ಳಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಶ್ವಾಸನೆ ನೀಡಿದರು.

ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘ ಶುಕ್ರವಾರ ಹಮ್ಮಿಕೊಂಡಿದ್ದ ಸಂಘದ ಸುವರ್ಣ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನೌಕರರು ಮತ್ತು ನಿವೃತ್ತರು ಸರ್ಕಾರದ ಎರಡು ಕಣ್ಣು. 6 ಲಕ್ಷ ಸರ್ಕಾರಿ ನೌಕರರನ್ನು ಯೋಜನೆಯ ವ್ಯಾಪ್ತಿಗೆ ತರಲಾಗಿದೆ. ಸಚಿವ ಸಂಪುಟದಲ್ಲಿ ಒಪ್ಪಿಗೆ ಪಡೆದು ನಿವೃತ್ತರಿಗೂ ಈ ಸೌಲಭ್ಯ ಕಲ್ಪಿಸಲಾಗುವುದು ಎಂದರು.

‘ಬಹುತೇಕ ನೌಕರರು ಅಂತಃಕರಣ ಮರೆತಿದ್ದಾರೆ. ಸಹಿ ಹಾಕಿಹೋಗುವ ಚಟ ಬೆಳೆಸಿಕೊಂಡ ಕೆಲವರು ಮಾನಸಿಕವಾಗಿ ನಿವೃತ್ತರಾಗಿದ್ದಾರೆ. ಬಡವರು, ಕಷ್ಟದಲ್ಲಿ ಇರುವವರಿಗೆ ಸಹಾಯ ಮಾಡಬೇಕು. ಹೃದಯದಲ್ಲಿ ಕರುಣೆ ಇರಬೇಕು’ ಎಂದು ಕಿವಿಮಾತು ಹೇಳಿದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ, ಉಚಿತ ಆರೋಗ್ಯ ಯೋಜನೆ ಅಡಿ ನೌಕರರು 1,250 ಕಾಯಿಲೆಗಳಿಗೆ ನಗದು ರಹಿತವಾಗಿ ಸೇವೆ ಪಡೆಯಬಹುದಾಗಿದೆ. ನಿವೃತ್ತರಿಗೂ ಯೋಜನೆ ಅನ್ವಯಿಸಬೇಕು ಎಂದು ಕೋರಿದರು.

ನಿವೃತ್ತ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಲ್.ಭೈರಪ್ಪ ಪ್ರಾಸ್ತಾವಿಕ ಮಾತನಾಡಿದರು. ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ಆದಿಚುಂಚನಗಿರಿ ಮಠದ ಸೌಮ್ಯನಾಥ ಸ್ವಾಮೀಜಿ, ಸಚಿವರಾದ ವಿ.ಸೋಮಣ್ಣ, ಸಿ.ಎನ್.ಅಶ್ವತ್ಥ ನಾರಾಯಣ, ಸಂಘದ ಮಾಜಿ ಅಧ್ಯಕ್ಷ ಶೇಷೇಗೌಡ, ಶಾಸಕ ಎ.ದೇವೇಗೌಡ ಅವರೂ ಉಪಸ್ಥಿತರಿದ್ದರು.

**ಶಾಸಕರು ನೌಕರರ ಮಧ್ಯೆ ಏಕೆ ತಾರತಮ್ಯ?**

‘ಶಾಸಕರಿಗೆ ಜೀವಿತಾವಧಿವರೆಗೂ ಹೆಚ್ಚಿನ ಪಿಂಚಣಿ, ಸೌಲಭ್ಯ ನೀಡುವ ಸರ್ಕಾರ, ನಿವೃತ್ತ ನೌಕರರಿಗೆ ಕನಿಷ್ಠ ಪಿಂಚಣಿ ಮೀನಮೇಷ ಎಣಿಸುವುದು ಸರಿಯಲ್ಲ ಎಂದು ಮೇಲ್ಮನೆಯ ಬಿಜೆಪಿ ಸದಸ್ಯ ಆಯನೂರು ಮಂಜುನಾಥ್ ಹೇಳಿದರು.

‘ತಕ್ಷಣ ಹೊಸ ಪಿಂಚಣಿ ವ್ಯವಸ್ಥೆ ರದ್ದು ಮಾಡಬೇಕು. ನಿವೃತ್ತಿ ನಂತರ ಜೀವನ ಭದ್ರತೆಗೆ ವ್ಯವಸ್ಥೆ ಮಾಡಬೇಕು. 80 ವರ್ಷ ದಾಟಿದವರಿಗೂ ಶೇ 20ರಷ್ಟು ಪಿಂಚಣಿ ನೀಡಬೇಕು’ ಎಂದು ಆಗ್ರಹಿಸಿದರು.

## ಇಬ್ಬರು ಶಾಸಕರ ಅನರ್ಹತೆ: ಸ್ಪೀಕರ್‌ಗೆ ಜೆಡಿಎಸ್ ಅರ್ಜಿ

ಬೆಂಗಳೂರು: ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಜೂನ್ 10ರಂದು ನಡೆದ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದ ಆರೋಪ ಎದುರಿಸುತ್ತಿರುವ ತಮ್ಮ ಪಕ್ಷದ ಕೆ. ಶ್ರೀನಿವಾಸ ಗೌಡ ಮತ್ತು ಎಸ್.ಆರ್. ಶ್ರೀನಿವಾಸ್ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸುವಂತೆ ವಿಧಾನಸಭೆಯ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ಜೆಡಿಎಸ್ ಶುಕ್ರವಾರ ಅರ್ಜಿ ಸಲ್ಲಿಸಿದೆ.

ವಿಧಾನಸಭೆಯಲ್ಲಿ ಜೆಡಿಎಸ್ ಸಚೇತಕರಾಗಿರುವ ವೆಂಕಟರಾವ್ ನಾಡಗೌಡ ಅವರು ವಿಧಾನಸಭೆಯ ಅಧ್ಯಕ್ಷರಿಗೆ ಅರ್ಜಿ ಸಲ್ಲಿಸಿದರು. ಇಬ್ಬರು ಶಾಸಕರು ಪಕ್ಷದ ವಿರುದ್ಧ ಹೇಳಿಕೆ ನೀಡಿರುವುದು, ರಾಜ್ಯಸಭೆ ಚುನಾವಣೆಯಲ್ಲಿ ಅನ್ಯ ಪಕ್ಷಗಳ ಅಭ್ಯರ್ಥಿಗಳಿಗೆ ಮತ ಚಲಾಯಿಸಿರುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ದೂರಿನೊಂದಿಗೆ ಲಗತ್ತಿಸಿದ್ದು, ಇಬ್ಬರನ್ನೂ ಶಾಸಕ ಸ್ಥಾನದಿಂದ ಅನರ್ಹಗೊಳಿಸುವಂತೆ ಮನವಿ ಮಾಡಿದ್ದಾರೆ.

ಬಳಿಕ ಮಾತನಾಡಿದ ವೆಂಕಟರಾವ್ ನಾಡಗೌಡ, ‘ಇಬ್ಬರು ಶಾಸಕರೂ ಪಕ್ಷದ ಚಟುವಟಿಕೆಗಳಿಂದ ದೂರ ಉಳಿದಿದ್ದಾರೆ. ಪಕ್ಷದ ವಿರುದ್ಧವೇ ಬಹಿರಂಗ ಹೇಳಿಕೆ ನೀಡುತ್ತಿದ್ದಾರೆ. ಶ್ರೀನಿವಾಸ ಗೌಡ ಅವರು ಕಾಂಗ್ರೆಸ್ ಜತೆ ಗುರುತಿಸಿಕೊಂಡಿದ್ದಾರೆ. ಆದ್ದರಿಂದ ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರು ನೀಡಿದ್ದೇವೆ’ ಎಂದರು.

‘ಇಂತಹ ದೂರುಗಳಿಂದ ಪ್ರಯೋಜನ ಆಗುವುದಿಲ್ಲ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಬೇಸರ ವ್ಯಕ್ತಪಡಿಸಿರುವುದು ನಿಜ. ಆದರೆ, ಪಕ್ಷ ವಿರೋಧಿ ಚಟುವಟಿಕೆ ನಡೆಸಿದವರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ ಎಂಬ ಸಂದೇಶ ರವಾನೆ ಆಗಬಾರದು. ಈ ಉದ್ದೇಶದಿಂದ ನಮ್ಮ ಕೆಲಸವನ್ನು ನಾವು ಮಾಡಿದ್ದೇವೆ’ ಎಂದರು.

## ‘ಅಬಕಾರಿ ಇಲಾಖೆಯಲ್ಲಿ ಮಿತಿ ಮೀರಿದ ಭ್ರಷ್ಟಾಚಾರ’

ವಿಜಯಪುರ: ‘ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ ಮಿತಿಮೀರಿದೆ. ಈ ಬಗ್ಗೆ ಮುಖ್ಯಮಂತ್ರಿ ತಕ್ಷಣ ಮಧ್ಯಪ್ರವೇಶಿಸಿ ಕಡಿವಾಣ ಹಾಕಬೇಕು’ ಎಂದು ರಾಜ್ಯ ಮದ್ಯ ಮಾರಾಟಗಾರರ ಒಕ್ಕೂಟ ಶುಕ್ರವಾರ ಆಗ್ರಹಪಡಿಸಿದೆ.

ಇಲ್ಲಿ ನಡೆದ ಬೆಳಗಾವಿ ವಿಭಾಗದ ಅಬಕಾರಿ ಸನ್ನದುದಾರರ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಎಸ್.ಗುರುಸ್ವಾಮಿ, ‘ಅಧಿಕಾರಿಗಳು ಅಬಕಾರಿ ಕಾಯ್ದೆಯಲ್ಲಿರುವ ಲೋಪದೋಷಗಳ ಲಾಭ ಪಡೆದು ಮಾರಾಟಗಾರರನ್ನು ಹಿಂಸಿಸಿ ‘ಮಾಮೂಲಿ’ (ಲಂಚ) ಬಲವಂತದಿಂದ ಹಣ ವಸೂಲಿ ಮಾಡುತ್ತಿದ್ದಾರೆ. ಪರಿಸ್ಥಿತಿ ಸುಧಾರಿಸುವ ಬದಲು ಭ್ರಷ್ಟಾಚಾರ ಹೆಚ್ಚಳವಾಗಿದೆ’ ಎಂದು ದೂರಿದರು.

‘ಅಧಿಕಾರಿಗಳು ಸರ್ಕಾರದ ವರಮಾನದ ವಿಷಯ ಬದಿಗಿಟ್ಟು ಸಂಪಾದನೆಗೆ ಗಮನ ನೀಡುತ್ತಿದ್ದಾರೆ. ಡಾಬಾ, ಬೀಡಾ ಅಂಗಡಿ ಮತ್ತಿತರ ಕಡೆ ನಕಲಿ ಮದ್ಯ, ಗೋವಾ ಮದ್ಯ, ಮಿಲಿಟರಿ, ಡ್ಯೂಟಿ ಫ್ರೀ ಹೆಸರಿನಲ್ಲಿ ತೆರಿಗೆ ರಹಿತ ಮದ್ಯ ಮಾರಾಟ ಆಗುತ್ತಿದೆ’ ಎಂದು ದೂರಿದರು.

‘ಅಧಿಕಾರಿಗಳೇ ಬೇನಾಮಿ ಮದ್ಯಮಾರಾಟ ಸನ್ನದುಗಳನ್ನು ಹೊಂದಿದ್ದು, ಈ ಬಗ್ಗೆ ಸರ್ಕಾರ ಗಮನ ಹರಿಸಬೇಕು’ ಎಂದರು.

## ‘ವರ್ಗಾವಣೆಗೆ ಕ್ರಮ’

ಮೈಸೂರು: ‘ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಹಲವು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗಾವಣೆಗೆ ಕ್ರಮ ವಹಿಸಲಾಗುವುದು’ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಹೇಳಿದರು.

‘ಪಾಲಿಕೆಗಳ ಆಯುಕ್ತರಿಗೆ ಪಟ್ಟಿ ಕೊಡಲು ಸೂಚಿಸಿದ್ದೇನೆ’ ಎಂದು ಅವರು ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

## ‘ಶೂ, ಸಾಕ್ಸ್ ವಿತರಿಸಲು ₹132 ಕೋಟಿ’

ಒಂದನೇ ಪುಟದಿಂದ

**ಎಸ್‌ಡಿಎಂಸಿಗೆ ಖರೀದಿ ಹೊಣೆ:** ಶೂ ಮತ್ತು ಸಾಕ್ಸ್‌ಗಳನ್ನು ಸ್ಥಳೀಯವಾಗಿ ಖರೀದಿಸುವ ಅಧಿಕಾರವನ್ನು ಸರ್ಕಾರ ಆಯಾ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳಿಗೆ ನೀಡಿದೆ. ಎಸ್‌ಡಿಎಂಸಿ ಅಧ್ಯಕ್ಷರು ಖರೀದಿ ಸಮಿತಿ ಅಧ್ಯಕ್ಷರಾಗಿ, ಮುಖ್ಯ ಶಿಕ್ಷಕರು ಸದಸ್ಯ ಕಾರ್ಯದರ್ಶಿಯಾಗಿ ಹಾಗೂ ಎಸ್‌ಡಿಎಂಸಿಯ ಮೂವರು ಸದಸ್ಯರಾಗಿರುತ್ತಾರೆ.

ಮಲೆನಾಡು, ಕರಾವಳಿ ಭಾಗದಲ್ಲಿ ಕೆಲವು ತಿಂಗಳು ಅತಿ ಹೆಚ್ಚು ಮಳೆ, ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಬಿಸಿಲ ತಾಪ ಇರುವ ಕಾರಣ ವಾತಾವರಣಕ್ಕೆ ಅನುಗುಣವಾಗಿ ಶೂ ಬದಲಿಗೆ ಚಪ್ಪಲಿ ಖರೀದಿಸಲೂ ಅನುಮತಿ ನೀಡಲಾಗಿದೆ. ಗುಣಮಟ್ಟ ಪರಿಶೀಲನೆಗೆ ಸಮಿತಿ ರಚಿಸುವ ಅಧಿಕಾರವನ್ನು ಜಿಲ್ಲಾ ಪಂಚಾಯಿತಿ ಸಿಇಒಗೆ ನೀಡಲಾಗಿದೆ. ಕಳಪೆ ಗುಣಮಟ್ಟದ ದೂರುಗಳು ಬಂದರೆ ಮುಖ್ಯ ಶಿಕ್ಷಕರು, ಬಿಇಒ, ಡಿಡಿಪಿಐ ವಿರುದ್ಧ ಶಿಸ್ತುಕ್ರಮ ಜರುಗಿಸುವ ಎಚ್ಚರಿಕೆ ನೀಡಲಾಗಿದೆ. 1ರಿಂದ 5ನೇ ತರಗತಿಯ ಪ್ರತಿ ವಿದ್ಯಾರ್ಥಿಗೆ ₹265, 6ರಿಂದ 8 ₹295, 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ ₹325 ನಿಗದಿ ಮಾಡಲಾಗಿದೆ.

‘ಈ ಬಾರಿ ಮಕ್ಕಳಿಗೆ ಸಾಕ್ಸ್, ಶೂ ಇಲ್ಲ’ ಎಂಬ ಶೀರ್ಷಿಕೆಯಡಿ ಈ ಬಗ್ಗೆ ‘ಪ್ರಜಾವಾಣಿ’ ವರದಿ ಪ್ರಕಟಿಸಿತ್ತು. ಮಾರನೇ ದಿನ ಪ್ರತಿಕ್ರಿಯಿಸಿದ್ದ ಶಿಕ್ಷಣ ಸಚಿವ ಬಿ.ಸಿ. ನಾಗೇಶ್, ‘ಮಕ್ಕಳು ಶಾಲೆಗೆ ಬರುವುದು ಶೂ, ಸಾಕ್ಸ್‌ಗಾಗಿ ಅಲ್ಲ. ಗುಣಮಟ್ಟದ ಶಿಕ್ಷಣ ನೀಡುವುದೇ ನಮ್ಮ ಆದ್ಯತೆ’ ಎಂದು ಹೇಳಿದ್ದರು. ‘ಪ್ರಜಾವಾಣಿ’ ವರದಿಯನ್ನು ಟ್ಯಾಗ್ ಮಾಡಿ ಟ್ವೀಟ್ ಮಾಡಿದ್ದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಸರ್ಕಾರದ ನಡೆಯನ್ನು ಖಂಡಿಸಿದ್ದರು. ಸಾಮಾಜಿಕ ಜಾಲತಾಣಗಳಲ್ಲಿ ಈ ವಿಷಯ ಚರ್ಚೆಗೆ ಗ್ರಾಸವಾಗಿತ್ತು.

> **ಈ ಹಿಂದೆ ಕೋವಿಡ್ ಸಮಯದಲ್ಲಿ ಭಿಕ್ಷೆ ಬೇಡಿ ಜನರಿಗೆ ಕೊಡುತ್ತೇವೆ ಎಂದು ಡಿ.ಕೆ. ಶಿವಕುಮಾರ್ ಹೇಳಿದ್ದರು. ಆ ಹಣ ಎಲ್ಲಿ? ಎಂದಿನಂತೇ ಇದು ಕೂಡಾ...**
> **ಬಸವರಾಜ ಬೊಮ್ಮಾಯಿ** ಮುಖ್ಯಮಂತ್ರಿ

# ಪಿಎಸ್‌ಐ ಅಕ್ರಮ: ಪರೀಕ್ಷೆ ದಿನವೇ ಹಣ ಹಂಚಿಕೆ!

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ಪಿಎಸ್‌ಐ ನೇಮಕಾತಿ ಅಕ್ರಮ ಆರೋಪಿಗಳಾದ ದಿವ್ಯಾ ಹಾಗರಗಿ, ಮಂಜುನಾಥ ಮೇಳಕುಂದಿಗೆ ಪರೀಕ್ಷೆ ಬರೆದ ಅಭ್ಯರ್ಥಿಗಳು ನೀಡಿದ್ದ ಹಣವನ್ನು ಅಕ್ರಮಕ್ಕೆ ಸಹಕರಿಸಿದ್ದ ಆನಂದ ಮೇತ್ರಿ ಹಾಗೂ ಓಎಂಆರ್ ಉತ್ತರ ಪತ್ರಿಕೆ ಭರ್ತಿ ಮಾಡಿದ ಶಿಕ್ಷಕಿಯರಿಗೆ ಹಂಚಿಕೆ ಮಾಡಲಾಗಿದೆ’ ಎಂಬ ಅಂಶವನ್ನು ಸಿಐಡಿ ಅಧಿಕಾರಿಗಳು ನ್ಯಾಯಾಲಯಕ್ಕೆ ಸಲ್ಲಿಸಿದ ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಿದ್ದಾರೆ.

ಅಕ್ರಮಕ್ಕೆ ಸಹಕರಿಸಿದ್ದಕ್ಕೆ ತನ್ನ ಒಡೆತನದ ಜ್ಞಾನಜ್ಯೋತಿ ಶಿಕ್ಷಣ ಸಂಸ್ಥೆಯ ಪರೀಕ್ಷಾ ಕೇಂದ್ರದ ಸಿಬ್ಬಂದಿಗೆ ದಿವ್ಯಾ ಹಾಗರಗಿ ಪರೀಕ್ಷೆ ನಡೆದಿದ್ದ ಅ.3ರಂದೇ ಶೇಂಗಾ ಹೋಳಿಗೆ, ತುಪ್ಪ, ದಪ್ಪಾಟಿ, ಚಿತ್ರಾನ್ನ ಒಳಗೊಂಡ ವಿಶೇಷ ಭೋಜನ ನೀಡಿದ್ದ ಸಂಗತಿಯನ್ನು ದಾಖಲಿಸಲಾಗಿದೆ.

‘ಓಎಂಆರ್ ಹಾಳೆಯಲ್ಲಿ ತಿದ್ದುಪಡಿ ಮೂಲಕ ಪರೀಕ್ಷೆಯಲ್ಲಿ ತನ್ನ ‘ಅಭ್ಯರ್ಥಿ’ಗಳನ್ನು ಉತ್ತೀರ್ಣಗೊಳಿಸುವ ಹೊಣೆ ಹೊತ್ತಿದ್ದ ಮಂಜುನಾಥ, ದಿವ್ಯಾ ಹಾಗರಗಿ ಹಾಗೂ ಶಾಲೆಯ ಮುಖ್ಯ ಶಿಕ್ಷಕ ಕಾಶಿನಾಥ ಚಿಲ್ಲ ಪರೀಕ್ಷೆಗೂ ಮುನ್ನ ದಿವ್ಯಾ ಮನೆಯಲ್ಲಿ ಸೇರಿ ಸಂಚು ರೂಪಿಸಿದ್ದರು. ಓಎಂಆರ್ ಹಾಳೆ ತಿದ್ದುಪಡಿಗೆ ತಮ್ಮದೇ ಶಾಲೆಯಲ್ಲಿ ಶಿಕ್ಷಕಿಯರನ್ನು ಗೊತ್ತು ಮಾಡಿದ್ದರು’ ಎಂಬ ಮಾಹಿತಿ ಇದೆ.

‘ಸಿಸಿಟಿವಿ ಕ್ಯಾಮೆರಾ ಕಣ್ತಪ್ಪಿಸಿ ವಾಟ್ಸ್‌ಆ್ಯಪ್‌ನಲ್ಲಿ ಬಂದ ಉತ್ತರಗಳನ್ನು ಭರ್ತಿ ಮಾಡುವ ಕೆಲಸಕ್ಕೆ ನೆರವಾಗಿದ್ದಕ್ಕೆ ಬೆರಳಚ್ಚು ವಿಭಾಗದ ಸಿಪಿಐ ಆಗಿದ್ದ ಆನಂದ ಮೇತ್ರಿಗೆ ₹3 ಲಕ್ಷ, ಶಿಕ್ಷಕಿಯರಿಗೆ ತಲಾ ₹4 ಸಾವಿರ ಅನ್ನು ದಿವ್ಯಾ ನೀಡಿದ್ದರು’ ಎಂದು ತಿಳಿಸಲಾಗಿದೆ.

**2 ದಿನದಲ್ಲೇ ₹48 ಲಕ್ಷ ಪಡೆದಿದ್ದ ದಿವ್ಯಾ!**

ತನ್ನ ಒಡೆತನದ ಶಿಕ್ಷಣ ಸಂಸ್ಥೆಯ ಪರೀಕ್ಷಾ ಕೇಂದ್ರದಲ್ಲಿ ಅಕ್ರಮ ನಡೆಸಲು ದಿವ್ಯಾ ಹಾಗರಗಿ ಎರಡೇ ದಿನದಲ್ಲಿ ಅಕ್ರಮದ ಕಿಂಗ್‌ಪಿನ್ ಮಂಜುನಾಥ ಮೇಳಕುಂದಿ ಕಡೆಯಿಂದ ₹ 48 ಲಕ್ಷ ಪಡೆದ ಅಂಶ ಸಿಐಡಿ ಸಲ್ಲಿಸಿದ ಆರೋಪ ಪಟ್ಟಿಯಲ್ಲಿದೆ.

ಮಂಜುನಾಥ ₹ 25 ಲಕ್ಷವನ್ನು ಮುಂಗಡವಾಗಿ ಅ.2ರಂದು, ನಂತರ ₹ 23 ಲಕ್ಷವನ್ನು ಅ.3ರಂದು ದಿವ್ಯಾ ಮನೆಗೆ ತಲುಪಿಸಿದ್ದ. ಪ್ರತಿ ಅಭ್ಯರ್ಥಿಯಿಂದ ₹ 30 ಲಕ್ಷ ಕೊಡಿಸಲು ದಿವ್ಯಾ ಬೇಡಿಕೆ ಇಟ್ಟಿದ್ದರು. ಅಂತಿಮವಾಗಿ ತಲಾ ₹ 25 ಲಕ್ಷ ಕೊಡಿಸುವುದಾಗಿ ಮಂಜುನಾಥ ತಿಳಿಸಿದ್ದ ಎಂಬ ವಿವರವೂ ಇದೆ.

ಪ್ರಧಾನ ಇಂಜಿನಿಯರ್ ರವರ ಕಛೇರಿ, ಪಿ.ಆರ್.ಎ.ಎಂ.ಸಿ.,
4ನೇ ಮಹಡಿ, ಪಿ.ಡಬ್ಲ್ಯೂ.ಡಿ., ಅನೆಕ್ಸ್ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560001
ಸಂಖ್ಯೆ. ಪ್ರಇಂ/40/ಪಿಆರ್‌ಎಎಂಸಿ/2022–23 ದಿನಾಂಕ : 08–07–2022
ಅಲ್ಪಾವಧಿ ಟೆಂಡರ್ ಪ್ರಕಟಣೆ
ಉಡುಪಿ ಜಿಲ್ಲೆಯ 04 ರಸ್ತೆ ಸುರಕ್ಷತಾ ಕಾಮಗಾರಿಗಳಿಗೆ ಕಾರ್ಯಪಾಲಕ ಇಂಜಿನಿಯರ್, ಪಿ.ಆರ್.ಎ.ಎಂ.ಸಿ., ರವರು ರಾಜ್ಯಪಾಲರ ಪರವಾಗಿ ಅಲ್ಪಾವಧಿ ಟೆಂಡರ್‌ಅನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಇ–ಪ್ರೊಕ್ ನಿಂದ (www.eproc.karnataka.gov.in) ದಿನಾಂಕ : 08–07–2022 ಸಂಜೆ 05:30 ರಿಂದ ಪಡೆಯಬಹುದಾಗಿರುತ್ತದೆ.
ವಾಸಾಸಂಇ/ವಾ.ಪ್ರ/1289/ಶ್ರೇಷ್ಠ/2022–23 ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಿಆರ್‌ಎಎಂಸಿ
ಕೋವಿಡ್–19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಾರ್ವಜನಿಕ ನೋಟೀಸು
(ಇನ್ಸಾಲ್ವೆನ್ಸಿ ಮತ್ತು ಬ್ಯಾಂಕರಪ್ಟ್ಸಿ ಕೋಡ್, 2016ರ ಸೆಕ್ಷನ್ 102(1) & (2)ರ ಅಡಿಯಲ್ಲಿ)
ಮೆ॥ ಸ್ಕಾಟ್ಸ್ ಗಾರ್ಮೆಂಟ್ಸ್ ಲಿಮಿಟೆಡ್‌ನ ಸಾಲಗಾರ/ವೈಯಕ್ತಿಕ ಜಾಮೀನುದಾರರಾದ ಶ್ರೀಮತಿ ನುಜ್ಹತ್ ಆಯಿಶಾ ನಜ್ಹೀರ್, ಶ್ರೀ ನಾಸೀರ್ ಅಹ್ಮದ್ ಮತ್ತು ಶ್ರೀ ಅವೈಜ್ ಅಹ್ಮದ್ ಅವರ ಸಾಲದಾತರ ಗಮನಕ್ಕೆ)
(U18101KA2002PLC030185)
ಪ್ರಸ್ತುತ ವಿವರಗಳು

| | | |
|---|---|---|
| 1. | ಸಾಲಗಾರರ/ವೈಯಕ್ತಿಕ ಜಾಮೀನುದಾರರ ಹೆಸರು ಮತ್ತು ವಿಳಾಸ | 1. ಶ್ರೀಮತಿ ನುಜ್ಹತ್ ಆಯಿಶಾ ನಜ್ಹೀರ್ ನಂ. 391, 2ನೇ ಕ್ರಾಸ್, 2ನೇ ಮೇನ್, 2ನೇ ಸ್ಟೇಜ್, 80 ಅಡಿ ರಸ್ತೆ, ಆರ್.ಎಮ್.ವಿ. ಬಡಾವಣೆ, ಬೆಂಗಳೂರು 560058 2. ಶ್ರೀ ನಾಸೀರ್ ಅಹ್ಮದ್ ನಂ. 391, 2ನೇ ಕ್ರಾಸ್, 2ನೇ ಮೇನ್, 2ನೇ ಸ್ಟೇಜ್, 80 ಅಡಿ ರಸ್ತೆ, ಆರ್.ಎಮ್.ವಿ. ಬಡಾವಣೆ, ಬೆಂಗಳೂರು 560058 3. ಶ್ರೀ ಅವೈಜ್ ಅಹ್ಮದ್ 69–ಬಿ, ಶೋಭಾ ಮ್ಯಾಲಕೈಟ್, ಬಳ್ಳಾರಿ ರಸ್ತೆ, ಜಕ್ಕೂರು, ಶ್ಲಿಪ್ ಸ್ಕೂಲ್‌ನ ಹಿಂದೆ, ಬೆಂಗಳೂರು 560064 |
| 2. | ಸಾಲಗಾರರ/ವೈಯಕ್ತಿಕ ಜಾಮೀನುದಾರರ ವಿಷಯದಲ್ಲಿ ಆದೇಶ ಮತ್ತು ದಿವಾಳಿತನದ ಆರಂಭದ ದಿನಾಂಕದ ವಿವರಗಳು | ದಿನಾಂಕ 07ನೇ ಜೂನ್ 2022ರ ಆದೇಶ ಸಂಖ್ಯೆ CP(IB) No. 06, 07, 08 /BB/2021 |
| 3. | ಪರಿಹಾರದ ವೃತ್ತಿಪರರಾಗಿ (RP) ನಿಯೋಜಿಸಲ್ಪಟ್ಟಿರುವ ದಿವಾಳಿತನ ಪರಿಹಾರಕಾರರ ಹೆಸರು, ನೋಂದಾವಣಾ ಸಂಖ್ಯೆ, ಈಮೇಲ್ ಐಡಿ ಹಾಗೂ ವಿಳಾಸ – ವ್ಯವಹಾರದ ಸಲುವಾಗಿ | ಶ್ರೀ ರವೀಂದ್ರ ಬೆಳೆಯೂರ್ IBBI/IPA-001/IP-P00189 / 2017-18/10368 ‘ಶ್ರೀವತ್ಸ’, 428, 19ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು 560011 ಟೆಲಿ: +91 80 26540193 ಈಮೇಲ್: ravi@beleyur.com (ಮಾನ್ಯ NCLT, ಬೆಂಗಳೂರು, ಇವರ 23ನೇ ಜೂನ್ 2022ರ ಆದೇಶದ ಪ್ರಕಾರ RP ಎಂದು ನಿಯುಕ್ತರಾದವರು) |
| 4. | ಕ್ಲೇಮುಗಳ ಸಲ್ಲಿಕೆಗೆ ಕೊನೆಯ ದಿನಾಂಕ | 30ನೇ ಜುಲೈ 2022 (ಕ್ಲೇಮುಗಳ ಸಲ್ಲಿಕೆಗೆ ವಿಸ್ತರಿಸಲ್ಪಟ್ಟ ದಿನಾಂಕ) (ಹಿಂದಿನ ಪ್ರಕಟಣೆಯ ಪ್ರಕಾರ, ಕ್ಲೇಮುಗಳ ಸಲ್ಲಿಕೆಗೆ ಕೊನೆಯ ದಿನಾಂಕವು 01ನೇ ಜುಲೈ 2022 ಆಗಿತ್ತು) |
| 5. | ಕ್ಲೇಮುಗಳನ್ನು ಸಲ್ಲಿಸಲು ಪ್ರಸ್ತುತ ಅರ್ಜಿಗಳು ಇಲ್ಲಿ ಲಭ್ಯ: | ವೆಬ್ ಲಿಂಕ್: www.ibbi.gov.in/home/downloads |

ಈ ಮೂಲಕ ನೋಟೀಸು ನೀಡಲಾಗುತ್ತಿದೆ: ಏನೆಂದರೆ ಮೆ॥ ಸ್ಕಾಟ್ಸ್ ಗಾರ್ಮೆಂಟ್ಸ್ ಲಿಮಿಟೆಡ್‌ನ ಸಾಲಗಾರ/ವೈಯಕ್ತಿಕ ಜಾಮೀನುದಾರರಾದ ಶ್ರೀಮತಿ ನುಜ್ಹತ್ ಆಯಿಶಾ ನಜ್ಹೀರ್, ಶ್ರೀ ನಾಸೀರ್ ಅಹ್ಮದ್ ಮತ್ತು ಶ್ರೀ ಅವೈಜ್ ಅಹ್ಮದ್ ಇವರ ವಿರುದ್ಧ ದಿವಾಳಿತನದ ಪರಿಹಾರದ ಪ್ರಕ್ರಿಯೆಯನ್ನು ಆರಂಭಿಸುವಂತೆ 07ನೇ ಜೂನ್ 2022ರಂದು ಮಾನ್ಯ ನ್ಯಾಶನಲ್ ಕಂಪನಿ ಲಾ ಟ್ರಿಬ್ಯೂನಲ್, ಬೆಂಗಳೂರು, ಆದೇಶಿಸಿದೆ.
ಮೆ॥ ಸ್ಕಾಟ್ಸ್ ಗಾರ್ಮೆಂಟ್ಸ್ ಲಿಮಿಟೆಡ್‌ನ ವಿಷಯದಲ್ಲಿ ವೈಯಕ್ತಿಕ ಜಾಮೀನುದಾರರಾದ ಈ ಮೇಲಿನವರ ಸಾಲದಾತರುಗಳನ್ನು, 30ನೇ ಜುಲೈ 2022ರಂದು ಇಲ್ಲವೆ ಮುಂಚಿತವಾಗಿ ತಮ್ಮ ಕ್ಲೇಮುಗಳನ್ನು ಆಧಾರಗಳ ಸಮೇತ ನಿಗದಿತ ಪ್ರಪತ್ರದಲ್ಲಿ, ಪರಿಹಾರ ವೃತ್ತಿಪರರಿಗೆ ಮೇಲೆ ಕಲಂ 3ರಲ್ಲಿ ತಿಳಿಸಿದ ವಿಳಾಸಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗುತ್ತಿದೆ.
ಆರ್ಥಿಕ ಸಾಲದಾತರು ತಮ್ಮ ಕ್ಲೇಮುಗಳನ್ನು ಎಲೆಕ್ಟ್ರಾನಿಕ್ ಮಾರ್ಗದಲ್ಲಿ ಮಾತ್ರವೇ ಸಲ್ಲಿಸತಕ್ಕದ್ದು. ಉಳಿದೆಲ್ಲ ಸಾಲದಾತರೂ ತಮ್ಮ ಕ್ಲೇಮುಗಳನ್ನು ಆಧಾರಗಳ ಜೊತೆಯಲ್ಲಿ ವೈಯಕ್ತಿಕವಾಗಿ, ಅಂಚೆ ಮೂಲಕ ಇಲ್ಲವೆ ಎಲೆಕ್ಟ್ರಾನಿಕ್ ಮಾರ್ಗದಲ್ಲಿ ಸಲ್ಲಿಸಬಹುದು.
ಸುಳ್ಳಾದ ಅಥವಾ ದಾರಿತಪ್ಪಿಸುವಂತಹ ಸಾಕ್ಷ್ಯಾಧಾರಗಳನ್ನು ಸಲ್ಲಿಸಿದಲ್ಲಿ ದಂಡಗಳಿಗೆ ಗುರಿಯಾಗಬೇಕಾತ್ತದೆ.
ದಿನಾಂಕ: 8ನೇ ಜುಲೈ 2022 ಸ್ಥಳ: ಬೆಂಗಳೂರು
ಸಹಿ/– ರವೀಂದ್ರ ಬೆಳೆಯೂರ್ ನೋಂದಣಿ ಸಂ. IBBI/IPA-001/IP-P00189/2017-18/10368
ಗಮನಿಸಿ: ಸದರಿ ಸಾರ್ವಜನಿಕ ನೋಟೀಸು, ಹಿಂದಿನ RP ಆದ ಶ್ರೀ ಹೇಮಚಂದ್ರ ಅವರಿಂದ 10ನೇ ಜೂನ್ 2022ರಂದು ‘ದಿ ಫೈನಾನ್ಶಿಯಲ್ ಎಕ್ಸ್‌ಪ್ರೆಸ್’ ಹಾಗೂ ‘ಹೊಸ ದಿಗಂತ’ ವೃತ್ತಪತ್ರಿಕೆಗಳಲ್ಲಿ ಪ್ರಕಟಗೊಂಡಿತ್ತು. ಇನ್ನೂ ಹೆಚ್ಚಿನ ಪ್ರಚಾರಕ್ಕಾಗಿ/ವ್ಯಾಪ್ತಿಗಾಗಿ ಈ ಸಾರ್ವಜನಿಕ ನೋಟೀಸನ್ನು ಈ ವೃತ್ತಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆ
ಶಿಕ್ಷಕರ ಸರ್ಕಾರಿ ಶಿಕ್ಷಣ ಮಹಾವಿದ್ಯಾಲಯ (ಸಿ.ಟಿ.ಇ)
ಚಿತ್ರದುರ್ಗ–577501
E-Mali:- cte.chitrdurga@gmail.com Ph: 08194-234072
ಸಂಖ್ಯೆ:–ಚಿ.ಸಿ.ಟಿ.ಇ/ಎ5/ಆ.ವೆಂ.ಕೇಂದ್ರ/01/2021–22 ದಿನಾಂಕ: 02.07.2022
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಶ್ರೀ ಆಲೂರು ವೆಂಕಟರಾವ್ ಭಾಷಾ ಕೌಶಲ ತರಬೇತಿ ಕೇಂದ್ರ, ಬೆಂಗಳೂರು ವಿಭಾಗ ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಚಿತ್ರದುರ್ಗ ಇಲ್ಲಿಗೆ ಕಂಪ್ಯೂಟರ್‌ಗಳನ್ನು ಸರಬರಾಜು ಮಾಡುವ ಬಗ್ಗೆ ಟೆಂಡರ್ ಅನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಪ್ರತ್ಯೇಕವಾಗಿ ಕರೆಯಲಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿ ಹೊಂದಿರುವ ಸಂಸ್ಥೆ/ಏಜೆನ್ಸಿಗಳು ಟೆಂಡರ್‌ನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ www.eproc.karnataka.gov.in ವೆಬ್‌ಸೈಟ್ ಅನ್ನು ಸಂಪರ್ಕಿಸಲು ಕೋರಿದೆ.
ಟೆಂಡರ್ ಸಂಖ್ಯೆ: GCTE/A5/ALURU VENKATARAO CENTER/01/2021-22
(1) ಸರಬರಾಜು ಮಾಡಬೇಕಾದ ಸಾಮಾಗ್ರಿಗಳ ವಿವರ:– ಶ್ರೀ ಆಲೂರು ವೆಂಕಟರಾವ್ ಭಾಷಾ ಕೌಶಲ ತರಬೇತಿ ಕೇಂದ್ರ ಬೆಂಗಳೂರು ವಿಭಾಗ ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಚಿತ್ರದುರ್ಗ ಇಲ್ಲಿಗೆ ಆಲ್ ಇನ್ ಒನ್ ಕಂಪ್ಯೂಟರ್ 21 ಸರಬರಾಜು ಮಾಡುವ ಬಗ್ಗೆ. (2) ಟೆಂಡರ್‌ನ ಅಂದಾಜು ಮೊತ್ತ ರೂ. 12,60,000/– (3) ಇಎಂಡಿ ಮೊತ್ತ ರೂ. 31.500/– (4) ಟೆಂಡರ್ ಡಾಕ್ಯೂಮೆಂಟ್ ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ:– 02.07.2022 (4) ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 16.07.2022ರ ಅಪರಾಹ್ನ 5.30 ಗಂಟೆಯವರೆಗೆ. (5) ಟೆಂಡರ್ ನಂಬರ್ DPI/2022-23/ IND 834
ಹೆಚ್ಚಿನ ಮಾಹಿತಿಗಾಗಿ ಪ್ರಾಂಶುಪಾಲರು ಹಾಗೂ ಪದನಿಮಿತ್ತ ಸಹ ನಿರ್ದೇಶಕರು, ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಸ್ಟೇಡಿಯಂ ರಸ್ತೆ, ಪ್ರಶಾಂತ ನಗರ, ಚಿತ್ರದುರ್ಗ (ಮೊಬೈಲ್ ಸಂಖ್ಯೆ: 9449179081) ಇವರನ್ನು ಸಂಪರ್ಕಿಸಬಹುದಾಗಿದೆ.
DIPR/CTA/MCA/ 321/2022-23
ಸಹಿ/– ಪ್ರಾಂಶುಪಾಲರು ಹಾಗೂ ಪದನಿಮಿತ್ತ ಸಹ ನಿರ್ದೇಶಕರು, ಶಿಕ್ಷಕರ ಸರ್ಕಾರಿ ಶಿಕ್ಷಣ ಮಹಾವಿದ್ಯಾಲಯ (ಸಿ.ಟಿ.ಇ) ಚಿತ್ರದುರ್ಗ.

ಕಾರ್ಯಪಾಲಕ ಅಭಿಯಂತರರ ಕಛೇರಿ
ಕನನೀಸ ಮತ್ತು ಒಚ ಮಂಡಳಿ, ವಿಭಾಗ,
ಬಂದೀಗೌಡ ಬಡಾವಣೆ, ಮಂಡ್ಯ.
ದೂರವಾಣಿ : ಫ್ಯಾಕ್ಸ್ 08232–224816
e mail- kwbeemnd@gmail.com
ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಅಲ್ಪಾವಧಿ ಟೆಂಡರ್ ಪ್ರಕಟಣೆ – 2ನೇ ಕರೆ
(ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಸಂಖ್ಯೆ:ಕಜಮ/ಕಾಅ/ಮಂಡ್ಯ/ತಾಂ.ಶಾ/ತಾಂ.ಸ/ಸ.ಅ–1/571/2022–23
ದಿನಾಂಕ:07.07.2022
ಈ ಕೆಳಕಂಡ ಕಾಮಗಾರಿಗಳಿಗೆ ಅರ್ಹ ಏಜೆನ್ಸಿ/ಗುತ್ತಿಗೆದಾರರಿಂದ ಐಟಂ ದರದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.
ಕ್ರಮ ಸಂಖ್ಯೆ : 01. ಕಾಮಗಾರಿ ಹೆಸರು : ಸಂಖ್ಯೆ: ಕೆಯುಡಬ್ಲೂಎಸ್‌ಡಿಬಿ/2022–23/ಡಬ್ಲೂಎಸ್/ವರ್ಕ್ ಇಂಡೆಂಟ್_3166/2ನೇ ಕರೆ.
2022–23ನೇ ಸಾಲಿನ ಮಂಡ್ಯ ನಗರ ನೀರು ಸರಬರಾಜು ನಿರ್ವಹಣೆಯಡಿ ಮಂಡ್ಯ ನಗರದಲ್ಲಿ 16 ಡಿ.ಎಂ.ಎಗಳ ನೀರು ವಿತರಣಾ ಸರಬರಾಜು ನಿರ್ವಹಣೆಯನ್ನು 9(ಒಂಬತ್ತು) ತಿಂಗಳು ನಿರ್ವಹಿಸುವ ಹಾಗೂ ಇತರೆ ಕಾಮಗಾರಿಗಳು. ಟೆಂಡರ್‌ಗಿಟ್ಟ ಮೊಬಲಗು ರೂ.85,73,417.00
ಹೆಚ್ಚಿನ ಮಾಹಿತಿಗಾಗಿ ಕೆಳಗೆ ಸಹಿ ಮಾಡಿದವರ ಕಛೇರಿಯನ್ನು ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ: 080–46010000/080–6894877, ಇ–ಮೇಲ್ support@eprochelpdesk.com ಸಂಪರ್ಕಿಸಬಹುದು.
ಸಹಿ/–ಕಾರ್ಯಪಾಲಕ ಅಭಿಯಂತರರು, ಕನನೀಸ ಮತ್ತು ಒಚ ಮಂಡಳಿ, ವಿಭಾಗ, ಮಂಡ್ಯ
ವಾಸಾಸಂಇ/ಸನಿ–ಮಂಡ್ಯ/ಎಂಸಿ&ಎ/195/2022–23

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ. ತಾ:ಬ.ಬಾಗೇವಾಡಿ, ಜಿ:ವಿಜಯಪುರ.
ದೂರವಾಣಿ:08426–281027.ಇಮೇಲ್:dam_division@rediffmail.com
ಸಂ:ಕೃಭಾಜನಿನಿ/ಡಿ.ಬಿ/ಟೆಂಡರ್/2022–23/1125 ದಿನಾಂಕ:06.07.2022
ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ/2ನೇ ಕರೆ
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ, ತಾ: ಬ.ಬಾಗೇವಾಡಿ ಇವರು ಅರ್ಹ ಗುತ್ತಿಗೆದಾರರಿಗೆ (1) “Outsourcing for Supplying, Operating and Maintenance of Battery Operated Vehicles/Buggies and existing Mini Train Inside Landscape Garden of Almatti Dam Site for tourists/visitors for the period of Three years” (Request For Proposal) (Call-2) ಶೇಕಡಾವಾರು ದ್ವಿ–ಲಕೋಟೆಗಳಲ್ಲಿ ಕೆ.ಟಿ.ಪಿ.ಪಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ ಟೆಂಡರ್ ಆಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ–cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಸಲ್ಲಿಸಬಹುದಾಗಿದೆ. ಮೊದಲ ಲಕೋಟೆಯು ತಾಂತ್ರಿಕ ಬಿಡ್‌ದಾಗಿದ್ದು, ಅಗತ್ಯವಿರುವ ದಾಖಲೆಗಳನ್ನು ಒಳಗೊಂಡಿದ್ದು ಪ್ಯಾರಾ 1.1 ರಂತೆ, ಎರಡನೇ ಲಕೋಟೆಯು ಆರ್ಥಿಕ ಬಿಡ್‌ದಾಗಿದ್ದು ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದವರ ಆರ್ಥಿಕ ಬಿಡ್ಡುಗಳನ್ನು ಮಾತ್ರ ತೆರೆಯಲಾಗುವುದು.
1) ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವಿಕರಿಸುವ ಕೊನೆಯ ದಿನಾಂಕ: 07.07.2022 ರಿಂದ 25.07.2022 ಸಾಯಂಕಾಲ 5.00 ಘಂಟೆಯವರೆಗೆ. 2) ಪೂರ್ವಭಾವಿ ಸಭೆ (ಫ್ರೀ ಬಿಡ್ ಮೀಟಿಂಗ್) ದಿನಾಂಕ: 15.07.2022 ರಂದು ಸಾಯಂಕಾಲ 3.30 ಗಂಟೆಗೆ. ಕಾರ್ಯನಿರ್ವಾಹಕ ಅಭಿಯಂತರರು ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ ಕಚೇರಿಯಲ್ಲಿ 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 27.07.2022 ರಂದು ಮುಂಜಾನೆ 11.00 ಘಂಟೆಗೆ. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 30.07.2022 ರಂದು ಮುಂಜಾನೆ 11.00 ಗಂಟೆಗೆ.
ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. http://www.eproc.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426–281027.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ.
ವಾಸಾಸಂಇ/ವಿಜಯಪುರ/252/ಎಂಸಿಎ/2022–23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಎಸ್‌ಡಬ್ಲ್ಯೂಡಿ, ಕೋರಮಂಗಲ ವ್ಯಾಲಿ, ಬಿಬಿಎಂಪಿ, 9ನೇ ಮಹಡಿ, ಜಯನಗರ ಶಾಪಿಂಗ್ ಕಾಂಪ್ಲೆಕ್ಸ್, 4ನೇ ಬ್ಲಾಕ್, ಜಯನಗರ, ಬೆಂಗಳೂರು – 560 011.
ಸಂ.: ಕಾಪಾಅ/ಎಸ್‌ಡಬ್ಲ್ಯೂಡಿ–ಕೋವ್ಯಾ/ಟೆಂಡರ್/02/2022–23 ದಿನಾಂಕ: 08.07.2022
ತಿದ್ದುಪಡಿ–2
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ – ಕೆಡಬ್ಲ್ಯೂ4)
ಕಾರ್ಯಪಾಲಕ ಅಭಿಯಂತರರು (ಎಸ್‌ಡಬ್ಲ್ಯೂಡಿ–ಕೋರಮಂಗಲ ವ್ಯಾಲಿ), ಬಿಬಿಎಂಪಿ, ಬೆಂಗಳೂರು ಅವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರು ಅಥವಾ ಅದಕ್ಕೆ ಸರಿಸಮಾನವಾದ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳ ಜೊತೆಗೆ ನೋಂದಾಯಿತದಾರರಿಂದ ಈ ಕೆಳಕಂಡ ಕಾಮಗಾರಿಗಳ ನಿರ್ಮಾಣಕ್ಕಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

| ಕ್ರ. ಸಂ. | ಪ್ಯಾಕೇಜ್ | ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಇಎಂಡಿ (ರೂ. ಲಕ್ಷಗಳಲ್ಲಿ) |
|---|---|---|---|
| 1 | 2022–23ರ ಜಿಬಿಕೆ ಅನುದಾನದ ಅಡಿಯಲ್ಲಿ ಪ್ಯಾಕೇಜ್–3ರ ಜಯನಗರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಕೋರಮಂಗಲ ತಗ್ಗು ಪ್ರದೇಶ (Valley)ದ ಪ್ರಾಥಮಿಕ, ಮಾಧ್ಯಮಿಕ ಚರಂಡಿಗಳು, ಅಡಿಗಾಲುವೆ (Culverts)/ ಸೇತುವೆಗಳು ಮತ್ತು ಎಸ್‌ಡಬ್ಲ್ಯೂಡಿ ಹರಡಿರುವ ವಿವಿಧ ಸ್ಥಳಗಳಲ್ಲಿ ಎಲ್ಲಾ ಜೋಡಣೆ ಕೆಲಸವು ಸೇರಿದಂತೆ ಇತರೆ ಕಾಮಗಾರಿಗಳ ಪುನರ್ ರೂಪಗೊಳಿಸುವಿಕೆ (Remodeling)/ ನಿರ್ಮಾಣ. (ಕ್ರಿಯೆ ಯೋಜನೆ ಸಂಖ್ಯೆಗಳು 194 ಮತ್ತು 195) | 1900.00 | ರೂ. 19.00 ಲಕ್ಷಗಳು (ರೂ. 1.00 ಲಕ್ಷಗಳು ಇ–ಪಾವತಿ ಮೂಲಕ ಮತ್ತು ರೂ. 18.00 ಲಕ್ಷಗಳು ಬಿಜಿ ಪ್ರಕಾರ |
| ಮುಕ್ತಾಯದ ಅವಧಿ: 11 ತಿಂಗಳುಗಳು | | | |

ವೇಳಾಪಟ್ಟಿ: (1) ಪೂರ್ವ ಬಿಡ್ ಸಭೆಯ ದಿನಾಂಕ: 15.07.2022ರ ಸಂಜೆ 4.00 ಗಂಟೆಗೆ. (2) ಬಿಡ್ ದಸ್ತಾವೇಜು ಸಲ್ಲಿಸಲು ಕೊನೆಯ ದಿನಾಂಕ: 08.08.2022ರ ಸಂಜೆ 4.00 ಗಂಟೆಗೆ. (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 10.08.2022ರ ಸಂಜೆ 4.31 ಗಂಟೆಗೆ. (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: ಬಿಡ್ದಾರರಿಗೆ ತಿಳಿಸಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಿಂದ ಪಡೆದುಕೊಳ್ಳಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಎಸ್‌ಡಬ್ಲ್ಯೂಡಿ, ಕೋರಮಂಗಲ ವ್ಯಾಲಿ, ಬಿಬಿಎಂಪಿ
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

## ಬಂದೂಕನ್ನು ತಾನೇ ತಯಾರಿಸಿಕೊಂಡಿದ್ದ ಆರೋಪಿ: ಜಪಾನ್ ಪೊಲೀಸರಿಂದ ಮಾಹಿತಿ

# ‘ಅಬೆ ಹತ್ಯೆಗೆ ನಾಡಬಂದೂಕು’

ಟೋಕಿಯೊ (ಎಪಿ/ಎಎಫ್‌ಪಿ/ರಾಯಿಟರ್ಸ್): ಶಿಂಜೊ ಅಬೆ ಅವರ ಮೇಲೆ ಗುಂಡು ಹಾರಿಸಿದ ದಾಳಿಕೋರ, ದಾಳಿಗೆ ಬಳಸಿದ್ದ ಬಂದೂಕನ್ನು ತಾನೇ ತಯಾರಿಸಿಕೊಂಡಿದ್ದ ಎಂದು ಜಪಾನ್ ತನಿಖಾ ಸಂಸ್ಥೆಗಳು ಹೇಳಿವೆ.

ಬಂದೂಕಿಗೆ ಸಂಬಂಧಿಸಿದಂತೆ ಜಪಾನ್‌ನಲ್ಲಿ ಇರುವ ಕಾನೂನುಗಳು ಅತ್ಯಂತ ಕಠಿಣವಾದವು. ಬಂದೂಕು ಬಳಕೆ ತರಬೇತಿ ಪಡೆಯುವುದು, ಬಂದೂಕು ಹೊಂದುವುದು ಅತ್ಯಂತ ಕಷ್ಟಸಾಧ್ಯವಾದ ಪ್ರಕ್ರಿಯೆ. ಹೀಗಿದ್ದೂ ದಾಳಿಕೋರನಿಗೆ ಬಂದೂಕು ಹೇಗೆ ದೊರೆಯಿತು ಎಂದು ಜಪಾನ್‌ನ ನಾಗರಿಕರು ಸಾಮಾಜಿಕ ಜಾಲತಾಣಗಳಲ್ಲಿ ಪ್ರಶ್ನಿಸಿದ್ದರು. ಅಷ್ಟರಲ್ಲೇ, ‘ದಾಳಿಕೋರ ಬಂದೂಕನ್ನು ತಾನೇ ತಯಾರಿಸಿಕೊಂಡಿದ್ದ ಎಂದು ಹೇಳಿದ’ ಎಂದು ತನಿಖಾಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಬಂದೂಕು ಹೊಂದುವುದಕ್ಕೂ ಮುನ್ನ, ತಮಗೆ ಬಂದೂಕು ಏಕೆ ಅವಶ್ಯಕ ಎಂಬುದನ್ನು ನಾಗರಿಕರು ಸಾಬೀತು ಮಾಡಬೇಕು. ಬಂದೂಕು ಹೊಂದಬಯಸುವವರ ಮಾನಸಿಕ ಆರೋಗ್ಯ ಮತ್ತು ವರ್ತನೆಯ ಬಗ್ಗೆ ಹಲವು ಹಂತದ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಮಾನಸಿಕ ಸ್ಥಿಮಿತ ಇದ್ದವರಿಗಷ್ಟೇ ಬಂದೂಕು ಬಳಕೆ ತರಬೇತಿಗೆ ಶಿಫಾರಸು ಮಾಡಲಾಗುತ್ತದೆ. ತರಬೇತಿಯ ನಂತರ ಶಾಟ್‌ಗನ್ ಅಥವಾ ಏರ್ ರೈಫಲ್‌ಗಳನ್ನು ಹೊಂದಲು ಮಾತ್ರ ಅನುಮತಿ ನೀಡಲಾಗುತ್ತದೆ.

‘ಅಬೆ ಹತ್ಯೆಯ ಆರೋಪಿ ತೆತ್ಸುಯ ಯಮಾಗಾಮಿ ಜಪಾನ್‌ನ ಕರಾವಳಿ ರಕ್ಷಣಾ ಪಡೆಯ ಮಾಜಿ ಸದಸ್ಯ. ಹೀಗಾಗಿ ಆತನಿಗೆ ಬಂದೂಕು ಬಳಕೆಯ ಬಗ್ಗೆ ತರಬೇತಿ ಇತ್ತು. ಬಂದೂಕು ತಯಾರಿಕೆಗೆ ಬೇಕಾದ ಸಾಮಗ್ರಿಗಳನ್ನು, ಬೇರೆ ವಸ್ತುಗಳ ಮೂಲಕ ಆತ ತನ್ನ ಮನೆಯಲ್ಲೇ ರೂಪಿಸಿಕೊಂಡಿದ್ದ. ಆ ವಸ್ತುಗಳ ಮೂಲಕ ಡಬಲ್ ಬ್ಯಾರೆಲ್ (ಎರಡು ನಳಿಕೆಯ) ಶಾಟ್‌ಗನ್‌ನಂತಹ ನಾಡ ಬಂದೂಕನ್ನು ತಾನೇ ತಯಾರಿಸಿಕೊಂಡಿದ್ದ’ ಎಂದು ತನಿಖಾಧಿಕಾರಿಗಳು ಮಾಹಿತಿ ನೀಡಿದ್ದಾರೆ.

‘ಅದು ನಾಡ ಬಂದೂಕು ಆಗಿದ್ದರಿಂದಲೇ ಆತ ಹಾರಿಸಿದ ಮೊದಲ ಗುಂಡಿನ ಸದ್ದು, ಆಟಿಕೆ ಬಂದೂಕಿನ ಸದ್ದಿನಂತೆ ಇತ್ತು. ಮತ್ತು ಆತ ಹಾರಿಸಿದ ಎರಡನೇ ಗುಂಡು ಭಾರಿ ಸದ್ದು ಮಾಡಿತ್ತು. ಜತೆಗೆ ಎರಡನೇ ಗುಂಡು ಹಾರುವಾಗ ಬೆಂಕಿಯ ಕಿಡಿ ಮತ್ತು ಹೊಗೆ ಬಂದಿದ್ದು ವಿಡಿಯೊಗಳಲ್ಲಿ ದಾಖಲಾಗಿದೆ. ಪ್ರತ್ಯಕ್ಷದರ್ಶಿಗಳೂ ಇದನ್ನು ದೃಢಪಡಿಸಿದ್ದಾರೆ’ ಎಂದು ತನಿಖಾಧಿಕಾರಿಗಳು ಹೇಳಿದ್ದಾರೆ.

**ಭದ್ರತಾ ಸಿಬ್ಬಂದಿ ಕಡಿಮೆ:** ಅಬೆ ಹತ್ಯೆಯ ಬಳಿಕ, ಜಪಾನ್‌ನಲ್ಲಿ ಹಿರಿಯ ನಾಯಕರ ರಕ್ಷಣೆಯ ಬಗ್ಗೆ ಹಲವು ಪ್ರಶ್ನೆಗಳು ಎದ್ದಿವೆ. ಈ ದೇಶದಲ್ಲಿ ರಾಜಕೀಯ ಹಿಂಸಾಚಾರ ಮತ್ತು ಬಂದೂಕು ಉಪಯೋಗಿಸಿ ಹತ್ಯೆಯಂತಹ ಕೃತ್ಯಗಳು ಅತ್ಯಂತ ವಿರಳ. ಬೇರೆ ದೇಶಗಳಿಗೆ ಹೋಲಿಸಿದರೆ ಜಪಾನ್‌ನ ರಾಜಕಾರಣಿಗಳು ಅತ್ಯಂತ ಕಡಿಮೆ ಸಂಖ್ಯೆಯ ಭದ್ರತಾ ಸಿಬ್ಬಂದಿಯನ್ನು ಹೊಂದಿರುತ್ತಾರೆ.

ಅಬೆ ಅವರ ಜತೆಗೆ ಟೋಕಿಯೊದಿಂದ ಬಂದಿದ್ದ ಒಬ್ಬ ಪೊಲೀಸ್ ಅಧಿಕಾರಿ ಮತ್ತು ಸ್ಥಳೀಯ ಪೊಲೀಸ್‌ನ ಕೆಲವು ಸಿಬ್ಬಂದಿ ಮಾತ್ರ ಇದ್ದರು. ಹತ್ಯೆ ಆರೋಪಿಯು ಅಬೆ ಅವರಿಗೆ 3 ಮೀಟರ್ ಹತ್ತಿರದಲ್ಲಿಯೇ ನಿಂತಿದ್ದ ಎಂದು ವರದಿಯಾಗಿದೆ.



ದಾಳಿಯ ನಂತರ ಹಂತಕನನ್ನು ಭದ್ರತಾ ಸಿಬ್ಬಂದಿ ಹಿಡಿದರು –ಎಎಫ್‌ಪಿ ಚಿತ್ರ







ಭಾಷಣದ ಸಂದರ್ಭದಲ್ಲಿ ಶಿಂಜೊ ಅಬೆ ಅವರ ಹಿಂದೆಯೇ ನಿಂತಿದ್ದ ದಾಳಿಕೋರ (ಕೆಂಪು ವೃತ್ತದಲ್ಲಿ ಗುರುತಿಸಲಾಗಿದೆ). ಪ್ರಚಾರ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಸಾರ್ವಜನಿಕರೊಬ್ಬರು ಚಿತ್ರೀಕರಿಸಿದ್ದ ವಿಡಿಯೊದಿಂದ ಈ ಚಿತ್ರವನ್ನು ಸ್ಕ್ರೀನ್‌ಗ್ರ್ಯಾಬ್ ಮಾಡಲಾಗಿದೆ –ಎಎಫ್‌ಪಿ ಚಿತ್ರ

## ಭಾರತದೊಂದಿಗೆ ಉತ್ತಮ ಸಂಬಂಧ

ಶಿಂಜೊ ಅಬೆ ಅವರಿಗೆ ಶ್ರದ್ಧಾಂಜಲಿ ಅರ್ಪಿಸುವ ಸಲುವಾಗಿ ರಾಷ್ಟ್ರಧ್ವಜವನ್ನು ಶನಿವಾರ ಅರ್ಧ ಎತ್ತರದಲ್ಲಿ ಹಾರಿಸಲು ಕೇಂದ್ರ ಸರ್ಕಾರವು ಸೂಚನೆ ನೀಡಿದೆ.

ಅಬೆ ಅವರು ಭಾರತ ಮತ್ತು ಭಾರತದ ನಾಯಕರ ಜತೆಗೆ ಸ್ನೇಹ ಸಂಬಂಧವನ್ನು ಹೊಂದಿದ್ದರು. ತಮ್ಮ ಅಧಿಕಾರದ ಅವಧಿಯಲ್ಲಿ ಅವರು ಭಾರತಕ್ಕೆ ಹಲವು ಬಾರಿ ಭೇಟಿ ನೀಡಿದ್ದರು. ಭಾರತ ಮತ್ತು ಜಪಾನ್ ನಡುವೆ ರಕ್ಷಣಾ ಸಹಕಾರ ಗಟ್ಟಿಯಾಗಲು ಅಡಿಗಲ್ಲು ಹಾಕಿದ್ದೇ ಶಿಂಜೊ ಅಬೆ. ಕಾಂಗ್ರೆಸ್ ನೇತೃತ್ವದ ಯುಪಿಎ ಮತ್ತು ಬಿಜೆಪಿ ನೇತೃತ್ವದ ಎನ್‌ಡಿಎ ಜತೆಗೆ ಅವರು ಉತ್ತಮ ಸಂಬಂಧ ಹೊಂದಿದ್ದರು.

2006ರಲ್ಲಿ ಪ್ರಧಾನಿಯಾಗಿ ಆಯ್ಕೆಯಾದ ನಂತರ ಶಿಂಜೊ ಅಬೆ ಅವರು ಭಾರತಕ್ಕೆ ಭೇಟಿ ನೀಡಿದ್ದರು. ಭಾರತದ ಸಂಸತ್ತಿನಲ್ಲಿ ಮಾತನಾಡಿದ್ದ ಅವರು, ‘ಇಂಡೊ–ಪೆಸಿಫಿಕ್ ಸಹಕಾರ’ ಪರಿಕಲ್ಪನೆಯನ್ನು ಪ್ರಚುರಪಡಿಸಿದ್ದರು. ಇಂಡೊ–ಪೆಸಿಫಿಕ್ ಸಹಕಾರ ಒಕ್ಕೂಟ ಅಸ್ತಿತ್ವಕ್ಕೆ ಆ ಭೇಟಿಯು ಬುನಾದಿ ಹಾಕಿತ್ತು ಎಂದು ವಿಶ್ಲೇಷಿಸಲಾಗಿದೆ. 2014ರಲ್ಲಿ ಅಂದಿನ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರ ಆಹ್ವಾನದ ಮೇರೆಗೆ ಅಬೆ ಅವರು ಮತ್ತೆ ಭಾರತಕ್ಕೆ ಭೇಟಿ ನೀಡಿದ್ದರು. ಭಾರತದ ಗಣರಾಜ್ಯೋತ್ಸವದಲ್ಲಿ ಭಾಗಿಯಾದ ಜಪಾನ್‌ನ ಮೊದಲ ಪ್ರಧಾನಿ ಎಂಬ ಹೆಗ್ಗಳಿಕೆ ಅಬೆ ಅವರದ್ದು.

2015ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಆಹ್ವಾನದ ಮೇರೆಗೆ ಅಬೆ ಅವರು, ಭಾರತಕ್ಕೆ ಮೂರು ದಿನಗಳ ಪ್ರವಾಸ ಕೈಗೊಂಡಿದ್ದರು. ಆ ಪ್ರವಾಸದ ವೇಳೆ ಅವರು ವಾರಾಣಸಿಯಲ್ಲಿ ನಡೆದ ಗಂಗಾ ಆರತಿಯಲ್ಲಿ ಭಾಗಿಯಾಗಿದ್ದರು. ಈ ಭೇಟಿಯ ವೇಳೆ ರಕ್ಷಣಾ ಸಹಕಾರ, ವಾಣಿಜ್ಯ ಸಹಕಾರಕ್ಕೆ ಸಂಬಂಧಿಸಿದಂತೆ ಭಾರತ ಮತ್ತು ಜಪಾನ್ ಹಲವು ಒಪ್ಪಂದಗಳಿಗೆ ಸಹಿ ಹಾಕಿದ್ದವು. 2017ರಲ್ಲಿ ಅಬೆ ಅವರು ಭಾರತಕ್ಕೆ ಮತ್ತೊಮ್ಮೆ ಭೇಟಿ ನೀಡಿದ್ದರು. ಮೋದಿ ಅವರ ಸರ್ಕಾರವು 2021ನೇ ಸಾಲಿನಲ್ಲಿ ಅಬೆ ಅವರಿಗೆ ಪದ್ಮ ವಿಭೂಷಣ ಪ್ರಶಸ್ತಿಯನ್ನು ನೀಡಿ, ಗೌರವಿಸಿತ್ತು.



ಪ್ರಧಾನಿ ನರೇಂದ್ರ ಮೋದಿ ಜತೆಗೆ ಶಿಂಜೊ ಅಬೆ –ಪಿಟಿಐ ಚಿತ್ರ

**ಶಿಂಜೊ ಅಬೆ ನನ್ನ ಗೆಳೆಯ ಮಾತ್ರವಾಗಿರಲಿಲ್ಲ. ಬದಲಿಗೆ ಅವರು ಭಾರತಕ್ಕೂ ಅತ್ಯಂತ ನಂಬಿಕಸ್ಥ ಗೆಳೆಯರಾಗಿದ್ದರು**
**ನರೇಂದ್ರ ಮೋದಿ,** ಪ್ರಧಾನಿ

**ಶಿಂಜೊ ಅಬೆ ಅವರ ಹತ್ಯೆ ಸುದ್ದಿ ಕೇಳಿ ನೋವಾಯಿತು. ಈ ಕಷ್ಟಕರ ಮತ್ತು ದುಃಖದ ಸಂದರ್ಭದಲ್ಲಿ ಜಪಾನ್ ಜೊತೆ ಬ್ರಿಟನ್ ನಿಲ್ಲುತ್ತದೆ**
**ಬೋರಿಸ್ ಜಾನ್ಸನ್,** ಬ್ರಿಟನ್ ಪ್ರಧಾನಿ

**ಜಪಾನ್‌ಗಾಗಿ ಅಬೆ ತಮ್ಮ ಪ್ರಾಣ ಮುಡುಪಾಗಿಸಿದ್ದರು. ಜಗತ್ತಿನ ಸುಸ್ಥಿರತೆಗಾಗಿ ಕೆಲಸ ಮಾಡಿದ್ದರು. ಜಪಾನ್ ಅತ್ಯುತ್ತಮ ನಾಯಕನನ್ನು ಕಳೆದುಕೊಂಡಿದೆ**
**ಇಮ್ಯಾನುವೆಲ್ ಮ್ಯಾಕ್ರಾನ್**
ಫ್ರಾನ್ಸ್ ಅಧ್ಯಕ್ಷ

**ಅಬೆ ದೂರದೃಷ್ಟಿ ಹೊಂದಿದ್ದ ನಾಯಕ. ಅಮೆರಿಕ ಮತ್ತು ಜಪಾನ್ ನಡುವಿನ ದ್ವಿಪಕ್ಷೀಯ ಸಂಬಂಧವನ್ನು ಅವರು ಮತ್ತೊಂದು ಎತ್ತರಕ್ಕೆ ಕೊಂಡೊಯ್ದರು**
**ಆ್ಯಂಟನಿ ಬ್ಲಿಂಕನ್,** ಅಮೆರಿಕ ವಿದೇಶಾಂಗ ಕಾರ್ಯದರ್ಶಿ

## ಸಂಪ್ರದಾಯಶೀಲ ರಾಷ್ಟ್ರೀಯವಾದಿ

ಎರಡನೇ ವಿಶ್ವಯುದ್ಧದ ನಂತರ ಜಪಾನ್‌ನ ಪ್ರಧಾನಿ ಹುದ್ದೆಗೇರಿದ ಅತ್ಯಂತ ಕಿರಿಯ ವ್ಯಕ್ತಿ, ಜಪಾನ್‌ನ ಅತ್ಯಂತ ದೀರ್ಘಾವಧಿಯ ಪ್ರಧಾನಿ... ಇವು ಜಪಾನ್‌ನ ಮಾಜಿ ಪ್ರಧಾನಿ ಶಿಂಜೊ ಅಬೆ ಅವರಿಗೆ ಸಂಬಂಧಿಸಿದ ದಾಖಲೆಗಳು. ನಾಲ್ಕು ಬಾರಿ ಪ್ರಧಾನಿ ಹುದ್ದೆಗೆ ಏರಿದ್ದ ಅಬೆ ಅವರಿಗೆ, ರಾಜಕಾರಣ ಅವರ ಕುಟುಂಬದಿಂದ ಬಳುವಳಿಯಾಗಿ ಬಂದದ್ದು.

ಶಿಂಜೊ ಅಬೆ ಅವರ ತಾತ ನೋಬುಸುಕೆ ಕಿಶಿ ಅವರು ಜಪಾನ್‌ನ ಪ್ರಧಾನಿಯಾಗಿದ್ದರು. ಅಬೆ ಅವರ ತಂದೆ ಶಿಂಟಾರೋ ಅಬೆ ಅವರು ಜಪಾನ್‌ನ ವಿದೇಶಾಂಗ ಸಚಿವರಾಗಿದ್ದರು. 1993ರಲ್ಲಿ ಅಬೆ ಅವರು ಮೊದಲ ಬಾರಿಗೆ ಜಪಾನ್‌ನ ಸಂಸತ್ತಿನ ಕೆಳಮನೆಯ ಸದಸ್ಯರಾಗಿ ಚುನಾಯಿತರಾದರು. ಅಲ್ಲಿಂದ ಅವರು ರಾಜಕಾರಣದಲ್ಲಿ ಹಿಂತಿರುಗಿ ನೋಡಿದ್ದೇ ಇಲ್ಲ.

2005ರಲ್ಲಿ ಅಂದಿನ ಪ್ರಧಾನಿ ಜುನಿಶಿರೋ ಕೋಇಝುಮಿ ಅವರು ಅಬೆ ಅವರನ್ನು ಸಂಪುಟ ಕಾರ್ಯದರ್ಶಿಯಾಗಿ ನೇಮಕ ಮಾಡಿದರು. ಹೀಗೆ 2005ರಲ್ಲೇ ಅಬೆ ಅವರು ಜಪಾನ್ ಸಂಪುಟ ದರ್ಜೆಯ ಸಚಿವರಾಗಿ ಅಧಿಕಾರ ಸ್ವೀಕರಿಸಿದರು. ನಂತರದ ಒಂದು ವರ್ಷದ ಅವಧಿಯಲ್ಲೇ ದೇಶದ ಪ್ರಧಾನಿಯಾಗುವ ಅವಕಾಶವೂ ಅವರಿಗೆ ಒದಗಿ ಬಂದಿತು.

2006ರಲ್ಲಿ, ತಮ್ಮ 52ನೇ ವಯಸ್ಸಿನಲ್ಲಿ ಅಬೆ ಅವರು ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದರು. ಆದರೆ, ಪ್ರಧಾನಿಯಾಗಿ ಅವರ ಆ ಅಧಿಕಾರದ ಅವಧಿ ಸುಗಮವಾಗಿ ಇರಲಿಲ್ಲ. ಅವರ ಸರ್ಕಾರವು ಹಲವು ಹಗರಣಗಳ ಆರೋಪವನ್ನು ಎದುರಿಸಬೇಕಾಯಿತು. ಆ ಸರ್ಕಾರದ ಅವಧಿಯಲ್ಲಿ ದೇಶದ ನಿವೃತ್ತ ನೌಕರರ ಪಿಂಚಣಿ ದತ್ತಾಂಶಗಳು ಅಳಿಸಿಹೋದವು. ಇಂತಹ ಹಗರಣಗಳ ಬೆನ್ನಲ್ಲೇ ಜಪಾನ್ ಸಂಸತ್ತಿನ ಮೇಲ್ಮನೆಗೆ 2007ರ ಜುಲೈನಲ್ಲಿ ನಡೆದ ಚುನಾವಣೆಯಲ್ಲಿ ಅಬೆ ಅವರ ಎಲ್‌ಡಿಪಿ ಪಕ್ಷವು ಹೀನಾಯ ಸೋಲು ಕಂಡಿತು. ಅದೇ ವರ್ಷದ ಸೆಪ್ಟೆಂಬರ್‌ನಲ್ಲಿ ತೀವ್ರ ಅನಾರೋಗ್ಯದ ಕಾರಣ ಅಬೆ ಅವರು ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿದ್ದರು.

2012ರ ಚುನಾವಣೆಯಲ್ಲಿ ಎಲ್‌ಡಿಪಿ ಅಧಿಕಾರಕ್ಕೆ ಬಂದಿತು. ಅಬೆ ಎರಡನೇ ಅವಧಿಗೆ ಪ್ರಧಾನಿಯಾದರು. ಅಬೆ ಅವರು ಸಂಪ್ರದಾಯಶೀಲ ರಾಷ್ಟ್ರೀಯವಾದಿ ಆಗಿದ್ದರು. ‘ಬ್ರಿಟಿಷರ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ ಜಪಾನ್‌ನ ಸಂವಿಧಾನವನ್ನು ಬದಲಿಸಬೇಕು’ ಎಂದು ಅವರು ಎರಡನೇ ಅವಧಿಗೆ ಪ್ರಧಾನಿಯಾದ ದಿನದಿಂದ ಹಲವು ಬಾರಿ ಹೇಳಿದ್ದರು. ಅವರ ಈ ಪ್ರಯತ್ನಕ್ಕೆ ವ್ಯಕ್ತವಾದ ಬೆಂಬಲದಷ್ಟೇ, ವಿರೋಧವೂ ಇತ್ತು. ಹೀಗಾಗಿ ಸಂವಿಧಾನ ಬದಲಿಸುವ ಅವರ ಮಹತ್ವಾಕಾಂಕ್ಷೆ ಕೈಗೂಡಲಿಲ್ಲ.

ಅಬೆ ಅವರು ತಮ್ಮ ಆಕ್ರಮಣಕಾರಿ ಮತ್ತು ಚುರುಕಿನ ಸೇನಾ ನೀತಿಗಳಿಗೆ ಹೆಸರುವಾಸಿಯಾಗಿದ್ದಾರೆ. ಹೊರದೇಶಗಳಲ್ಲಿ ಜಪಾನ್ ಸೇನೆಯನ್ನು ಇರಿಸಲು ಮತ್ತು ಬೇರೆ ದೇಶಗಳೊಂದಿಗೆ ರಕ್ಷಣಾ ಸಹಕಾರವನ್ನು ಗಟ್ಟಿಗೊಳಿಸಲು ಅವಕಾಶ ಮಾಡಿಕೊಡುವ ಕಾನೂನನ್ನು ಅಬೆ ಅವರ ಸರ್ಕಾರ 2015ರಲ್ಲಿ ರೂಪಿಸಿತು. ರಕ್ಷಣಾ ಕ್ಷೇತ್ರಕ್ಕೆ ನೀಡುವ ಅನುದಾನವನ್ನು ಹೆಚ್ಚಿಸಲಾಯಿತು. ಅಮೆರಿಕ, ಭಾರತ, ಬ್ರಿಟನ್ ಅನ್ನು ಒಳಗೊಂಡ ಕ್ವಾಡ್ ರಕ್ಷಣಾ ಒಕ್ಕೂಟ ರಚನೆಯಲ್ಲಿ ಅಬೆ ಮಹತ್ವದ ಪಾತ್ರ ವಹಿಸಿದರು. ಇದು ನೆರೆಯ ಚೀನಾ ಮತ್ತು ಉತ್ತರ ಕೊರಿಯಾದ ಕಣ್ಣುಗಳನ್ನು ಕೆಂಪಾಗಿಸಿತು.

ಎಲ್‌ಡಿಪಿ ಪಕ್ಷದ ಯಾವುದೇ ನಾಯಕರೂ ಮೂರನೇ ಬಾರಿ ಪ್ರಧಾನಿಯಾಗಲು ಪಕ್ಷದ ನಿಯಮಗಳಲ್ಲಿ ಅವಕಾಶವಿಲ್ಲ. ಆದರೆ ಅಬೆ ಅವರ ಪ್ರಭಾವ ಎಷ್ಟಿತ್ತೆಂದರೆ, ಅವರನ್ನು ಮೂರನೇ ಬಾರಿಗೆ ಪ್ರಧಾನಿ ಮಾಡಲು ಪಕ್ಷದ ನಿಯಮಗಳನ್ನು ಸಡಿಲಿಸಲಾಯಿತು. 2014ರಲ್ಲಿ ಅವರು ಮತ್ತೆ ಪ್ರಧಾನಿಯಾಗಿ ಆಯ್ಕೆಯಾದರು. 2020ರಲ್ಲಿ ಮತ್ತೆ ನಾಲ್ಕನೇ ಬಾರಿ ಪ್ರಧಾನಿಯಾದರು. ಆದರೆ ತೀವ್ರ ಅನಾರೋಗ್ಯದ ಕಾರಣ 2020ರ ಆಗಸ್ಟ್‌ನಲ್ಲಿ ಪ್ರಧಾನಿ ಹುದ್ದೆಯಿಂದ ಕೆಳಗೆ ಇಳಿದಿದ್ದರು.

ಆಧಾರ: ಬಿಬಿಸಿ

### ‘ಅಬೆನಾಮಿಕ್ಸ್...’

ಜಪಾನ್‌ನ ಆರ್ಥಿಕ ನೀತಿಗಳಲ್ಲಿ ಶಿಂಜೊ ಅವರು ತಂದ ಬದಲಾವಣೆಗಳನ್ನು ‘ಅಬೆನಾಮಿಕ್ಸ್’ ಎಂದೇ ಕರೆಯಲಾಗುತ್ತದೆ. ಅಬೆ ಅವರು 2012ರಲ್ಲಿ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಾಗ ಜಪಾನ್‌ನಲ್ಲಿ ಆರ್ಥಿಕ ಹಿಂಜರಿತವಿತ್ತು. ಆ ಆರ್ಥಿಕ ಬಿಕ್ಕಟ್ಟಿನಿಂದ ದೇಶವನ್ನು ಹೊರತರಲು ಅಬೆ ಅವರು ಹಲವು ಕ್ರಮಗಳನ್ನು ಕೈಗೊಂಡಿದ್ದರು.

ಔದ್ಯೋಗಿಕ ವಲಯದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲು ನೀತಿಗಳನ್ನು ರೂಪಿಸಿದರು. ದೇಶದ ಉದ್ಯಮಗಳು ಮತ್ತು ಜನರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ದೊರೆಯುವಂತೆ ಮಾಡಿ, ಆರ್ಥಿಕತೆ ಚೇತರಿಕೆಗೆ ಕ್ರಮ ತೆಗೆದುಕೊಂಡಿದ್ದರು. ತೆರಿಗೆ ವಿನಾಯಿತಿಗಳನ್ನು ಘೋಷಿಸಿದ್ದರು. ದೇಶದಲ್ಲಿನ ನೌಕರರ ಕೊರತೆಯನ್ನು ಪರಿಹರಿಸಲು, ವಲಸೆ ಕಾರ್ಮಿಕರ ನಿರ್ಬಂಧಗಳನ್ನು ಸಡಿಲಿಸಿದರು. ಜತೆಗೆ, ದೇಶದಾದ್ಯಂತ ಮೂಲಸೌಕರ್ಯಗಳನ್ನು ಹೆಚ್ಚಿಸಿ/ಮೇಲ್ದರ್ಜೆಗೆ ಏರಿಸಿ ಪ್ರವಾಸೋದ್ಯಮದ ಅಭಿವೃದ್ಧಿಗೆ ಒತ್ತು ನೀಡಿದರು. 2010ರ ದಶಕದ ಆರ್ಥಿಕ ಮುಗ್ಗಟ್ಟಿನಿಂದ ಜಪಾನ್ ಚೇತರಿಸಿಕೊಂಡಿತ್ತು. ಆದರೆ, 2020ರಲ್ಲಿ ಕೋವಿಡ್ ಸಾಂಕ್ರಾಮಿಕದ ನಂತರ ಈ ನೀತಿಗಳು ಜಪಾನ್‌ನ ಆರ್ಥಿಕತೆಗೆ ಮುಳುವಾಗಿ ಪರಿಣಮಿಸಿದವು ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

## ವೈಎಸ್‌ಆರ್ ಕಾಂಗ್ರೆಸ್ ಗೌರವಾಧ್ಯಕ್ಷೆ ಸ್ಥಾನಕ್ಕೆ ರಾಜೀನಾಮೆ

ಅಮರಾವತಿ: ಆಂಧ್ರ ಪ್ರದೇಶದ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಅವರ ತಾಯಿ ವೈ.ಎಸ್. ವಿಜಯಮ್ಮ ಅವರು ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಗೌರವಾಧ್ಯಕ್ಷೆ ಸ್ಥಾನಕ್ಕೆ ಶುಕ್ರವಾರ ರಾಜೀನಾಮೆ ನೀಡಿದ್ದಾರೆ.

ನೆರೆಯ ರಾಜ್ಯದಲ್ಲಿ ವೈಎಸ್‌ಆರ್ ತೆಲಂಗಾಣ ಪಕ್ಷವನ್ನು ಮುನ್ನಡೆಸುತ್ತಿರುವ ಪುತ್ರಿ ಶರ್ಮಿಳಾ ಅವರಿಗೆ ಬೆಂಬಲ ನೀಡುವ ಸಲುವಾಗಿ ಅವರು ಈ ನಿರ್ಧಾರ ಕೈಗೊಂಡಿದ್ದಾರೆ.

‘ಜಗನ್‌ಗೆ ಸದಾ ಹತ್ತಿರವಾಗಿರುತ್ತೇನೆ’ ಎಂದು ರಾಜೀನಾಮೆ ನಿರ್ಧಾರ ಪ್ರಕಟಿಸಿದ ಬಳಿಕ ಅವರು ತಿಳಿಸಿದ್ದಾರೆ.

‘ತೆಲಂಗಾಣದಲ್ಲಿ ಶರ್ಮಿಳಾ ಏಕಾಂಗಿ ಹೋರಾಟ ನಡೆಸುತ್ತಿದ್ದಾಳೆ. ತಂದೆಯ ಆದರ್ಶಗಳನ್ನು ಪಾಲಿಸುತ್ತಿರುವ ಆಕೆಗೆ ನನ್ನ ಬೆಂಬಲದ ಅಗತ್ಯವಿದೆ. ಎರಡು ಪಕ್ಷಗಳ ಸದಸ್ಯೆಯಾಗಿರಬಹುದೇ ಎಂಬ ಸಂದಿಗ್ಧತೆಯಲ್ಲಿ ನಾನಿದ್ದೇನೆ. ಈ ಪರಿಸ್ಥಿತಿಯಲ್ಲಿ ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಗೌರವಾಧ್ಯಕ್ಷೆ ಸ್ಥಾನದಲ್ಲಿ ಮುಂದುವರಿಯಲು ಸಾಧ್ಯವಿಲ್ಲ’ ಎಂದು ವಿಜಯಮ್ಮ ಹೇಳಿದ್ದಾರೆ.

## ದೆಹಲಿ: ಬಿಜೆಪಿ ಸಂಸದರಿಗೆ ಬುಲಾವ್

ನವದೆಹಲಿ: ರಾಷ್ಟ್ರಪತಿ ಚುನಾವಣೆಯ ಹಿನ್ನೆಲೆಯಲ್ಲಿ ಎಲ್ಲಾ ಸಂಸದರ ಹಾಜರಾತಿ ಖಚಿತಪಡಿಸಿಕೊಳ್ಳಲು, ಬಿಜೆಪಿ ತನ್ನ ಎಲ್ಲಾ ಸಂಸದರಿಗೆ ಜುಲೈ 16ರಂದು ದೆಹಲಿಗೆ ತಲುಪಿ 18ರ ವರೆಗೂ ಅಲ್ಲೇ ಇರುವಂತೆ ಸೂಚಿಸಿದೆ ಎಂದು ಮೂಲಗಳು ತಿಳಿಸಿವೆ.

ರಾಷ್ಟ್ರಪತಿ ಚುನಾವಣೆಯಲ್ಲಿ ಹೇಗೆ ಮತದಾನ ಮಾಡಬೇಕು ಎಂಬುದರ ಬಗ್ಗೆ ಪಕ್ಷವು ಸಂಸದರಿಗೆ ಈ ಎರಡು ದಿನಗಳ ತರಬೇತಿ ಮತ್ತು ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಿದೆ.

ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಜುಲೈ 16ರಂದು ಸಂಸದರಿಗೆ ಔತಣಕೂಟ ಏರ್ಪಡಿಸಲಿದ್ದಾರೆ ಎಂದೂ ಹೇಳಿವೆ.

## ‘ಹಿಂದೂ ದೇವತೆಗಳು ಬಿಜೆಪಿ ಸುಪರ್ದಿಯಲ್ಲಿಲ್ಲ’

ಕೋಲ್ಕತ್ತ (ಪಿಟಿಐ): ಕಾಳಿ ಮಾತೆ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡುವ ಮೂಲಕ ಬಿಜೆಪಿ ಟೀಕೆಗೆ ಗುರಿ ಯಾಗಿರುವ ತೃಣಮೂಲ ಕಾಂಗ್ರೆಸ್ ಸಂಸದೆ ಮಹುವಾ ಮೊಯಿತ್ರಾ, ‘ಹಿಂದೂ ದೇವತೆಗಳು ಕೇಸರಿ ಪಕ್ಷದ ಸುಪರ್ದಿಯಲ್ಲಿ ಇಲ್ಲ, ಬಂಗಾಳದ ಜನರಿಗೆ ಅವರು ಕಾಳಿ ಮಾತೆ ಆರಾಧನೆಯ ಪಾಠ ಹೇಳುವ ಅಗತ್ಯವಿಲ್ಲ’ ಎಂದು ತಿರುಗೇಟು ನೀಡಿದ್ದಾರೆ.

ಮೊಯಿತ್ರಾ ಅವರು ಗುರುವಾರ ರಾತ್ರಿ ಬಂಗಾಳಿ ಸುದ್ದಿ ವಾಹಿನಿ ಜತೆ ಮಾತನಾಡಿ, ಹಿಂದುತ್ವದ ಅಜೆಂಡಾ ಹೇರುವುದು ಬಿಜೆಪಿ ಪ್ರಯತ್ನವಾಗಿದೆ ಎಂದು ಹೇಳಿದರು.


**ಲೋಕೋಪಯೋಗಿ ಇಲಾಖೆ. ತುಮಕೂರು**
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ತುಮಕೂರು.
ಕ್ರ.ಸಂ:ಕಾಇಂ:ಲೋಇವಿ:ತುವು:ಕಿಇಂ–3:ಟೆಂಡರ್–12/2022–23
ದಿನಾಂಕ: 04.07.2022
**ಟೆಂಡರ್ ಪ್ರಕಟಣೆ ಸಂಖ್ಯೆ.12/2022–23 ದಿನಾಂಕ: 04.07.2022**
ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 12/2022–23:ದಿನಾಂಕ 04–07–2022ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 26 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ.60.20 ಲಕ್ಷಗಳು, ಟೆಂಡರಿಗಿಟ್ಟ ಗರಿಷ್ಠ ಮೊತ್ತ ರೂ.860.00 ಲಕ್ಷಗಳು, ಇ.ಎಂ.ಡಿ ಕನಿಷ್ಠ ಮೊತ್ತ ರೂ.1,20,400/–, ಇ.ಎಂ.ಡಿ ಗರಿಷ್ಠ ಮೊತ್ತ ರೂ.12,90,000/–, ಅರ್ಹ ಗುತ್ತಿಗೆದಾರರು : 3 ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 03 ರಿಂದ 11 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: **11.08.2022** ರ 16.00 ಗಂಟೆಗೆ, ಇ–ಪ್ರೊಕ್ಯೂರ್‌ಮಂಟ್ ಮೂಲಕ ಟೆಂಡರ್‌ಗಳನ್ನು ದಿನಾಂಕ **11.7.2022** ರಿಂದ **12.08.2022**ರ 16.00 ಗಂಟೆಯವರೆಗೆ ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: **12.08.2022** ರ ಸಂಜೆ 16.00 ಗಂಟೆವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: **16.08.2022** ರ ಸಂಜೆ 16.30 ಗಂಟೆಗೆ, ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: **20.08.2022** ರ ಸಂಜೆ 16.30 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ: www.eproc.karnataka.gov.in ರಲ್ಲಿ ಪಡೆಯಬಹುದಾಗಿದೆ. **ಸೂಚನೆ:** ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ.
ಸಹಿ/–ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.
DIPR/TUM/275/MCA/2022-23

**ಕರ್ನಾಟಕ ಸರ್ಕಾರ**
**ಜಿಲ್ಲಾಧಿಕಾರಿಗಳ ಕಾರ್ಯಾಲಯ ಜಿಲ್ಲಾ ನಗರಾಭಿವೃದ್ಧಿ ಕೋಶ ಬೆಳಗಾವಿ**
ಕ್ರ.ಸಂ:ಬಿಜಿಎಂ:ಡಿಯುಡಿಸಿ:5:ಸಿಆರ್–25:2021–22 ದಿನಾಂಕ:08.07.2022
**ಟೆಂಡರ್ ಅಧಿಸೂಚನೆ**
ಬೆಳಗಾವಿ ಜಿಲ್ಲೆಯ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4 ಯೋಜನೆಯ ಕಾಮಗಾರಿಗಳಿಗಾಗಿ KW-1 & 4 ಡಾಕುಮೆಂಟ್ ಉಪಯೋಗಿಸಿ ಏಕ/ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿದೆ. **ರೂ. ಲಕ್ಷಗಳಲ್ಲಿ)**

| ಕ್ರ ಸಂ | ಕಾಮಗಾರಿಗಳ ವಿವರ | ಟೆಂಡರ್‌ಗಿಟ್ಟ ಮೊತ್ತ (GST ಹೊರತುಪಡಿಸಿ) | ಇ.ಎಂ.ಡಿ ಮೊತ್ತ |
|---|---|---|---|
| 1 | ಬೈಲಹೊಂಗಲ ಪುರಸಭೆ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಿಸುವುದು. (Tender No.DMA/2022-23/RD/WORK_INDENT132960) | 124.72 | 1.87 |
| 2 | ನಾಗನೂರ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ವಿದ್ಯುತ್ ಕಂಬಗಳನ್ನು ಮತ್ತು ಬೀದಿ ದೀಪಗಳನ್ನು ಅಳವಡಿಸುವುದು. (Tender No. DMA/2022-23/RD/WORK_INDENT132960) | 11.04 | 0.28 |

ಗುತ್ತಿಗೆದಾರರು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ಮೂಲಕ ಟೆಂಡರ್ ಡೌನ್‌ಲೋಡ್ ಹಾಗೂ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ ಹಾಗೂ ಟೆಂಡರ್ ಪ್ರೋಸೆಸಿಂಗ್ ಫೀ ಯನ್ನು ಸಹ ವಿದ್ಯುನ್ಮಾನ ಮೂಲಕ ಸಲ್ಲಿಸುವುದು. ಟೆಂಡರ್ ವೇಳಾಪಟ್ಟಿ ಮತ್ತು ಇತರೆ ಮಾಹಿತಿಯು ಈ ಕೆಳಗಿನಂತಿರುತ್ತದೆ.

| | |
|---|---|
| ಕಾಮಗಾರಿ ಪೂರ್ಣಗೊಳಿಸುವ ಅವಧಿ | ಕ್ರ.ಸಂ.01ಕ್ಕೆ 09 ತಿಂಗಳು (ಮಳೆಗಾಲ ಹೊರತುಪಡಿಸಿ) ಕ್ರ.ಸಂ.02ಕ್ಕೆ 03 ತಿಂಗಳು (ಮಳೆಗಾಲ ಹೊರತುಪಡಿಸಿ) |
| ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ | 08–08–2022ರಂದು 17–00 ಘಂಟೆವರೆಗೆ |
| ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಬಿಡ್) | 10–08–2022ರಂದು 10.00 ಘಂಟೆ ನಂತರ |

ಅವಧಿ ವಿಸ್ತರಣೆ ಇದ್ದಲ್ಲಿ ಇ–ಪೋರ್ಟಲ್ ಮೂಲಕ ಮಾತ್ರ ತಿಳಿಸಲಾಗುವುದು. ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.
ಸಹಿ/–ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ
DIPR/BGM/RO-NO-497/MCA/2022-23

**ಕಾವೇರಿ ನೀರಾವರಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಹೇಮಾವತಿ ನಾಲಾ ವಿಭಾಗ, ಎಡಿಯೂರು–572 142, ಪೋ: 7338590199
ಇ–ಮೇಲ್: eeyediyur1@gmail.com
**ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ–04/2022–23 ದಿನಾಂಕ: 01.07.2022**
**ಕೆ.ಡಬ್ಲ್ಯೂ–4**
ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರವರಿ ನಿಗಮ ನಿಯಮಿತ/ಪಿಡಬ್ಲ್ಯೂಡಿ, ಮೈಸೂರು/ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಒಟ್ಟು 02 (ಕೆ.ಡಬ್ಲ್ಯೂ–4) ಕಾಮಗಾರಿಗಳಿಗೆ ಐಟಂವಾರು ದರದ ಟೆಂಡರ್‌ಗಳನ್ನು ಇ–ಪ್ರೊಕ್ಯುರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.
ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ.172.28 ಮತ್ತು ಗರಿಷ್ಠ ಮೊತ್ತ ರೂ.220.19 ಲಕ್ಷ ರೂಪಾಯಿಗಳಾಗಿರುತ್ತದೆ.
ಕೆಲಸ ಪೂರ್ಣಗೊಳಿಸಲು ನಿಗಧಿಪಡಿಸಿರುವ ಅವಧಿ 6 ತಿಂಗಳು ಇ.ಎಂ.ಡಿ ಹಣ ಹಾಗೂ ಪ್ರೊಸಸಿಂಗ್ ಶುಲ್ಕವನ್ನು ಇ–ಪೇಮೆಂಟ್ ಮೂಲಕ ಸಂದಾಯ ಮಾಡುವುದು, ಟೆಂಡರ್ ಕ್ವಾರಿಸ್/ಕ್ಲ್ಯಾರಿಫಿಕೇಷನ್ ಕೊನೆಯ ದಿನಾಂಕ: **14.07.2022** ಮಧ್ಯಾಹ್ನ 15:00 ಗಂಟೆಯವರೆಗೆ. ಆನ್‌ಲೈನ್ ಮೂಲಕ ಭರ್ತಿಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿ ಯೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ: **16.07.2022** ಮಧ್ಯಾಹ್ನ 15:00 ಗಂಟೆಯವರೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **18.07.2022** ಮಧ್ಯಾಹ್ನ 16:00 ಗಂಟೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ: **25.07.2022** ಮಧ್ಯಾಹ್ನ 16:00 ಗಂಟೆಗೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ www.eproc.karnataka.gov.in ರಲ್ಲಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಇಂಜಿನಿಯರ್,
ಹೇಮಾವತಿ ನಾಲಾ ವಿಭಾಗ, ಕಾನೀನಿನಿ., ಎಡಿಯೂರು.
DIPR/TUM/280//MCA/2022-23

**ಸಾರ್ವಜನಿಕ ನೋಟೀಸು**
(ಇನ್ಸಾಲ್ವೆನ್ಸಿ ಮತ್ತು ಬ್ಯಾಂಕ್‌ರಪ್ಟ್ಸಿ ಕೋಡ್, 2016ರ ಸೆಕ್ಷನ್ 102(1) & (2)ರ ಅಡಿಯಲ್ಲಿ)
ಮೆ। ಸುರಾ ಲೆದರ್ಸ್ ಪ್ರೈವೇಟ್ ಲಿಮಿಟೆಡ್‌ನ ಸಾಲಗಾರ/ವೈಯಕ್ತಿಕ ಜಾಮೀನುದಾರರಾದ ಶ್ರೀ ಎಮ್.ಎಸ್. ಶ್ರೀಹರ್ಷ ಮತ್ತು ಶ್ರೀ ಎಸ್.ಆರ್. ರಾಮ್‌ಪ್ರಸಾದ್ ಅವರ ಸಾಲದಾತರ ಗಮನಕ್ಕೆ)
**(U01911KA1992PTC013830)**
ಪ್ರಸ್ತುತ ವಿವರಗಳು

| | | |
|---|---|---|
| 1. | ಸಾಲಗಾರರ/ವೈಯಕ್ತಿಕ ಜಾಮೀನುದಾರರ ಹೆಸರು ಮತ್ತು ವಿಳಾಸ | **1. ಶ್ರೀ ಎಮ್.ಎಸ್. ಶ್ರೀಹರ್ಷ** ನಂ. 30/31, 3ನೇ ಕ್ರಾಸ್, 7ನೇ ಬ್ಲಾಕ್, ಕೆ.ಆರ್. ರಸ್ತೆ, ಜಯನಗರ, ಬೆಂಗಳೂರು 560082 **2. ಶ್ರೀ ಎಸ್.ಆರ್. ರಾಮ್‌ಪ್ರಸಾದ್** ನಂ. 1930, 30ನೇ ಕ್ರಾಸ್, ಬಿಎಸ್‌ಕೆ 2ನೇ ಹಂತ, ಬೆಂಗಳೂರು 560070 |
| 2. | ಸಾಲಗಾರರ/ವೈಯಕ್ತಿಕ ಜಾಮೀನುದಾರರ ವಿಷಯದಲ್ಲಿ ಆದೇಶ ಮತ್ತು ದಿವಾಳಿತನದ ಆರಂಭದ ದಿನಾಂಕದ ವಿವರಗಳು | 1. ದಿನಾಂಕ 29ನೇ ಮಾರ್ಚ್ 2022 ರ ಆದೇಶ CP(IB) ಸಂ. 76/BB/2021 (ಶ್ರೀ. ಎಮ್.ಎಸ್. ಶ್ರೀಹರ್ಷ ಅವರ ವಿಷಯದಲ್ಲಿ) 2. ದಿನಾಂಕ 24ನೇ ಫೆಬ್ರವರಿ 2022 ರ ಆದೇಶ CP(IB) ಸಂ. 77/BB/2021 (ಶ್ರೀ. ಎಸ್.ಆರ್. ರಾಮಪ್ರಸಾದ್ ವಿಷಯದಲ್ಲಿ) |
| 3. | ಪರಿಹಾರದ ವೃತ್ತಿಪರರಾಗಿ (RP) ನಿಯೋಜಿಸಲ್ಪಟ್ಟಿರುವ ದಿವಾಳಿತನ ಪರಿಹಾರಕಾರರ ಹೆಸರು, ನೋಂದಾವಣಾ ಸಂಖ್ಯೆ, ಈಮೇಲ್ ಐಡಿ ಹಾಗೂ ವಿಳಾಸ – ವ್ಯವಹಾರದ ಸಲುವಾಗಿ | ಶ್ರೀ ರವೀಂದ್ರ ಬೆಳೆಯೂರ್ IBBI/IPA-001/IP-P00189 / 2017-18/10368 ‘ಶ್ರೀವತ್ಸ’, 428, 19ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು 560011 ಟೆಲಿ: +91 80 26540193 ಇಮೇಲ್: ravi@beleyur.com (ಮಾನ್ಯ NCLT, ಬೆಂಗಳೂರು, ಇವರ 23ನೇ ಜೂನ್ 2022ರ ಆದೇಶದ ಪ್ರಕಾರ RP ಎಂದು ನಿಯುಕ್ತರಾದವರು) |
| 4. | ಕ್ಲೇಮುಗಳ ಸಲ್ಲಿಕೆಗೆ ಕೊನೆಯ ದಿನಾಂಕ | **30ನೇ ಜುಲೈ 2022** (ಕ್ಲೇಮುಗಳ ಸಲ್ಲಿಕೆಗೆ ವಿಸ್ತರಿಸಲ್ಪಟ್ಟ ದಿನಾಂಕ) (ಹಿಂದಿನ ಪ್ರಕಟಣೆಯ ಪ್ರಕಾರ, ಕ್ಲೇಮ್ ಸಲ್ಲಿಸಲು ಕೊನೆಯ ದಿನಾಂಕ ಅನುಕ್ರಮವಾಗಿ 4ನೇ ಮೇ 2022 ಮತ್ತು 27ನೇ ಜೂನ್ 2022 ಆಗಿತ್ತು) |
| 5. | ಕ್ಲೇಮುಗಳನ್ನು ಸಲ್ಲಿಸಲು ಪ್ರಸ್ತುತ ಅರ್ಜಿಗಳು ಇಲ್ಲಿ ಲಭ್ಯ: | ವೆಬ್ ಲಿಂಕ್: www.ibbi.gov.in/home/downloads |

ಈ ಮೂಲಕ ನೋಟೀಸು ನೀಡಲಾಗುತ್ತಿದೆ: ಏನೆಂದರೆ ಮೆ। ಸುರಾ ಲೆದರ್ಸ್ ಪ್ರೈವೇಟ್ ಲಿಮಿಟೆಡ್‌ನ ಸಾಲಗಾರರು/ವೈಯಕ್ತಿಕ ಜಾಮೀನುದಾರರು ಆದ ಶ್ರೀ ಎಮ್.ಎಸ್. ಶ್ರೀಹರ್ಷ ಮತ್ತು ಶ್ರೀ ಎಸ್.ಆರ್. ರಾಮಪ್ರಸಾದ್ ಇವರ ವಿರುದ್ಧ ದಿವಾಳಿತನದ ಪರಿಹಾರದ ಪ್ರಕ್ರಿಯೆಯನ್ನು ಆರಂಭಿಸುವಂತೆ ಅನುಕ್ರಮವಾಗಿ 29ನೇ ಮಾರ್ಚ್ 2022 ಮತ್ತು 24ನೇ ಫೆಬ್ರವರಿ 2022 ರಂದು ಮಾನ್ಯ ನ್ಯಾಷನಲ್ ಕಂಪನಿ ಲಾ ಟ್ರೈಬ್ಯೂನಲ್, ಬೆಂಗಳೂರು, ಆದೇಶಿಸಿದೆ.
ಮೆ। ಸುರಾ ಲೆದರ್ಸ್ ಪ್ರೈವೇಟ್ ಲಿಮಿಟೆಡ್‌ನ ವಿಷಯದಲ್ಲಿ ವೈಯಕ್ತಿಕ ಜಾಮೀನುದಾರರಾದ ಈ ಮೇಲಿನ ಸಾಲದಾತರುಗಳಿಗೆ, **30ನೇ ಜುಲೈ 2022**ರಂದು ಇಲ್ಲವೆ ಮುಂಚಿತವಾಗಿ ತಮ್ಮ ಕ್ಲೇಮುಗಳನ್ನು ಆಧಾರಗಳ ಸಮೇತ ನಿಗದಿತ ಪ್ರಪತ್ರದಲ್ಲಿ, ಪರಿಹಾರ ವೃತ್ತಿಪರರಿಗೆ ಮೇಲೆ ಕಲಂ 3ರಲ್ಲಿ ತಿಳಿಸಿದ ವಿಳಾಸಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗುತ್ತಿದೆ.
ಆರ್ಥಿಕ ಸಾಲದಾತರು ಆಧಾರಗಳ ಸಹಿತ ತಮ್ಮ ಕ್ಲೇಮುಗಳನ್ನು ಎಲೆಕ್ಟ್ರಾನಿಕ್ ಮಾರ್ಗದಲ್ಲಿ ಮಾತ್ರವೇ ಸಲ್ಲಿಸತಕ್ಕದ್ದು. ಉಳಿದೆಲ್ಲ ಸಾಲದಾತರೂ ತಮ್ಮ ಕ್ಲೇಮುಗಳನ್ನು ಆಧಾರಗಳ ಜೊತೆಯಲ್ಲಿ ವೈಯಕ್ತಿಕವಾಗಿ, ಅಂಚೆ ಮೂಲಕ ಇಲ್ಲವೆ ಎಲೆಕ್ಟ್ರಾನಿಕ್ ಮಾರ್ಗದಲ್ಲಿ ಸಲ್ಲಿಸಬಹುದು.
ಸುಳ್ಳು ಅಥವಾ ದಾರಿತಪ್ಪಿಸುವಂತಹ ಸಾಕ್ಷ್ಯಾಧಾರಗಳನ್ನು ಸಲ್ಲಿಸಿದಲ್ಲಿ ದಂಡಗಳಿಗೆ ಗುರಿಯಾಗಬೇಕಾತ್ತದೆ.
ದಿನಾಂಕ: 8ನೇ ಜುಲೈ 2022
ಸ್ಥಳ: ಬೆಂಗಳೂರು
ಸಹಿ/–
ರವೀಂದ್ರ ಬೆಳೆಯೂರ್
ನೋಂದಣಿ ಸಂ. IBBI/IPA-001/IP-P00189/2017-18/10368
**ಗಮನಿಸಿ:** ಶ್ರೀ ಎಮ್.ಎಸ್. ಶ್ರೀಹರ್ಷ ಅವರ ವಿಷಯದಲ್ಲಿ ಸದರಿ ಸಾರ್ವಜನಿಕ ನೋಟೀಸು, ಹಿಂದಿನ RP ಆದ ಶ್ರೀ ಹೇಮಚಂದ್ರ ಅವರಿಂದ 13ನೇ ಏಪ್ರಿಲ್ 2022ರಂದು 'ದಿ ಫೈನಾನ್ಷಿಯಲ್ ಎಕ್ಸ್‌ಪ್ರೆಸ್' ಹಾಗೂ 'ವಾರ್ತಾ ಭಾರತಿ' ವೃತ್ತಪತ್ರಿಕೆಗಳಲ್ಲಿ ಪ್ರಕಟಗೊಂಡಿತ್ತು.
ಶ್ರೀ ಎಸ್.ಆರ್. ರಾಮಪ್ರಸಾದ್ ಅವರ ವಿಷಯದಲ್ಲಿ ಸದರಿ ಸಾರ್ವಜನಿಕ ನೋಟೀಸು, ಹಿಂದಿನ RP ಆದ ಶ್ರೀ ಹೇಮಚಂದ್ರ ಅವರಿಂದ 06ನೇ ಜೂನ್ 2022 ರಂದು 'ಕನ್ನಡ ಪ್ರಭ' ಹಾಗೂ 07ನೇ ಜೂನ್ 2022ರಂದು 'ದಿ ಇಂಡಿಯನ್ ಎಕ್ಸ್‌ಪ್ರೆಸ್' ವೃತ್ತಪತ್ರಿಕೆಗಳಲ್ಲಿ ಪ್ರಕಟಗೊಂಡಿತ್ತು.
ಇನ್ನೂ ಹೆಚ್ಚಿನ ಪ್ರಚಾರಕ್ಕಾಗಿ/ವ್ಯಾಪ್ತಿಗಾಗಿ ಈ ಸಾರ್ವಜನಿಕ ನೋಟೀಸನ್ನು ಈ ವೃತ್ತಪತ್ರಿಕೆಯಲ್ಲಿ ಮರುಪ್ರಕಟಿಸಲಾಗುತ್ತಿದೆ.

**ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ**
(ಕರ್ನಾಟಕ ಸರಕಾರದ ಸಾಮಿತ್ವದಲ್ಲಿ)
ಕಾರ್ಯನಿರ್ವಾಹಕ ಅಭಿಯಂತರರು ಕೃಭಾಜನಿ(ನಿ),
ಮು.ಏ.ನೀ ವಿಭಾಗ ನಂ–1, ಮಟ್ಟಿಹಾಳ. ತಾ॥ ಕೋಲ್ಹಾರ ಜಿ॥ ವಿಜಯಪುರ.
ಸಂ:ಕೃಭಾಜನಿನಿ/ಮುಏನೀ/ವಿ–1ಮ/ಯೋ.ಶಾ/ಟೆಂಡರ್ ಅ.ವಿ/2022–23/356 ದಿನಾಂಕ:05.07.2022
**ಟೆಂಡರ್ ಅವಧಿ ವಿಸ್ತರಣೆ** (ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಮಾತ್ರ)
ಉಲ್ಲೇಖ: ಕೃಭಾಜನಿ(ನಿ)/ಮುಏನೀ/ವಿ–1ಮ/ಯೋ.ಶಾ/ಟೆಂಡರ್/2022–23/300 ದಿನಾಂಕ:27.06.2022
ಈ ಕಚೇರಿಯಿಂದ ಬೀಳಗಿ ಮತಕ್ಷೇತ್ರಕ್ಕೆ ಸಂಬಂಧಪಟ್ಟ ಎಸ್.ಸಿ.ಪಿ–ಟಿ.ಎಸ್.ಪಿ ಯೋಜನೆಯ ಒಟ್ಟು 09 ಸಂಖ್ಯೆಯ ಕಾಮಗಾರಿಗಳ ಟೆಂಡರಗಳನ್ನು ಮೇಲಿನ ಉಲ್ಲೇಖದನ್ವಯ ಆಹ್ವಾನಿಸಲಾಗಿತ್ತು. ತಾಂತ್ರಿಕ ಕಾರಣಗಳಿಂದ ಸದರಿ ಕಾಮಗಾರಿಗಳ ಟೆಂಡರ ವೇಳಾಪಟ್ಟಿಯನ್ನು ಮಾರ್ಪಡಿಸಲಾಗಿರುತ್ತದೆ. ಸದರಿ ಮಾರ್ಪಡಿಸಲಾಗಿರುವ ವೇಳಾಪಟ್ಟಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿರುತ್ತದೆ. ಸದರಿ ಟೆಂಡರ್ ಕುರಿತ ತಿದ್ದುಪಡಿ/ ಪರಿಷ್ಕೃತ ದಿನಾಂಕಗಳನ್ನು ಜಾಲತಾಣ (ವೆಬ್ ಸೈಟ್) https://eproc.karnataka.gov.in/eportal/index.seam ದಲ್ಲಿ ಪ್ರಕಟಿಸಲಾಗುವುದು, ಆಸಕ್ತರು ವೀಕ್ಷಿಸಬಹುದಾಗಿದೆ. **ದಿನಾಂಕವಾರು ಘಟನಾವಳಿಗಳು ಈ ಕೆಳಗಿನಂತಿವೆ.**

| Sl.No | Schedule | Date / Time |
|---|---|---|
| 1 | ಇ–ಟೆಂಡರ್ ದಸ್ತಾವೇಜುಗಳ ವಿವರಗಳು ಗುತ್ತಿಗೆದಾರರಿಗೆ ದೊರೆಯುವುದು | 07.07.2022 ರಿಂದ 16.07.2022 ಸಾಯಂಕಾಲ 5.00 ಗಂಟೆಯವರೆಗೆ |
| 2 | ಪೂರ್ಣಗೊಳಿಸಿದ ಇ–ಟೆಂಡರ್ ದಾಖಲೆಗಳನ್ನು ಸಲ್ಲಿಸುವುದು ದಿನಾಂಕ | 07.07.2022 ರಿಂದ 16.07.2022 ಸಾಯಂಕಾಲ 5.00 ಗಂಟೆಯವರೆಗೆ |
| 3 | ಲಕೋಟೆ–1 (ತಾಂತ್ರಿಕ ಬಿಡ್) ಅನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃ.ಭಾ.ಜ.ನಿ.ನಿ, ಮು.ಏ.ನೀ ವಿಭಾಗ ಸಂಖ್ಯೆ–1 ಮಟ್ಟಿಹಾಳ, ಕೋಲ್ಹಾರ ತಾಲೂಕು ವಿಜಯಪುರ ಜಿಲ್ಲೆ ಇವರ ಕಛೇರಿಯಲ್ಲಿ ತೆರೆಯುವುದು | 18.07.2022 ಬೆಳಿಗ್ಗೆ 11.00 ಗಂಟೆಗೆ |
| 4 | ಲಕೋಟೆ–2 (ಆರ್ಥಿಕ ಬಿಡ್) ಅನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃ.ಭಾ.ಜ.ನಿ.ನಿ, ಮು.ಏ.ನೀ ವಿಭಾಗ ಸಂಖ್ಯೆ–1 ಮಟ್ಟಿಹಾಳ, ಕೋಲ್ಹಾರ ತಾಲೂಕು ವಿಜಯಪುರ ಜಿಲ್ಲೆ ಇವರ ಕಛೇರಿಯಲ್ಲಿ ತೆರೆಯುವುದು | 21.07.2022 ಬೆಳಿಗ್ಗೆ 11.00 ಗಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆ ನಂತರ ತೆರೆಯುವುದು |

ವಿಶೇಷ ಸೂಚನೆ: 1) ಮೀಸಲಾತಿ ಕಾಮಗಾರಿಗಳಿಗೆ ಭಾಗವಹಿಸುವ ಗುತ್ತಿಗೆದಾರರು, ಸಕ್ಷಮ ಪ್ರಾಧಿಕಾರದಿಂದ ಪಡೆದ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಅಪ್ಲೋಡ್ ಮಾಡತಕ್ಕದ್ದು. 2) ಮೀಸಲಾತಿ ಕಾಮಗಾರಿಗಳಿಗೆ ಗುತ್ತಿಗೆ ಸಲ್ಲಿಸುವ ಪರಿಶಿಷ್ಠ ಜಾತಿ/ಪಂಗಡ ಗುತ್ತಿಗೆದಾರರು ಕನಿಷ್ಠ 10 ವರ್ಷ ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು ಹಾಗೂ ಸಕ್ಷಮ ಪ್ರಾಧಿಕಾರದಿಂದ ಪಡೆದ ನಿವಾಸಿ ಪ್ರಮಾಣ ಪತ್ರ ಲಗತ್ತಿಸತಕ್ಕದ್ದು. 3) ಗುತ್ತಿಗೆದಾರರು ಫರ್ಮ ಗುತ್ತಿಗೆದಾರರಾಗಿದ್ದರೆ ಎಲ್ಲಾ ಪಾರ್ಟನರ್ ಸದಸ್ಯರು ಪರಿಶಿಷ್ಠ ಜಾತಿ/ ಪಂಗಡದವರಾಗಿರಬೇಕು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಮುಏನೀ ವಿಭಾಗ–1, ಮಟ್ಟಿಹಾಳ
ವಾಸಾಸಂಇ/ವಿಜಯಪುರ/248/ಎಂಸಿಎ/2022–23

**ಕರ್ನಾಟಕ ಗೃಹ ಮಂಡಳಿ**
ಕರ್ನಾಟಕ ಗೃಹ ಮಂಡಲಿ
ಸಮುದಾಯದ ನಿರ್ಮಾಣದತ್ತ
ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009 ದೂರವಾಣಿ: 080–22273511–16
ಸಂಖ್ಯೆ: ಕಗೃಮಂ/ಉಪ್ರವ್ಯ (ಗ್ರಾ.ಸೇ)/ಹಂಚಿಕೆ/ಸೂ.2ನೇ ಹಂತ/ರಾಜಾಪುರ/2022–23 ದಿನಾಂಕ: 08.07.2022
**ಸಾರ್ವಜನಿಕ ಪ್ರಕಟಣೆ**
ರಾಮನಗರ ಜಿಲ್ಲೆ, ಬಿಡದಿ ಸುಭಾಷ್ ಚಂದ್ರ ಬೋಸ್ ಬಡಾವಣೆಯಲ್ಲಿ ಇಡಬ್ಲ್ಯೂಎಸ್ ವರ್ಗದ ನಿವೇಶನ ಹಂಚಿಕೆಯಾಗದ ಹಾಗೂ ಮರುಪಾವತಿ ಪಡೆಯದ ಅರ್ಜಿದಾರರುಗಳು ಮಾತ್ರ ಬೆಂಗಳೂರು ನಗರ ಸೂರ್ಯನಗರ 2ನೇ ಹಂತ ಮುಂದುವರಿದ ರಾಜಾಪುರದಲ್ಲಿ ಅಭಿವೃದ್ಧಿಪಡಿಸುತ್ತಿರುವ ಬಡಾವಣೆಯಲ್ಲಿ ಇಡಬ್ಲ್ಯೂಎಸ್ ವರ್ಗದ ನಿವೇಶನಗಳಿಗೆ e-payment ಮೂಲಕ ವ್ಯತ್ಯಾಸದ ಆರಂಭಿಕ ಠೇವಣಿಯನ್ನು ಪಾವತಿಸುವ ಕುರಿತು.
ರಾಮನಗರ ಜಿಲ್ಲೆ ಬಿಡದಿ ಸುಭಾಷ್ ಚಂದ್ರ ಬೋಸ್ ಬಡಾವಣೆಯಲ್ಲಿ ಇಡಬ್ಲ್ಯೂಎಸ್ ವರ್ಗದ ನಿವೇಶನ ಹಂಚಿಕೆಯಾಗದ ಹಾಗೂ ಮರುಪಾವತಿ ಪಡೆಯದ ಅರ್ಜಿದಾರರುಗಳು ಮಂಡಳಿಗೆ ಮನವಿ ಸಲ್ಲಿಸಿ, ಬೆಂಗಳೂರು ಸುತ್ತಮುತ್ತಲಿನ ಬಡಾವಣೆಗಳಲ್ಲಿ ಇಡಬ್ಲುಎಸ್ ವರ್ಗದ ನಿವೇಶನಗಳನ್ನು ಹಂಚಿಕೆ ಮಾಡಲು ತಮ್ಮ ಅರ್ಜಿಗಳನ್ನು ವರ್ಗಾಯಿಸಿ ಹಂಚಿಕೆ ಮಾಡಿಕೊಡುವಂತೆ ಕೋರುತ್ತಿರುವ ಹಿನ್ನೆಲೆಯಲ್ಲಿ ಪ್ರಸ್ತುತ ಕರ್ನಾಟಕ ಗೃಹ ಮಂಡಳಿಯು ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ರಾಜಾಪುರದಲ್ಲಿ ಅಭಿವೃದ್ಧಿಪಡಿಸುತ್ತಿರುವ ಬಡಾವಣೆಯಲ್ಲಿ ಇಡಬ್ಲುಎಸ್ ವರ್ಗದ ನಿವೇಶನಗಳಿಗೆ ಸ್ವೀಕೃತಗೊಂಡಿರುವ ಅರ್ಜಿಗಳ ಪೈಕಿ ಕೆಲವು ಅರ್ಜಿದಾರರು ಮರುಪಾವತಿ ಪಡೆದಿರುವುದರಿಂದ ಲಭ್ಯವಾಗುವ ನಿವೇಶನಗಳಿಗಿಂತ ಅರ್ಜಿಗಳು ಕಡಿಮೆ ಇರುವ ಕಾರಣ, ಬಿಡದಿ ಸುಭಾಷ್ ಚಂದ್ರ ಬೋಸ್ ಬಡಾವಣೆಯಲ್ಲಿ ಲಾಟರಿಯಲ್ಲಿ ಇಡಬ್ಲುಎಸ್ ವರ್ಗದ ನಿವೇಶನ ಹಂಚಿಕೆಯಾಗದೆ ಮರುಪಾವತಿ ಪಡೆಯದ ಅರ್ಜಿದಾರರುಗಳು ಮಾತ್ರ ವ್ಯತ್ಯಾಸದ ಆರಂಭಿಕ ಠೇವಣಿಯನ್ನು e-payment ಮೂಲಕ ಪಾವತಿಸಬಹುದಾಗಿದೆ.
ರಾಜಾಪುರ ಬಡಾವಣೆಗೆ ಈ ಹಿಂದೆ ಆರಂಭಿಕ ಠೇವಣಿಯೊಂದಿಗೆ ಅರ್ಜಿ ಸಲ್ಲಿಸಿರುವ ಅರ್ಜಿದಾರರಿಗೆ ನಿಯಮಾನುಸಾರ ಮೊದಲ ಆದ್ಯತೆಯಲ್ಲಿ ಹಂಚಿಕೆಗೆ ಪರಿಗಣಿಸಿ, ಉಳಿಯುವ ಸ್ವತ್ತುಗಳನ್ನು ಪ್ರಸ್ತುತ ನೀಡಿರುವ ಪ್ರಕಟಣೆಯನುಸಾರವಾಗಿ ವ್ಯತ್ಯಾಸದ ಆರಂಭಿಕ ಠೇವಣಿಯನ್ನು ಪಾವತಿಸುವ ಅರ್ಜಿದಾರರಿಗೆ ಲಾಟರಿ ಮೂಲಕ ಹಂಚಿಕೆಗೆ ಪರಿಗಣಿಸಲಾಗುವುದು.
**ವ್ಯತ್ಯಾಸದ ಆರಂಭಿಕ ಠೇವಣಿ ಹಣವನ್ನು e-payment ಮೂಲಕ ಪಾವತಿಸಲು ಕೊನೆಯ ದಿನಾಂಕ: 15.07.2022.**

| ಸ್ವತ್ತಿನ ವರ್ಗ | ಈ ಹಿಂದೆ ಪಾವತಿಸಿರುವ ಆರಂಭಿಕ ಠೇವಣಿ ಮೊತ್ತ & ನೋಂದಣಿ ಶುಲ್ಕ | ಪಾವತಿಸಬೇಕಾದ ವ್ಯತ್ಯಾಸದ ಆರಂಭಿಕ ಠೇವಣಿ ಮೊತ್ತ |
|---|---|---|
| ಇಡಬ್ಲುಎಸ್ | 10,300/– | 40,000/– |

**ನಿಯಮ ಮತ್ತು ಷರತ್ತುಗಳು :**
(1) ರಾಮನಗರ ಜಿಲ್ಲೆ ಬಿಡದಿ ಸುಭಾಷ್ ಚಂದ್ರ ಬೋಸ್ ಬಡಾವಣೆಯಲ್ಲಿ ಇಡಬ್ಲುಎಸ್ ವರ್ಗದ ನಿವೇಶನ ಹಂಚಿಕೆಯಾಗದೆ ಮರುಪಾವತಿ ಪಡೆಯದ ಅರ್ಜಿದಾರರುಗಳ ಪಟ್ಟಿಯನ್ನು ಮಂಡಳಿಯ ವೆಬ್‌ಸೈಟ್: https://www.khb.karnataka.gov.in ನಲ್ಲಿ ಪ್ರಕಟಿಸಲಾಗಿದ್ದು, ಪಟ್ಟಿಯಲ್ಲಿರುವ ಅರ್ಜಿದಾರರು ಮಾತ್ರ ವ್ಯತ್ಯಾಸದ ಆರಂಭಿಕ ಠೇವಣಿ ಮೊತ್ತವನ್ನು ಪಾವತಿಸಬಹುದಾಗಿರುತ್ತದೆ.
ಸಹಿ/–
ದಿನಾಂಕ: 08.07.2022
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
DIPR/CP/1232/Zenkar/2022-23
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ
6 ಅಡಿ ದೈಹಿಕ ಅಂತರ ಪಾಲಿಸಿ
ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಪ್ರಜಾವಾಣಿ ಶ್ರದ್ಧಾಂಜಲಿ & ನವನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

**24ನೇ ವರ್ಷದ ಪುಣ್ಯಸ್ಮರಣೆ**



ನೀವು ನಮ್ಮನ್ನಗಲಿ ಇಂದಿಗೆ 24 ವರ್ಷಗಳಾದರೂ ನೀವು ನಮ್ಮ ಮನೆ ಮತ್ತು ಮನದಲ್ಲಿ ಹಚ್ಚಿದ ಹಣತೆಯಂತೆ ದಾರಿ ದೀಪವಾಗಿದ್ದೀರಿ. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತಾ ಸದಾ ನಿಮ್ಮ ನೆನಪಿನಲ್ಲಿರುವ...

ಪತಿ: ರಾಮಕೃಷ್ಣಪ್ಪ ಮತ್ತು ಮಕ್ಕಳು, ಆರ್. ಲಕ್ಷಣಮೂರ್ತಿ, ವಕೀಲರು, ಸೊಸೆಯಂದಿರು, ಮೊಮ್ಮಕ್ಕಳು ಚರಣ್‌ಗ್ರೂಪ್ಸ್ ಮತ್ತು ಶ್ರೀಮತಿ ಜಯಮ್ಮ ಚಾರಿಟಬಲ್ ಟ್ರಸ್ಟ್ (ರಿ) ದಾಸನಪುರ, ಬೆಂಗಳೂರು

**ಶ್ರೀಮತಿ ಜಯಮ್ಮ**
ನಿಧನ: 09-07-1998

**ಮೊದಲನೇ ವರ್ಷದ ಪುಣ್ಯಸ್ಮರಣೆ**



**ಶ್ರೀ ಕೆ. ವಾಸುದೇವ ಮೂರ್ತಿ** (Retd. ADE)
ಜನನ: 08-11-1949 – ಮರಣ: 09-07-2021

ಇಂತಿ ದುಃಖತಪ್ತರು:
ಪತ್ನಿ, ತಮ್ಮಂದಿರು, ಮಕ್ಕಳು, ಸೊಸೆ, ಮೊಮ್ಮಕ್ಕಳು ಮತ್ತು ಬಂಧುಗಳು

LOOKING FOR JOB OPPORTUNITY
Refer Classifieds on Wednesday

**ಭಾವಪೂರ್ಣ ಶ್ರದ್ಧಾಂಜಲಿ**




**ಶ್ರೀಮತಿ ಶಾಕುಂತಲಮ್ಮ**
ಚಲ್ಲಘಟ್ಟ, ಬೆಂಗಳೂರು - 37

ಇವರು ದಿನಾಂಕ 08.07.2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಅಂತ್ಯಕ್ರಿಯೆಯನ್ನು 09..07.2022 ರಂದು 1.00 ಗಂಟೆಗೆ ಚಲ್ಲಘಟ್ಟಗ್ರಾಮದಲ್ಲಿ ನೇರವೇರಿಸಲಾಗುವುದು.

ಇಂತಿ ದುಃಖತಪ್ತರು
ಜಿ.ನಾರಾಯಣಪ್ಪ, ಚಲ್ಲಘಟ್ಟ ಮತ್ತು ಕುಟುಂಬದವರು

**ಶ್ರದ್ಧಾಂಜಲಿ**



**ಡಾ. ಎಲ್. ಶಿವಲಿಂಗಯ್ಯ**
ನಿವೃತ್ತ ಎಂಜಿನಿಯರ್ ಇನ್‌ಚೀಫ್ ಮತ್ತು ವಿಶೇಷ ಕಾರ್ಯದರ್ಶಿಗಳು ಲೋಕೋಪಯೋಗಿ ಇಲಾಖೆ ಕರ್ನಾಟಕ ಸರ್ಕಾರ
ಜನನ: 13-05-1930 ಮರಣ: 18-06-2022

ಡಾ. ಎಲ್. ಶಿವಲಿಂಗಯ್ಯ

ಸಂಸ್ಥಾಪಕ ಧರ್ಮದರ್ಶಿಗಳು
ಆನಂದ ಸಾಮಾಜಿಕ ಶೈಕ್ಷಣಿಕ ದತ್ತಿ
ಡಾ. ಬಿ.ಆರ್. ಅಂಬೇಡ್ಕರ್ ಮೆಡಿಕಲ್, ಡೆಂಟಲ್ ಮತ್ತು ನರ್ಸಿಂಗ್ ಕಾಲೇಜುಗಳು
ಪಾಂಚಜನ್ಯ ವಿದ್ಯಾಪೀಠ ವೆಲ್‌ಫೇರ್ ಟ್ರಸ್ಟ್
ಡಾ. ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯ

ಸಂಸ್ಥಾಪಕ ಅಧ್ಯಕ್ಷರು
ಅಂಬೇಡ್ಕರ್ ಮೆಮೋರಿಯಲ್ ಸೊಸೈಟಿ (ರಿ)
ಆನಂದ ಕೋ- ಆಪರೇಟಿವ್ ಬ್ಯಾಂಕ್
ಅಧ್ಯಕ್ಷರು, ದೀನ ಸೇವಾ ಸಂಘ

**ನಮ್ಮೊಂದಿಗೆ ಪಾಲ್ಗೊಳ್ಳಿ**
ಸ್ಥಳ: ಡಾ. ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯ ನಾಗರಬಾವಿ, ಬೆಂಗಳೂರು. ನುಡಿನಮನ
ಕಾರ್ಯಕ್ರಮ ಭಾನುವಾರ 10-7-2022 ಬೆಳಿಗ್ಗೆ 11ಕ್ಕೆ ಪ್ರಾರ್ಥನೆ-11.30 ರಿಂದ ಡಾ. ಎಲ್. ಎಸ್. ರವರಿಗೆ ಗೌರವಾನ್ವಿತ ಭಾಷಣಕಾರರಿಂದ ನುಡಿನಮನಗಳು.
ಮಧ್ಯಾಹ್ನ 1 ಗಂಟೆಗೆ ಭೋಜನ.

**ಅಂಬೇಡ್ಕರ್ ಮೆಮೋರಿಯಲ್ ಸೊಸೈಟಿ (ರಿ)**
ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಆಡಳಿತ ಮಂಡಳಿ ಸದಸ್ಯರು. ಪ್ರಾಂಶುಪಾಲರು, ಬೋಧಕ ಹಾಗೂ ಬೋಧಕೇತರ ವರ್ಗ. ಮತ್ತು
ಡಾ. ರವಿಪ್ರಕಾಶ್, ಸಚಿನ, ರೂಪಾಲಿ ಮತ್ತು ಶಿಫಾಲಿ, ಬಂಧು-ಮಿತ್ರರು

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

**ಉದ್ಯೋಗಾವಕಾಶ**

**Part-Time Jobs**

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

**Wanted**

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800-68,000. 9538811104, 9538811223

ಶ್ರೀಶಕ್ತಿ ಹೆಲ್ತ್‌ಕೇರ್ ಗೆ ಯುವಕ-ಯುವತಿಯರು Helper ಕೆಲಸಕ್ಕೆ ಬೇಕಾಗಿದ್ದಾರೆ. ತಿಂಗಳಿಗೆ ವೇತನ 13,000/- ರಿಂದ 15,000/- ಸ್ಥಳ: ಶೇಷಾದ್ರಿಪುರಂ, ಬೆಂಗಳೂರು-90196 26612

**General**

ಬೇಕಾಗಿದ್ದಾರೆ: ಕೆ.ಎಸ್.ಆರ್.ಟಿ.ಸಿ ನೌಕರರ ಕುಟುಂಬ ಕ್ಷೇಮಾಭಿವೃದ್ಧಿ ಸಂಘ (ಬೆಂ) ಇಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಕಲಿತಿರುವ ಮತ್ತು ಯಾವುದಾದರೂ ಪದವಿ ಮಾಡಿರುವ ಮಹಿಳೆ ಬೇಕಾಗಿದ್ದಾರೆ. ಅಧ್ಯಕ್ಷರು, ಬೈರಣ್ಣ, ಸಂಪರ್ಕಿಸಿ: 97435 29243. ನೇರ ಸಂದರ್ಶನ: ಭಾನುವಾರ (10.7.2022) ಬೆಳಿಗ್ಗೆ: 10.00 ಗಂಟೆಗೆ.

ಕ್ಲಾಸಿಫೈಡ್ಸ್ WEEKEND CORNER




**Drivers**

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್ : ಒತ್ತಡ ಮುಕ್ತ ಚಾಲನೆ ಸಂಬಳ: 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

**ರೆಂಟಲ್ ಪ್ರಾಪರ್ಟೀಸ್**

**Accommodation Available**

**Commercial**

ಸಾಗರದ ಜೆ.ಸಿ.ರೋಡ್‌ನಲ್ಲಿ 16x90 ಅಳತೆಯ ನೆಲ ಮಾಳಿಗೆ ಮತ್ತು ಮಹಡಿ ಬಾಡಿಗೆಗೆ ಇದೆ ಕೂಡಲೇ ಸಂಪರ್ಕಿಸಿ: 94481 38143, 99002 18256.

**ಬಿಲ್ಡರ್ ಎಸೆನ್ಷಿಯಲ್**

**Water Proofing**

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

**ರಿಯಲ್ ಎಸ್ಟೇಟ್ ಸೆಲ್ಲಿಂಗ್**

**Farm House/ Land/ Resorts**

**Out-Station**

ಕೃಷಿ ತೋಟ ಮಾರಾಟಕ್ಕಿದೆ. ಹೊನ್ನಾಳಿ ತಾಲ್ಲೂಕು, ಹೊನ್ನಾಳಿ ಹರಿಹರ ರಸ್ತೆಯ ಮಾಸಡಿ ಗ್ರಾಮದ ಹತ್ತಿರ, 5.2 ಎಕರೆಯುಳ್ಳ ತೆಂಗು, ಶ್ರೀಗಂಧ, ಖಾಲಿ ಜಮೀನು ಹಾಗೂ ಸುಸಜ್ಜಿತ ತೋಟದ ಮನೆ ಮಾರಾಟಕ್ಕಿವೆ. ಸಂಪರ್ಕಿಸಿ: 8792554159, 9036600199, 9972497841

**EDUCATION**
To Place your Classified Ads Contact:
9845114560

**ಪ್ರವಾಸ**

**Travel**

30.09.2022ರಿಂದ 34ದಿನಗಳು ವಿಮಾನ.AC ಬಸ್ಸಿನಲ್ಲಿ ಮತ್ತು ರೂಂ ಸೌಲಭ್ಯದೊಂದಿಗೆ ಚಾರಧಾಮ್ ಸಮೇತ ವೈಷ್ಣೋದೇವಿ,ಕಾಶ್ಮೀರ,ಶ್ರೀನಗರ, ಅಮೃತ್ಸರ,ಕಾಶಿ,ಗಯಾ,ನೇಪಾಳ, ಜೈಪುರ,ಹರಿದ್ವಾರ,ನವದೆಹಲಿ ಇತ್ಯಾದಿ.,ಯಾತ್ರೆಗಳಿಗೆ ವಿಷ್ಣು ಟ್ರಾವಲ್ ಲೈನ್ಸ್.#164/3 ಆರ್.ವಿ.ರಸ್ತೆ,ಬಸ್‌ಸ್ಟಾಪ್. ಎದುರು,ಬೆಂಗಳೂರು.04. 8105657052, 9480182865.

05.09.2022ರಿಂದ 9ದಿನಗಳು ಕಾಶಿ,ಅಲಹಾಬಾದ್,ಅಯೋಧ್ಯ, ಗಯಾ,ಬುದ್ಧಗಯಾ. 12.9.2022ರಿಂದ 17ದಿನಗಳು ಗಂಗೋತ್ರಿ,ಯಮುನೋತ್ರಿ, ಬದರಿನಾಥ್,ಕೇದಾರನಾಥ್ ಇತ್ಯಾದಿ.`ಹೆಗಡೆ ಟೂರ್ಸ್ ಅಂಡ್ ಟ್ರಾವೆಲ್ಸ್'.ಸೌತ್‌ಎಂಡ್ ರಸ್ತೆ. ಬೆಂಗಳೂರು.04. ಫೋನ್:8884866611, 8884366611.

ಶ್ರೀ ಶಿವನಂದಿ ಟೂರ್ಸ್ 8792104518, 8147311578 ಚಾರ್‌ಧಾಮ್ (ವಿಮಾನ, ಹೆಲಿಕಾಪ್ಟರ್, ಕುದುರೆ ಎಲ್ಲಾ ದರಗಳು ಸೇರಿ 50000/ 12 ದಿನ, 09/09, 07/10) ನೇಪಾಳ 11 ದಿನ. ಗುಜರಾತ್ 12 ದಿನ. ರಾಜಸ್ಥಾನ್ 10 ದಿನ. ಮಧ್ಯಪ್ರದೇಶ್ 15 ದಿನ. ವೈಷ್ಣದೇವಿ 12 ದಿನ. ಕಾಶಿ, ಜಾರ್ಖಂಡ್ 09 ದಿನ

**ಭವಿಷ್ಯ**

**Astrology**

★॥ಶ್ರೀದುರ್ಗಾಪರಮೇಶ್ವರಿ ದೇವಿ ಜ್ಯೋತಿಷ್ಯರು॥★ ಆರೋಗ್ಯ, ದಾಂಪತ್ಯ, ಸ್ತ್ರೀಪುರುಷ ಪ್ರೇಮವಿಚಾರ ಪ್ರೀತಿಯಲ್ಲಿಮೋಸ, ಅತ್ತೆಸೊಸೆ ಸಮಸ್ಯೆ, ವಿದ್ಯಾಭ್ಯಾಸ ಕೋರ್ಟ್ ಕಛೇರಿ ಇತ್ಯಾದಿ. 8050061378


ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು-ಶ್ರೀಕ್ಷೇತ್ರಧರ್ಮಸ್ಥಳ: 7022443071

ಜನ್ಮಾಂತರ ಸಮ್ಮೋಹಿನಿ ಚಿಕಿತ್ಸೆ: ಎಲ್ಲಾ ರೀತಿಯ ದೈಹಿಕ, ಮಾನಸಿಕ ಕಾಯಿಲೆಗಳು, ನಿಮ್ಮೆಲ್ಲಾ ರೀತಿಯ ಪರಿಹಾರವಾಗದ ಸಮಸ್ಯೆಗಳು, ಜನ್ಮ ಜನ್ಮಾಂತರಗಳ ದೋಷಗಳ ನಿವಾರಣೆಗಾಗಿ ಕೂಡಲೇ ಸಂಪರ್ಕಿಸಿ: 7676750280

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು




**ಷೇರುಪೇಟೆ ವಹಿವಾಟು** 303




**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 16,133 |
| ಇಂದಿನ ಅಂತ್ಯ | 16,221 |
| ▲ | 88 |
| ದಿನದ ಗರಿಷ್ಠ | 16,275 |

**ವಿನಿಮಯ ದರ**

| | |
|---|---|
| $ ಡಾಲರ್ | 79.26 |
| £ ಪೌಂಡ್ | 94.65 |
| € ಯುರೊ | 80.18 |
| ¥ ಯೆನ್ (100ಕ್ಕೆ) | 58 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹530 |
| 12 ಮೊಟ್ಟೆಗೆ | ₹70 |
| ಮೈಸೂರು | |
| 100 ಮೊಟ್ಟೆಗೆ | ₹530 |

## ನವೋದ್ಯಮಗಳಿಗೆ ಹಣಕಾಸಿನ ನೆರವು: ಕೆಡಿಇಎಂ ಜೊತೆ ಒಪ್ಪಂದ

# ಎಸ್‌ಬಿಐ 'ಸ್ಟಾರ್ಟ್‌ಅಪ್ ಡೆಸ್ಕ್'

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**
- ನವೋದ್ಯಮಗಳಿಗೆ ಪ್ರತ್ಯೇಕ ಶಾಖೆ ಆರಂಭಿಸಲಿರುವ ಎಸ್‌ಬಿಐ
- ಇತರ ರಾಜ್ಯಗಳಲ್ಲೂ ಸೌಲಭ್ಯ ವಿಸ್ತರಣೆಗೆ ಎಸ್‌ಬಿಐ ಮುಕ್ತ
- ಸಾವಿರಕ್ಕೂ ಹೆಚ್ಚು ನವೋದ್ಯಮಗಳಿಗೆ ನೆರವು ನಿರೀಕ್ಷೆ

**ಬೆಂಗಳೂರು:** ನವೋದ್ಯಮಗಳಿಗೆ ಹಣಕಾಸಿನ ನೆರವು ಒದಗಿಸಲು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆಡಿಇಎಂ) ಜೊತೆ ಒಪ್ಪಂದ ಮಾಡಿಕೊಂಡಿದೆ. ಇದರ ಭಾಗವಾಗಿ ಎಸ್‌ಬಿಐ, ಬೆಂಗಳೂರಿನ ಎಚ್‌ಎಸ್‌ಆರ್ ಲೇಔಟ್‌ನಲ್ಲಿನ 'ಇನ್ನೊವೇಷನ್ ಟವರ್'ನಲ್ಲಿ ಪ್ರತ್ಯೇಕ 'ಸ್ಟಾರ್ಟ್‌ಅಪ್ ಡೆಸ್ಕ್' ಆರಂಭಿಸಲಿದೆ.

ಮುಂದಿನ ದಿನಗಳಲ್ಲಿ ಮೈಸೂರು, ಮಂಗಳೂರು ಹಾಗೂ ಹುಬ್ಬಳ್ಳಿ-ಬೆಳಗಾವಿ ಕ್ಲಸ್ಟರ್‌ಗಳಲ್ಲಿ ನವೋದ್ಯಮ-ಗಳಿಗೆ ಹಣಕಾಸಿನ ನೆರವು ಒದಗಿಸುವ ಪ್ರತ್ಯೇಕ ಶಾಖೆಗಳನ್ನು ಆರಂಭಿಸಲು ಎಸ್‌ಬಿಐಗೆ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆಡಿಇಎಂ) ಸಹಾಯ ಮಾಡಲಿದೆ.

ರಾಜ್ಯ ಐ.ಟಿ. ಮತ್ತು ಬಿ.ಟಿ. ಸಚಿವ ಸಿ.ಎನ್. ಅಶ್ವತ್ಥನಾರಾಯಣ, ಎಸ್‌ಬಿಐ ಉಪ ವ್ಯವಸ್ಥಾಪಕ ನಿರ್ದೇಶಕ ರಾಣಾ ಅಶುತೋಷ್ ಕುಮಾರ್ ಸಿಂಗ್ ಸಮ್ಮುಖದಲ್ಲಿ ಈ ವಿಚಾರವಾಗಿ ಕೆಡಿಇಎಂ ಮತ್ತು ಎಸ್‌ಬಿಐ ನಡುವೆ ಶುಕ್ರವಾರ ಒಪ್ಪಂದಕ್ಕೆ ಸಹಿ ಹಾಕಲಾಯಿತು. ನವೋದ್ಯಮಗಳನ್ನು ಗುರಿಯಾಗಿಸಿಕೊಂಡು ಬ್ಯಾಂಕಿಂಗ್ ಸಂಸ್ಥೆಯೊಂದು ಈ ಬಗೆಯ ಒಪ್ಪಂದಕ್ಕೆ ಮಾಡಿಕೊಂಡಿರುವುದು ಇದೇ ಮೊದಲು ಎಂದು ಕೆಡಿಇಎಂ ಮತ್ತು ಎಸ್‌ಬಿಐ ಜಂಟಿ ಹೇಳಿಕೆ ತಿಳಿಸಿದೆ.

ರಾಜ್ಯ ಸರ್ಕಾರದಿಂದ ಗುರುತಿಸಲ್ಪಟ್ಟ, ಕೆಡಿಇಎಂ ಬೆಂಬಲ ಇರುವ ನವೋ-




ದ್ಯಮಗಳಿಗೆ ಸಾಲ ಸೇರಿದಂತೆ ಇತರ ಹಣಕಾಸಿನ ನೆರವು ಒದಗಿಸುವ ವ್ಯವ-ಸ್ಥೆಯನ್ನು ಕಟ್ಟಲು ಈ ಒಪ್ಪಂದದಿಂದಾಗಿ ಎಸ್‌ಬಿಐಗೆ ಸಾಧ್ಯವಾಗಲಿದೆ. ಒಪ್ಪಂದ ಕಾರಣದಿಂದಾಗಿ ಒಂದು ಸಾವಿರಕ್ಕೂ ಹೆಚ್ಚಿನ ನವೋದ್ಯಮಗಳಿಗೆ ನೆರವು ಸಿಗುವ ನಿರೀಕ್ಷೆ ಇದೆ.

'ತಂತ್ರಜ್ಞಾನ ಕ್ಲಸ್ಟರ್‌ಗಳಾದ ಮಂಗಳೂರು, ಮೈಸೂರು, ಹುಬ್ಬಳ್ಳಿಯಲ್ಲಿ ಮೂರರಿಂದ ಆರು ತಿಂಗಳುಗಳಲ್ಲಿ ನವೋದ್ಯಮಗಳಿಗಾಗಿ ಶಾಖೆ ಆರಂಭಿಸಲು ಎಸ್‌ಬಿಐ ಆಸಕ್ತಿ ತೋರಿಸಿದೆ' ಎಂದು ಕೆಡಿಇಎಂ ಅಧ್ಯಕ್ಷ ಬಿ.ವಿ. ನಾಯ್ಡು ಹೇಳಿದರು.

**'ಕೋರಮಂಗಲದಲ್ಲಿ ಶಾಖೆ':** 'ನವೋದ್ಯಮಗಳಿಗೆ ಸುಲಭವಾಗಿ ಸಾಲ ಒದಗಿಸಲು ಪ್ರತ್ಯೇಕ ಶಾಖೆಯನ್ನು ಎಸ್‌ಬಿಐ ಬೆಂಗಳೂರಿನ ಕೋರಮಂಗಲದಲ್ಲಿ ಆರಂಭಿಸಲಿದೆ. ಆಗಸ್ಟ್ ತಿಂಗಳಲ್ಲಿ ಆರಂಭವಾಗಲಿದೆ' ಎಂದು ಐ.ಟಿ. ಮತ್ತು ಬಿ.ಟಿ. ಸಚಿವ ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

'ಕೇಂದ್ರ ಸರ್ಕಾರವು ಅತಿಸಣ್ಣ ಮತ್ತು ಸಣ್ಣ ಉದ್ದಿಮೆಗಳಿಗೆ ಸಾಲ ಸೌಲಭ್ಯ ಖಾತರಿಪಡಿಸಲು ರೂಪಿಸಿರುವ ಸಿಜಿಟಿಎಸ್‌ಎಂಇ ಯೋಜನೆಯ ಅಡಿ ಒಂದು ಉದ್ದಿಮೆಗೆ ₹ 2 ಕೋಟಿ ವರೆಗೂ ಸಾಲ ಸಿಗುತ್ತಿದೆ. ಇದನ್ನು ಬಳಸಿಕೊಂಡು, ರಾಜ್ಯದಲ್ಲಿ ನವೋ-ದ್ಯಮಗಳಿಗೆ ಹಣಕಾಸಿನ ನೆರವು ಒದಗಿಸಲು ತೀರ್ಮಾನ ಮಾಡಲಾಗಿದೆ' ಎಂದು ಅಶ್ವತ್ಥನಾರಾಯಣ ಹೇಳಿದರು.

'ಕರ್ನಾಟಕ ಸರ್ಕಾರದ ಮಾದರಿಯಲ್ಲಿಯೇ ಇತರ ರಾಜ್ಯಗಳೂ ಮುಂದಡಿ ಇರಿಸಿದರೆ, ಅಲ್ಲಿಯೂ ಆರಂಭಿಸಬಹುದು' ಎಂದು ರಾಣಾ ಆಶುತೋಷ್ ಕುಮಾರ್ ಸಿಂಗ್ ಹೇಳಿದರು.

## ಜೂನ್‌ನಲ್ಲಿ ₹ 15,498 ಕೋಟಿ ಬಂಡವಾಳ ಒಳಹರಿವು

# ಈಕ್ವಿಟಿ ಎಂಎಫ್: ಹೂಡಿಕೆ ಅಬಾಧಿತ

**ನವದೆಹಲಿ (ಪಿಟಿಐ):** ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಜೂನ್‌ನಲ್ಲಿ ₹15,498 ಕೋಟಿ ಒಳಹರಿವು ದಾಖಲಾಗಿದೆ. ಷೇರುಪೇಟೆ ಅಸ್ಥಿರವಾ-ಗಿರುವ ಜೊತೆಗೆ ವಿದೇಶಿ ಬಂಡವಾಳವು ನಿರಂತರವಾಗಿ ಹೊರಹೋಗುತ್ತಿ-ರುವ ನಡುವೆಯೇ ಈ ಪ್ರಮಾಣದ ಹೂಡಿಕೆ ಆಗಿದೆ. ಇದರಿಂದಾಗಿ ಸತತ 16ನೇ ತಿಂಗಳಿನಲ್ಲಿಯೂ ಬಂಡವಾಳ ಒಳಹರಿವು ಆದಂತಾಗಿದೆ.

ಮೇ ತಿಂಗಳಿನಲ್ಲಿ ₹ 18,529 ಕೋಟಿ ಬಂಡವಾಳ ಒಳಹರಿವು ಆಗಿತ್ತು. ಇದಕ್ಕೆ ಹೋಲಿಸಿದರೆ ಜೂನ್‌ನಲ್ಲಿ

**ಹೂಡಿಕೆ ವಿವರ (₹ ಕೋಟಿಗಳಲ್ಲಿ)**

| | |
|---|---|
| 12,276 | ಎಸ್‌ಐಪಿ |
| 2,512 | ಫ್ಲೆಕ್ಸಿ–ಕ್ಯಾಪ್ ಫಂಡ್ಸ್ |
| 2,130 | ಮಲ್ಟಿ–ಕ್ಯಾಪ್ ಫಂಡ್ಸ್ |
| 135 | ಚಿನ್ನದ ಇಟಿಎಫ್ |

₹3,031 ಕೋಟಿಯಷ್ಟು ಕಡಿಮೆ ಆಗಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಶುಕ್ರವಾರ ಮಾಹಿತಿ ನೀಡಿದೆ.

ಹೂಡಿಕೆಗೆ ಸಂಬಂಧಿಸಿದಂತೆ ಸದ್ಯ ಇರುವ ಸವಾಲಿನ ಪರಿಸ್ಥಿತಿಯನ್ನು ಗಮನದಲ್ಲಿ ಇಟ್ಟುಕೊಂಡು ಹೂಡಿಕೆದಾರರು ಎಚ್ಚರಿಕೆಯಿಂದ ವಹಿವಾಟು ನಡೆಸಿದ್ದಾರೆ. ಹೀಗಾಗಿ ಹೂಡಿಕೆಯಲ್ಲಿ ಇಳಿಕೆ ಕಂಡುಬಂದಿದೆ ಎಂದು ತಜ್ಞರು ಹೇಳಿದ್ದಾರೆ.

ಸಾಲಪತ್ರ ವಿಭಾಗದಿಂದ ಜೂನ್‌ನಲ್ಲಿ ₹ 92,247 ಕೋಟಿ ಬಂಡವಾಳ ಹೊರಹೋಗಿದೆ. ಮೇ ತಿಂಗಳಲ್ಲಿ ₹32,722 ಕೋಟಿ ಬಂಡವಾಳ ಹಿಂದಕ್ಕೆ ಪಡೆಯಲಾಗಿತ್ತು.

ಒಟ್ಟಾರೆಯಾಗಿ ಮ್ಯೂಚುವಲ್ ಫಂಡ್ ಉದ್ಯಮದಿಂದ ಜೂನ್‌ನಲ್ಲಿ ₹69,853 ಕೋಟಿ ಬಂಡವಾಳ ಹಿಂದಕ್ಕೆ ಪಡೆಯಲಾಗಿದೆ. ಮೇ ತಿಂಗಳಿನಲ್ಲಿ ₹7,532 ಕೋಟಿ ಹಿಂದಕ್ಕೆ ಪಡೆಯಲಾಗಿತ್ತು ಎಂದು ಒಕ್ಕೂಟವು ತಿಳಿಸಿದೆ.

ದೀರ್ಘಾವಧಿಯಲ್ಲಿ ಈಕ್ವಿಟಿ ಹೂಡಿಕೆಗಳಿಂದ ಆಗುವ ಪ್ರಯೋಜನಗಳ ಬಗ್ಗೆ ಸಣ್ಣ ಹೂಡಿ-ಕೆದಾರರಲ್ಲಿ ತಿಳಿವಳಿಕೆ ಮೂಡಿದೆ ಎನ್ನುವುದನ್ನು ಎಸ್‌ಐಪಿ ಅಂಕಿ–ಅಂಶಗಳು ಸೂಚಿಸುತ್ತಿವೆ ಎಂದು ಮೋತಿಲಾಲ್ ಓಸ್ವಾಲ್ ಎಎಂಸಿ ಮುಖ್ಯ ವಹಿವಾಟು ಅಧಿಕಾರಿ ಅಖಿಲ್ ಚತುರ್ವೇದಿ ಹೇಳಿದ್ದಾರೆ.

**ರಾಮನಗರ ರೇಷ್ಮೆಗೂಡು ಧಾರಣೆ**

| | |
|---|---|
| ಮಿಶ್ರತಳಿ (ಸಿ.ಬಿ) | ₹155-540 |
| ದ್ವಿತಳಿ (ಬಿ.ವಿ) | ₹200-712 |

**ಎನ್.ಆರ್.ಪುರ ರಬ್ಬರ್**

| | |
|---|---|
| ಆರ್‌ಎಸ್‌ಎಸ್-4 | ₹175 |
| ಆರ್‌ಎಸ್‌ಎಸ್-5 | ₹166 |
| ಗುಡ್ ಲಾಟ್ | ₹158 |

(ಪ್ರತಿ ಕೆ.ಜಿಗೆ)

**ಖಾದ್ಯ ತೈಲ ಮುಂಬೈ**

(10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1580 (1580) |
| ಸೋಯಾ (ರಿಫೈನ್ಡ್) | ₹1270 (1250) |

**ದೇಶದಾದ್ಯಂತ ಮಾರುಕಟ್ಟೆ ಧಾರಣೆ**

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 400-420 |
| ನಡುಗೋಲು | 450-480 |
| ರಾಶಿ | 500-520 |
| ರಾಶಿ ಉತ್ತಮ | 550-600 |
| ಜರಡಿ | 600-650 |
| ಹೆರಕಿದ್ದು | 1000-1100 |
| ಹಸಿರು ಸಾಧಾರಣ | 600-700 |
| ಹಸಿರು ಉತ್ತಮ | 900-1000 |
| ಹಸಿರು ಅತಿ ಉತ್ತಮ | 1150-1250 |
| ಕಾಳು ಮೆಣಸು | 470 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 12500-25000 |
| ಹೊಸತು | 27500-45000 |
| ಹಳತು | 46000-54500 |
| **ಹೊಸನಗರ** | |
| ಬಿಳಿಗೋಟು | 23899-25099 |
| ಚಾಲಿ | 33009-36319 |
| ಕೆಂಪುಗೋಟು | 35699-37591 |
| ರಾಶಿ | 47709-50269 |
| **ಕಾರ್ಕಳ** | |
| ಹೊಸತು | 40000-45000 |
| **ಕುಮಟ** | |
| ಚಿಪ್ಪು | 26509-31019 |
| ಕೋಕ | 18509-29999 |
| ಫ್ಯಾಕ್ಟರಿ | 10169-19800 |
| ಹೊಸಚಾಲಿ | 36019-38709 |
| ಹಳೆಚಾಲಿ | 44019-46439 |
| **ಶಿವಮೊಗ್ಗ** | |
| ಗೊರಬಲು | 17000-38009 |
| ರಾಶಿ | 47069-49899 |
| **ಸಿದ್ದಾಪುರ** | |
| ಬಿಳಿಗೋಟು | 26099-31619 |
| ಚಾಲಿ | 34399-38509 |
| ಕೋಕ | 22689-33112 |
| ಕೆಂಪುಗೋಟು | 28989-33699 |
| ರಾಶಿ | 43299-48699 |
| ತಟ್ಟಿಬೆಟ್ಟೆ | 37099-44689 |
| **ಶಿರಸಿ** | |
| ಬೆಟ್ಟೆ | 36611-45389 |
| ಬಿಳಿಗೋಟು | 22009-32799 |
| ಚಾಲಿ | 35900-39201 |
| ರಾಶಿ | 45960-49199 |
| **ಯಲ್ಲಾಪುರ** | |
| ಬಿಳಿಗೋಟು | 26501-32418 |
| ಚಾಲಿ | 34879-39399 |
| ಕೋಕ | 18899-28999 |
| ಕೆಂಪುಗೋಟು | 27799-34809 |
| ರಾಶಿ | 45199-52495 |
| ತಟ್ಟಿಬೆಟ್ಟೆ | 37509-44329 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 15900 | 15800 | 15700 | --- ಸೆಂಟ್ಸ್ |
| ಎಸಿ | 8960 | 8500 | 8550 | |
| ಆರ್‌ಪಿ | 9500 | 9510 | 9500 | ಲಂಡನ್ |
| ಆರ್‌ಸಿ | 4625 | 4450 | 4550 | 1999 ಡಾಲರ್ಸ್ |

## ಅಡುಗೆ ಎಣ್ಣೆ ಬೆಲೆ ಇಳಿಕೆ: ಕೇಂದ್ರ ನಿರೀಕ್ಷೆ

**ನವದೆಹಲಿ (ಪಿಟಿಐ):** ಅಡುಗೆ ಎಣ್ಣೆಗಳ ಗರಿಷ್ಠ ಮಾರಾಟ ದರವನ್ನು (ಎಂಆರ್‌ಪಿ) ಇನ್ನೂ ಹೆಚ್ಚಿನ ಕಂಪನಿಗಳು ಲೀಟರಿಗೆ ₹ 15ರವರೆಗೆ ಕಡಿಮೆ ಮಾಡಲಿವೆ ಎಂಬ ನಿರೀಕ್ಷೆಯನ್ನು ಕೇಂದ್ರ ಸರ್ಕಾರ ಹೊಂದಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಅಡುಗೆ ಎಣ್ಣೆಗಳ ಬೆಲೆಯು ಇಳಿಕೆಯಾಗಿದೆ. ಹೀಗಾಗಿ, ದೇಶಿ ಮಾರುಕಟ್ಟೆಯಲ್ಲಿ ಅಡುಗೆ ಎಣ್ಣೆಗಳ ಎಂಆರ್‌ಪಿಯನ್ನು ತಗ್ಗಿಸುವಂತೆ ಕೇಂದ್ರವು ಕಂಪನಿಗಳಿಗೆ ಬುಧವಾರ ಸೂಚಿಸಿತ್ತು. ಇದಾದ ನಂತರದಲ್ಲಿ ಮದರ್ ಡೈರಿ ಕಂಪನಿಯು 'ಧಾರಾ' ಬ್ರ್ಯಾಂಡ್‌ನ ಸೋಯಾ ಹಾಗೂ ರೈಸ್ ಬ್ರಾನ್ ಎಣ್ಣೆಗಳ ಬೆಲೆಯನ್ನು ಲೀಟರಿಗೆ ₹ 14ರವರೆಗೆ ತಗ್ಗಿಸಿದೆ.

'ಕೆಲವು ಕಂಪನಿಗಳು ಬೆಲೆ ಕಡಿಮೆ ಮಾಡಿಲ್ಲ. ಇತರ ಬ್ರ್ಯಾಂಡ್‌ಗಳ ಎಂಆರ್‌ಪಿಗಿಂತ ಹೆಚ್ಚು ಎಂಆರ್‌ಪಿ ನಿಗದಿ ಮಾಡಿರುವ ಕಂಪನಿಗಳು ಬೆಲೆ ಕಡಿಮೆ ಮಾಡಬೇಕು' ಎಂದು ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವಾಲಯ ಸಲಹೆ ಮಾಡಿದೆ.

## ಟಿಸಿಎಸ್ ನಿವ್ವಳ ಲಾಭ ಶೇ 5.2 ಹೆಚ್ಚಳ

**ಮುಂಬೈ (ಪಿಟಿಐ):** ಐ.ಟಿ. ಸೇವೆಗಳನ್ನು ನೀಡುವ ದೇಶದ ಅತಿದೊಡ್ಡ ಕಂಪನಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈ-ಮಾಸಿಕದಲ್ಲಿ ₹ 9,478 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ಹಣಕಾಸು ವರ್ಷದ ಇದೇ ತ್ರೈಮಾಸಿಕದಲ್ಲಿ ಗಳಿಸಿದ್ದ ನಿವ್ವಳ ಲಾಭಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇ 5.2ರಷ್ಟು ಹೆಚ್ಚಾಗಿದೆ.

ವಾರ್ಷಿಕ ವೇತನ ಹೆಚ್ಚಳ ಮತ್ತು ಬಡ್ತಿಯಿಂದಾಗಿ ಕಾರ್ಯಾಚರಣೆ ಲಾಭದಲ್ಲಿ ಭಾರಿ ಇಳಿಕೆ ಆಗಿದೆ ಎಂದು ಕಂಪನಿ ತಿಳಿಸಿದೆ. ಕಾರ್ಯಾಚರಣೆ ವರಮಾನ ₹52,758 ಕೋಟಿ ಆಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ16.2ರಷ್ಟು ಬೆಳವಣಿಗೆ ಕಂಡುಬಂದಿದೆ ಎಂದು ಕಂಪನಿಯು ತಿಳಿಸಿದೆ. ₹ 1 ಮುಖಬೆಲೆಯ ಪ್ರತಿ ಷೇರಿಗೆ ₹ 8ರಷ್ಟು ಮಧ್ಯಂತರ ಲಾಭಾಂಶ ಘೋಷಿಸಿದೆ.

# ಉತ್ತರಪ್ರದೇಶ: ವಿರೋಧ ಪಕ್ಷದ ಸ್ಥಾನ ಕಳೆದುಕೊಂಡ ಎಸ್‌ಪಿ

**ಲಖನೌ:** ಒಟ್ಟು 100 ಸದಸ್ಯ ಬಲದ ಸದನದಲ್ಲಿ ತಮ್ಮ ಪಕ್ಷದ ಶಾಸಕ ಸದಸ್ಯರ ಸಂಖ್ಯೆಯು 10ಕ್ಕಿಂತಲೂ ಕಡಿಮೆಯಾದ ಕಾರಣ ಉತ್ತರಪ್ರದೇಶದ ವಿಧಾನ-ಪರಿಷತ್ತಿನಲ್ಲಿ ಸಮಾಜವಾದಿ ಪಕ್ಷವು (ಎಸ್‌ಪಿ) ವಿರೋಧಪಕ್ಷದ ಸ್ಥಾನವನ್ನು ಕಳೆದುಕೊಂಡಿದೆ.

ವಿರೋಧಪಕ್ಷದ ಸ್ಥಾನ ಕಳೆದುಕೊಂಡ ಬೆನ್ನಲ್ಲೇ ಸಮಾಜವಾದಿ ಪಕ್ಷವು ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದೆ.

ಮೇ 27ರಂದು ವಿಧಾನಪ-ರಿಷತ್ತಿನಲ್ಲಿ 11 ಸದಸ್ಯ ಬಲವನ್ನು ಹೊಂದಿದ್ದ ಸಮಾಜವಾದಿ ಪಕ್ಷವು ಅತಿದೊಡ್ಡ ವಿರೋಧಪಕ್ಷವಾಗಿ-ತ್ತು. ಇದರ ಆಧಾರದಲ್ಲಿ ಲಾಲ್ ಬಿಹಾರಿ ಯಾದವ್ ಅವರನ್ನು ವಿರೋಧಪಕ್ಷ ನಾಯಕರನ್ನಾಗಿ ಆಯ್ಕೆ ಮಾಡಲಾಗಿತ್ತು. ಆದರೆ, ಜುಲೈ 7ರಂದು ಪರಿಷತ್ತಿನಲ್ಲಿ ಪಕ್ಷದ ಸದಸ್ಯರ ಸಂಖ್ಯೆಗೆ 9ಕ್ಕೆ ಇಳಿಯಿತು. ಪ್ರತಿಪಕ್ಷದ ಸ್ಥಾನ ಪಡೆಯಲು 10ಕ್ಕಿಂತಲೂ ಕಡಿಮೆ ಬಲ ಹೊಂದಿದ್ದರಿಂದ ಪಕ್ಷವು ವಿರೋಧಪಕ್ಷದ ಸ್ಥಾನವನ್ನು ಕಳೆದುಕೊಂಡಿದೆ' ಎಂದು ಪ್ರಧಾನ ಕಾರ್ಯದರ್ಶಿ ರಾಜೇಶ್ ಸಿಂಗ್ ಅವರು ಗುರುವಾರ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಇದು ಪ್ರಜಾಪ್ರಭುತ್ವ ವಿರೋಧಿ ಮತ್ತು ನಿಯಮಗಳಿಗೆ ವಿರುದ್ಧವಾದ್ದ-ದು. ಈ ನಿರ್ಧಾರವು ಕಾನೂನನ್ನು ಸಂಪೂರ್ಣವಾಗಿ ಉಲ್ಲಂಘಿಸುತ್ತಿದೆ' ಎಂದು ಅಖಿಲೇಶ್ ಯಾದವ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

**ಕೋರ್ಟ್‌ಗೆ ಮೊರೆ:** ಈ ಬಗ್ಗೆ ಪ್ರತಿಕ್ರಿಯಿಸಿರುವ ಎಸ್‌ಪಿ ನಾಯಕ ಸಂಜಯ್ ಲಾಠರ್, 'ನಮ್ಮ ಪಕ್ಷವು ವಿಧಾನ ಪರಿಷತ್ತಿನಲ್ಲಿ ಎರಡನೇ ಅತಿದೊಡ್ಡ ಪಕ್ಷವಾಗಿರುವುದರಿಂದ ಅದರ ನಾಯಕನನ್ನು ವಿರೋಧ ಪಕ್ಷದ ನಾಯಕನಾಗಿ ಗುರುತಿಸಬೇಕು. ಇದರ ವಿರುದ್ಧ ನಾವು ನ್ಯಾಯಾಲಯದ ಮೊರೆ ಹೋಗುತ್ತೇವೆ' ಎಂದು ಹೇಳಿದ್ದಾರೆ.

**ಸಂಕ್ಷಿಪ್ತ ಸುದ್ದಿ**

### ಮಹೀಂದ್ರ ಇ.ವಿ. ಕಂಪನಿಯಲ್ಲಿ ಬಿಐಐ ಹೂಡಿಕೆ

**ನವದೆಹಲಿ (ಪಿಟಿಐ):** ಮಹೀಂದ್ರ ಆ್ಯಂಡ್ ಮಹೀಂದ್ರ ಸಮೂಹದ ವಿದ್ಯುತ್ ಚಾಲಿತ ವಾಹನ (ಇ.ವಿ.) ಕಂಪನಿಯಲ್ಲಿ ಬ್ರಿಟಿಷ್ ಇಂಟರ್‌ನ್ಯಾ-ಷನಲ್ ಇನ್ವೆಸ್ಟ್‌ಮೆಂಟ್ (ಬಿಐಐ) ಸಂಸ್ಥೆಯು ₹ 1,925 ಕೋಟಿ ಹೂಡಿಕೆ ಮಾಡಲಿದೆ.

ಎರಡೂ ಸಂಸ್ಥೆಗಳ ನಡುವಿನ ಒಪ್ಪಂದದ ಪ್ರಕಾರ, ಇ.ವಿ. ವಾಹನಗಳನ್ನು ತಯಾರಿಸುವ ಹೊಸ ಕಂಪನಿಯಲ್ಲಿ 2024ರಿಂದ 2027ರ ನಡುವೆ ಒಟ್ಟು ₹ 8 ಸಾವಿರ ಕೋಟಿ ಹೂಡಿಕೆ ಆಗಲಿದೆ. ಮಹೀಂದ್ರ ಆ್ಯಂಡ್ ಮಹೀಂದ್ರ ಹಾಗೂ ಬಿಐಐ ತಲಾ ₹ 1,925 ಕೋಟಿ ಹೂಡಿಕೆ ಮಾಡಲಿವೆ. ಹೊಸ ಕಂಪನಿಯು ಇ.ವಿ. ಪ್ರಯಾಣಿಕ ವಾಹನಗಳ ತಯಾರಿಕೆಗೆ ಗಮನ ಕೊಡಲಿದೆ.

### ಸೆನ್ಸೆಕ್ಸ್ 303 ಅಂಶ ಏರಿಕೆ

**ನವದೆಹಲಿ (ಪಿಟಿಐ):** ದೇಶದ ಷೇರು-ಪೇಟೆಗಳಲ್ಲಿ ಸತತ ಮೂರನೇ ದಿನವೂ ಸೂಚ್ಯಂಕಗಳ ಓಟ ಮುಂದುವರಿಯಿತು. ವಿದೇಶಿ ಬಂಡವಾಳ ಹೊರಹರಿವಿನ ನಡುವೆಯೂ ಬ್ಯಾಂಕಿಂಗ್, ಮೂಲ ಸೌಕರ್ಯ ಮತ್ತು ಎಫ್‌ಎಂಸಿಜಿ ಷೇರುಗಳ ಮೌಲ್ಯ ಹೆಚ್ಚಳವು ಶುಕ್ರವಾರ ಸಕಾರಾತ್ಮಕ ವಹಿವಾಟಿಗೆ ಕಾರಣವಾದವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 303 ಅಂಶ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 88 ಅಂಶ ಹೆಚ್ಚಾಗಿ 16,221 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

ಸರಕುಗಳ ದರ ಇಳಿಕೆ ಆಗು-ತ್ತಿರುವುದರಿಂದ ಹಣದುಬ್ಬರವು ಇಳಿಕೆ ಹಾದಿಗೆ ಮರಳುವ ನಿರೀಕ್ಷೆ ವ್ಯಕ್ತವಾಗಿದೆ. ಹೀಗಾದಲ್ಲಿ ಕೇಂದ್ರೀಯ ಬ್ಯಾಂಕ್ ತ್ವರಿತವಾಗಿ ಬಡ್ಡಿದರ ಹೆಚ್ಚಳ ಮಾಡುವುದನ್ನು ತಡೆಹಿಡಿಯುವ ಸಾಧ್ಯತೆ ಇದೆ ಎನ್ನುವ ಲೆಕ್ಕಾಚಾರ ಸಹ ಸೂಚ್ಯಂಕಗಳ ಏರಿಕೆ ಕಾರಣವಾಯಿತು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

### ಕ್ಯಾಸಿನೊಗೆ ತೆರಿಗೆ: ಮಂಗಳವಾರ ಸಭೆ

**ನವದೆಹಲಿ (ಪಿಟಿಐ):** ಕ್ಯಾಸಿನೊ, ಆನ್‌ಲೈನ್ ಆಟಗಳು ಹಾಗೂ ಕುದುರೆ ರೇಸ್‌ಗೆ ಜಿಎಸ್‌ಟಿ ವ್ಯವಸ್ಥೆ ಅಡಿಯಲ್ಲಿ ಎಷ್ಟು ತೆರಿಗೆ ವಿಧಿಸಬೇಕು ಎಂಬ ಕುರಿತ ವರದಿಯನ್ನು ಅಂತಿಮಗೊಳಿಸಲು ಸಚಿವರ ಸಮಿತಿಯು ಮಂಗಳವಾರ ಸಭೆ ಸೇರಲಿದೆ.

ಸಮಿತಿಯ ಸದಸ್ಯ ಆಗಿರುವ ಉತ್ತರ ಪ್ರದೇಶ ಹಣಕಾಸು ಸಚಿವ ಸುರೇಶ್ ಕುಮಾರ್ ಖನ್ನಾ ಅವರು ಈ ವಿಷಯ ತಿಳಿಸಿದ್ದಾರೆ. ಇವುಗಳಿಗೆ ಶೇಕಡ 28ರಷ್ಟು ತೆರಿಗೆ ವಿಧಿಸಬೇಕು ಎಂದು ಸಮಿತಿಯ ವರದಿಯಲ್ಲಿ ಹೇಳಲಾಗಿದೆ.

**ಮುಂಬೈ ಧಾರಣೆ**

**ಶೇಂಗಾ**
8-7-2022

| | |
|---|---|
| ಜಾವಾ 70/80(ಹೊಸ) | 10950-11000 |
| ಜಾವಾ 80/90(ಹೊಸ) | 10350-10400 |
| ದಪ್ಪ ಮಧ್ಯಪ್ರದೇಶ(ಹೊಸ) | 9850-9900 |
| ದಪ್ಪ ಗುಜರಾತ್(ಹೊಸ) | 10750-10800 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1590 (1590) |
| ಒಂದು ವಾರದ ಡೆಲಿವರಿ | 1585 (1585) |
| ಸೋಯಾ ಕಚ್ಚಾ | 1210 (1180) |
| ಪಾಮ್ ವಾರದ ಡೆಲಿವರಿ | 1198 (1183) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1550 (1580) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ
50,650 (50,625)
ಬೆಳ್ಳಿ ಕೆ.ಜಿ 56,450 (56,850)

ಆವರಣದಲ್ಲಿ ಹಿಂದಿನ ದಿನದ ಧಾರಣೆ

## ಆಗಸ್ಟ್‌ನಲ್ಲಿ ಭಾರತ–ಜಿಂಬಾಬ್ವೆ ಕ್ರಿಕೆಟ್ ಸರಣಿ

**ನವದೆಹಲಿ(ಪಿಟಿಐ):** ಮುಂದಿನ ತಿಂಗಳು ಭಾರತ ಕ್ರಿಕೆಟ್ ತಂಡವು ಜಿಂಬಾಬ್ವೆ ಪ್ರವಾಸ ಮಾಡಲಿದೆ. ಅಲ್ಲಿ ಮೂರು ಏಕದಿನ ಪಂದ್ಯಗಳ ಸರಣಿಯಲ್ಲಿ ಆಡಲಿದೆ. ಐಸಿಸಿ ಏಕದಿನ ಕ್ರಿಕೆಟ್ ಸೂಪರ್ ಲೀಗ್ ಭಾಗವಾಗಿರುವ ಈ ಸರಣಿಯು ಆಗಸ್ಟ್ 18 ರಿಂದ 22ರವರೆಗೆ ನಡೆಯಲಿದೆ ಎಂದು ಕ್ರಿಕ್‌ಬಜ್ ವರದಿ ಮಾಡಿದೆ.

## ಬಾಕ್ಸಿಂಗ್ ತಂಡಕ್ಕೆ ಐರ್ಲೆಂಡ್‌ನಲ್ಲಿ ತರಬೇತಿ


ಅಮಿತ್

**ನವದೆಹಲಿ (ಪಿಟಿಐ):** ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಸ್ಪರ್ಧಿಸಲಿರುವ ಭಾರತದ ಬಾಕ್ಸಿಂಗ್ ಕ್ರೀಡಾಪಟುಗಳಿಗೆ ಐರ್ಲೆಂಡ್‌ನಲ್ಲಿ ವಿಶೇಷ ತರಬೇತಿಗೆ ಕೇಂದ್ರ ಕ್ರೀಡಾ ಸಚಿವಾಲಯ ಅನುಮತಿ ನೀಡಿದೆ.

ವಿಶ್ವ ಚಾಂಪಿಯನ್ ನಿಖತ್ ಜರೀನ್ ಸೇರಿದಂತೆ 11 ಮಹಿಳೆಯರು ಮತ್ತು ಅಮಿತ್ ಪಂಘಾಲ್ ಸೇರಿ 15 ಪುರುಷರಿಗೆ ತರಬೇತಿಗೆ ತೆರಳಲು ಅವಕಾಶ ನೀಡಲಾಗಿದೆ. ಮಹಿಳಾ ತಂಡದಲ್ಲಿ ಒಲಿಂಪಿಕ್ ಪದಕ ವಿಜೇತ ಬಾಕ್ಸರ್ ಲವ್ಲಿನಾ ಬೊರ್ಗೊಹೈನ್ ಕೂಡ ಇದ್ದಾರೆ. ತರಬೇತುದಾರರಾದ ಭಾಸ್ಕರ್ ಚಂದ್ರ ಭಟ್, ಪ್ರಣಾಮಿಕ ಬೊರಾ ಮತ್ತು ಮಹಾವೀರ ಸಿಂಗ್, ಫಿಸಿಯೊಥೆರಪಿಸ್ಟ್, ಮಸಾಜ್ ಥೆರಪಿಸ್ಟ್, ಸ್ಟ್ರೆಂಥ್ ಮತ್ತು ಕಂಡಿಷನಿಂಗ್ ಪರಿಣತರು ಹಾಗೂ ಕ್ರೀಡಾ ವಿಜ್ಞಾನಿ ಕೂಡ ತಂಡದಲ್ಲಿದ್ದಾರೆ.

ಪುರುಷರ ತಂಡದಲ್ಲಿ ಹಸಮುದ್ದೀನ್, ಶಿವ ಥಾಪಾ, ರೋಹಿತ್ ತೊಕಾಸ್, ಸುಮಿತ್, ಆಶಿಶ್ ಕುಮಾರ್, ಸಂಜೀತ್ ಮತ್ತು ಸಾಗರ್ ಇದ್ದಾರೆ.

### ವಿಂಬಲ್ಡನ್: ಮಹಿಳಾ ವಿಭಾಗದ ಪ್ರಶಸ್ತಿಗೆ ಜಬೇರ್– ರಿಬಾಕಿನ ಸೆಣಸು ಇಂದು

# ಜೊಕೊವಿಚ್ ಫೈನಲ್‌ಗೆ ಲಗ್ಗೆ

**ಲಂಡನ್ (ರಾಯಿಟರ್ಸ್/ ಎಎಫ್‌ಪಿ):** ಅಗ್ರಶ್ರೇಯಾಂಕದ ಆಟಗಾರ ಸರ್ಬಿಯದ ನೊವಾಕ್ ಜೊಕೊವಿಚ್ ವಿಂಬಲ್ಡನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿಯ ಫೈನಲ್ ಪ್ರವೇಶಿಸಿದರು.

ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಶುಕ್ರವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಅವರು 2-6, 6-3, 6-2, 6-4 ರಲ್ಲಿ ಆತಿಥೇಯ ದೇಶದ ಭರವಸೆಯಾಗಿದ್ದ ಕೆಮರಾನ್ ನೋರಿ ವಿರುದ್ಧ ಗೆದ್ದರು.

ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಅವರು ಆಸ್ಟ್ರೇಲಿಯಾದ ನಿಕ್ ಕಿರ್ಗಿಯೊಸ್ ಅವರನ್ನು ಎದುರಿಸುವರು. ಸೆಮಿಫೈನಲ್‌ನಲ್ಲಿ ಕಿರ್ಗಿಯೊಸ್ ವಾಕ್‌ಓವರ್ ಪಡೆದರು. ಸ್ಪೇನ್‌ನ ರಫೆಲ್ ನಡಾಲ್ ಗಾಯದ ಕಾರಣ ಆಡದಿರಲು ನಿರ್ಧರಿಸಿದ್ದರು.

ನೋರಿ ಎದುರು ಮೊದಲ ಸೆಟ್ ಸೋತರೂ, ಬಳಿಕ ಲಯ ಕಂಡುಕೊಂಡ ಜೊಕೊವಿಚ್ ಶಿಸ್ತಿನ ಆಟವಾಡಿ ಇಲ್ಲಿ ಎಂಟನೇ ಬಾರಿ ಫೈನಲ್ ಪ್ರವೇಶಿಸಿದರು. ಆರು ಬಾರಿ ವಿಂಬಲ್ಡನ್ ಟೂರ್ನಿ ಗೆದ್ದಿರುವ ಅವರು ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಒಟ್ಟಾರೆಯಾಗಿ 32 ಸಲ ಫೈನಲ್ ಪ್ರವೇಶಿಸಿದ್ದಾರೆ.

**ಜಬೇರ್– ರಿಬಾಕಿನ ಸೆಣಸು ಇಂದು:** ಇದೇ ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯ ಫೈನಲ್ ಪ್ರವೇಶಿಸಿರುವ ಆನ್ಸ್ ಜಬೇರ್ ಮತ್ತು ಎಲೆನಾ ರಿಬಾಕಿನ ಮಹಿಳೆಯರ ಸಿಂಗಲ್ಸ್ ವಿಭಾಗದ ಕಿರೀಟಕ್ಕಾಗಿ ಶನಿವಾರ ಪೈಪೋಟಿ ನಡೆಸುವರು.

ಟ್ಯುನಿಷಿಯದ ಜಬೇರ್, ಗ್ರ್ಯಾನ್ ಸ್ಲಾಮ್ ಟೂರ್ನಿಯ ಫೈನಲ್ ಪ್ರವೇಶಿಸಿದ ಆಫ್ರಿಕಾದ ಮತ್ತು ಅರಬ್ ದೇಶದ ಮೊದಲ ಮಹಿಳೆ ಎಂಬ ಗೌರವ ತಮ್ಮದಾಗಿಸಿಕೊಂಡಿದ್ದಾರೆ. ಇನ್ನೂ ಒಂದು ಹೆಜ್ಜೆ ಮುಂದಿಟ್ಟು, ಗ್ರ್ಯಾನ್‌ಸ್ಲಾಮ್ ಟ್ರೋಫಿ ಜಯಿಸಿದ ಆಫ್ರಿಕಾದ ಮೊದಲ ಮಹಿಳೆ ಎನಿಸಿಕೊಳ್ಳುವ ಕನಸು ಅವರದ್ದು.


ನೊವಾಕ್ ಜೊಕೊವಿಚ್ ಗೆಲುವಿನ ಸಂಭ್ರಮ –ಎಎಫ್‌ಪಿ ಚಿತ್ರ

ರಿಬಾಕಿನ ಅವರು ಗ್ರ್ಯಾನ್‌ಸ್ಲಾಮ್ ಫೈನಲ್ ಪ್ರವೇಶಿಸಿದ ಕಜಕಸ್ತಾನದ ಮೊದಲ ಆಟಗಾರ್ತಿ ಎನಿಸಿಕೊಂಡಿದ್ದಾರೆ. ರಷ್ಯಾದಲ್ಲಿ ಹುಟ್ಟಿ ಬೆಳೆದ ರಿಬಾಕಿನ 2018ರ ವರೆಗೂ ಆ ದೇಶವನ್ನು ಪ್ರತಿನಿಧಿಸುತ್ತಿದ್ದರು. ಕಳೆದ ನಾಲ್ಕು ವರ್ಷಗಳಿಂದ ಕಜಕಸ್ತಾನ ಪರ ಆಡುತ್ತಿದ್ದಾರೆ.

ಉಕ್ರೇನ್ ಮೇಲಿನ ಯುದ್ಧದ ಕಾರಣ ಈ ಬಾರಿ ರಷ್ಯಾದ ಸ್ಪರ್ಧಿಗಳಿಗೆ ವಿಂಬಲ್ಡನ್‌ನಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಿಲ್ಲ. ಆದರೆ ರಷ್ಯಾ ಮೂಲದ ರಿಬಾಕಿನ ಫೈನಲ್ ಪ್ರವೇಶಿಸಿರುವುದು ಟೂರ್ನಿಯ ಸಂಘಟಕರನ್ನು 'ಇಕ್ಕಟ್ಟಿ'ಗೆ ಸಿಲುಕಿಸಿದೆ.

'ಎಲೆನಾ ಅವರು ವಿಂಬಲ್ಡನ್ ಫೈನಲ್ ಪ್ರವೇಶಿಸಿರುವುದು ಹೆಮ್ಮೆಯ ಸಂಗತಿ. ಆಕೆ ನಮ್ಮಲ್ಲಿ ಆಡಿ ಬೆಳೆದವಳು' ಎಂದು ರಷ್ಯನ್ ಟೆನಿಸ್ ಫೆಡರೇಷನ್‌ನ ಅಧ್ಯಕ್ಷ ಶಾಮಿಲ್ ತಪಿಸ್ಚೇವ್ ಹೇಳಿದ್ದಾರೆ.

**ಮಹಿಳೆಯರ ಫೈನಲ್:** ಸಂಜೆ 6.30
**ನೇರ ಪ್ರಸಾರ:** ಸ್ಟಾರ್ ಸ್ಪೋರ್ಟ್ಸ್

### ನೀಲ್– ಕ್ರಾಚಿಕ್‌ಗೆ ಮಿಶ್ರ ಡಬಲ್ಸ್ ಪ್ರಶಸ್ತಿ

ಬ್ರಿಟನ್‌ನ ನೀಲ್ ಸ್ಕಪ್‌ಸ್ಕಿ ಮತ್ತು ಅಮೆರಿಕದ ಡೆಸಿರೆ ಕ್ರಾಚಿಕ್ ಅವರು ಸತತ ಎರಡನೇ ಬಾರಿ ಮಿಶ್ರ ಡಬಲ್ಸ್ ವಿಭಾಗದ ಪ್ರಶಸ್ತಿ ಗೆದ್ದರು.

ಗುರುವಾರ ನಡೆದ ಫೈನಲ್‌ನಲ್ಲಿ ಅವರು 6–4, 6–3 ರಲ್ಲಿ ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಮತ್ತು ಸಮಂತಾ ಸ್ಟಾಸರ್ ಜೋಡಿಯನ್ನು ಮಣಿಸಿದರು.

ಇಲ್ಲಿ ಎರಡನೇ ಶ್ರೇಯಾಂಕ ಪಡೆದಿದ್ದ ನೀಲ್–ಕ್ರಾಚಿಕ್ ಮೊದಲ ಸೆಟ್‌ಅನ್ನು ಪ್ರಯಾಸದಿಂದ ಗೆದ್ದರು. ಎರಡನೇ ಸೆಟ್‌ನಲ್ಲಿ ಶಿಸ್ತಿನ ಆಟವಾಡಿ ಸತತ ನಾಲ್ಕು ಗೇಮ್‌ಗಳನ್ನು ಗೆದ್ದು ಕಿರೀಟ ಮುಡಿಗೇರಿಸಿಕೊಂಡರು. ಕ್ರಾಚಿಕ್ ಅವರ ಬಿರುಸಿನ ಸರ್ವ್ ಮತ್ತು ಸ್ಕಪ್‌ಸ್ಕಿ ಅವರು ನೆಟ್ ಬಳಿ ತೋರಿದ ಚಾಣಾಕ್ಷ ಆಟಕ್ಕೆ ಎದುರಾಳಿಗಳ ಬಳಿ ಉತ್ತರ ಇರಲಿಲ್ಲ.

28 ವರ್ಷದ ಕ್ರಾಚಿಕ್ ಅವರಿಗೆ ಗ್ರ್ಯಾನ್‌ಸ್ಲಾಮ್ ಟೂರ್ನಿಯ ಮಿಶ್ರ ಡಬಲ್ಸ್‌ನಲ್ಲಿ ದೊರೆತ ನಾಲ್ಕನೇ ಪ್ರಶಸ್ತಿ ಇದು.

# ಹಾರ್ದಿಕ್ ಆಟಕ್ಕೆ ಒಲಿದ ಜಯ

### ಕ್ರಿಕೆಟ್: ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿದ ಭಾರತ

**ಸೌತಾಂಪ್ಟನ್ (ಪಿಟಿಐ):** ಹಾರ್ದಿಕ್ ಪಾಂಡ್ಯ ಆಲ್‌ರೌಂಡ್ ಆಟದ ಬಲದಿಂದ ಭಾರತ ತಂಡವು ಆತಿಥೇಯ ಇಂಗ್ಲೆಂಡ್ ವಿರುದ್ಧ ನಡೆದ ಮೊದಲ ಟಿ20 ಪಂದ್ಯದಲ್ಲಿ ಜಯ ಸಾಧಿಸಿತು. ಇದರಿಂದಾಗಿ ರೋಹಿತ್ ಶರ್ಮಾ ನಾಯಕನಾಗಿ ಸತತ 13ನೇ ಪಂದ್ಯ ಗೆದ್ದ ದಾಖಲೆ ಬರೆದರು.

ದ ರೋಸ್ ಓವಲ್ ಕ್ರೀಡಾಂಗಣದಲ್ಲಿ ಗುರುವಾರ ತಡರಾತ್ರಿ ಮುಗಿದ ಪಂದ್ಯದಲ್ಲಿ ಭಾರತ ತಂಡವು 50 ರನ್‌ಗಳಿಂದ ಜಯಿಸಿತು.

ಟಾಸ್ ಗೆದ್ದ ಭಾರತ ತಂಡವು ಹಾರ್ದಿಕ್ (51; 33ಎ, 4X6, 6X1) ಭರ್ಜರಿ ಅರ್ಧಶತಕದ ನೆರವಿನಿಂದ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 198 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಇಂಗ್ಲೆಂಡ್, 19.3 ಓವರ್‌ಗಳಲ್ಲಿ 148 ರನ್‌ಗಳಿಗೆ ಆಲೌಟ್ ಆಗಲು ಪಾಂಡ್ಯ (4–0–33–4)ಬೌಲಿಂಗ್ ಕಾರಣವಾಯಿತು.

ಕಳೆದ ಐಪಿಎಲ್‌ನಲ್ಲಿ ಮಿಂಚಿದ್ದ ಜೋಸ್ ಬಟ್ಲರ್ ನಾಯಕತ್ವದ ಇಂಗ್ಲೆಂಡ್ ತಂಡಕ್ಕೆ ಇನಿಂಗ್ಸ್ ಆರಂಭದಲ್ಲಿಯೇ ಭುವನೇಶ್ವರ್ ಕುಮಾರ್ ಪೆಟ್ಟುಕೊಟ್ಟರು. ಮೊದಲ ಓವರ್‌ನ ಐದನೇ ಎಸೆತದಲ್ಲಿ ಭುವನೇಶ್ವರ್ ಸ್ವಿಂಗ್ ಅಂದಾಜಿಸುವಲ್ಲಿ ಎಡವಿದ ಬಟ್ಲರ್ ಸೊನ್ನೆ ಸುತ್ತಿದರು.

ಕ್ರೀಸ್‌ಗೆ ಬಂದ ಡೇವಿಡ್ ಮಲಾನ್ (21; 14ಎಸೆತ) ತಮ್ಮ ನೈಜ ಆಕ್ರಮಣಶೈಲಿಯಲ್ಲಿ ಬ್ಯಾಟ್ ಬೀಸಿದರು. ಇನ್ನೊಂದೆಡೆ ಲಯ ಕಂಡುಕೊಳ್ಳಲು ಜೇಸನ್ ರಾಯ್ (4; 16ಎಸೆತ) ಪರದಾಡಿದರು. ಇದರ ಲಾಭ ಪಡೆದ ಪಾಂಡ್ಯ ಇನಿಂಗ್ಸ್ ಐದನೇ ಓವರ್‌ನಲ್ಲಿಯೇ ಜೇಸನ್ ಮತ್ತು ಮಲಾನ್ ಇಬ್ಬರಿಗೂ ಡಗ್‌ಔಟ್ ದಾರಿ ತೋರಿಸಿದರು.

ಅವರು ಲಿಯಾಮ್ ಲಿವಿಂಗ್‌ಸ್ಟೋನ್‌ಗೂ ಖಾತೆ ತೆರೆಯುವ ಅವಕಾಶ ನೀಡಲಿಲ್ಲ. ಸ್ಯಾಮ್ ಕರನ್ ವಿಕೆಟ್ ಕೂಡ ಪಾಂಡ್ಯ ಪಾಲಾಯಿತು. ಮಧ್ಯದಲ್ಲಿ ಹ್ಯಾರಿ ಬ್ರೂಕ್ ಮತ್ತು ಮೋಯಿನ್ ಅಲಿ ಒಂದಿಷ್ಟು ಚೇತೋಹಾರಿ ಆಟವಾಡಲು ಯತ್ನಿಸಿದರು. ಅವರಿಬ್ಬರಿಗೂ ಸ್ಪಿನ್ನರ್ ಯಜುವೇಂದ್ರ ಚಾಹಲ್ ತಡೆಯೊಡ್ಡಿದರು.

ಪದಾರ್ಪಣೆ ಪಂದ್ಯದಲ್ಲಿ ಮಿಂಚಿದ ಅರ್ಷದೀಪ್ ಸಿಂಗ್ ಬಾಲಂಗೋಚಿಗಳಾದ ರೀಸ್ ಟಾಪ್ಲಿ ಮತ್ತು ಮ್ಯಾಥ್ಯೂ ಪಾರ್ಕಿನ್ಸನ್ ವಿಕೆಟ್‌ಗಳನ್ನು ತಮ್ಮ ಖಾತೆಗೆ ಸೇರಿಸಿಕೊಂಡರು.

**ಸಂಕ್ಷಿಪ್ತ ಸ್ಕೋರು:** ಭಾರತ: 20 ಓವರ್‌ಗಳಲ್ಲಿ 8ಕ್ಕೆ 198, ಇಂಗ್ಲೆಂಡ್: 19.3 ಓವರ್‌ಗಳಲ್ಲಿ 148 (ಡೇವಿಡ್ ಮಲಾನ್ 21, ಹ್ಯಾರಿ ಬ್ರೂಕ್ 28, ಮೋಯಿನ್ ಅಲಿ 36, ಕ್ರಿಸ್ ಜೋರ್ಡಾನ್ ಔಟಾಗದೆ 26, ಅರ್ಷದೀಪ್ ಸಿಂಗ್ 18ಕ್ಕೆ2, ಹಾರ್ದಿಕ್ ಪಾಂಡ್ಯ 33ಕ್ಕೆ4, ಯಜುವೇಂದ್ರ ಚಾಹಲ್ 32ಕ್ಕೆ2) ಫಲಿತಾಂಶ: ಭಾರತ ತಂಡಕ್ಕೆ 50 ರನ್‌ಗಳ ಜಯ. ಸರಣಿಯಲ್ಲಿ 1–0 ಮುನ್ನಡೆ.


ವಿಕೆಟ್ ಗಳಿಸಿದ ಹಾರ್ದಿಕ್ ಪಾಂಡ್ಯ ಅವರನ್ನು ಅಭಿನಂದಿಸಿದ ಸಹ ಆಟಗಾರರು –ಎಎಫ್‌ಪಿ ಚಿತ್ರ

### ಟಿ20 ಕಣಕ್ಕೆ ಮರಳಿದ ವಿರಾಟ್


ವಿರಾಟ್ ಕೊಹ್ಲಿ

**ಬರ್ಮಿಂಗ್‌ಹ್ಯಾಮ್ (ಪಿಟಿಐ):** ಐದು ತಿಂಗಳುಗಳಿಂದ ಅಂತರರಾಷ್ಟ್ರೀಯ ಟಿ20 ಪಂದ್ಯಗಳಿಂದ ದೂರವೇ ಉಳಿದಿರುವ ವಿರಾಟ್ ಕೊಹ್ಲಿ ಶನಿವಾರ ಎಜ್‌ಬಾಸ್ಟನ್ ಅಂಗಳದಲ್ಲಿ ಇಂಗ್ಲೆಂಡ್ ಎದುರಿನ ಪಂದ್ಯದಲ್ಲಿ ಕಣಕ್ಕಿಳಿಯಲಿದ್ದಾರೆ.

ಗುರುವಾರ ನಡೆದ ಸರಣಿಯ ಮೊದಲ ಪಂದ್ಯದಲ್ಲಿ ಅವರು ಆಡಿರಲಿಲ್ಲ. ಕಳೆದ ಐದು ತಿಂಗಳುಗಳ ಅವಧಿಯಲ್ಲಿ ಐಪಿಎಲ್ ಬಿಟ್ಟರೆ ಬೇರೆ ಯಾವುದೇ ಟಿ20 ಪಂದ್ಯಗಳಲ್ಲಿ ಆಡಿಲ್ಲ. ಫೆಬ್ರುವರಿಯಲ್ಲಿ ಎರಡು ಅಂತರರಾಷ್ಟ್ರೀಯ ಟಿ20 ಪಂದ್ಯಗಳಲ್ಲಿ ಆಡಿದ್ದರು.

ತಂಡದ ವಿಶ್ರಾಂತಿ ನೀತಿಯಿಂದಾಗಿ ಅನುಭವಿ ಆಟಗಾರರು ಹೆಚ್ಚು ರಜೆಗಳನ್ನು ಪಡೆಯುತ್ತಿದ್ದಾರೆ. ಇದರಿಂದಾಗಿ ಯುವ ಆಟಗಾರರಿಗೆ ಅವಕಾಶಗಳು ಸಿಗುತ್ತಿವೆ. ಆದರೆ ಈಗ ವಿರಾಟ್ ಮರಳಿದರೆ ದೀಪಕ್ ಹೂಡಾ ವಿಶ್ರಾಂತಿ ಪಡೆಯಬೇಕಾಗಬಹುದು. ಹೂಡಾ ಉತ್ತಮ ಲಯದಲ್ಲಿದ್ದಾರೆ. ಆದ್ದರಿಂದ ಅವರನ್ನು ಉಳಿಸಿಕೊಂಡರೆ, ಕೊಹ್ಲಿ ಮತ್ತು ಇಶಾನ್ ಕಿಶನ್ ಇನಿಂಗ್ಸ್ ಆರಂಭಿಸುವ ಸಾಧ್ಯತೆ ಇದೆ. ಆಗ ಋತುರಾಜ್ ವಿಶ್ರಾಂತಿ ಪಡೆಯಬಹುದು.

ಮೊದಲ ಪಂದ್ಯದಲ್ಲಿ ಗೆದ್ದಿರುವ ಭಾರತ ತಂಡವು ಈ ಪಂದ್ಯ ಜಯಿಸಿ ಸರಣಿ ಕೈವಶ ಮಾಡಿಕೊಳ್ಳುವ ಹುಮ್ಮಸ್ಸಿನಲ್ಲಿದೆ.

**ಪಂದ್ಯ ಆರಂಭ:** ರಾತ್ರಿ 7. **ನೇರಪ್ರಸಾರ:** ಸೋನಿ ನೆಟ್‌ವರ್ಕ್

### ಕುದುರೆ ರೇಸ್: ಮಹಾರಾಜಾಸ್ ಗೋಲ್ಡ್ ಕಪ್ ನಾಳೆ

# ಗತವೈಭವ ಮರಳಿ ತರುವ ಪ್ರಯತ್ನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಒಂದೂವರೆ ಶತಮಾನಕ್ಕೂ ಹೆಚ್ಚಿನ ಇತಿಹಾಸ ಹೊಂದಿರುವ 'ಮಹಾರಾಜಾಸ್ ಗೋಲ್ಡ್ ಕಪ್' (ಗ್ರೇಡ್–2) ಭಾನುವಾರ ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ನಡೆಯಲಿದ್ದು, ರೇಸ್ ಪ್ರಿಯರ ಕುತೂಹಲ ಗರಿಗೆದರಿದೆ.

ಬೆಂಗಳೂರು ಟರ್ಫ್ ಕ್ಲಬ್ (ಬಿಟಿಸಿ) ಆಯೋಜಿಸಿರುವ ಈ ರೇಸ್‌ಗೆ ಜವಾರೆ ಎಸ್.ಪೂನಾವಾಲಾ ಅವರು ಸಹಪ್ರಾಯೋಜಕತ್ವ ವಹಿಸಿದ್ದಾರೆ.

2,200 ಮೀ. ದೂರದ ಈ ಗ್ರೇಡ್–2 ರೇಸ್‌ಅನ್ನು4 ವರ್ಷಕ್ಕಿಂತ ಮೇಲಿನ ಕುದುರೆಗಳಿಗೆ ಆಯೋಜಿಸಲಾಗಿದೆ. ಈ ಹಿಂದೆ ವಿವಿಧ ರೇಸ್‌ಗಳಲ್ಲಿ ಗೆದ್ದಿರುವ ಮತ್ತು ಗಮನಾರ್ಹ ಪ್ರದರ್ಶನ ನೀಡಿರುವ ಎಂಟು ಕುದುರೆಗಳು ಪಾಲ್ಗೊಳ್ಳುತ್ತಿವೆ.

ಥಿಯಾನ್, ಝುಕರೆಲಿ, ಮೈ ಒಪೀನಿಯನ್, ಫಾರೆಸ್ಟ್ ಫ್ಲೇಮ್, ಎ ಸ್ಟಾರ್ ಈಸ್ ಬಾರ್ನ್, ಫೈತ್ ಆಫ್ ಸಕ್ಸಸ್, ಜೈಂಟ್ ಸ್ಟಾರ್ ಮತ್ತು ಟ್ರೂಲಿ ಎಪಿಕ್ ಕುದುರೆಗಳು ಕಣಕ್ಕಿಳಿಯಲಿದ್ದು, ತುರುಸಿನ ಪೈಪೋಟಿಯನ್ನು ನಿರೀಕ್ಷಿಸಲಾಗಿದೆ.

**ಅತ್ಯಂತ ಹಳೆಯ ರೇಸ್:** 'ಮೈಸೂರು ರಾಜವಂಶಸ್ಥರು ಆರಂಭಿಸಿರುವ ಮಹಾರಾಜಾಸ್ ಕಪ್ ತನ್ನದೇ ಆದ ಇತಿಹಾಸವನ್ನು ಹೊಂದಿದೆ. ಭಾರತದಲ್ಲಿ ಆಯೋಜಿಸಲಾಗುವ ಅತ್ಯಂತ ಹಳೆಯ ರೇಸ್ ಇದಾಗಿದೆ. ಬಿಟಿಸಿಯು ಈ ರೇಸ್‌ನ ಗತವೈಭವವನ್ನು ಮರಳಿ ತರುವ ಕೆಲಸ ಮಾಡುತ್ತಿದೆ' ಎಂದು ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಬಿಟಿಸಿ ಅಧ್ಯಕ್ಷ ಕೆ.ಉದಯ್ ಈಶ್ವರನ್ ತಿಳಿಸಿದರು.

'ಮೈಸೂರು ಮಹಾರಾಜರು 1868 ರಲ್ಲಿ ಅಗರಂ ಮೈದಾನದಲ್ಲಿ ಮೊದಲ ಬಾರಿಗೆ ಈ ರೇಸ್ ಆಯೋಜಿಸಿದ್ದರು ಎಂಬುದು ಇತಿಹಾಸದ ದಾಖಲೆಗಳಿಂದ ತಿಳಿದುಬರುತ್ತದೆ. ಗೆದ್ದ ಕುದುರೆ ₹ 2 ಸಾವಿರ ಸಂಪಾದಿಸಿತ್ತು. ಆಗಿನ ಕಾಲಕ್ಕೆ ಅದು ಬಹಳ ದೊಡ್ಡ ಮೊತ್ತ ಆಗಿತ್ತು' ಎಂದು ಅವರು ಹೇಳಿದರು.

'ರಾಜರ ಆಡಳಿತ ಕೊನೆಗೊಂಡ ಬಳಿಕದ ವರ್ಷಗಳಲ್ಲಿ ಈ ರೇಸ್ ತನ್ನ ವೈಭವ ಕಳೆದುಕೊಂಡಿತು. ಇತ್ತೀಚಿನ ವರ್ಷಗಳಲ್ಲಿ ಬಂದಂತಹ ಡರ್ಬಿ ರೇಸ್‌ಗಳು ಹೆಚ್ಚಿನ ಬಹುಮಾನ ಮೊತ್ತ ನೀಡುತ್ತಿರುವುದರಿಂದ, ಪ್ರಮುಖ ಕುದುರೆಗಳು ಮಹಾರಾಜಾಸ್ ಕಪ್‌ನಲ್ಲಿ ಪಾಲ್ಗೊಳ್ಳುತ್ತಿರಲಿಲ್ಲ. ಆದ್ದರಿಂದ ಈ ಬಾರಿ ಬಹುಮಾನ ಮೊತ್ತವನ್ನು ₹ 50 ಲಕ್ಷಕ್ಕೆ ಹೆಚ್ಚಿಸಿದ್ದೇವೆ. ಜವಾರೆ ಎಸ್. ಪೂನಾವಾಲಾ ಅವರು ಪ್ರಾಯೋಜಕತ್ವ ವಹಿಸಿರುವುದು ಸಂತಸದ ವಿಷಯ' ಎಂದರು.

ಮಹಾರಾಜಾಸ್ ಕಪ್ ಟ್ರೋಫಿಯನ್ನು ಇದೇ ವೇಳೆ ಅನಾವರಣಗೊಳಿಸಲಾಯಿತು. ಬಿಟಿಸಿ ಸ್ಟೀವರ್ಡ್ಸ್‌ಗಳು ಮತ್ತು ಆಡಳಿತ ಮಂಡಳಿ ಸದಸ್ಯರು ಪಾಲ್ಗೊಂಡರು.


ಬಿಟಿಸಿ ಅಧ್ಯಕ್ಷ ಕೆ.ಉದಯ್ ಈಶ್ವರನ್ ಮತ್ತು ಸ್ಟೀವರ್ಡ್ ನವಲ್ ಆರ್. ನಾರಿಯಲ್‌ವಾಲಾ ಅವರು ಟ್ರೋಫಿ ಅನಾವರಣಗೊಳಿಸಿದರು –ಪ್ರಜಾವಾಣಿ ಚಿತ್ರ

### ₹ 50 ಲಕ್ಷ ಬಹುಮಾನ ಮೊತ್ತ

ಈ ಪ್ರಮುಖ ರೇಸ್ ಒಟ್ಟು ₹ 50 ಲಕ್ಷ ಬಹುಮಾನ ಮೊತ್ತ ಒಳಗೊಂಡಿದೆ. ರೇಸ್ ಗೆಲ್ಲುವ ಕುದುರೆಯು ₹ 1 ಲಕ್ಷ ಮೌಲ್ಯದ ಟ್ರೋಫಿ ಹಾಗೂ ₹ 30 ಲಕ್ಷ ಸಂಪಾದಿಸಲಿದೆ. ಇದರಲ್ಲಿ ಮಾಲೀಕನಿಗೆ ₹ 24.75 ಲಕ್ಷ, ಟ್ರೇನರ್‌ಗೆ ₹ 3 ಲಕ್ಷ ಹಾಗೂ ಜಾಕಿಗೆ ₹ 2.25 ಲಕ್ಷ ದೊರೆಯಲಿದೆ. ಎರಡನೇ ಸ್ಥಾನ ಪಡೆಯುವ ಕುದುರೆಗೆ ₹ 10 ಲಕ್ಷ ದೊರೆಯಲಿದೆ.

# ಹಾಕಿ: ಭಾರತಕ್ಕೆ ಸೋಲು

**ಆ್ಯಮ್‌ಸ್ಟೆಲ್‌ವೀನ್ (ಪಿಟಿಐ):** ಹಲವು ಪೆನಾಲ್ಟಿ ಕಾರ್ನರ್ ಅವಕಾಶಗಳನ್ನು ಹಾಳುಮಾಡಿಕೊಂಡ ಭಾರತ ತಂಡ, ಎಫ್‌ಐಎಚ್ ಮಹಿಳಾ ವಿಶ್ವಕಪ್ ಹಾಕಿ ಟೂರ್ನಿಯ ಕೊನೆಯ ಲೀಗ್ ಪಂದ್ಯದಲ್ಲಿ 3–4 ರಲ್ಲಿ ನ್ಯೂಜಿಲೆಂಡ್ ಎದುರು ಸೋತಿತು.

'ಬಿ' ಗುಂಪಿನಲ್ಲಿ ಮೂರನೇ ಸ್ಥಾನ ಪಡೆದಿರುವ ಭಾರತ, ಕ್ವಾರ್ಟರ್ ಫೈನಲ್‌ಗೆ ಅರ್ಹತೆ ಪಡೆಯಲು 'ಸಿ' ಗುಂಪಿನಲ್ಲಿ ಎರಡನೇ ಸ್ಥಾನ ಗಳಿಸಿರುವ ಸ್ಪೇನ್ ತಂಡವನ್ನು ಎದುರಿಸಲಿದೆ. ಈ ಪಂದ್ಯ ಭಾನುವಾರ ನಡೆಯಲಿದೆ. 7 ಪಾಯಿಂಟ್ ಕಲೆಹಾಕಿದ ನ್ಯೂಜಿ ಲೆಂಡ್, 'ಬಿ' ಗುಂಪಿನಲ್ಲಿ ಅಗ್ರಸ್ಥಾನ ಪಡೆದು ನೇರವಾಗಿ ಎಂಟರಘಟ್ಟ ಪ್ರವೇಶಿಸಿತು. ಇಂಗ್ಲೆಂಡ್ (4 ಪಾಯಿಂಟ್) 2ನೇ ಸ್ಥಾನ ಗಳಿಸಿತು. ಭಾರತ ಮತ್ತು ಚೀನಾ ತಲಾ 2 ಪಾಯಿಂಟ್ ಗಳಿಸಿದವು. ಉತ್ತಮ ಗೋಲು ಸರಾಸರಿಯಲ್ಲಿ ಭಾರತ 3ನೇ ಸ್ಥಾನ ಗಳಿಸಿದರೆ, ಚೀನಾ ಟೂರ್ನಿಯಿಂದ ಹೊರಬಿದ್ದಿತು.

ಗುರುವಾರ ನಡೆದ ಪಂದ್ಯದಲ್ಲಿ ವಂದನಾ ಕಟಾರಿಯಾ (4ನೇ ನಿ.), ಲಾಲ್‌ರೆಮ್ಸಿಯಾಮಿ (44) ಮತ್ತು ಗುರ್ಜಿತ್ ಕೌರ್ (59) ಅವರು ಭಾರತದ ಪರ ಗೋಲು ಗಳಿಸಿದರು. ನ್ಯೂಜಿಲೆಂಡ್ ತಂಡಕ್ಕೆ ಒಲಿವಿಯಾ ಮೇರಿ (12 ಮತ್ತು 54) ಎರಡು ಗೋಲುಗಳನ್ನು ತಂದಿತ್ತರೆ, ಟೆಸಾ ಜಾಪ್ (29) ಹಾಗೂ ಫ್ರಾನ್ಸೆಸ್ ಡೇವಿಸ್ (32) ತಲಾ ಒಂದು ಗೋಲು ಗಳಿಸಿದರು.

## ಪರಿಸ್ಥಿತಿ ಅನಿವಾರ್ಯತೆಯಿಂದಾಗಿ 7 ನಾಯಕರ ನೇಮಕ: ಗಂಗೂಲಿ

**ನವದೆಹಲಿ (ಪಿಟಿಐ):** ಭಾರತ ಕ್ರಿಕೆಟ್ ತಂಡಕ್ಕೆ ಏಳು ಸರಣಿಗಳಲ್ಲಿ ಏಳು ನಾಯಕರನ್ನು ನೇಮಕ ಮಾಡಿರುವುದು ಸೂಕ್ತವಲ್ಲ ನಿಜ. ಆದರೆ ಅನಿವಾರ್ಯ ಪರಿಸ್ಥಿತಿಯಲ್ಲಿ ಈ ರೀತಿ ಮಾಡಲೇಬೇಕಾಯಿತು ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಅಧ್ಯಕ್ಷ ಸೌರವ್ ಗಂಗೂಲಿ ಹೇಳಿದರು.

ಶುಕ್ರವಾರ 50ನೇ ವಸಂತಕ್ಕೆ ಕಾಲಿರಿಸಿದ ಭಾರತ ತಂಡದ ಮಾಜಿ ನಾಯಕ ಗಂಗೂಲಿ ಸುದ್ದಿಸಂಸ್ಥೆಗೆ ವಿಶೇಷ ಸಂದರ್ಶನ ನೀಡಿದ್ದಾರೆ.

'ಅತ್ಯಂತ ಕಡಿಮೆ ಅವಧಿಯಲ್ಲಿ ಆರೇಳು ನಾಯಕರನ್ನು ತಂಡವು ಕಂಡಿದೆ. ಇದಕ್ಕೆ ಕಾರಣಗಳಿವೆ. ದಕ್ಷಿಣ ಆಫ್ರಿಕಾ ಎದುರಿನ ಸರಣಿಯಲ್ಲಿ ಭಾರತಕ್ಕೆ ರೋಹಿತ್ ಶರ್ಮಾ ನಾಯಕರಾಗಬೇಕಿತ್ತು. ಆದರೆ, ಗಾಯಗೊಂಡಿದ್ದರಿಂದ ಅವರು ಹಿಂದೆ ಸರಿದರು. ಅವರ ಬದಲಿಗೆ ಹೊಣೆ ನಿಭಾಯಿಸಬೇಕಿದ್ದ ಕೆ.ಎಲ್. ರಾಹುಲ್ ಕೂಡ ಗಾಯಗೊಂಡರು. ಈಚೆಗೆ ಇಂಗ್ಲೆಂಡ್‌ನಲ್ಲಿ ಟೆಸ್ಟ್ ಪಂದ್ಯದಲ್ಲಿ ರೋಹಿತ್ ನಾಯಕತ್ವ ವಹಿಸಲು ಸಿದ್ಧರಾಗಿದ್ದರು. ಆದರೆ, ಕೋವಿಡ್ ಖಚಿತವಾಗಿದ್ದರಿಂದ ರೋಹಿತ್ ಪ್ರತ್ಯೇಕವಾಸಕ್ಕೆ ತೆರಳಿದರು. ಬೂಮ್ರಾರನ್ನು ನಾಯಕರನ್ನಾಗಿ ಮಾಡಲಾಯಿತು' ಎಂದರು.


ಸೌರವ್ ಗಂಗೂಲಿ

### ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್: ಸಿಂಧುಗೆ ಸೋಲು

# ಸೆಮಿಫೈನಲ್‌ಗೆ ಪ್ರಣಯ್

**ಕ್ವಾಲಾಲಂಪುರ (ಪಿಟಿಐ):** ಜಿದ್ದಾಜಿದ್ದಿನ ಪೈಪೋಟಿಯಲ್ಲಿ ಗೆದ್ದ ಎಚ್.ಎಸ್. ಪ್ರಣಯ್ ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ನಾಲ್ಕರ ಘಟ್ಟ ತಲುಪಿದ್ದಾರೆ. ಆದರೆ ಪಿ.ವಿ. ಸಿಂಧು ಅಭಿಯಾನ ಎಂಟರಘಟ್ಟದಲ್ಲಿ ಅಂತ್ಯವಾಯಿತು.

ಶುಕ್ರವಾರ ಇಲ್ಲಿ ನಡೆದ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಪ್ರಣಯ್ 25-23, 22-20ರಿಂದ ಜಪಾನ್‌ನ ಕಂತಾ ಸುನೆಯಮಾ ಅವರನ್ನು ಮಣಿಸಿದರು.

ಬರೋಬ್ಬರಿ 60 ನಿಮಿಷಗಳ ಕಾಲ ನಡೆದ ಪಂದ್ಯದ ಮೊದಲ ಗೇಮ್‌ನಲ್ಲಿ ಇಬ್ಬರೂ ಆಟಗಾರರು ಒಂದು ಹಂತದವರೆಗೆ ಸಮಬಲದ ಪೈಪೋಟಿ ನಡೆಸಿದರು. ಆದರೆ ದೀರ್ಘರ‍್ಯಾಲಿಗಳಲ್ಲಿ ಪ್ರಣಯ್ ಪರಿಣಾಮಕಾರಿ ಎನಿಸಿದರು.

2ನೇ ಗೇಮ್ ಕೂಡ ತೀವ್ರ ಪೈಪೋಟಿಯಿಂದ ಕೂಡಿತ್ತು. ಈ ಗೇಮ್‌ನ ವೇಳೆ ಪಾದದ ನೋವಿನಿಂದಾಗಿ ಪ್ರಣಯ್ ವೈದ್ಯಕೀಯ ವಿರಾಮ ಪಡೆದರು. ಬಳಿಕ ಛಲದಿಂದ ಗೆಲುವು ಒಲಿಸಿಕೊಂಡರು.

ನಾಲ್ಕರ ಘಟ್ಟದಲ್ಲಿ ಪ್ರಣಯ್, ಹಾಂಗ್‌ಕಾಂಗ್‌ನ ಎನ್‌ಜಿ ಕಾ ಲಾಂಗ್ ಆ್ಯಂಗಸ್ ಎದುರು ಆಡುವರು.

**ಸಿಂಧುಗೆ ನಿರಾಸೆ:** ಮಹಿಳಾ ಸಿಂಗಲ್ಸ್ ವಿಭಾಗದ ಕ್ವಾರ್ಟರ್‌ಫೈನಲ್‌ನಲ್ಲಿ ಪಿ.ವಿ.ಸಿಂಧು ಅವರಿಗೆ ಚೀನಾ ತೈಪೆಯ ತೈ ಜು ಯಿಂಗ್ ಎದುರು ಗೆಲುವು ಒಲಿಯಲಿಲ್ಲ.

ಸಿಂಧು, 13-21, 21-12, 12-21ರಿಂದ ನಿರಾಸೆ ಅನುಭವಿಸಿದರು.



ಎಚ್ ಎಸ್ ಪ್ರಣಯ್ ಆಟದ ವೈಖರಿ– ಎಎಫ್‌ಪಿ ಚಿತ್ರ

## 'ಒಲಿಂಪಿಕ್ ಆಂದೋಲನದ ಮಿತ್ರ ಅಬೆ'

**ಟೋಕಿಯೊ (ಪಿಟಿಐ):** ಗುಂಡಿನ ದಾಳಿಗೆ ಒಳಗಾಗಿ ಶುಕ್ರವಾರ ಹತ್ಯೆಯಾದ ಜಪಾನ್ ಮಾಜಿ ಪ್ರಧಾನಿ ಶಿಂಜೊ ಅಬೆ ಅವರಿಗೆ ವಿಶ್ವ ಕ್ರೀಡಾವಲಯ ಗೌರವ ಸಲ್ಲಿಸಿದೆ. 2021ರ ಒಲಿಂಪಿಕ್ಸ್ ಆಯೋಜನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಅವರನ್ನು 'ಒಲಿಂಪಿಕ್ ಆಂದೋಲನದ ಆತ್ಮೀಯ ಮಿತ್ರ' ಮತ್ತು 'ದೂರದೃಷ್ಟಿತ್ವ ಹೊಂದಿದ್ದ ವ್ಯಕ್ತಿ' ಎಂದು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ಬಣ್ಣಿಸಿದೆ.

'ಅಬೆ ಬೆಂಬಲವಿಲ್ಲದಿದ್ದರೆ, ಒಲಿಂಪಿಕ್ ಕೂಟವು ಕೋವಿಡ್ ಕಾರಣದಿಂದ ರದ್ದಾಗುತ್ತಿತ್ತು' ಎಂದು ಐಒಸಿ ಅಧ್ಯಕ್ಷ ಥಾಮಸ್ ಬಾಕ್ ಹೇಳಿದ್ದಾರೆ.

ಜಪಾನ್ ಒಲಿಂಪಿಕ್ ಆತಿಥ್ಯದ ಬಿಡ್ ಗೆಲ್ಲುವಲ್ಲಿ ಅಬೆ ಅವರದ್ದೇ ಪಾತ್ರವಿತ್ತು. ನವೆಂಬರ್ 2020ರಲ್ಲಿ ಐಒಸಿ ಅವರಿಗೆ 'ಒಲಿಂಪಿಕ್ ಆರ್ಡರ್' ಗೌರವ ನೀಡಿತ್ತು. ಈ ಪ್ರತಿಷ್ಠಿತ ಪ್ರಶಸ್ತಿ ಪಡೆದ ಜಪಾನ್‌ನ ಮೊದಲ ಪ್ರಧಾನಿ ಅವರು.

# ಜುಬೈರ್‌ಗೆ ಸುಪ್ರೀಂಕೋರ್ಟ್‌ನಿಂದ 5 ದಿನಗಳ ಮಧ್ಯಂತರ ಜಾಮೀನು

**ನವದೆಹಲಿ (ಪಿಟಿಐ):** ಉತ್ತರ ಪ್ರದೇಶದ ಸೀತಾಪುರದಲ್ಲಿ ದಾಖಲಾಗಿದ್ದ ಪ್ರಕರಣಕ್ಕೆ ಸಂಬಂಧಿಸಿ, 'ಆಲ್ಟ್ ನ್ಯೂಸ್' ಸಹಸಂಸ್ಥಾಪಕ ಮೊಹಮ್ಮದ್ ಜುಬೈರ್ ಅವರಿಗೆ ಸುಪ್ರೀಂಕೋರ್ಟ್ ಶುಕ್ರವಾರ ಐದು ದಿನಗಳ ಮಧ್ಯಂತರ ಜಾಮೀನು ಮಂಜೂರು ಮಾಡಿದೆ.

ಟ್ವೀಟ್ ಮೂಲಕ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿರುವ ಆರೋಪದ ಮೇಲೆ ಜುಬೈರ್ ಅವರನ್ನು ಬಂಧಿಸಲಾಗಿದೆ.

ಪ್ರಕರಣ ಕುರಿತು ಅಲಹಾಬಾದ್ ಹೈಕೋರ್ಟ್‌ನ ಆದೇಶವನ್ನು ಪ್ರಶ್ನಿಸಿ ಜುಬೈರ್ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಇಂದಿರಾ ಬ್ಯಾನರ್ಜಿ ಮತ್ತು ಜೆ.ಕೆ. ಮಾಹೇಶ್ವರಿ ಅವರಿದ್ದ ರಜಾಕಾಲದ ಪೀಠ, ಉತ್ತರ ಪ್ರದೇಶ ಪೊಲೀಸರಿಗೆ ನೋಟಿಸ್ ಜಾರಿಗೊಳಿಸಿತು. ಪ್ರಕರಣವನ್ನು ಮುಂದಿನ ವಿಚಾರಣೆಗಾಗಿ ಸಾಮಾನ್ಯ ಪೀಠಕ್ಕೆ ವರ್ಗಾಯಿಸಿತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಟ್ವಿಟರ್‌ನಲ್ಲಿ ಏನನ್ನೂ ಪೋಸ್ಟ್ ಮಾಡಬಾರದು ಹಾಗೂ ದೆಹಲಿ ನ್ಯಾಯಾಲಯ ಕಾರ್ಯವ್ಯಾಪ್ತಿಗೆ ಒಳಪಡುವ ಪ್ರದೇಶವನ್ನು ತೊರೆಯಬಾರದು ಎಂದು ಜುಬೈರ್ ಗೆ ನ್ಯಾಯಪೀಠ ಸೂಚಿಸಿದೆ.

ಸದ್ಯ ಜುಬೈರ್‌ಗೆ ಒಂದು ಪ್ರಕರಣದಲ್ಲಿ ಜಾಮೀನು ಸಿಕ್ಕಿದ್ದರೂ, ದೆಹಲಿಯಲ್ಲಿ ಅವರು ಮತ್ತೊಂದು ಪ್ರಕರಣದ ವಿಚಾರಣೆ ಎದುರಿಸುತ್ತಿದ್ದಾರೆ.

ಮಧ್ಯಂತರ ಜಾಮೀನು ಆದೇಶವು ಸೀತಾಪುರದಲ್ಲಿ ದಾಖಲಾಗಿರುವ ಎಫ್‌ಐಆರ್‌ಗೆ ಮಾತ್ರ ಅನ್ವಯಿಸುತ್ತದೆ. ದೆಹಲಿಯಲ್ಲಿ ಅವರ ವಿರುದ್ಧ ದಾಖಲಾಗಿರುವ ಪ್ರಕರಣಕ್ಕೂ ಇದಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಕೋರ್ಟ್ ಕೂಡ ಸ್ಪಷ್ಟಪಡಿಸಿದೆ.

ಸೀತಾಪುರದಲ್ಲಿ ದಾಖಲಾಗಿರುವ ಪ್ರಕರಣ ಕುರಿತು ನಡೆಯುತ್ತಿರುವ ತನಿಖೆಗೆ ತಡೆಯಾಜ್ಞೆ ನೀಡಿಲ್ಲ. ಅಗತ್ಯ ಕಂಡುಬಂದಲ್ಲಿ, ಜುಬೈರ್ ಅವರಿಗೆ ಸೇರಿದ ಲ್ಯಾಪ್‌ಟಾಪ್, ಎಲೆಕ್ಟ್ರಾನಿಕ್ಸ್ ಸಾಧನಗಳನ್ನು ಪೊಲೀಸರು ಜಪ್ತಿ ಮಾಡಬಹುದು ಎಂದೂ ಪೀಠ ಹೇಳಿದೆ.

'ಹಿಂದೂ ಶೇರ್ ಸೇನಾ' ಸಂಘಟನೆಯ ಸೀತಾಪುರ ಜಿಲ್ಲಾ ಘಟಕದ ಅಧ್ಯಕ್ಷ ಭಗವಾನ್ ಶರಣ್ ಎಂಬುವವರು ಜೂನ್ 1ರಂದು ನೀಡಿದ ದೂರಿನ ಮೇರೆಗೆ ಉತ್ತರ ಪ್ರದೇಶದಲ್ಲಿ ಜುಬೈರ್ ವಿರುದ್ಧ ಐಪಿಸಿ ಸೆಕ್ಷನ್ 295 ಎ ಮತ್ತು ಐಟಿ ಕಾಯ್ದೆಯ ಸೆಕ್ಷನ್ 67 ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು.

### ಟಿ.ವಿ. ನಿರೂಪಕನಿಗೆ ಬಂಧನದಿಂದ ರಕ್ಷಣೆ

**ನವದೆಹಲಿ (ಪಿಟಿಐ):** ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕುರಿತ ತಿರುಚಿದ ವಿಡಿಯೊ ಪ್ರಸಾರ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಅನೇಕ ಎಫ್‌ಐಆರ್ ದಾಖಲಾಗಿರುವುದರಿಂದ ಝೀ ಸುದ್ದಿ ವಾಹಿನಿ ನಿರೂಪಕ ರೋಹಿತ್ ರಂಜನ್ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ರಾಜ್ಯದ ಅಧಿಕಾರಿಗಳಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ತಡೆ ನೀಡಿದೆ.

ನ್ಯಾಯಮೂರ್ತಿಗಳಾದ ಇಂದಿರಾ ಬ್ಯಾನರ್ಜಿ, ಜೆ.ಕೆ. ಮಹೇಶ್ವರಿ ಅವರನ್ನೊಳಗೊಂಡ ರಜೆಕಾಲದ ಪೀಠವು, ಎಫ್‌ಐಆರ್ ರದ್ದುಗೊಳಿಸುವಂತೆ ಕೋರಿ ರಂಜನ್ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಅಟರ್ನಿ ಜನರಲ್ ಕಚೇರಿ ಮೂಲಕ ಕೇಂದ್ರಕ್ಕೆ ನೋಟಿಸ್ ಜಾರಿ ಮಾಡಿದೆ.

ಸಂಬಂಧಪಟ್ಟ ರಾಜ್ಯಗಳ ಅಧಿಕಾರಿಗಳು ಅರ್ಜಿದಾರರನ್ನು ಬಂಧಿಸುವಂತಹ ಕ್ರಮ ತೆಗೆದುಕೊಳ್ಳಬಾರದು ಎಂದು ಹೇಳಿದೆ.

ರಂಜನ್ ಪರವಾಗಿ ಹಾಜರಾದ ಹಿರಿಯ ವಕೀಲ ಸಿದ್ಧಾರ್ಥ ಲೂತ್ರಾ, 'ಜಯಪುರ, ರಾಯಪುರ, ನೊಯ್ಡಾದಲ್ಲಿ ಮೂರು ಎಫ್‌ಐಆರ್ ದಾಖಲಾಗಿದೆ. ಕಾರ್ಯಕ್ರಮದಲ್ಲಿ ಉದ್ದೇಶಪೂರ್ವಕವಾಗಿ ತಪ್ಪಾಗಿದೆ. ನಂತರ ಅರ್ಜಿದಾರರು ಕ್ಷಮೆ ಯಾಚಿಸಿದ್ದರು' ಎಂದು ಪೀಠದ ಗಮನಕ್ಕೆ ತಂದರು.

### ಮೊದಲ ಬಾರಿಗೆ ನಡೆದಿದ್ದ ದೊಡ್ಡ ನೇಮಕಾತಿಗೆ ತಡೆ • ಸಿಬಿಐ ತನಿಖೆಗೆ ಆದೇಶ

# ಜಮ್ಮು–ಕಾಶ್ಮೀರದಲ್ಲೂ ಪಿಎಸ್‌ಐ ನೇಮಕ ಅಕ್ರಮ

ಪ್ರಜಾವಾಣಿ ವಾರ್ತೆ

**ಶ್ರೀನಗರ:** ಜಮ್ಮು ಮತ್ತು ಕಾಶ್ಮೀರದಲ್ಲಿ ಇದೇ ಮೊದಲ ಬಾರಿಗೆ ಲೆಫ್ಟಿನೆಂಟ್ ಗವರ್ನರ್ ನೇತೃತ್ವದ ಸರ್ಕಾರದ ವತಿಯಿಂದ ನಡೆದ ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವ ದೂರುಗಳು ಕೇಳಿಬಂದಿವೆ. ಈ ಹಿನ್ನೆಲೆ ನೇಮಕಾತಿಗೆ ತಡೆ ನೀಡಲಾಗಿದೆ ಹಾಗೂ ಸಿಬಿಐ ತನಿಖೆಗೆ ಆದೇಶಿಸಲಾಗಿದೆ.

ಲೆ. ಗವರ್ನರ್ ಕಚೇರಿಯ ಅಧಿಕೃತ ಟ್ವಿಟರ್ ಖಾತೆಯಲ್ಲಿ ಪಿಎಸ್‌ಐ ನೇಮಕಾತಿ ಪರೀಕ್ಷೆ ಅಕ್ರಮ ಕುರಿತು ಸಿಬಿಐ ತನಿಖೆಗೆ ಆದೇಶಿಸಿರುವ ಬಗ್ಗೆ ಪ್ರಕಟಿಸಲಾಗಿದೆ. ಹಗರಣದಲ್ಲಿ ಭಾಗಿಯಾದವರ ವಿರುದ್ಧ ಶೀಘ್ರದಲ್ಲೇ ಕಾನೂನು ಕ್ರಮ ಕೈಗೊಳ್ಳಲಾಗುವುದು. ಭವಿಷ್ಯದ ಹಿತದೃಷ್ಟಿಯಲ್ಲಿ ಇದೊಂದು ಪ್ರಮುಖ ಕ್ರಮವಾಗಿದೆ. ನೂತನ ನೇಮಕಾತಿ ಬಗ್ಗೆ ಸರ್ಕಾರವು ಶೀಘ್ರದಲ್ಲೇ ಕ್ರಮ ಕೈಗೊಳ್ಳಲಿದೆ ಎಂದು ಟ್ವೀಟ್‌ನಲ್ಲಿ ತಿಳಿಸಲಾಗಿದೆ.

ಹಿಂದೆ ಪೊಲೀಸ್ ಇಲಾಖೆಯೇ ನೇಮಕಾತಿ ಪ್ರಕ್ರಿಯೆಗಳನ್ನು ನಡೆಸುತ್ತಿತ್ತು. ಆದರೆ ಇದೇ ಮೊದಲ ಬಾರಿಗೆ ಜಮ್ಮು ಮತ್ತು ಕಾಶ್ಮೀರ ಸೇವಾ ನೇಮಕಾತಿ ಇಲಾಖೆಯ (ಜೆಕೆಎಸ್‌ಎಸ್‌ಬಿ) ವತಿಯಿಂದ ಲೆ. ಗವರ್ನರ್ ಮನೋಜ್ ಸಿನ್ಹಾ ನೇತೃತ್ವದ ರಾಜ್ಯ ಸರ್ಕಾರವು ಪರೀಕ್ಷೆಯನ್ನು ನಡೆಸಲು ನಿರ್ಧರಿಸಿತ್ತು. ನೇಮಕಾತಿಯಲ್ಲಿ ಪಾರದರ್ಶಕತೆಗೆ ಒತ್ತುಕೊಟ್ಟು ಸರ್ಕಾರವೇ ಪರೀಕ್ಷೆಯನ್ನು ನಡೆಸುತ್ತಿರುವುದಾಗಿ ಹೇಳಿತ್ತು.

ಮಾರ್ಚ್ 27ರಂದು 1200 ಪಿಎಸ್‌ಐ ಹುದ್ದೆಗಳಿಗೆ ನೇಮಕಾತಿ ಪರೀಕ್ಷೆ ನಡೆದಿತ್ತು. 1 ಲಕ್ಷಕ್ಕೂ ಹೆಚ್ಚು ಮಂದಿ ಅರ್ಜಿ ಸಲ್ಲಿಸಿದ್ದರು. ಸುಮಾರು 97 ಸಾವಿರ ಅರ್ಹ ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು.

ಜೂನ್ 4ಕ್ಕೆ ಫಲಿತಾಂಶ ಪ್ರಕಟಗೊಂಡಿತ್ತು. ಬಳಿಕ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವ ಬಗ್ಗೆ ಸಾಕಷ್ಟು ಮಂದಿ ಗಂಭೀರ ಆರೋಪಗಳನ್ನು ಮಾಡಲಾಗಿದೆ. 24ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಒಡಹುಟ್ಟಿದವರೇ ಆಯ್ಕೆಗೊಂಡಿರುವುದು ಸಾಕಷ್ಟು ಅನುಮಾನಕ್ಕೆ ಕಾರಣವಾಗಿತ್ತು. ಕೆಲವು ಪ್ರಕರಣಗಳಲ್ಲಿ ಒಡಹುಟ್ಟಿದ ಮೂವರು ಉತ್ತೀರ್ಣರಾಗಿರುವುದು ಕಂಡುಬಂದಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ 370ನೇ ವಿಧಿ ರದ್ದು ಪಡಿಸಿದ ಬಳಿಕ ಇದೇ ಮೊದಲ ಬಾರಿಗೆ ನಡೆಸಿದ ಅತಿದೊಡ್ಡ ನೇಮಕಾತಿ ಪರೀಕ್ಷೆ ಇದಾಗಿದೆ.

# ಮಧ್ಯಂತರ ಚುನಾವಣೆಗೆ ಠಾಕ್ರೆ ಆಗ್ರಹ

**ಮುಂಬೈ (ಪಿಟಿಐ):** ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ್ ಶಿಂಧೆ ಪಕ್ಷ ಮತ್ತು ಚಿಹ್ನೆಯ ಮೇಲೆ ಹಕ್ಕು ಸಾಧಿಸಬಹುದು ಎನ್ನುವ ಚರ್ಚೆಗಳು ನಡೆಯುತ್ತಿರುವಾಗಲೇ, ಶಿವಸೇನಾದ ಅಧ್ಯಕ್ಷ ಉದ್ಧವ್ ಠಾಕ್ರೆ 'ಬಿಲ್ಲು ಮತ್ತು ಬಾಣ'ದ ಚಿಹ್ನೆ ಮೂಲ ಪಕ್ಷದ ಜತೆಗೆ ಇರಲಿದೆ ಎಂದು ಶುಕ್ರವಾರ ಪ್ರತಿಪಾದಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಉದ್ಧವ್, 'ರಾಜ್ಯದಲ್ಲಿ ವಿಧಾನ ಸಭೆಗೆ ಮಧ್ಯಂತರ ಚುನಾವಣೆಗೆ ನಡೆಸಬೇಕು. ನನ್ನ ನೇತೃತ್ವದ ಮಹಾ ವಿಕಾಸ್ ಆಘಾಡಿ ಸರ್ಕಾರ ಉರುಳಿಸಿದ್ದ ಬಗ್ಗೆ ಜನರೇ ತೀರ್ಮಾನ ತೆಗೆದುಕೊಳ್ಳಲಿ' ಎಂದು ಸವಾಲು ಹಾಕಿದರು.

ಜುಲೈ 11ರಂದು ಸುಪ್ರೀಂಕೋರ್ಟ್ ನೀಡಲಿರುವ ತೀರ್ಪು ಶಿವಸೇನಾದ ಭವಿಷ್ಯವನ್ನಷ್ಟೇ ಅಲ್ಲ, ದೇಶದ ಪ್ರಜಾಪ್ರಭುತ್ವದ ಭವಿಷ್ಯವನ್ನೂ ನಿರ್ಧರಿಸಲಿದೆ ಎಂದರು.

**ಹೊಸ ಅರ್ಜಿ:** ಮುಖ್ಯಮಂತ್ರಿ ಸ್ಥಾನಕ್ಕೆ ಏಕನಾಥ್ ಶಿಂಧೆ ಅವರ ನೇಮಕವನ್ನು ಪ್ರಶ್ನಿಸಿ ಉದ್ಧವ್ ಠಾಕ್ರೆ ಬಣ ಸಲ್ಲಿಸಿರುವ ಹೊಸ ಅರ್ಜಿಯನ್ನು ಜುಲೈ 11 ರಂದು ವಿಚಾರಣೆ ನಡೆಸುವುದಾಗಿ ಸುಪ್ರೀಂಕೋರ್ಟ್ ಶುಕ್ರವಾರ ಹೇಳಿದೆ.

**ಬೆಂಗಾವಲು ಪಡೆಗೆ ಶಿಷ್ಟಾಚಾರ ಬೇಡ:** 'ಮುಂಬೈ ಸೇರಿದಂತೆ ರಾಜ್ಯದ ಇತರೆಡೆ ತಮ್ಮ ಬೆಂಗಾವಲು ಪಡೆಗೆ ವಿಶೇಷ ಶಿಷ್ಟಾಚಾರ (ಪ್ರೋಟೊಕಾಲ್) ವ್ಯವಸ್ಥೆ ಒದಗಿಸುವ ಅಗತ್ಯವಿಲ್ಲ' ಎಂದು ಮುಖ್ಯಮಂತ್ರಿ ಏಕನಾಥ್ ಶಿಂಧೆ ಅವರು ಪೊಲೀಸರಿಗೆ ಶುಕ್ರವಾರ ಸೂಚನೆ ನೀಡಿದ್ದಾರೆ. ಡಿಜಿಪಿ, ಮುಂಬೈ ಪೊಲೀಸ್ ಆಯುಕ್ತರ ಜತೆ ಚರ್ಚಿಸಿದ ಬಳಿಕ ಶಿಂಧೆ ಈ ಸೂಚನೆ ನೀಡಿದ್ದಾರೆ.

**ಸಂಕ್ಷಿಪ್ತ ಸುದ್ದಿ**

### ಕಾಟ್ಸಾ ಕಾಯ್ದೆಗೆ ತಿದ್ದುಪಡಿ ಮಂಡಿಸಿದ ರೋ ಖನ್ನಾ


ರೋ ಖನ್ನಾ

**ವಾಷಿಂಗ್ಟನ್ (ಪಿಟಿಐ):** ರಷ್ಯಾದಿಂದ ಎಸ್- 400 ಕ್ಷಿಪಣಿ ರಕ್ಷಣಾ ವ್ಯವಸ್ಥೆ ಖರೀದಿ ಸಂಬಂಧ ಭಾರತಕ್ಕೆ ಪ್ರತಿಕೂಲವಾಗಿರುವ ಕಾಟ್ಸಾ ಕಾಯ್ದೆಗೆ ಅಮೆರಿಕದ ಸಂಸತ್‌ನಲ್ಲಿ ಶಾಸನಾತ್ಮಕ ತಿದ್ದುಪಡಿ ಮಸೂದೆಯನ್ನು ಭಾರತ - ಅಮೆರಿಕದ ಕಾಂಗ್ರೆಸ್ಸಿಗ ರೋ ಖನ್ನಾ ಮಂಡಿಸಿದ್ದಾರೆ.

'ಕಾಟ್ಸಾ (ಸಿಎಎಟಿಎಸ್) ಕಾಯ್ದೆಯ ತಿದ್ದುಪಡಿ ಮಸೂದೆ ಅಮೆರಿಕ ಮತ್ತು ಭಾರತದ ರಕ್ಷಣಾ ಸಂಬಂಧವನ್ನು ಬಲಪಡಿಸುತ್ತದೆ ಮತ್ತು ಆಕ್ರಮಣಕಾರರನ್ನು ಹಿಮ್ಮೆಟ್ಟಿಸುತ್ತದೆ. ಈ ತಿದ್ದುಪಡಿಯನ್ನು ದ್ವಿಪಕ್ಷೀಯ ಸಹಕಾರದ ಆಧಾರದ ಮೇಲೆ ನನ್ನ ಸಹೋದ್ಯೋಗಿಗಳು ಅಂಗೀಕರಿಸುವ ವಿಶ್ವಾಸವಿದೆ. ಉಭಯ ರಾಷ್ಟ್ರಗಳ ಬಾಂಧವ್ಯ ವೃದ್ಧಿಸಲು ಇದು ಅತ್ಯಂತ ತುರ್ತು ಕ್ರಮವಾಗಿದೆ' ಎಂದು ಡೆಮಾಕ್ರಟಿಕ್ ಪಕ್ಷದ ಕ್ಯಾಲಿಫೋರ್ನಿಯಾ ಸಂಸದರಾದ ಖನ್ನಾ ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ್ದಾರೆ.

ಎಸ್ -400 ಕ್ಷಿಪಣಿ ರಕ್ಷಣಾ ವ್ಯವಸ್ಥೆಯನ್ನು ರಷ್ಯಾದಿಂದ ಖರೀದಿಸಿದ ಟರ್ಕಿ ಮೇಲೆ ಅಮೆರಿಕ ಈಗಾಗಲೇ ಕಾಟ್ಸಾ ಕಾಯ್ದೆಯ ನಿರ್ಬಂಧಗಳನ್ನು ಹೇರಿದೆ. ಇದೇ ನಿರ್ಬಂಧಗಳನ್ನು ಭಾರತದ ಮೇಲೂ ಹೇರುವ ಅಂದಾಜು ಇದೆ. ಎಸ್ -400 ಕ್ಷಿಪಣಿ ರಕ್ಷಣಾ ವ್ಯವಸ್ಥೆ ಖರೀದಿ ಸಂಬಂಧ ಭಾರತಕ್ಕೆ ಕಾಟ್ಸಾ ಕಾಯ್ದೆಯಡಿ ಸಂಭಾವ್ಯ ನಿರ್ಬಂಧ ಅಥವಾ ವಿನಾಯಿತಿಗಳ ಬಗ್ಗೆ ಅಮೆರಿಕ ಇನ್ನೂ ಯಾವುದೇ ನಿರ್ಧಾರ ಕೈಗೊಂಡಿಲ್ಲ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಏಪ್ರಿಲ್‌ನಲ್ಲಿ ಹೇಳಿದ್ದರು.

### ಶೆಲ್ ದಾಳಿ: ಉಕ್ರೇನ್‌ನಲ್ಲಿ ಪರಿಸ್ಥಿತಿ ಭೀಕರ

**ಕೀವ್/ಮಾಸ್ಕೊ (ಎಪಿ):** ರಷ್ಯಾ ಪಡೆಗಳು ಎರಡು ವಾರಗಳ ಹಿಂದೆ ವಶಪಡಿಸಿಕೊಂಡ ಸೆವೆರೊಡೊನೆಟ್‌ಸ್ಕ್ ನಗರದಲ್ಲಿ ಅಪಾರ್ಟ್‌ಮೆಂಟ್‌ಗಳಲ್ಲಿ ನಾಗರಿಕರ ಶವಗಳು ಕೊಳೆಯುತ್ತಿವೆ. ನೀರು ಪೂರೈಕೆ, ಒಳಚರಂಡಿ ವ್ಯವಸ್ಥೆ ಹಾಗೂ ವಿದ್ಯುತ್ ಸರಬರಾಜು ಸ್ಥಗಿತಗೊಂಡಿದ್ದು, ಪರಿಸ್ಥಿತಿ ಬಿಗಡಾಯಿಸುತ್ತಿದೆ ಎಂದು ಉಕ್ರೇನ್ ಪ್ರಾದೇಶಿಕ ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಕಳೆದ 24 ತಾಸುಗಳಲ್ಲಿ ರಷ್ಯಾ ಪಡೆಗಳ ಶೆಲ್ ದಾಳಿಗೆ ಸೆವೆರೊಡೊನೆಟ್‌ಸ್ಕ್‌ನಲ್ಲಿ ಕನಿಷ್ಠ 12, ಡೊನೆಟ್‌ಸ್ಕ್‌ನ ಎರಡು ನಗರಗಳಲ್ಲಿ 6 ಹಾಗೂ ಹಾರ್ಕಿವ್ ನಗರದಲ್ಲಿ ನಾಲ್ವರು ನಾಗರಿಕರು ಮೃತಪಟ್ಟಿದ್ದಾರೆ. 60 ನಾಗರಿಕರು ಗಾಯಗೊಂಡಿದ್ದಾರೆ ಎಂದು ಉಕ್ರೇನ್ ಅಧಿಕಾರಿಗಳು ತಿಳಿಸಿದ್ದಾರೆ.

# ಹಾಕಿ: ನಯೀಂ ಹ್ಯಾಟ್ರಿಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಯೀಂ ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ ಅಕೌಂಟಂಟ್ ಜನರಲ್ ಆಫೀಸ್ ರಿಕ್ರಿಯೇಷನ್ ಕ್ಲಬ್ (ಎಜಿಒಆರ್‌ಸಿ) ತಂಡವು ಹಾಕಿ ಕರ್ನಾಟಕ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಭರ್ಜರಿ ಜಯ ಗಳಿಸಿತು.

ಶುಕ್ರವಾರ ನಡೆದ ಪಂದ್ಯದಲ್ಲಿ ಎಜಿಒಆರ್‌ಸಿ 7–1ರಿಂದ ಪೋಸ್ಟಲ್ ತಂಡಕ್ಕೆ ಸೋಲುಣಿಸಿತು. ನಯೀಂ 24, 50 ಮತ್ತು 59ನೇ ನಿಮಿಷಗಳಲ್ಲಿ ಕೈಚಳಕ ತೋರಿದರು. ನಿತಿನ್ ತಿಮ್ಮಯ್ಯ (14ನೇ ನಿ.), ಚಿರಂತ್ ಸೋಮಣ್ಣ (18ನೇ ನಿ.), ಎಂ.ಬಿ. ಅಯ್ಯಪ್ಪ (37ನೇ ನಿ.) ಮತ್ತು ಜಯಪ್ರಕಾಶ್ (52ನೇ ನಿ.) ವಿಜೇತ ತಂಡದ ಪರ ಗೋಲು ಗಳಿಸಿದರು. ಪೋಸ್ಟಲ್ ತಂಡದ ಅಜಿತ್ ವಿ.ಎಂ. (11ನೇ ನಿ.) ಗೋಲು ಹೊಡೆದರು.

ಮತ್ತೊಂದು ಪಂದ್ಯದಲ್ಲಿ ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) 3–1ರಿಂದ ಡಿವೈಇಎಸ್ 'ಬಿ' ತಂಡವನ್ನು ಮಣಿಸಿತು.



ಡಿವೈಇಎಸ್ ತಂಡದ ಸುಕಲ್ಯಾನ್ (ಎಡ) ಮತ್ತು ಸಾಯ್ ತಂಡದ ನಕುಲ್ ಮಲಾಡ್ ನಡುವೆ ಚೆಂಡಿಗಾಗಿ ಪೈಪೋಟಿ– ಪ್ರಜಾವಾಣಿ ಚಿತ್ರ/ ಎಸ್‌.ಕೆ.ದಿನೇಶ್

# ಫುಟ್‌ಬಾಲ್: ಲೆಜೆಂಡ್ಸ್‌ಗೆ ಜಯ

ಬೆಂಗಳೂರು: ಅಭಿರಾಮಿ ವಡಿವೇಲ್ ಗಳಿಸಿದ ನಾಲ್ಕು ಗೋಲುಗಳ ನಲದಿಂದ ಲೆಜೆಂಡ್ಸ್ ಡಿ ಸ್ಪೋರ್ಟಿಂಗ್ ಬೆಂಗಳೂರು ತಂಡವು ಕೆಎಸ್‌ಎಫ್‌ಎ ಬಿ ಡಿವಿಷನ್ ಮಹಿಳಾ ಲೀಗ್ ಫುಟ್‌ಬಾಲ್ ಪಂದ್ಯದಲ್ಲಿ ಶುಕ್ರವಾರಡ್ಸ್ 9–0ಯಿಂದ ಜಿಆರ್‌ಕೆ ಗ್ಲಿಟರಿಂಗ್ ಸ್ಟಾರ್ಸ್ ಎಫ್‌ಸಿ ತಂಡಕ್ಕೆ ಸೋಲುಣಿಸಿತು.

ಮತ್ತೊಂದು ಪಂದ್ಯದಲ್ಲಿ ಯಂಗ್‌ಸ್ಟಾರ್ಸ್ ಎಫ್‌ಸಿ 1–0ಯಿಂದ ಟೆಕ್ನಿಕೊ ಫುಟ್‌ಬಾಲ್ ಫೌಂಡೇಷನ್ ಎಫ್‌ಸಿ ಎದುರು ಗೆದ್ದಿತು.

# ಸೈಕ್ಲಿಂಗ್: ಇಮ್ಯಾನ್ಯುಯೆಲ್‌ಗೆ ಚಿನ್ನ


ಇಮ್ಯಾನ್ಯುಯೆಲ್

ಬೆಂಗಳೂರು: ಜೆಫರಿ ಇಮ್ಯಾನ್ಯುಯೆಲ್ ಇಲ್ಲಿ ನಡೆದ ಜಿಲ್ಲಾಮಟ್ಟದ ಸೈಕ್ಲಿಂಗ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಬೆಂಗಳೂರು ಜಿಲ್ಲಾ ಅಮೆಚೂರ್ ಸೈಕ್ಲಿಂಗ್ ಸಂಸ್ಥೆ ಆಯೋಜಿಸಿದ್ದ ಟೂರ್ನಿಯಲ್ಲಿ ಅವರಿಗೆ ಪದಕ ಒಲಿದಿದೆ.

ಜೆಫರಿ ಕೇಂದ್ರೀಯ ವಿದ್ಯಾಲಯದ 12ನೇ ತರಗತಿ ವಿದ್ಯಾರ್ಥಿಯಾಗಿದ್ದಾರೆ.

ಜೆಫರಿ ಆನ್‌ಲೈನ್ ಕಲಿಕಾ ಕಂಪನಿಯ ಬೈಜುಸ್ ವಿದ್ಯಾರ್ಥಿಯೂ ಹೌದು.


















ಪರಂವಃ ಪಿಕ್ಚರ್ಸ್ ಮೂಲಕ ನಟ ರಕ್ಷಿತ್ ಶೆಟ್ಟಿ ಅದ್ಭುತ ಕಥೆಯುಳ್ಳ ಸಿನಿಮಾಗಳನ್ನು ಪ್ರೇಕ್ಷಕರೆದುರಿಗೆ ಇರಿಸುತ್ತಿದ್ದಾರೆ. ಇದಕ್ಕೆ ಹೊಸ ಸೇರ್ಪಡೆ ಬಹುಭಾಷಾ ನಟಿ ಸಾಯಿ ಪಲ್ಲವಿ ಅಭಿನಯದ ಸಿನಿಮಾ 'ಗಾರ್ಗಿ'. ರಕ್ಷಿತ್, ತಮ್ಮ ಸಂಸ್ಥೆಯ ಮೂಲಕ ಗಾರ್ಗಿ ಸಿನಿಮಾದ ಕನ್ನಡ ಅವತರಣಿಕೆಯನ್ನು ಪ್ರಸ್ತುತಪಡಿಸಲಿದ್ದಾರೆ.

# ಸಾಯಿ ಪಲ್ಲವಿ 'ಗಾರ್ಗಿ'ಗೆ ರಕ್ಷಿತ್ ಶೆಟ್ಟಿ ಸಾಥ್

**ಪರಂವಃ** ಪಿಕ್ಚರ್ಸ್ ಮೂಲಕ ನಟ ರಕ್ಷಿತ್ ಶೆಟ್ಟಿ ಒಳ್ಳೆಯ ಕಥೆಯುಳ್ಳ ಸಿನಿಮಾಗಳನ್ನು ಪ್ರೇಕ್ಷಕರೆದುರಿಗೆ ಇರಿಸುತ್ತಿದ್ದಾರೆ. ಇದಕ್ಕೆ ಹೊಸ ಸೇರ್ಪಡೆ ಬಹುಭಾಷಾ ನಟಿ ಸಾಯಿ ಪಲ್ಲವಿ ಅಭಿನಯದ ಸಿನಿಮಾ 'ಗಾರ್ಗಿ'. ರಕ್ಷಿತ್, ತಮ್ಮ ಸಂಸ್ಥೆಯ ಮೂಲಕ ಗಾರ್ಗಿ ಸಿನಿಮಾದ ಕನ್ನಡ ಅವತರಣಿಕೆಯನ್ನು ಪ್ರಸ್ತುತಪಡಿಸಲಿದ್ದಾರೆ.

ಸಿನಿಮಾ, ಜುಲೈ 15ರಂದು ತೆರೆಕಾಣುತ್ತಿದ್ದು, ಕೆ.ಆರ್.ಜಿ ಸ್ಟುಡಿಯೋಸ್ ಮೂಲಕ ಈ ಚಿತ್ರ ರಾಜ್ಯದಾದ್ಯಂತ ಬಿಡುಗಡೆಯಾಗಲಿದೆ. ಗೌತಮ್ ರಾಮಚಂದ್ರನ್ ನಿರ್ದೇಶನದ ಈ ಚಿತ್ರ ತಮಿಳಿನಲ್ಲಿ ನಿರ್ಮಾಣವಾಗಿದ್ದು, ಕನ್ನಡ ಹಾಗೂ ತೆಲುಗಿಗೆ ಡಬ್ ಆಗಿದೆ. ರವಿಚಂದ್ರನ್ ರಾಮಚಂದ್ರನ್, ಐಶ್ವರ್ಯ ಲಕ್ಷ್ಮೀ, ಥಾಮಸ್ ಜಾರ್ಜ್ ಹಾಗೂ ಗೌತಮ್ ರಾಮಚಂದ್ರನ್ ನಿರ್ಮಿಸಿರುವ ಈ ಚಿತ್ರಕ್ಕೆ ಗೋಗಿಂದ್ ವಸಂತ ಸಂಗೀತ ನೀಡಿದ್ದಾರೆ. ಸಾಯಿಪಲ್ಲವಿ, ಕಾಳಿ ವೆಂಕಟ್, ಸರವಣನ್, ಜಯಪ್ರಕಾಶ್, ಆರ್.ಎಸ್. ಶಿವಾಜಿ, ಲಿವಿಂಗ್ ಸ್ಟನ್ ಈ ಚಿತ್ರದ ತಾರಾಬಳಗದಲ್ಲಿದ್ದಾರೆ.

ಚಿತ್ರದ ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವ ರಕ್ಷಿತ್, 'ಗೌತಮ್ ನನ್ನ ಸ್ನೇಹಿತ. ನಾವು ಭೇಟಿಯಾದಾಗ ಸಿನಿಮಾ ಕುರಿತು ಮತ್ತು ಕಥೆಗಳ ಕುರಿತು ಮಾತನಾಡುವುದೇ ಹೆಚ್ಚು. ಗಾರ್ಗಿ ಸಿನಿಮಾ ಮೂಡಿಬಂದಿರುವ ರೀತಿ, ಈ ಚಿತ್ರವನ್ನು ಕನ್ನಡದಲ್ಲಿ ಪ್ರಸ್ತುತಪಡಿಸುವ ನಿರ್ಧಾರವನ್ನು ತೆಗೆದುಕೊಳ್ಳುವಂತೆ ಮಾಡಿತು. ಸಾಯಿಪಲ್ಲವಿ ಅವರು ಈ ಚಿತ್ರದಲ್ಲಿ ಮುಖ್ಯಪಾತ್ರ ವಹಿಸಿರುವುದು ಮತ್ತೊಂದು ಬಲವಾದ ಕಾರಣ ಎನ್ನಬಹುದು. ರಾಜ್ ಬಿ.ಶೆಟ್ಟಿ ನಿರ್ದೇಶನದ 'ಗರುಡ ಗಮನ ವೃಷಭ ವಾಹನ' ಸಿನಿಮಾ ಬಳಿಕ, 'ಗಾರ್ಗಿ' ನನ್ನ ಹೃದಯ ಕದಲಿಸಿದ ಸಿನಿಮಾ ಎಂದರೆ ತಪ್ಪಾಗಲಾರದು. ಸಾಯಿಪಲ್ಲವಿ ಅವರು ಪಾತ್ರವನ್ನು ಜೀವಿಸಿ ನಿಜ ಜೀವನಕ್ಕೆ ಹತ್ತಿರವಿದೆ ಎನಿಸುವಂತೆ ಇಲ್ಲಿ ನಟಿಸಿದ್ದಾರೆ. ನಮ್ಮ ಚಿತ್ರಗಳನ್ನು ನಾವು ಬೇರೆ ಭಾಷೆ ಮತ್ತು ಬೇರೆ ರಾಜ್ಯಗಳಲ್ಲಿ ಬಿಡುಗಡೆ ಮಾಡಲು ಧೈರ್ಯ ಮಾಡುತ್ತಿರುವಾಗ, ಬೇರೆ ಭಾಷೆಯ ಒಳ್ಳೆಯ ಸಿನಿಮಾಗಳನ್ನು ಇಲ್ಲಿಗೆ ತರುವುದು ನಮ್ಮ ಜವಾಬ್ದಾರಿ. ಗೌತಮ್ ಬೆಂಗಳೂರಿನವರೇ, ಜೊತೆಗೆ ಸಾಯಿ ಪಲ್ಲವಿ ಕನ್ನಡಕ್ಕೆ ತಮ್ಮ ಧ್ವನಿ ನೀಡಿರುವುದು ಹೆಮ್ಮೆಯ ವಿಚಾರ' ಎಂದಿದ್ದಾರೆ.



ಸಾಯಿ ಪಲ್ಲವಿ

# ಪಾತ್ರಗಳ ಬೆನ್ನಟ್ಟುವ 'ಚೇಸ್'

ಸಿನಿ ಮಾತು

**ಸಿಂಪ್ಲಿಫನ್** ಮೀಡಿಯಾ ನೆಟ್‌ವರ್ಕ್ ಬ್ಯಾನರ್‌ನಲ್ಲಿ ನಿರ್ಮಾಣಗೊಂಡ ಸಸ್ಪೆನ್ಸ್ ಥ್ರಿಲ್ಲರ್ ಕನ್ನಡ ಸಿನಿಮಾ 'ಚೇಸ್' ಜುಲೈ 15ರಂದು ತೆರೆಗೆ ಬರಲಿದೆ.

'ಪ್ರತ್ಯೇಕ ಪ್ರದೇಶಗಳಲ್ಲಿ ಇದ್ದ ಇಬ್ಬರು ಅನಿರೀಕ್ಷಿತವಾಗಿ ಪರಸ್ಪರ ಭೇಟಿಯಾದಾಗ ಏನಾಗುತ್ತದೆ, ಆ ಪಾತ್ರಗಳು ಪ್ರಕರಣವೊಂದನ್ನು ಬೆನ್ನತ್ತಿ ಹೋದಾಗ ಹೊರಬರುವ ರಹಸ್ಯಗಳ ಹೂರಣವೇ 'ಚೇಸ್' ಎಂದಿದ್ದಾರೆ' ನಿರ್ದೇಶಕ ನಿರ್ದೇಶಕ ವಿಲೋಕ್ ಶೆಟ್ಟಿ.

ಚಿತ್ರದಲ್ಲಿ ರಾಧಿಕಾ ನಾರಾಯಣ್, ಅವಿನಾಶ್ ನರಸಿಂಹರಾಜು, ಶೀತಲ್ ಶೆಟ್ಟಿ, ಅರ್ಜುನ್ ಯೋಗಿ, ಅರವಿಂದ್ ರಾವ್, ಪ್ರಮೋದ್ ಶೆಟ್ಟಿ, ಶ್ವೇತಾ ಸಂಜೀವುಲು, ಅರವಿಂದ ಬೋಳಾರ್, ರೆಹಮಾನ್ ಹಾಸನ್, ರಾಜೇಶ್ ನಟರಂಗ, ವೀಣಾ ಸುಂದರ್, ಸುಧಾ ಬೆಳವಾಡಿ, ಉಷಾ ಭಂಡಾರಿ ನಟಿಸಿದ್ದಾರೆ.

ಮನೋಹರ ಸುವರ್ಣ, ಪ್ರಶಾಂತ್ ಶೆಟ್ಟಿ ಮತ್ತು ಪ್ರದೀಪ್ ಶೆಟ್ಟಿ ಚಿತ್ರದ ನಿರ್ಮಾಪಕರು. ಅನಂತ ರಾಜ್ ಅರಸ್ ಛಾಯಾಗ್ರಹಣ, ಕಾರ್ತಿಕ್ ಆಚಾರ್ಯ ಸಂಗೀತ, ಡಾ.ಉಮೇಶ್ ಪಿಲಿಕುಡೇಲು ಸಾಹಿತ್ಯ ಈ ಚಿತ್ರಕ್ಕಿದೆ. ಬೆಂಗಳೂರು, ಮಂಗಳೂರು, ಉಡುಪಿ, ಹಿಮಾಚಲ ಪ್ರದೇಶ, ಕೊಚ್ಚಿನ್‌ನಲ್ಲಿ ಸುಮಾರು 52 ದಿನಗಳ ಕಾಲ ಚಿತ್ರೀಕರಣ ಮಾಡಲಾಗಿದೆ. ಸೆನ್ಸಾರ್ ಮಂಡಳಿಯಿಂದ ಯು/ಎ ಪ್ರಮಾಣ ಪತ್ರ ಲಭಿಸಿದೆ ಎಂದರು ವಿಲೋಕ್.



ಶೀತಲ್ ಶೆಟ್ಟಿ, ಅವಿನಾಶ್



# ಮಳೆಗಾಲದಲ್ಲಿ ಮನೆ ನಿರ್ವಹಣೆ

## ಇಲ್ಲಿವೆ ಸರಳ ಸಲಹೆಗಳು

ಮುಂಗಾರು ಮಳೆ ಎಂದರೆ ಸಂಭ್ರಮ. ಮನೆಯ ಪಡಸಾಲೆಯಲ್ಲಿ ಕುಳಿತು ಬಿಸಿ ಬಿಸಿ ಕಾಫಿಯೊಂದಿಗೆ ಅಂಗಳದಲ್ಲಿ ಸುರಿಯುವ ಸೋನೆ ಮಳೆ ನೋಡುತ್ತಿದ್ದರೆ, ಮನಸ್ಸಿಗೆ ಉಲ್ಲಾಸ. ಇಂಥ ಖುಷಿ ತರುವ ಮಳೆಗಾಲ ಮನೆಯೊಳಗಿನ ವಾತಾವರಣವನ್ನು ಬದಲಿಸುತ್ತದೆ. ಸಣ್ಣ ಸಣ್ಣ ಸಮಸ್ಯೆಗಳನ್ನೂ ಸೃಷ್ಟಿಸುತ್ತದೆ. ಸಕಾಲದಲ್ಲಿ ಸೂಕ್ತ ನಿರ್ವಹಣೆ, ಒಂದಷ್ಟು ಮುನ್ನೆಚ್ಚರಿಕೆ ಕ್ರಮಗಳ ಮೂಲಕ ಈ ಸಮಸ್ಯೆಗಳನ್ನು ನಿವಾರಿಸಬಹುದು. ಹಾಗಾದರೆ, ಮಳೆಗಾಲದಲ್ಲಿ ಯಾವ ರೀತಿ ಮನೆ ನಿರ್ವಹಣೆ ಮಾಡಬಹುದು ? ಇಲ್ಲಿದೆ ಸಿಂಪಲ್ ಟಿಪ್ಸ್...

**ಅಯ್ಯಣ್ಣ**

### 1. ಸ್ವಚ್ಛತೆಗೆ ಆದ್ಯತೆ ನೀಡಿ

ಮಳೆಗಾಲ ಶುರುವಾದ ಮೇಲೆ ಮನೆಯ ಒಳಗೆ, ಹೊರಗೆ ಜಿರಲೆ, ಸೊಳ್ಳೆಯಂತಹ ಕ್ರಿಮಿಕೀಟಗಳ ಉಪಟಳ ಹೆಚ್ಚಾಗುತ್ತದೆ. ಇವು ಡೆಂಗಿ, ಚಿಕುನ್‌ಗುನ್ಯಾದಂತಹ ರೋಗ ಹರಡಲು ಕಾರಣವಾಗುತ್ತವೆ. ಇದರ ನಿವಾರಣೆಗೆ, ಮನೆಯನ್ನು ಪ್ರತಿ ನಿತ್ಯ ಸೋಂಕು ನಿವಾರಕದಿಂದ ಶುಚಿಗೊಳಿಸಿ. ಹಿಂದೆ ನಿತ್ಯ ಕೈಗೊಳ್ಳುತ್ತಿದ್ದ ಶುಚಿಕಾರ್ಯಕ್ಕಿಂತ ಹೆಚ್ಚಿನ ಆದ್ಯತೆ ನೀಡಿ. ಮನೆಯ ಮೂಲೆಗಳಲ್ಲಿ ಜೇಡ ಬಲೆ ಕಟ್ಟದಂತೆ ನೋಡಿಕೊಳ್ಳಿ. ಜೇಡ ಬಲೆ ಕಟ್ಟಿರುವುದು ಕಂಡುಬಂದರೆ, ಅದನ್ನು ಆಗಲೇ ಶುಚಿಗೊಳಿಸಿ.

### 2. ಸೋರಿಕೆ ತಡೆಗಟ್ಟಿ

ಮಳೆಗಾಲ ಆರಂಭವಾಗುವ ಮೊದಲೇ ಮನೆಯ ತಾರಸಿ, ಗೋಡೆಗಳನ್ನು ಗಮನಿಸಿ. ಅಲ್ಲಲ್ಲಿ ಬಿರುಕು ಬಿಟ್ಟು ಮಳೆ ನೀರು ಸೋರಿಕೆಯಾಗುವ ಸಾಧ್ಯತೆ ಇರುತ್ತದೆ. ಇದರಿಂದ ಗೋಡೆಗಳು ಪಾಚಿಕಟ್ಟುತ್ತವೆ. ಜೊತೆಗೆ ಗೋಡೆಯೊಳಗೆ ನೀರಿಳಿದು ಒಳಗೆ ಜೋಡಿಸಿರುವ ವಿದ್ಯುತ್ ತಂತಿಗಳಿಗೂ ಅಪಾಯವಾಗಬಹುದು. ಹಾಗಾಗಿ ಸೋರಿಕೆಯಾಗುವ ಜಾಗ ಗುರುತಿಸಿ, ಅದನ್ನು ಮುಚ್ಚಲು ಅಗತ್ಯ ಕ್ರಮ ಕೈಗೊಳ್ಳಿ.

### 3. ವಿದ್ಯುತ್ ಪರಿಕರಗಳ ಬಗ್ಗೆ ಎಚ್ಚರ

ಮಳೆಗಾಲದಲ್ಲಿ ಗುಡುಗು, ಸಿಡಿಲು, ಮಿಂಚಿನಿಂದಾಗಿ ವಿದ್ಯುತ್ ಏರಿಳಿತ ಸಾಮಾನ್ಯ. ಹಾಗಾಗಿ ಮಳೆಗಾಲಕ್ಕೆ ಮುನ್ನವೇ ಮನೆಯ ವೈರಿಂಗ್ ಪರಿಶೀಲಿಸಿ. ಸ್ವಿಚ್ ಬೋರ್ಡ್‌ಗಳಲ್ಲಿ ನೀರು ಇಳಿಯುತ್ತಿದೆಯೇ ಎಂದು ಪರಿಶೀಲಿಸಿ. ಗೋಡೆಗಳಲ್ಲಿ ನೀರಿಳಿದಾಗ ಶಾರ್ಟ್ ಸರ್ಕಿಟ್ ಆಗುವ ಸಾಧ್ಯತೆ ಹೆಚ್ಚು. ಈ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮ ಅಗತ್ಯ.

### 4. ಕಾರ್ಪೆಟ್ ನಿರ್ವಹಣೆ

ಮಳೆಗಾಲದಲ್ಲಿ ನೆಲಕ್ಕೆ ಹಾಸುವ ಫೂಟ್ ರಗ್, ರತ್ನಗಂಬಳಿ(ಕಾರ್ಪೆಟ್‌ಗಳ) ನಿರ್ವಹಣೆ ಬಹಳ ಕಷ್ಟ. ಸದಾ ನೆಲ ಒದ್ದೆಯಾಗುತ್ತಿರುತ್ತದೆ. ಒದ್ದೆ ಕಾಲಿನಲ್ಲೇ ಇವುಗಳ ಮೇಲೆ ನಡೆದಾಡುತ್ತಾರೆ. ದೂಳು ಮತ್ತು ತೇವ ಸೇರಿಕೊಂಡು ಈ ನೆಲ ಹಾಸುಗಳು ದುರ್ವಾಸನೆ ಬೀರುತ್ತವೆ. ಇವು ರೋಗ ಹರಡಲು ಕಾರಣವಾಗುತ್ತವೆ. ಇಂಥ ಸಂದರ್ಭದಲ್ಲಿ ದುಬಾರಿ ನೆಲ ಹಾಸುಗಳನ್ನು ಬಳಸದಿರುವುದು ಕ್ಷೇಮ. ಅನಿವಾರ್ಯವಾದರೆ ದಿನ ನಿತ್ಯ ಬಳಸುವ ನೆಲ ಹಾಸುಗಳನ್ನು ಬಳಸಿ. ಅವುಗಳನ್ನೂ ಆಗಾಗ್ಗೆ ಸ್ವಚ್ಛಗೊಳಿಸಿ, ತೇವವಾಗದಂತೆ ನೋಡಿಕೊಳ್ಳಬೇಕು.

### 5. ಗಾಳಿ, ಬಿಸಿಲು ಒಳ ಬರಲಿ...

ಮಳೆಗಾಲದಲ್ಲಿ ನಿತ್ಯ ಮೋಡಕವಿದ ವಾತಾವರಣ. ಸೂರ್ಯ ಆಗಾಗ ಇಣುಕಿ ಹೋಗುತ್ತಾನೆ. ಇಣುಕುವ ಸೂರ್ಯನ ಕಿರಣಗಳು ಮನೆಯೊಳಗೆ ಪ್ರವೇಶಿಸುವಂತೆ ಕಿಟಕಿಗಳನ್ನು ತೆರೆದಿಡಿ. ಕಿಟಕಿಗಳಿಗೆ ಪರದೆಗಳನ್ನು ಹಾಕಿದರೆ, ಮಳೆಗಾಲ ಮುಗಿಯುವವರೆಗೂ ಅವುಗಳನ್ನು ತೆಗೆದಿಡಿ. ಇದರಿಂದ ಬಿಸಿಲು ಸರಾಗವಾಗಿ ಮನೆ ಪ್ರವೇಶಿಸುತ್ತದೆ. ಜೊತೆಗೆ ಗಾಳಿಯಾಡುತ್ತದೆ. ತೇವಾಂಶ ಹೆಚ್ಚಾದರೆ ಮನೆಯ ವಸ್ತುಗಳೆಲ್ಲವೂ ದುರ್ವಾಸನೆ ಬೀರಬಹುದು. ಆದ್ದರಿಂದ ಸಾಧ್ಯವಾದಷ್ಟು ಕಿಟಕಿಗಳನ್ನು ತೆಗೆದಿಡಿ.

### ಪೀಠೋಪಕರಣಗಳ ರಕ್ಷಣೆ

ಮಳೆಗಾಲದಲ್ಲಿ ಮರದ ಪೀಠೋಪಕರಣಗಳು ತೇವಾಂಶ ಹೀರಿಕೊಂಡು ಹಿಗ್ಗುತ್ತವೆ ಇಲ್ಲವೇ ಬಾಗುತ್ತವೆ. ಕೆಲವು ಕಡೆ ಗೆದ್ದಲು ಹಿಡಿಯಬಹುದು. ಪೀಠೋಪಕರಣಗಳನ್ನು ಆದಷ್ಟು ಒಣಬಟ್ಟೆಯಿಂದ ತೇವವಾಗದಂತೆ ನಿತ್ಯ ಒರೆಸುತ್ತಿರಿ. ಗೆದ್ದಲುಗಳಿಂದ ರಕ್ಷಿಸಲು ವ್ಯಾಕ್ಸಿಂಗ್ ಉತ್ತಮ ಪರಿಹಾರ.

ಕಿಟಕಿ, ಬಾಗಿಲು ಪಕ್ಕದಲ್ಲಿ ಪೀಠೋಪಕರಣಗಳನ್ನು ಇಡಬೇಡಿ. ಇದರಿಂದ ಪೀಠೋಪಕರಣಗಳ ಮೇಲೆ ಮಳೆ ನೀರು ಬೀಳದಂತೆ ತಡೆಯಬಹುದು. ಮಳೆಗಾಲಕ್ಕೆ ಮುನ್ನವೇ ಪೀಠೋಪಕರಣಗಳಿಗೆ ವಾಟರ್‌ಪ್ರೂಫ್ ಪಾಲಿಷ್ ಹಾಕಿಸುವುದರಿಂದ ಅವು ತೇವಾಂಶದ ಕಾರಣದಿಂದ ಹಾಳಾಗದಂತೆ ತಡೆಬಹುದು. ಆದರೆ, ಮಳೆಗಾಲದಲ್ಲಿ ಪಾಲಿಷ್ ಮಾಡಿಸುವುದು ಸರಿಯಾದ ಕ್ರಮವಲ್ಲ.



### 6. ಪುಸ್ತಕಗಳ ರಕ್ಷಣೆ

ಗೋಡೆಗೆ ಒರಗಿಸಿಟ್ಟ ಕಬ್ಬಿಣ ಅಥವಾ ಮರದ ಕಪಾಟಿನಲ್ಲಿಟ್ಟ ಪುಸ್ತಕಗಳು ಮಳೆಗಾಲದಲ್ಲಿ ತೇವ ಹೆಚ್ಚಾಗಿ ಹಾಳಾಗುತ್ತವೆ. ಸ್ವಲ್ಪ ಮೈಮರೆತರೆ ಗೆದ್ದಲು ದಾಳಿ ಮಾಡುತ್ತವೆ. ಪುಸ್ತಕಗಳನ್ನು ತೇವಾಂಶದಿಂದ ರಕ್ಷಿಸಲು ಗೋಡೆಗಳಿಗೆ ತೇವಾಂಶ ನಿರೋಧಕ ಬಣ್ಣ ಬಳಿಯಬಹುದು, ಇದು ದೀರ್ಘಕಾಲದ ಪರಿಹಾರ. ತಕ್ಷಣದ ಪರಿಹಾರವಾಗಿ, ಆದಷ್ಟು ಪುಸ್ತಕಗಳನ್ನು ಗಾಳಿಯಾಡುವ ಜಾಗದಲ್ಲಿಟ್ಟು, ತೇವವಾಗದಂತೆ ರಕ್ಷಿಸಬಹುದು.

### 7. ದುರ್ವಾಸನೆ ದೂರವಿರಿಸಿ

ನಿರಂತರವಾಗಿ, ಬಿಟ್ಟು ಬಿಡದೆ ಮಳೆ ಸುರಿಯುತ್ತಿದ್ದಾಗ, ಮನೆಯೊಳಗೆ ದುರ್ವಾಸನೆ ಹೆಚ್ಚಾಗುತ್ತದೆ. ಇದು ಮನಸ್ಸಿಗೆ ಕಿರಿ ಕಿರಿ ಉಂಟು ಮಾಡುತ್ತದೆ. ಈ ಸಮಯದಲ್ಲಿ ಸೌಮ್ಯ ಪ್ರಮಾಣದಲ್ಲಿ ಪರಿಮಳ ಬೀರುವ ಊದು ಬತ್ತಿಗಳನ್ನು ಬಳಸಬಹುದು. ಈಗೀಗ ಮಾರುಕಟ್ಟೆಯಲ್ಲಿ ನೀಲಗಿರಿ, ಲ್ಯಾವೆಂಡರ್ ಸೇರಿದಂತೆ ವಿವಿಧ ಪರಿಮಳ ಸೂಸುವ 'ಆರೊಮಾ' ತೈಲಗಳು ಲಭ್ಯವಿವೆ. ಅವುಗಳನ್ನು ಬಳಸಿ ಮನೆಯ ವಾತಾವರಣವನ್ನು ಪರಿಮಳಯುಕ್ತ ವಾಗಿಸಬಹುದು. ಇದು ಆರೋಗ್ಯಕ್ಕೂ ಒಳ್ಳೆಯದು.


# ಕಣ್ವ ತುರ್ತು ಆಂಬ್ಯುಲೆನ್ಸ್ ಸೇವೆ



ವೈದ್ಯರ ದಿನದಂದು ಕಣ್ವ ತುರ್ತು ಆಂಬುಲೆನ್ಸ್ ಸೇವೆಗೆ ಚಾಲನೆ ನೀಡಿದ ಕ್ಷಣ

**ತುರ್ತು** ಆರೋಗ್ಯ ಸೇವೆಗಾಗಿ ಬೆಂಗಳೂರಿನ ಕಣ್ವ ಶ್ರೀ ಸಾಯಿ ಆಸ್ಪತ್ರೆಯು ಸುಸಜ್ಜಿತವಾದ 'ಕಣ್ವ ಎಮರ್ಜೆನ್ಸಿ ಆಂಬುಲೆನ್ಸ್ ಸೇವೆ'ಯನ್ನು ಆರಂಭಿಸಿದೆ.

ಇತ್ತೀಚೆಗೆ ರಾಷ್ಟ್ರೀಯ ವೈದ್ಯರ ದಿನಾಚರಣೆಯಂದು ಈ ಆಂಬುಲೆನ್ಸ್ ಸೇವೆಗೆ ಚಾಲನೆ ನೀಡಲಾಗಿದೆ. ಅಫಘಾತ ಸೇರಿದಂತೆ, ಎಲ್ಲ ರೀತಿಯ ತುರ್ತು ಆರೋಗ್ಯ ಸಮಸ್ಯೆಗೆ ತ್ವರಿತವಾಗಿ ಸ್ಪಂದಿಸಲು ಈ ಸೇವೆ ಆರಂಭಿಸಿರುವುದಾಗಿ ಸಂಸ್ಥೆ ತಿಳಿಸಿದೆ.


ಯಾವುದೇ ತುರ್ತು ಆರೋಗ್ಯ ಸಮಸ್ಯೆ ಇದ್ದವರು ಕಣ್ವ ಆಂಬುಲೆನ್ಸ್ ಸರ್ವೀಸ್‌ಗೆ ಕರೆ ಮಾಡಿದರೆ, ನಮ್ಮ ಆಂಬುಲೆನ್ಸ್ ಜಾಲದ ಮುಖಾಂತರ 10 ರಿಂದ 15 ನಿಮಿಷಗಳೊಳಗೆ ರೋಗಿಗಳ ಇರುವ ಕಡೆಗೆ ಆಂಬುಲೆನ್ಸ್ ಕಳಿಸಿಕೊಡಲಾಗುತ್ತದೆ. ಅಲ್ಲಿಂದ ರೋಗಿಯನ್ನು ಸೂಕ್ತ ಆಸ್ಪತ್ರೆಗೆ ತಲುಪಿಸುವ ವ್ಯವಸ್ಥೆ ಇದೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಒಂದೊಮ್ಮೆ ರೋಗಿಯು ಕಣ್ವ ಆಸ್ಪತ್ರೆ ದಾಖಲಾಗಲು ಇಚ್ಛಿಸಿದರೆ, ಅಂಥವರಿಗೆ ಆಂಬುಲೆನ್ಸ್‌ಗೆ ತಗಲುವ ವೆಚ್ಚದಿಂದ ವಿನಾಯಿತಿ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗೆ ಈ ಲಿಂಕ್ ನೋಡಿ. www.kanvasrisaihospital.com

ಕಣ್ವ ಎಮರ್ಜೆನ್ಸಿ ಆಂಬ್ಯುಲೆನ್ಸ್ ಸಹಾಯ ವಾಣಿ: 80953 33933/ 080 2337 5143.


# ಮೈಸೂರಿನಲ್ಲಿ 'ಹೊಯ್ಸಳ'ನಾರ್ಭಟ!

ನಟ 'ಡಾಲಿ' ಧನಂಜಯ್ ನಟನೆಯ 25ನೇ ಸಿನಿಮಾ 'ಹೊಯ್ಸಳ'ದ ಚಿತ್ರೀಕರಣ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ನಡೆಯುತ್ತಿದ್ದು, ಈ ನಡುವೆ ಚಿತ್ರತಂಡವು ಧನಂಜಯ್ ಅವರ ಫಸ್ಟ್‌ಲುಕ್ ಬಿಡುಗಡೆಗೊಳಿಸಿದೆ.



ಧನಂಜಯ್

**ನಟ** 'ಡಾಲಿ' ಧನಂಜಯ್ ನಟನೆಯ 25ನೇ ಸಿನಿಮಾ 'ಹೊಯ್ಸಳ'ದ ಚಿತ್ರೀಕರಣ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ನಡೆಯುತ್ತಿದೆ. ಈ ನಡುವೆ ಚಿತ್ರತಂಡವು ಧನಂಜಯ್ ಅವರ ಫಸ್ಟ್‌ಲುಕ್ ಬಿಡುಗಡೆಗೊಳಿಸಿದೆ.

ಧನಂಜಯ್, ಈ ಚಿತ್ರದಲ್ಲಿ 'ಗುರುದೇವ ಹೊಯ್ಸಳ' ಎಂಬ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಕಾರ್ತಿಕ್ ಗೌಡ ಹಾಗೂ ಯೋಗಿ ಜಿ. ರಾಜ್ ಈ ಸಿನಿಮಾವನ್ನು ನಿರ್ಮಿಸುತ್ತಿದ್ದಾರೆ. ಬಹುಕೋಟಿ ವೆಚ್ಚದಲ್ಲಿ ಅದ್ದೂರಿಯಾಗಿ ಈ ಚಿತ್ರ ನಿರ್ಮಾಣವಾಗುತ್ತಿದ್ದು, ಚಿತ್ರಕ್ಕೆ ವಿಜಯ್ ನಾಗೇಂದ್ರ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಈ ಹಿಂದೆ ಗಣೇಶ್ ಅಭಿನಯದ 'ಗೀತಾ' ಚಿತ್ರವನ್ನು ವಿಜಯ್ ನಾಗೇಂದ್ರ ನಿರ್ದೇಶನ ಮಾಡಿದ್ದರು. ಅಜನೀಶ್ ಲೋಕನಾಥ್ ಅವರ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

ಮೈಸೂರಿನ ಭಾಗದ ಚಿತ್ರೀಕರಣದಲ್ಲಿ ಧನಂಜಯ್, ನಾಯಕಿ ಅಮೃತ ಅಯ್ಯಂಗಾರ್, ಅಚ್ಯುತ್ ಕುಮಾರ್, ಪ್ರತಾಪ್ ನಾರಾಯಣ್, ನವೀನ್ ಶಂಕರ್, ಅವಿನಾಶ್ ಕೆ.ಜಿ.ಎಫ್, ರಾಘು ಶಿವಮೊಗ್ಗ ಮುಂತಾದ ಕಲಾವಿದರು ಭಾಗಿಯಾಗಿದ್ದಾರೆ. ಸಾಹಸ ನಿರ್ದೇಶಕರಾದ ದಿಲೀಪ್ ಸುಬ್ರಹ್ಮಣ್ಯ ಹಾಗೂ ಅರ್ಜುನ್ ಮಾಸ್ಟರ್ ಅವರ ಸಾಹಸ ಸಂಯೋಜನೆಯಲ್ಲಿ ಸಾಹಸ ಸನ್ನಿವೇಶಗಳ ಚಿತ್ರೀಕರಣ ಇಲ್ಲಿ ನಡೆಯಲಿದೆ. ಬೆಳಗಾವಿಯಲ್ಲಿ ನಡೆಯುವ, ಒಬ್ಬ ದಿಟ್ಟ ಪೊಲೀಸ್ ಅಧಿಕಾರಿಯ ಸುತ್ತ ಹೆಣೆದಿರುವ ಕಥೆ ಇದಾಗಿದೆ ಎಂದಿದೆ ಚಿತ್ರತಂಡ.

# 'ದೂರದರ್ಶನ'ದಲ್ಲಿ ಪೃಥ್ವಿಗೆ ಆಯಾನಾ ಜೋಡಿ



**'ದಿಯಾ'** ಸಿನಿಮಾ ಖ್ಯಾತಿಯ ನಟ ಪೃಥ್ವಿ ಅಂಬಾರ್ ನಟನೆಯ 'ದೂರದರ್ಶನ'ದ ಟೈಟಲ್ ಟೀಸರ್ ಈಗಾಗಲೇ ಗಾಂಧಿನಗರದಲ್ಲಿ ಸದ್ದು ಮಾಡುತ್ತಿದೆ. ಈ ಸಿನಿಮಾದಲ್ಲಿ ಪೃಥ್ವಿಗೆ ಜೋಡಿ ಯಾರು ಎನ್ನುವ ಪ್ರಶ್ನೆಗೆ ಇದೀಗ ಚಿತ್ರತಂಡ ಉತ್ತರಿಸಿದೆ. 'ಇಲ್ಲಿ ಇರಲಾರೆ ಅಲ್ಲಿಗೆ ಹೋಗಲಾರೆ' ಎಂಬ ಸಿನಿಮಾ ಮೂಲಕ ಸ್ಯಾಂಡಲ್‌ವುಡ್‌ಗೆ ಹೆಜ್ಜೆ ಇಟ್ಟಿದ್ದ ಆಯಾನಾ ಪೃಥ್ವಿಗೆ ನಾಯಕಿಯಾಗಿ ಅಭಿನಯಿಸಿದ್ದಾರೆ.

'ಆಯಾನಾ 'ಮೈತ್ರಿ' ಎಂಬ ಪಾತ್ರಕ್ಕೆ ಬಣ್ಣ ಹಚ್ಚಿದ್ದು, ಆಟೊ ಚಾಲಕನ ಮಗಳ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ' ಎನ್ನುತ್ತಾರೆ ನಿರ್ದೇಶಕ ಸುಕೇಶ್ ಶೆಟ್ಟಿ. 'ಅಪ್ಪನ ಆಸರೆಯಲ್ಲಿ ಬೆಳೆಯುವ ಹುಡುಗಿ ಪ್ರೀತಿಯಲ್ಲಿ ಬಿದ್ದಾಗ ಮುಂದೇನಾಗುತ್ತದೆ ಎನ್ನುವುದು ಚಿತ್ರದ ಕಥೆಯಲ್ಲಿ ಮೈತ್ರಿಯ ಅಧ್ಯಾಯ. ಇದು ಕಥೆಗೆ ತಿರುವು ನೀಡುವ ಪಾತ್ರ' ಎಂದರು. ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ಉಗ್ರಂ ಮಂಜು, ಸುಂದರ್ ವೀಣಾ ಕಾಣಿಸಿಕೊಂಡಿದ್ದಾರೆ.

ಇದು ಸುಕೇಶ್ ಶೆಟ್ಟಿ ನಿರ್ದೇಶನದ ಚೊಚ್ಚಲ ಚಿತ್ರ. ಸಿನಿಮಾಗೆ ಕಥೆ, ಚಿತ್ರಕಥೆಯೂ ಅವರದ್ದೇ. ನೈಜ ಘಟನೆ ಹಾಗೂ ಕಾಲ್ಪನಿಕ ಕಥೆ ಬೆರೆತ ಸಿನಿಮಾವಾಗಿರುವ 'ದೂರದರ್ಶನ'ಕ್ಕೆ ವಿಎಸ್ ಮೀಡಿಯಾ ಎಂಟರ್‌ಪ್ರೈಸಸ್ ಬ್ಯಾನರ್‌ನಡಿ ರಾಜೇಶ್ ಭಟ್ ಬಂಡವಾಳ ಹೂಡಿದ್ದಾರೆ. ವಾಸುಕಿ ವೈಭವ್ ಸಂಗೀತ ಸಂಯೋಜನೆ, ಅರುಣ್ ಸುರೇಶ್ ಛಾಯಾಗ್ರಹಣ, ನಂದೀಶ್ ಟಿ.ಜಿ. ಸಂಭಾಷಣೆ, ಪ್ರದೀಪ್ ಆರ್. ರಾವ್ ಸಂಕಲನ ಚಿತ್ರಕ್ಕಿದೆ.

ಪ್ರಜಾವಾಣಿ
ಪ್ರಜಾ ಪ್ಲಸ್+
ಮನರಂಜನೆ | ಜಾಹೀರಾತು ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ



## ನಗರದಲ್ಲಿ ಇಂದು

ಖ್ಯಾತ ಹಿನ್ನೆಲೆ ಗಾಯಕಿ ಎಚ್‌.ಜಿ. ಚೈತ್ರಾ ಅವರ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಮತ್ತು ಭಕ್ತಿ ಸಂಗೀತ ಕಛೇರಿಯು ಇಂದು (ಜುಲೈ 9) ರೇಸ್ ಕೋರ್ಸ್‌ ರಸ್ತೆಯ ಭಾರತೀಯ ವಿದ್ಯಾಭವನದಲ್ಲಿ ಬೆಳಿಗ್ಗೆ 10.30ಗೆ ನಡೆಯಲಿದೆ. ಕಾರ್ಯಕ್ರಮವನ್ನು ಭಾರತೀಯ ವಿದ್ಯಾಭವನ ಮತ್ತು ಇನ್ಫೋಸಿಸ್ ಪ್ರತಿಷ್ಠಾನ ಆಯೋಜಿಸುತ್ತಿದೆ. ಚೈತ್ರಾ ಅವರಿಗೆ ತಬಲಾ ಸಾಥ್‌ನಲ್ಲಿ ಎಚ್‌. ಎಸ್‌. ಗೋಪಿನಾಥ್ ಇರಲಿದ್ದಾರೆ. ಹಾರ್ಮೋನಿಯಂನಲ್ಲಿ ಉಮಾಕಾಂತ್ ಪುರಾಣಿಕ್ ಸಾಥ್ ನೀಡಲಿದ್ದಾರೆ.

ಎಚ್‌.ಜಿ. ಚೈತ್ರಾ

# ಚಿಂತೆ ಬಿಡಿ, ಧ್ಯಾನ ಮಾಡಿ, ನೆಮ್ಮದಿಯಾಗಿರಿ



ಗಾಯತ್ರಿ

ನಿತ್ಯದ 'ಧ್ಯಾನ'ದಿಂದ ಮಾನಸಿಕ ಒತ್ತಡ ನಿವಾರಣೆ, ಕೆಲಸಗಳಲ್ಲಿ ಏಕಾಗ್ರತೆ, ಆರೋಗ್ಯ ಪೂರ್ಣ ಜೀವನ ನಡೆಸಬಹುದು. ಧ್ಯಾನ ಕುರಿತ ಆಸಕ್ತರಿಗೆ ಇಲ್ಲಿದೆ ಒಂದಷ್ಟು ಟಿಪ್ಸ್

ಬಸ್ಸು ತಕ್ಕಮಟ್ಟಿಗೆ ರಶ್ ಇತ್ತು. ಸೀಟು ಸಿಕ್ಕವರು ತಮ್ಮ ಅದೃಷ್ಟದ ಬಗ್ಗೆ ಖುಷಿಪಡುತ್ತಲೂ, ಸೀಟು ಸಿಗದವರು ತಮ್ಮ ದುರಾದೃಷ್ಟಕ್ಕೆ ಹಳಹಳಿಸುತ್ತಲೂ ಇದ್ದರು. ಕಂಬಕ್ಕೆ ಒರಗಿ ನಿಂತಿದ್ದ ವ್ಯಕ್ತಿಯೊಬ್ಬರು ನಿಂತಿದ್ದ ಸ್ಥಿತಿಯಲ್ಲಿಯೇ ಕಣ್ಮುಚ್ಚಿ ನಿಧಾನವಾಗಿ ಉಸಿರಾಡುತ್ತಿದ್ದರು. ಅವರ ಉಸಿರಾಟದ ಗತಿ ಎಂದಿನಂತೆ ಇರಲಿಲ್ಲ. ಬಸ್ಸಿನ ವಾಲಾಟ, ಪ್ರಯಾಣಿಕರ ಜೋರು ದನಿಯ ಮಾತು, ಮೊಬೈಲ್‌ಗಳಲ್ಲಿ ತೇಲಿ ಬರುತ್ತಿದ್ದ ಚಿತ್ರವಿಚಿತ್ರ ಸಂಗೀತಕ್ಕೆ ಅವರ ಸ್ಪಂದನೆ ಎಳ್ಳಷ್ಟೂ ಇರಲಿಲ್ಲ. 20 ಕಿಲೋಮೀಟರ್ ಹೋದ ಮೇಲೆ ಅವರಿಗೆ ಸೀಟು ಸಿಕ್ಕಿದಾಗ ಬೆನ್ನನ್ನು ಒರಗಿಸದೇ ನೇರ ಕುಳಿತ ಅವರು ಮತ್ತೆ ಕಣ್ಮುಚ್ಚಿದರು. ಎಲ್ಲರೂ ತಮ್ಮತಮ್ಮದೇ ಲೋಕದಲ್ಲಿ ಮುಳುಗಿರುವ ಬಸ್ಸಿನಲ್ಲಿ ಈ ಧ್ಯಾನ ಸಾಧಕನ ಬಗ್ಗೆ ಯಾರಿಗೂ ಅಷ್ಟಾಗಿ ಗಮನಕ್ಕೆ ಬರಲಿಲ್ಲ.

ಧ್ಯಾನ ಅಂದ್ರೆ ಇಷ್ಟೇ ನೋಡಿ. ಆದರೆ ಅದನ್ನು ಸಾಧಿಸಲು, ಸುತ್ತಲಿನ ಜಂಜಡಗಳನ್ನು ನಿರ್ಲಕ್ಷಿಸಿ, ಏಕಾಗ್ರತೆಯ ಸ್ಥಿತಿ ತಲುಪಲು ಮಾತ್ರ ಸತತ ಪ್ರಯತ್ನ ಬೇಕು. ಒಮ್ಮೆ ಅದು ದಕ್ಕಿತು ಎಂದರೆ ನೆಮ್ಮದಿ ಎಲ್ಲಿದೆ ಎಂದು ನಾವು ಹುಡುಕಬೇಕಿಲ್ಲ. ಏಕೆಂದರೆ ನೆಮ್ಮದಿಯೇ ನಮ್ಮ ಮನದಲ್ಲಿ ಸದಾ ಮನೆ ಮಾಡಿ ನಗುನಗುತ್ತಾ ಇರುತ್ತದೆ.

**ಧ್ಯಾನದ ಬಗ್ಗೆ ಆಸಕ್ತಿಯಿದ್ದರೆ ಈ ಆರು ಅಂಶಗಳನ್ನು ಅನುಸರಿಸಿ...**

## ಜಾಗ ಹುಡುಕಿ

ತುಸು ಏಕಾಂತ ಸಿಗುವ ಸ್ಥಳ ಹುಡುಕಿಕೊಳ್ಳಿ. ಹೊರಗಿನ ಸದ್ದು ಎಷ್ಟಿದೆ ಎನ್ನುವುದಕ್ಕಿಂತಲೂ ಆ ಸದ್ದಿನಿಂದ ನಿಮ್ಮ ಮನಸ್ಸಿಗೆ ಕಿರಿಕಿರಿಯಾಗುವಂತೆ ಆಗಬಾರದು ಎನ್ನುವುದು ಮುಖ್ಯ.

## ಸಮಯ ನಿಗದಿ

ನೀವು ಈಗಿನ್ನೂ ಧ್ಯಾನದ ಜಗತ್ತು ಪ್ರವೇಶಿಸುತ್ತಿದ್ದೀರಿ. ಆದ್ದರಿಂದ ಮೊದಲು ಒಂದೆಡೆ ಅಲುಗಾಡದೆ ಕುಳಿತುಕೊಳ್ಳುವುದು ರೂಢಿಯಾಗಬೇಕು. ಹೀಗಾಗಿ ಕನಿಷ್ಠ 5 ನಿಮಿಷ, ಗರಿಷ್ಠ 10 ನಿಮಿಷ ನಿಮ್ಮ ದೇಹಕ್ಕೆ ಸುಖ ಎನಿಸುವ ರೀತಿಯಲ್ಲಿ ನಿಶ್ಚಲವಾಗಿ ಕಣ್ಮುಚ್ಚಿ ಕುಳಿತುಕೊಳ್ಳುವ ಅಭ್ಯಾಸ ಮಾಡಿ.

## ದೇಹವನ್ನು ಗಮನಿಸಿ

ನಿಮ್ಮ ದೇಹದ ಉಸಿರಾಟದ ಚಲನೆ ಗಮನಿಸಿ. ಹೃದಯದ ಬಡಿತ ಆಲಿಸಿ.

## ಮನಸ್ಸು ಹತ್ತಿಕ್ಕದಿರಿ

ಹೊರ ಜಗತ್ತಿನ ಬಗ್ಗೆ ಮನಸ್ಸು ಗಮನ ಕೊಡುವುದು ಸಹಜ. ಅದನ್ನು ಬಲವಂತವಾಗಿ ಹತ್ತಿಕ್ಕಬೇಡಿ. ಆದರೆ ಅದು ಎಲ್ಲಿಗೆ ಹೋಗುತ್ತಿದೆ? ಏನು ಯೋಚಿಸುತ್ತಿದೆ ಎಂಬುದನ್ನು ಪ್ರಜ್ಞಾಪೂರ್ವಕವಾಗಿ ಗಮನಿಸಿ.


## ನಿಮ್ಮೊಡನೆ ಮಾತಾಡಿ

ನಿಮ್ಮ ಮನಸ್ಸಿನೊಂದಿಗೆ ನಿಧಾನವಾಗಿ ಮಾತನಾಡಿ. ಅದು ಏನು ಹೇಳಲು ಇಷ್ಟಪಡುತ್ತಿದೆ ಎನ್ನುವುದನ್ನು ಕೇಳಿಸಿಕೊಳ್ಳಿ. ಸಣ್ಣ ಮಗುವನ್ನು ರಮಿಸುವಂತೆ ಅದಕ್ಕೆ ತಿಳಿಸಿಹೇಳಿ. ಧ್ಯಾನಕ್ಕೆ ಸಹಕರಿಸಲು ವಿನಂತಿಸಿ.

## ನಿಮ್ಮನ್ನು ಪ್ರೀತಿಸಿ

ಪ್ರೀತಿಯಿಲ್ಲದವರಿಗೆ ಧ್ಯಾನ ಒಲಿಯದು. ಮೊದಲು ನಿಮ್ಮನ್ನು ನೀವು ಪ್ರೀತಿಸಿಕೊಳ್ಳಿ. ನಿಮ್ಮ ಕುಟುಂಬ, ನೀವು ಇಷ್ಟಪಡುವ ದೇವರು, ಗೆಳೆಯರು, ಸಮಾಜ ಎಲ್ಲರನ್ನೂ ನಾನೂ ಪ್ರೀತಿಸುತ್ತೇನೆ ಅವರೂ ನನ್ನನ್ನು ಪ್ರೀತಿಸುತ್ತಿದ್ದಾರೆ ಎಂದು ಹೇಳಿಕೊಳ್ಳಿ. ಇದೇ ಭಾವನೆಯಲ್ಲಿ ಕಣ್ಣು ಬಿಡಿ.

ಮಜಾ ಇದೆ ಅಲ್ವಾ. ಇದರ ಪರಿಣಾಮವೂ ಚೆನ್ನಾಗಿರುತ್ತೆ. ಕಳೆದುಕೊಳ್ಳೋದು ಏನಿದೆ? 10 ನಿಮಿಷ ಸಮಯ ಸಿಕ್ಕಾಗ ಪ್ರಯತ್ನಪಟ್ಟು ನೋಡಿ. ಇಷ್ಟವಾದರೆ ಮುಂದುವರಿಸಿ. ಆದರೆ ಒಂದು ವಿಷಯ ನೆನಪಿನಲ್ಲಿರಲಿ. ಧ್ಯಾನ ಎನ್ನುವುದೇ ಒಂದು ದೊಡ್ಡ ಜಗತ್ತು. ಮೇಲೆ ವಿವರಿಸುವ 6 ಮೆಟ್ಟಿಲುಗಳು ಅದರ ಆರಂಭಿಕ ಹಂತ ಮಾತ್ರ.



On the Occasion of Varamahalakshmi Presenting
New Crafts ಸಿಲ್ಕ್ ಇಂಡಿಯಾ Silk India® 2022
Exhibition & Sale
An opulent show of Ethnic & Traditional Silk, Cotton Handloom Products made by master 100 Weavers from all over India
Silk Saree | Suits | Dress Material | Stoles | Dupattas | Kurtas
Kurties | Pure & Probable Silk | Tussar Silk | Shanthipur Silk
SINDOORA CONVENTION CENTER
15th Cross, Sarakki, 1st Phase, J.P. Nagar Ring Road, Bengaluru
From : 01st to 10th July. 2022
Products on Display - Orissa : Sambhalpuri Ikkat Silk Saree, Bihar : Oragnic Tassar Silk Sarees, Suit & Stoles, Assam : Muga & Eri Silk Sarees, Karnataka : Creap Silk, Georgette Silk, Arini Silk & Printed Sarees, Tamilnadu : Kanjeevaram Silk Sarees & Designer Fancy Sarees, Andra Pradesh : Dharmavara, Uppada, Gadwal, Mangalagiri & Pochampalli Sarees, Uttar Pradesh : Mulbari Silk, Jamdani, Jamawar Silk Sarees & Chiffon Silk, Maharashtra : Designer Dress materials, Chhatisgarh : Exclusive Raw Silk Sarees, Kosa Silk, Tassar Suit & Duppatta, Madhya Pradesh : Maheswari, Chanderi Silk Sarees & Suit, West Bengal : Baluchari, Dhaka Masli, Gicha Sarees, Boutique Sarees, Kantha Sarees, Zordoshi, Jammu & Kashmir : Chinon Silk, Tady Silk Printed Sarees, Pashmina Shawls & Suit, Rajasthan : Kota Silk, Hand Block Print Dress & Sarees, Punjab : Fulkari Dress and many more...
2 Days Only
Don't miss it...
Time : 10.30 am - 8.30 pm Call: 088509 02824 Entry & Parking Free
All Credit & Debit Cards Accepted

LuLu FASHION STORE
MEN / WOMEN / KIDS
SCAN FOR MORE
FLAT 50% OFF
LuLu Midnight Sale
9AM TO 2AM
JULY 7th to 10th,2022 (9AM TO 2AM)
Lulu Fashion Store, UGF & FF, Global Malls, Rajajinagar, Bengaluru
A FASHION SALE LIKE NEVER BEFORE
Fill your wardrobe with the latest fashion at a flat 50% off. Grab the season's best fashion picks in men's wear, women's wear, children's wear, footwear, accessories and more from top fashion labels all at a flat 50% off from LuLu Fashion Store.
*Offer valid from 07th July to 10th July 2022 or till stock last, Images shown in the offer booklet (QR Code) is only indicative and actual products may vary. Prices are subject to change. LuLu management holds the exclusive right to make any modification or withdraw the offers at any point of time. *T&C Apply.
Participating Brands
Levi's, BLACKBERRYS, ARROW, Pepe Jeans, U.S. POLO ASSN., BLACK PANTHER, FLYING MACHINE, PUMA, INDIAN TERRAIN, SIN, Being Human, W, GINI & JONY, whaou!
ESSENL, GINI & JONY, Monte Bianco, IDENTITI, CROYDON, ETEN, CAPRESE, TINY GIRL, peppermint, LAVIE, aurelia, Doodle
HDFC BANK
UPTO 10% Instant Discount* using HDFC Bank Credit Cards and EasyEMI
10% instant discount upto ₹750/- on minimum spends of ₹5000/- | Offer valid from 07th July to 10th July.
*T&C Apply
Festival Buy better
LuLu HYPERMARKET
LuLu FASHION STORE
LuLu CONNECT DIGITAL & ELECTRONICS MEGASTORE

ಪ್ರಜಾವಾಣಿ ಶನಿವಾರ, 9 ಜುಲೈ 2022

2

# ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ



# ಮಗುವಿಗೆ ತುತ್ತು... ಅಳೆದೂ ತೂಗುವ ಹೊತ್ತು

ಪ್ರತಿ ವರ್ಷ ಜುಲೈ 4 ರಿಂದ 10ರವರೆಗೆ ನ್ಯಾಷನಲ್ ಚೈಲ್ಡ್‌ವುಡ್ ಒಬೆಸಿಟಿ ವೀಕ್ 2022' (ಮಕ್ಕಳಲ್ಲಿ ಕಾಡುವ ಸ್ಥೂಲಕಾಯದ ಕುರಿತು ಜಾಗೃತಿ ಮೂಡಿಸುವ ಸಪ್ತಾಹ) ಅನ್ನಾಗಿ ಆಚರಿಸಲಾಗುತ್ತಿದೆ. ಈ ಸಪ್ತಾಹದ ನೆಪದಲ್ಲಿ ಮಕ್ಕಳ ಆಹಾರ ಹೇಗಿರಬೇಕು? ಎಂಬ ಕುರಿತ ಮಾಹಿತಿ ಇಲ್ಲಿದೆ.

**ಡಾ. ಕುಶ್ವಂತ್ ಕೋಳಿಬೈಲು**

ಪ್ರಪಂಚದಲ್ಲಿರುವ ಅತ್ಯಂತ ಸವಾಲಿನ ಕೆಲಸಗಳ ಪೈಕಿ ಮಗುವಿಗೆ ತಿನಿಸುವ ಕೆಲಸವೂ ಒಂದು. ಆರು ತಿಂಗಳ ಕಾಲದ ಸ್ತನ್ಯಪಾನದ ನಂತರ ಮಗುವಿಗೆ ಪೂರಕ ಆಹಾರವನ್ನು ಶುರು ಮಾಡಬೇಕಾಗಿ ಬರುವಾಗ ತಾಯಿಗಿರುವ ಸವಾಲುಗಳು ಮತ್ತು ಅನುಮಾನಗಳು ನೂರಾರು. ಮಗುವಿನ ತೂಕವು ಮೊದಲ ಆರು ತಿಂಗಳಲ್ಲಿ ವೃದ್ಧಿಯಾದಷ್ಟು ನಂತರದ ಸಮಯದಲ್ಲಿ ವೃದ್ಧಿಯಾಗದಿರುವ ಸ್ವಾಭಾವಿಕ ಪ್ರಕ್ರಿಯೆಯನ್ನು ಅರಿಯದ ಹೆಚ್ಚಿನ ತಾಯಂದಿರುವ ತಮ್ಮನ್ನು ತಾವು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿಕೊಳ್ಳುತ್ತಾರೆ. ಒಂದು ರೊಟ್ಟಿ ಕೇಳಿದಾಗ ಎರಡು ರೊಟ್ಟಿಯನ್ನು ತಟ್ಟೆಯಲ್ಲಿಡುವ 'ಲೆಕ್ಕ ಬಾರದ' ತಾಯಂದಿರು ಮತ್ತು ಮಗು ಎಷ್ಟೇ ದಷ್ಟಪುಷ್ಟವಿದ್ದರೂ ಸಣಕಲು ಎಂದು ಭಾವಿಸುವ 'ದೃಷ್ಟಿ ದೋಷವಿರುವ' ತಾಯಂದಿರ ಸಂಖ್ಯೆಯೂ ನಮ್ಮಲ್ಲಿ ಕಡಿಮೆಯಿಲ್ಲ!

ಆರು ತಿಂಗಳ ನಂತರ ಸ್ತನ್ಯಪಾನದ ಜೊತೆಗೆ ಇತರ ಪೂರಕ ಆಹಾರವನ್ನು ಮಗುವಿಗೆ ಪರಿಚಯಿಸುವಾಗ ಮಗುವಿನ ಬೆಳವಣಿಗೆಗೆ ಅಗತ್ಯವಿರುವ ಪ್ರಮಾಣದ ಕಾರ್ಬೋಹೈಡ್ರೇಟ್, ಪ್ರೊಟೀನ್, ವಿಟಮಿನ್ ಮತ್ತು ಖನಿಜಗಳಿರುವ ಸಮತೋಲನದ ಆಹಾರಗಳನ್ನು ಆಯ್ಕೆ ಮಾಡಬೇಕು. ಕಾರ್ಬೋಹೈಡ್ರೇಟ್ ಪ್ರಮಾಣವು ಹೆಚ್ಚಿರುವ ಧಾನ್ಯಗಳ ಜೊತೆಗೆ ಪ್ರೊಟೀನ್ ಪ್ರಮಾಣವು ಹೆಚ್ಚಿರುವ ಕಾಳುಗಳ ಮಿಶ್ರಣದ ಆಹಾರ ಪದಾರ್ಥಗಳನ್ನು ಬಳಸಬೇಕು. ಇದರಿಂದ ಮಗುವಿಗೆ ಸಮತೋಲನವಿರುವ ಆಹಾರ ದೊರಕುತ್ತದೆ. ಬೀಜಗಳು ಮತ್ತು ತರಕಾರಿಗಳನ್ನು ಸೇರಿಸಿದಾಗ ಮಿನರಲ್ ಮತ್ತು ಖನಿಜ ಅಂಶಗಳೂ ಆಹಾರದಲ್ಲಿ ಸೇರಿಕೊಳ್ಳುತ್ತವೆ. ಬೆಲ್ಲ ಮತ್ತು ತುಪ್ಪ ಸೇರಿಸಿದರೆ, ಆಹಾರವು ಹೆಚ್ಚು ರುಚಿಕರವಾಗುವುದರ ಜೊತೆಗೆ ಅದರಲ್ಲಿ ಕಬ್ಬಿಣದ ಅಂಶವೂ ಸೇರಿಕೊಳ್ಳುತ್ತದೆ. ಉದಾಹರಣೆಗೆ ಉಪ್ಪಿಟ್ಟು, ಪಲಾವ್, ಪೋಹಾ, ದಲಿಯಾ ಮತ್ತು ಪಾಯಸದಂತಹ ಖಾದ್ಯಗಳನ್ನು ತಯಾರಿಸುವಾಗ, ಮೇಲೆ ಉಲ್ಲೇಖಿಸಿರುವ ಎಲ್ಲಾ ವಸ್ತುಗಳನ್ನು ಬಳಸುವುದರಿಂದ ಆಹಾರವನ್ನು ಸ್ವಾದಿಷ್ಟಗೊಳಿಸುವ ಜೊತೆಜೊತೆಗೆ ಅದರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪೌಷ್ಟಿಕಾಂಶವಿರುವಂತೆಯೂ ನೋಡಿಕೊಳ್ಳಬಹುದು.



## ಸ್ಥಳೀಯ ಆಹಾರಕ್ಕೆ ಆದ್ಯತೆ

ಉತ್ತರಭಾರತದಲ್ಲಿ ಗೋಧಿಯು ಪ್ರಮುಖ ಆಹಾರ ಧಾನ್ಯ. ದಕ್ಷಿಣಭಾರತದಲ್ಲಿ ಅಕ್ಕಿ ಮತ್ತು ರಾಗಿಯನ್ನು ಹೆಚ್ಚು ಬಳಸುತ್ತಾರೆ. ಮಗುವಿಗೆ ಪೂರಕ ಆಹಾರ ತಿನ್ನಿಸಲು ಆರಂಭಿಸುವಾಗ ಸ್ಥಳೀಯವಾಗಿ ದೊರಕುವ ಹಾಗೂ ಆಯಾ ಪ್ರದೇಶದವರು ಹಿಂದಿನಿಂದ ಬಳಸುತ್ತಾ ಬಂದಿರುವ ಆಹಾರ ಪದಾರ್ಥಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಮಗುವಿನ ದೇಹದ ಪ್ರಕೃತಿಗೆ ಅನುವಂಶಿಕವಾಗಿ ಒಗ್ಗಿರುವ ಆಹಾರಗಳನ್ನು ಮಗು ಹೆಚ್ಚು ಉತ್ತಮವಾಗಿ ಜೀರ್ಣಿಸಿಕೊಳ್ಳುತ್ತದೆ.

ಆರರಿಂದ ಎಂಟು ತಿಂಗಳ ಮಕ್ಕಳಿಗೆ ದಿನಕ್ಕೆ ಮೂರು ಬಾರಿ, ಒಂಬತ್ತರಿಂದ ಒಂದು ವರ್ಷದ ಮಕ್ಕಳಿಗೆ ದಿನಕ್ಕೆ ಐದು ಬಾರಿ ಪೂರಕ ಆಹಾರವನ್ನು ಪ್ರತಿ ಬಾರಿಗೆ ಸುಮಾರು ನೂರು ಮಿಲಿಲೀಟರ್ ಪ್ರಮಾಣದಷ್ಟು ಕೊಡಬಹುದು. ಒಂದು ವರ್ಷದ ಕೆಳಗಿನ ಮಗುವಿಗೆ ಕೊಡುವ ಪೂರಕ ಆಹಾರದವು ದೋಸೆ ಹಿಟ್ಟಿನಷ್ಟು ಸಾಂದ್ರತೆ ಹೊಂದಿರಬೇಕು. ಹಾಗೆಯೇ ಮಗು ಬೆಳದಂತೆ ಆಹಾರದ ಸಾಂದ್ರತೆಯನ್ನು ಹೆಚ್ಚಿಸುತ್ತಾ ಹೋಗಬಹುದು.

ಕುದಿಸಿ ಆರಿಸಿರುವ ಶುದ್ಧವಾದ ನೀರನ್ನು ದಿನಕ್ಕೆ ಮೂರುನಾಲ್ಕು ಸಲ ಕುಡಿಸುವುದರ ಜೊತೆಗೆ ಸ್ತನ್ಯಪಾನವನ್ನು ಎರಡು ವರ್ಷಗಳ ಕಾಲ ಮುಂದುವರಿಸಬೇಕು. ಮಗುವಿಗೆ ಒಂದು ವರ್ಷ ತುಂಬಿದ ನಂತರ ಅಡುಗೆ ಮನೆಯಲ್ಲಿ ತಯಾರಾಗುವ ಎಲ್ಲಾ ಆಹಾರಗಳನ್ನು ಮಗು ಸೇವಿಸಬಹುದು. ಆದರೆ ಮಗುವಿನ ಉಸಿರಾಟದ ನಾಳದಲ್ಲಿ ಸಿಕ್ಕಿ ಹಾಕಿಕೊಳ್ಳುವ ಅಪಾಯವಿರುವ ವಸ್ತುಗಳಾದ ದ್ರಾಕ್ಷಿ, ಗೋಡಂಬಿ, ಕ್ಯಾರೆಟ್ ತುಂಡುಗಳಂತಹ ಪದಾರ್ಥಗಳನ್ನು ತಿನ್ನಿಸುವಾಗ ಎಚ್ಚರವಿರಬೇಕು.

ಮಗು ನಿರ್ದಿಷ್ಟವಾದ ಆಹಾರವನ್ನು ತಿನ್ನಲು ಒಂದೆರಡು ಬಾರಿ ನಿರಾಕರಿಸಿದಾಗ ಮಗುವು ಆ ಆಹಾರವನ್ನು ಮುಂದೆಂದೂ ತಿನ್ನಲಾರದು ಎಂಬ ಆತುರದ ನಿರ್ಧಾರಕ್ಕೆ ಬರಬಾರದು. ಅದೇ ಆಹಾರದ ರುಚಿ, ಬಣ್ಣ ಅಥವಾ ಸಾಂದ್ರತೆಯನ್ನು ಬದಲಾಯಿಸಿ ಮರಳಿ ತಿನ್ನಿಸುವ ಯತ್ನ ಮಾಡಿದಾಗ, ಮಗು ಆ ಆಹಾರವನ್ನೇ ಒಪ್ಪಿಕೊಳ್ಳ ಬಹುದು.

ಮಗುವಿಗೆ ತಿನಿಸುವಾಗ ಟಿವಿ ಅಥವಾ ಮೊಬೈಲ್ ವೀಕ್ಷಣೆ ಮಾಡದೆ ಮಗುವಿನ ಕಣ್ಣಿನಲ್ಲಿ ಕಣ್ಣಿಟ್ಟು ನೋಡುತ್ತಾ ಮತ್ತು ಸುತ್ತಮುತ್ತಲಿನ ಪರಿಸರದಲ್ಲಿ ಮಗುವನ್ನು ತೊಡಗಿಸುತ್ತಾ ತಿನ್ನಿಸುವುದರಿಂದ ಮಗುವು ಊಟ ಮಾಡುವ ಪ್ರಕ್ರಿಯೆಯನ್ನು ಹೆಚ್ಚು ಆನಂದಿಸುತ್ತದೆ. ಒಂದು ವರ್ಷ ಮೀರಿದ ಮಕ್ಕಳಿಗೆ ಅವರದೇ ಆದ ತಟ್ಟೆಯಿಂದ ತಿನ್ನಲು ಉತ್ತೇಜಿಸಿದರೆ, ದೊಡ್ಡವರು ಊಟ ಮಾಡುವಾಗ, ತಾನೂ ಅವರೊಂದಿಗೆ ಕುಳಿತು ಊಟ ಮಾಡುತ್ತದೆ.

ಒಂದೊಮ್ಮೆ ಮಗು ಒಂದು ನಿರ್ದಿಷ್ಟವಾದ ಆಹಾರವನ್ನು ನಿರಾಕರಿಸಿದರೆ ಅದನ್ನು ಬಲವಂತವಾಗಿ ಮಗುವಿನ ಬಾಯಿಗೆ ತುರುಕಿಸಬೇಡಿ. ಇಂಥ ಕ್ರಮಗಳು ಮಗುವನ್ನ ಹಠಮಾರಿಯಾಗಿಸುತ್ತವೆ. ಜೊತೆಗೆ ಊಟ ಮಾಡುವುದರ ಬಗೆಗೆ ಮಗು ಅಸಹನೆಯನ್ನು ರೂಡಿಸಿಕೊಳ್ಳುತ್ತದೆ.



## ಮಿಥ್ಯೆಗಳನ್ನೂ ಹೋಗಲಾಡಿಸಿ..

ನಮ್ಮ ದೇಶದ ಗ್ರಾಮೀಣ ಭಾಗದಲ್ಲಿರುವ, ಆಹಾರದ ಬಗೆಗಿರುವ ಉಷ್ಣ ಮತ್ತು ಶೀತವೆಂಬ ಅವೈಜ್ಞಾನಿಕ ಕಲ್ಪನೆಗಳನ್ನು ಹೋಗಲಾಡಿಸುವುದು ಬಹಳ ಮುಖ್ಯ. ಪ್ರೊಟೀನ್ ಅಂಶ ಹೇರಳವಾಗಿರುವ ಮೀನು ಮತ್ತು ಮಾಂಸವು ಉಷ್ಣವೆಂದೂ, ವಿಟಮಿನ್ ಮತ್ತು ಮಿನರಲ್ ಅಂಶಗಳಿರುವ ಹಣ್ಣು ಮತ್ತು ತರಕಾರಿಗಳು ಶೀತ ಉಂಟು ಮಾಡುತ್ತವೆಂಬ ವಿಚಾರಗಳಲ್ಲಿ ಹುರುಳಿಲ್ಲ. ತುಪ್ಪ ತಿಂದರೆ ಕೆಮ್ಮು ಹೆಚ್ಚುತ್ತದೆ ಎಂಬ ವಾದವೂ ಮತ್ತು ಒಂದು ವರ್ಷ ಮೇಲ್ಪಟ್ಟ ಮಕ್ಕಳು ಮೊಟ್ಟೆಯನ್ನು ಜೀರ್ಣಿಸಿಕೊಳ್ಳಲಾರರೆಂಬ ನಂಬಿಕೆಗಳು ಸತ್ಯಕ್ಕೆ ದೂರವಾದವು.

ಈಗಿನ ಕಾಲದ ಹೆತ್ತವರ ಆತಂಕವನ್ನು ಬಂಡವಾಳವಾಗಿಸಿಕೊಂಡು, ಮಕ್ಕಳ ಆಹಾರವೆಂಬ ಹಣೆಪಟ್ಟಿ ಯೊಂದಿಗೆ ವಿವಿಧ ರೀತಿಯಲ್ಲಿ ಸಂಸ್ಕರಿಸಿದ ಆಹಾರ ಮಾರುಕಟ್ಟೆ ಪ್ರವೇಶಿಸಿವೆ. ಇವು ಗ್ರಾಮೀಣ ಪ್ರದೇಶದಲ್ಲಿ ಪ್ರಚಲಿತದಲ್ಲಿರುವ ಆಹಾರದ ಕುರಿತಾದ ತಪ್ಪು ಕಲ್ಪನೆಗಳಿಗಿಂತ ಹೆಚ್ಚು ಅಪಾಯಕಾರಿ. ಸಂಸ್ಕರಿಸಿದ ಆಹಾರವು ಯಾವುದೇ ರೂಪದಲ್ಲಿದ್ದರೂ ಮತ್ತು ಯಾವುದೇ ಪ್ರತಿಷ್ಠಿತ ಅಂತರರಾಷ್ಟ್ರೀಯ ಬ್ರಾಂಡಿನಲ್ಲಿ ಲಭ್ಯವಿದ್ದರೂ ಅದು ತಾಜಾ ಆಹಾರದಷ್ಟು ಉತ್ತಮವಲ್ಲ.


## ಬೊಜ್ಜು ಹೆಚ್ಚುವುದು ಹೀಗೆ

ಮಾರುಕಟ್ಟೆಯಲ್ಲಿರುವ ಸಂಸ್ಕರಿಸಿದ ಆಹಾರ ಪದಾರ್ಥಗಳನ್ನು ಬಳಸುವುದರಿಂದ ನಗರ ಪ್ರದೇಶದ ಮಕ್ಕಳಲ್ಲಿ ಬೊಜ್ಜಿನ ಪ್ರಮಾಣವು ಹೆಚ್ಚಾಗುತ್ತಿದೆ. ಜಾಹೀರಾತುಗಳಿಗೆ ಮಾರುಹೋಗುವುದಕ್ಕಿಂತ ಜಾಗರೂಕರಾಗಿ ಆಹಾರವನ್ನು ಆಯ್ಕೆ ಮಾಡುವುದನ್ನು ತಾಯಂದಿರು ಮನಗಾಣಬೇಕು. ತಮ್ಮ ಊರಿನಲ್ಲಿ ಬೆಳೆದಿರುವ ಬಾಳೆಹಣ್ಣಿಗಿಂತ ವಿದೇಶಗಳಿಂದ ಬಂದ ದುಬಾರಿ ಹಣ್ಣು ಹಂಪಲುಗಳಲ್ಲಿ ಹೆಚ್ಚು ಪೌಷ್ಟಿಕಾಂಶವಿದೆಯಂಬ ಭಾವನೆಯನ್ನು ಜನರ ಮನಸ್ಸಿನಲ್ಲಿ ಬಿತ್ತಲಾಗಿದೆ. ಹಸುವಿನ ಹಾಲನ್ನು ಆರು ತಿಂಗಳ ನಂತರ ಯಥೇಚ್ಛವಾಗಿ ಬಳಸಿದರೆ ಎಲ್ಲಾ ಪೌಷ್ಟಿಕಾಂಶಗಳು ದೊರಕುತ್ತವೆಯೆಂಬ ತಪ್ಪು ಕಲ್ಪನೆಯಿಂದಾಗಿ ಅನೇಕರು ಮಗುವಿಗೆ ಎಲ್ಲಾ ಪೌಷ್ಟಿಕಾಂಶಗಳು ದೊರಕುವ ಸಮತೋಲನ ಆಹಾರವನ್ನು ನೀಡದೆ ಹಸುವಿನ ಹಾಲನ್ನು ದಿನದ ಮೂರು ಹೊತ್ತೂ ಕುಡಿಸುವ ತಪ್ಪು ಮಾಡುತ್ತಾರೆ.

'ಇಟ್ ಟೇಕ್ಸ್ ಎ ಹೋಲ್ ವಿಲೇಜ್ ಟು ರೈಸ್ ಎ ಚೈಲ್ಡ್' ಎಂಬ ಪ್ರಸಿದ್ಧ ಹೇಳಿಕೆಯು ಬೆಳೆಯುವ ಮಕ್ಕಳ ಮೇಲೆ ಸುತ್ತಮುತ್ತಲಿನ ವಾತಾವರಣವು ಬೀರುವ ಪ್ರಭಾವವನ್ನು ತಿಳಿಸುತ್ತದೆ. ಅದರಂತೆ, ಮಕ್ಕಳಿಗೆ ಉತ್ತಮವಾದ ಆಹಾರ ಪದ್ಧತಿಯನ್ನು ರೂಪಿಸುವುದರ ಹಿಂದೆ ತಾಯಿಯಷ್ಟೇ ಜವಾಬ್ದಾರಿ ಕುಟುಂಬದ ಎಲ್ಲಾ ಸದಸ್ಯರಿಗೆ ಮತ್ತು ಮನೆಯ ವಾತಾವರಣಕ್ಕೆ ಇರುವುದರಿಂದಾಗಿ 'ಇಟ್ ಟೇಕ್ಸ್ ಎ ಹೋಲ್ ಫ್ಯಾಮಿಲಿ ಟು ಫೀಡ್ ಎ ಚೈಲ್ಡ್' ಎಂದು ಹೇಳಿದರೂ ತಪ್ಪಾಗಲಾರದು.

(ಮಕ್ಕಳ ತಜ್ಞ ವೈದ್ಯರು, ಮಡಿಕೇರಿ)

# ಅಂತರ್ಜಾಲದಲ್ಲಿ ಕಾಯಿಲೆಯ ಹೆಸರು ಹುಡಕಬೇಡಿ!



ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

**● ಯುವಕ. ಸ್ಪರ್ಧಾತ್ಮಕ ಪರೀಕ್ಷೆಗೆ ಓದುತ್ತಿದ್ದೇನೆ. ನನಗೆ ವೇದಿಕೆಯ ಮೇಲೆ ನಿಂತು ಮಾತನಾಡಲು ಭಯವಾಗುತ್ತದೆ (ಸ್ಟೇಜ್‌ಫಿಯರ್). ಮಾತು ಬಾರದೆ ನಡುಕ ಬರುತ್ತದೆ. ಮಹಿಳೆಯರನ್ನು ಕಂಡರೆ ಭಯ ನಾಚಿಕೆಯಾಗುತ್ತದೆ (ಗೈನೋಫೋಬಿಯಾ). ಈ ಸಮಸ್ಯೆಗಳನ್ನು ಪರಿಹರಿಸಿಕೊಡಿ.**

**ಹೆಸರು** ಊರು ತಿಳಿಸಿಲ್ಲ

ಸಮಸ್ಯೆಗಳನ್ನು ಪರಿಹರಿಸಿಕೊಡಿ ಎಂದು ಕೇಳಿದ್ದೀರಲ್ಲವೇ? ಇವು ಸಮಸ್ಯೆಗಳಲ್ಲ. ಪರಿಹಾರಗಳು ಕೂಡ ನಿಮ್ಮೊಳಗೇ ಇದೆ. ಹುಡುಕಲು ಸಹಾಯ ಮಾಡುತ್ತೇನೆ.

ಮೊದಲನೆಯದು ನಿಮ್ಮ ಅನುಭವಗಳಿಗೆ ಅಂತರ್ಜಾಲದಲ್ಲಿ ಹುಡುಕಾಡಿ ದೊಡ್ಡದೊಡ್ಡ ಕಾಯಿಲೆಯ ಹೆಸರುಗಳನ್ನು ಹುಡುಕುವುದನ್ನು ನಿಲ್ಲಿಸಿ. ನಿಮ್ಮ ಎರಡು ರೀತಿಯ ಅನುಭವಗಳು ಬೇರೆಬೇರೆ ಅನ್ನಿಸಿದರೂ ಅವುಗಳ ಮೂಲ ಒಂದೇ. ಈ ಅನುಭವಗಳು ನಿಮ್ಮ ಕುರಿತಾಗಿ ನಿಮ್ಮೊಳಗೇ ಬೇರೂರಿರುವ ಅನಿಸಿಕೆಗಳನ್ನು ಸೂಚಿಸುತ್ತಿವೆ. ಅವುಗಳೇನಿರಬಹುದು ಎಂದು ತಿಳಿಯಲು ಸುಮ್ಮನೆ ಕುಳಿತು ನಿಮ್ಮ ತಲೆಯಲ್ಲಿ ಮಾತನಾಡುವ ಧ್ವನಿಗಳನ್ನು ಗಮನಿಸಿ. ನಿನಗೆ ಯೋಗ್ಯತೆಯಿಲ್ಲ, ಎಲ್ಲರೆದುರು ಮಾತನಾಡಿ ಅವಮಾನ ಮಾಡಿಸಿಕೊಳ್ಳುತ್ತೀಯಾ, ಸೋಲುವುದು ಭಾರೀ ಅವಮಾನಕರ, ಎಲ್ಲರೂ ನಿನ್ನನ್ನು ಕೀಳಾಗಿ ನೋಡುತ್ತಾರೆ, ನೀನು ಜೀವನದಲ್ಲಿ ವಿಫಲನಾಗುತ್ತೀಯಾ-ಮುಂತಾಗಿ ಆ ಧ್ವನಿಗಳು ಹೇಳುತ್ತಿರಬಹುದು. ಇವು ಬಾಲ್ಯದಲ್ಲಿ ಮನೆ ಶಾಲೆಗಳಲ್ಲಿನ ನಿಮ್ಮ ಅನುಭವದಿಂದ ಬಂದಿರುವ ಧ್ವನಿಗಳು. ನಿಮ್ಮದೇ ಧ್ವನಿಗಳಲ್ಲ. ಹಾಗಾಗಿ ಅಂತಹ ಪ್ರಾಮುಖ್ಯವನ್ನು ನೀಡಬೇಡಿ. ನಿಮ್ಮ ಭಯದಿಂದ ಹೊರಬರಲು ಹೀಗೆ ಮಾಡಿ. ಒಬ್ಬರೇ ಕುಳಿತು ವೇದಿಕೆಯಲ್ಲಿ ಅಥವಾ ಮಹಿಳೆಯೊಬ್ಬಳ ಜೊತೆ ಮಾತನಾಡುತ್ತಿರುವಂತೆ ಕಲ್ಪಿಸಿಕೊಳ್ಳಿ. ವಾಸ್ತವಕ್ಕೆ ಹತ್ತಿರವಾದ ಕಲ್ಪನೆಯಿರಲಿ. ಕಲ್ಪನೆಯಲ್ಲಿಯೂ ನಿಮ್ಮ ಎದೆ ಹೊಡೆದುಕೊಂಡು ಕೈಕಾಲು ನಡುಗಬಹುದು. ಆಗ ನಿಧಾನವಾಗಿ ಉಸಿರಾಡುತ್ತಾ ದೇಹವನ್ನು ಸಡಿಲಬಿಡುತ್ತಾ ಹೋಗಿ. ದೇಹ ಶಾಂತವಾದ ಕೂಡಲೆ ಕಲ್ಪನೆಯನ್ನು ಮುಂದುವರಿಸಿ. ದೇಹ ಕೆರಳಿದರೆ ಮತ್ತೆ ಸಮಾಧಾನಪಡಿಸಿ. ಹೀಗೆ ಸಾಕಷ್ಟು ದಿನ ಅಭ್ಯಾಸಮಾಡಿ. ಅಗತ್ಯವಿದ್ದರೆ ನಿಮ್ಮೊಳಗಿನ ಹಿಂಜರಿಕೆ ಕೀಳರಿಮೆಗಳನ್ನು ಪರಿಹರಿಸಿಕೊಳ್ಳಲು ತಜ್ಞ ಮನೋಚಿಕಿತ್ಸಕರನ್ನು ಸಂಪರ್ಕಿಸಿ.



**● ನನಗೆ 33ವರ್ಷ. ಕಳೆದ ಒಂದು ವರ್ಷದಿಂದ ಗಮನಿಸಿದ ವಿಚಾರವೆಂದರೆ ಕೆಲವೊಮ್ಮೆ ನಾನು ಯಾರನ್ನಾದರೂ ನೆನಪಿಸಿಕೊಂಡರೆ ತಕ್ಷಣ ಅವರಿಂದ ಫೋನ್ ಅಥವಾ ಸಂದೇಶ ಬರುತ್ತದೆ. ಕೆಲವರನ್ನು ಹಲವು ದಿನಗಳ ನಂತರ ನೆನೆಸಿಕೊಂಡರೆ ಅವರು ಕೆಲವೇ ಗಂಟೆಗಳಲ್ಲಿ ಸಿಗುತ್ತಾರೆ. ಇದು ದೈವಲೀಲೆ ಅಥವಾ 'ಸಿಕ್ತ ಸೆನ್ಸ್' ಇರಬಹುದೇ? ಗೊಂದಲವನ್ನು ಪರಿಹರಿಸಿ.**

**ಮೋಹನ್‌ಕುಮಾರ್** ಊರಿನ ಹೆಸರಿಲ್ಲ

ಇಂತಹ ಗೊಂದಲಗಳಿಗೆ ಸದ್ಯಕ್ಕೆ ವಿಜ್ಞಾನದಲ್ಲಿಯೂ ಸ್ಪಷ್ಟ ಉತ್ತರವಿಲ್ಲ. ಇದರಿಂದ ನಿಮಗೆ ಮಾನಸಿಕ ತೊಂದರೆಗಳೇನೂ ಆಗದಿದ್ದರೆ ಇದರ ಕುರಿತು ನೀವೂ ಸಂಶೋಧನೆ ಮಾಡಬಹುದು.

ಇಲ್ಲೊಂದು ವಿಪರ್ಯಾಸವಿದೆ. ನಿಮಗೆ ನೆನಪಾಗಿರುವವರಲ್ಲಿ ಒಬ್ಬಿಬ್ಬರು ಕಾಣಿಸಿಕೊಂಡಿರಬಹುದು. ಇವುಗ ಳನ್ನು ಮಿದುಳು ದಾಖಲಿಸಿರುತ್ತದೆ. ನೆನಪಾಗಿಯೂ ನಿಮಗೆ ಕಾಣಿಸಿಕೊಳ್ಳದ ಅಥವಾ ಫೋನ್ ಮಾಡದ ಘಟನೆಗಳು ಸಾಕಷ್ಟು ಇದ್ದರೂ ನಿಮ್ಮ ಮಿದುಳು ಅವುಗಳನ್ನು ದಾಖಲಿಸಿರುವುದಿಲ್ಲ. ಇದರ ಅರ್ಥವೇನೆಂದರೆ ನಾವು ನಂಬಿಕೊಂಡಿರುವುದಕ್ಕೆ ಸಾಕ್ಷಾಧಾರಗಳನ್ನು ಮಿದುಳು ಹುಡುಕುತ್ತಿರುತ್ತದೆ. ನಿಮ್ಮ ಅನುಭವಗಳು ದೈವಲೀಲೆ ಅಥವಾ ಸಿಕ್ತ್ ಸೆನ್ಸ್ ಎಂದು ನೀವು ಚಿಂತಿಸುತ್ತಿರುವುದರಿಂದ ಅದಕ್ಕೆ ಹೊಂದುವುದನ್ನು ಮಾತ್ರ ನೀವು ಗ್ರಹಿಸಲು ಸಾಧ್ಯವಾಗುತ್ತದೆ. ಇದು ಯಾರೊಬ್ಬರ ತೊಂದರೆಯಲ್ಲ. ಮಿದುಳು ಕಾರ್ಯನಿರ್ವಹಿಸುವ ರೀತಿ. ಇಂತಹ ಘಟನೆಗಳು ಕಾಕತಾಳೀಯವೂ ಆಗಿದ್ದು ಬೇರೆ ಸಾಕಷ್ಟು ಜನರಿಗೂ ಇದೇ ಅನುಭವ ಆಗಿರುವ ಸಾಧ್ಯತೆಗಳಿರಬಹುದಲ್ಲವೇ?

ಮನಸ್ಸಿನ ಎಲ್ಲಾ ವ್ಯವಹಾರಗಳಿಗೆ ಸ್ಪಷ್ಟವಾದ ಕಾರಣಗಳನ್ನು ಹುಡುಕುವುದು ಸಾಧ್ಯವಿಲ್ಲ. ಜೊತೆಗೆ ಅಗತ್ಯವೂ ಇಲ್ಲ ಅಲ್ಲವೇ?

**ಏನಾದ್ರೂ ಕೇಳ್ಬೋದು**

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ bhoomika@prajavani.co.in

# ರಾಕ್, ಫ್ರುಡ್ಜ್ ಚಾಕೊಲೇಟ್

ಚಾಕೊಲೇಟ್‌ನಲ್ಲಿ ಹಲವು ಬಗೆಗಳಿವೆ. ಮಡಿಕೇರಿಯ ಗೃಹೋದ್ಯಮಿ ಫ್ಯಾನ್ಸಿ ಗಣಪತಿಯವರು ವಿವಿಧ ಬಗೆಯ ಚಾಕೊಲೇಟ್‌ಗಳನ್ನೇ ಬಳಸಿಕೊಂಡು, ಒಣಹಣ್ಣು, ಜೇನುತುಪ್ಪದೊಂದಿಗೆ ಬೆರೆಸಿ ಹೊಸ ಬಗೆಯ, ಹೊಸ ರುಚಿಯ ಚಾಕೊಲೇಟ್‌ಗಳನ್ನು ತಯಾರಿಸುತ್ತಿದ್ದಾರೆ. ಹವ್ಯಾಸವಾಗಿ ಕಲಿತ ಚಾಕೊಲೇಟ್ ತಯಾರಿಕೆ, ಈಗ ಉದ್ಯಮ ರೂಪ ಪಡೆದಿದೆ. ಜುಲೈ 7ರ ವಿಶ್ವ ಚಾಕೊಲೇಟ್ ದಿನದ ನೆನಪಲ್ಲಿ, ಅವರು ತಯಾರಿಸುವ ವಿಶಿಷ್ಟ ಚಾಕೊಲೇಟ್‌ಗಳ ರೆಸಿಪಿ ಇಲ್ಲಿವೆ.

## ರಾಕ್ ಚಾಕೊಲೇಟ್


ಡಾರ್ಕ್ ಹಾಗೂ ಮಿಲ್ಕ್ ಚಾಕೊಲೇಟ್‌ಗಳ ಜೊತೆಗೆ, ಒಂದಷ್ಟು ಒಣಹಣ್ಣುಗಳ ಚೂರಿನ ಜೊತೆಗೆ, ಜೇನುತುಪ್ಪ ಬೆರೆಸಿ ತಯಾರಿಸುವ ಚಾಕೊಲೇಟ್ ರಾಕ್ ಚಾಕೊಲೇಟ್.

**ಬೇಕಾಗುವ ಸಾಮಗ್ರಿಗಳು:** 250 ಗ್ರಾಂ ಡಾರ್ಕ್ ಚಾಕೊಲೇಟ್, 250 ಗ್ರಾಂ ಮಿಲ್ಕ್ ಚಾಕೊಲೇಟ್, 100 ಗ್ರಾಂ ಹುರಿದ ಗೋಡಂಬಿ (ಸಣ್ಣಗೆ ಹೆಚ್ಚಿದ ಚೂರುಗಳು), 100 ಗ್ರಾಂ ಹುರಿದ ಬಾದಾಮಿ (ಸಣ್ಣಗೆ ಹೆಚ್ಚಿದ ಚೂರುಗಳು), 100 ಗ್ರಾಂ ಕಪ್ಪು ಒಣ ದ್ರಾಕ್ಷಿ, 100 ಗ್ರಾಂ ಅಂಜೂರ (ಸಣ್ಣಗೆ ಹೆಚ್ಚಿದ ಚೂರುಗಳು) 50 ಗ್ರಾಂ ಕೆಂಪು ಚೆರ್ರಿ, 50 ಗ್ರಾಂ ಎಪ್ರಿಕಾಟ್, 10 ಎಂಎಲ್ ಜೇನುತುಪ್ಪ.

**ತಯಾರಿಸುವ ವಿಧಾನ:** ಮೊದಲಿಗೆ ಒಂದು ಬೌಲ್‌ನಲ್ಲಿ ಜೇನುತುಪ್ಪ ಹಾಕಿ ಅದರಲ್ಲಿ ಮೇಲೆ ತಿಳಿಸಿರುವ ಎಲ್ಲ ಒಣಹಣ್ಣುಗಳನ್ನು 10 ರಿಂದ 15 ನಿಮಿಷ ನೆನೆಸಿಡಿ. ಡಬಲ್ ಬೌಲರ್‌ನಲ್ಲಿ ಎರಡೂ ಬಗೆಯ ಚಾಕೊಲೇಟ್‌ಗಳನ್ನು ಕರಗಿಸಿ(ಮೆಲ್ಟ್ ಮಾಡಿಕೊಳ್ಳಿ). ಚಾಕೊಲೇಟ್ ಕರಗಿದ ನಂತರ ಅದಕ್ಕೆ ಜೇನುತುಪ್ಪದಲ್ಲಿ ನೆನೆಸಿದ ಒಣ ಹಣ್ಣುಗಳನ್ನು ಹಾಕಿ ಚೆನ್ನಾಗಿ ಬೆರೆಸಿಕೊಳ್ಳಬೇಕು. ನಂತರ ಈ ಮಿಶ್ರಣವನ್ನು ಬಟರ್ ಪೇಪರ್ ಮೇಲೆ ನಿಮಗೆ ಇಷ್ಟವಾದ ಆಕಾರದಲ್ಲಿ, ಹಾಕಿಡಬೇಕು. ಇದನ್ನು ಸ್ವಲ್ಪ ಹೊತ್ತು ಹಾಗೇ ಬಿಡಬೇಕು. ಈಗ ರಾಕ್ ಚಾಕೊಲೇಟ್ ಸಿದ್ದ. ಈ ಚಾಕೊಲೇಟ್ ಅನ್ನು ಸ್ವಲ್ಪ ಹೊತ್ತು ಬಿಟ್ಟು ಗಾಳಿಯಾಡದಂತಹ ಡಬ್ಬದಲ್ಲಿ ಶೇಖರಿಸಿಡಿ.



ಒಣಹಣ್ಣು ಮಿಶ್ರಣದ ರಾಕ್ ಚಾಕೊಲೇಟ್



## ಚಾಕೊಲೇಟ್ ಫ್ರುಡ್ಜ್

**ಬೇಕಾಗುವ ಸಾಮಗ್ರಿಗಳು:** 500 ಗ್ರಾಂ ಡಾರ್ಕ್ ಚಾಕೊಲೇಟ್, 500 ಗ್ರಾಂ ಮಿಲ್ಕ್ ಚಾಕೊಲೇಟ್, 400 ಗ್ರಾಂ ಮಿಲ್ಕ್‌ಮೇಡ್, 100 ಗ್ರಾಂ ಬೆಣ್ಣೆ, 200 ಗ್ರಾಂ ಅಂಜೂರ (ಸಣ್ಣಗೆ ಹೆಚ್ಚಿದ ಚೂರುಗಳು), ಸ್ವಲ್ಪ ಜೇನುತುಪ್ಪ.

**ತಯಾರಿಸುವ ವಿಧಾನ:** ಅಂಜೂರವನ್ನು ಜೇನುತುಪ್ಪದೊಂದಿಗೆ ಬೆರೆಸಿ ಒಂದು ಗಂಟೆ ಬಿಡಬೇಕು. ನಂತರ ಡಬರ್ ಬೌಲರ್‌ನಲ್ಲಿ ಚಾಕೊಲೇಟ್‌ಗಳನ್ನು ಕರಗಿಸಿ(ಮೆಲ್ಟ್)ಕೊಳ್ಳಬೇಕು. ಇದಾದನಂತರ ಮಿಲ್ಕ್‌ಮೇಡ್ ಮತ್ತು ಬೆಣ್ಣೆಯನ್ನು ಹಾಕಿ ಮಿಶ್ರ ಮಾಡಿಕೊಳ್ಳಬೇಕು. ಈ ಮಿಶ್ರಣಕ್ಕೆ ಅಂಜೂರವನ್ನು ಸೇರಿಸಬೇಕು. ಇದನ್ನು ಒಂದು ಟ್ರೇ ಮೇಲೆ ಬಟರ್ ಪೇಪರ್ ಹಾಕಿ ಅದರ ಮೇಲೆ ಚಾಕೊಲೇಟ್ ಮಿಶ್ರಣವನ್ನು ಹಾಕಿ ಎರಡು ತಾಸು ಫ್ರಿಡ್ಜ್‌ನಲ್ಲಿ ಇಡಬೇಕು. ನಂತರ ಬೇಕಾದ ಆಕಾರದಲ್ಲಿ ಕಟ್ ಮಾಡಿಕೊಂಡರೆ ಚಾಕೊಲೇಟ್ ಫ್ರುಡ್ಜ್ ಸಿದ್ಧ.